

ವರ್ಕಾಡಿ ಪಂಚಾಯತು

ವಿಕಸನ ವರದಿ









ವಿಕಸನ ವರದಿ

ವರ್ಕಾಡಿ ಗ್ರಾಮ ಪಂಚಾಯತ್

1996-97





ಎಲ್ಲರ ಅತೀ ಆವಶ್ಯಕತೆಗಳನ್ನು ನೆರವೇರಿಸಲು ಬೇಕಾದ ಸಂಪ
ನ್ನೂಲಗಳು ಈ ಪ್ರಕೃತಿಯಲ್ಲಿದೆ. ಆದರೆ ಯಾರ ದುರಾಶೆಗಳನ್ನು
ತೃಪ್ತಿ ಪಡಿಸಲೋಸುಗ ಉಳ್ಳದ್ದಲ್ಲ.

- ಮಹಾತ್ಮಾಗಾಂಧಿ

ಸಂಪಾದಕರು

ಶ್ರೀ. ಕೆ. ಕಿಟ್ಟಣ್ಣ ಶೆಟ್ಟಿ - ಕನ್ವೀನರ್

ಉಪಸಂಪಾದಕರು

ಶ್ರೀ. ಎ. ಶಂಕರ ನಾರಾಯಣ ನಾವಡ - D.R.P.

ಸದಸ್ಯರು

ಶ್ರೀ. ಶಂಕರಪ್ಪ ನಾಯಕ್ - D.R.P.

ಶ್ರೀ. ಎ. ಬಿ. ರಾಧಾಕೃಷ್ಣ ಬಲ್ಲಾಳ್ -D.R.P.

ಶ್ರೀ ವಿ. ಎ.ಪಿ. ನಾಯಕ್ -D.R.P.

ಶ್ರೀ ಕೆ. ಭಾಸ್ಕರ -S.R.P

ಶ್ರೀ ಮತಿ ಸುಶೀಲಾವತಿ - ಬ್ಲಾಕ್ ಪಂಚಾಯತು ಸದಸ್ಯೆ

ಶ್ರೀಮತಿ ಶಕುಂತಲಾ - D.R.P.

ಶ್ರೀ ಕೆ. ಗೋಡಣ್ಣ -D.R.P.

ಶ್ರೀ ಸದಾನಂದ . ಯು - Teacher

ಶ್ರೀ ಕೇಶವ ಬಿ. ಕೆ. ಸೆಕ್ರಟರಿ ವರ್ಕಾಡಿ ಗ್ರಾಮ ಪಂಚಾಯತು

ಅನುಕ್ರಮಣಿಕೆ

1. ಮುನ್ನುಡಿ

2. ಪಂಚಾಯತಿನ ಸಾಮಾನ್ಯ ವಿವರಗಳು

3. ಸಾಮಾಜಿಕ ಸಾಂಸ್ಕೃತಿಕ ಚರಿತ್ರೆಯ ಹಿನ್ನೆಲೆ

4. ಭೂ ಪ್ರಕೃತಿ, ಜನಪ್ರಕೃತಿ, ಜಲಪ್ರಕೃತಿ

5. ಅಭಿವೃದ್ಧಿ ವಲಯಗಳ ಅವಲೋಕನ

    1. ಕೃಷಿ, ನೀರಾವರಿ

    2. ಮೃಗ ಸಂರಕ್ಷಣೆ ಮತ್ತು ಮೀನುಗಾರಿಕೆ

    3. ಕೈಗಾರಿಕೆ

    4. ವಿದ್ಯಾಭ್ಯಾಸ

    5. ಕುಡಿ ನೀರು; ಸಾರ್ವಜನಿಕ ಆರೋಗ್ಯ; ಪರಿಸರ ಶುಚಿತ್ವ

    6. ಸಾರಿಗೆ ಚೈತನ್ಯ ಗೃಹ ಇಂಧನ

    7. ಜನಕ್ಷೇಮ ಮತ್ತು ಗೃಹ ನಿರ್ಮಾಣ

    8. ಸಂಸ್ಕೃತಿ

    9. ವನಿತೆ

    10. ಸಹಕಾರಿರಂಗ


    11. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗ

    12. ಸಂಪನ್ಮೂಲ ಕ್ರೋಢೀಕರಣ


6. ಉಪಸಂಹಾರ

Pathur - K.B. Seetharama Shetty Konibail
Kodlamogoru- A. Ramaya Naik
Adekala
Pavoor - Ramaya Shetty Pavoor
Vorkady- Vishwanatha Adappa,
Kallur

The name of the president of each Village Panchayaths before the Vorkady Panchayath came into existance




Late. Seetharama Shetty
Ex. President




K..Jarappa Shetty
Ex-President




Narayena Talithaya




V.Devappa Shetty
President



P.P.Kunhabba
Vice President




Honappa Naik
Chairman,
Standing Committee



B.K.Keshava
Secretary



P.B.Aboobacker
Member




T.Doomappa Shetty
Member



Harinakshi.R.Naik
Member



N.Leelavathi Rai
Member



A.Ananda
Member



Radha.M.
Member



P.P.Santhakumari
Member

ಮುನ್ನುಡಿ

ಕೇರಳದ ಅತೀ ಉತ್ತರದ ಜಿಲ್ಲೆಯಾದ ಕಾಸರಗೋಡಿನಲ್ಲಿರುವ ಹಲವು ಗ್ರಾಮಪಂಚಾಯತುಗಳಲ್ಲಿ ನಾವು ವಾಸಿಸುತ್ತಿರುವ ವರ್ಕಾಡಿ ಗ್ರಾಮ ಪಂಚಾಯತು ಒಂದಾಗಿದೆ. ಪೂರ್ವದಲ್ಲಿ ಕರ್ನಾಟಕ ರಾಜ್ಯ, ಪಶ್ಚಿಮದಲ್ಲಿ ಮಂಜೇಶ್ವರ ಪಂಚಾಯತು ದಕ್ಷಿಣದಲ್ಲಿ ಮೊಂಜ ಪಂಚಾಯತುಗಳೂ ಉತ್ತರದಲ್ಲಿ ಕರ್ನಾಟಕವೂ ನಮ್ಮ ಪಂಚಾಯತಿನ ಗಡಿಗಳಾಗಿವೆ. ಎತ್ತರವಾದ ಗುಡ್ಡ ಬೆಟ್ಟಗಳಿಂದಲೂ, ಇಳಿಜಾರು ಪ್ರದೇಶಗಳಿಂದಲೂ, ಸಮತಲ ಹಾಗೂ ಬಯಲು ಪ್ರದೇಶಗಳಿಂದ ಕೂಡಿರುವ 45.5 ಚ. ಮೈಲು ವಿಸ್ತೀರ್ಣ ಹೊಂದಿರುವ ಭೂ ಭಾಗವಾಗಿದೆ. ಇದು ಮೇಜರ್ ಪಂಚಾಯತ್ ಆಗುವುದರ ಮೊದಲು ಸ್ವತಂತ್ರ ಪ್ರತ್ಯೇಕ ಗ್ರಾಮಗಳು ತಮ್ಮದೇ ಆದ ಆಡಳಿತೆಯನ್ನು ನಡೆಸುತ್ತಿದ್ದು ಪ್ರಕೃತ ಕೊಡ್ಲಮೊಗರು, ಪಾತೂರು, ವರ್ಕಾಡಿ , ಪಾವೂರು ಎಂಬ ನಾಲ್ಕು ಗ್ರಾಮಗಳನ್ನು ಒಳಗೊಂಡ ಒಂದು ಬೃಹತ್ ಗ್ರಾಮಪಂಚಾಯತು ಇದಾಗಿದೆ.

ನಮ್ಮ ಗ್ರಾಮ ಪಂಚಾಯತಿನ ಭೂಪ್ರಕೃತಿಯಲ್ಲೂ ಹಲವು ವೈಶಿಷ್ಟ್ಯತೆಗಳಿವೆ. ಎತ್ತರವಾದ ಪ್ರದೇಶದಲ್ಲಿ ಕೆಂಪು ಹಾಗೂ ಕಲ್ಲು ಮಿಶ್ರಿತವಾದ ಮಣ್ಣಿನಿಂದ ಕೂಡಿದ್ದು ಕೆಂಪು ಕಲ್ಲಿನ ಕಡಿಯುವಿಕೆಗೆ ಕಟ್ಟಡನಿರ್ಮಾಣದ ಉಪಯೋಗಕ್ಕೂ ಬಹಳ ಉಪಯೋಗಕರವಾಗಿದೆ. 8ನೇ ವಾರ್ಡಿನ ಅರಿಂಗೂಲ ಎಂಬಲ್ಲಿ ಸಾಧಾರಣ 4 ಎಕ್ರೆ ವಿಸ್ತೀರ್ಣದಲ್ಲಿ ಹಮ್ಮಿಕೊಂಡಿರುವ ಒಂದು ಸುಂದರವಾದ ಕೆರೆಯನ್ನು 2 ಮೀಟರ್ ಆಳಗೊಳಿಸಿ ಸುತ್ತಲೂ ತಡೆಗೋಡೆಯನ್ನು ನಿರ್ಮಿಸಿದರೆ ಸಾಧಾರಣ 500 ಎಕ್ರೆಗಳಿಗೂ ಸಾಕಾಗುವಷ್ಟು ನೀರನ್ನು ಸಂಗ್ರಹಿಸಿಡಲು ಸಹಾಯಕವಾಗಬಹುದು.

ಶ್ರೀ ಕಲ್ಲೂರು ವಿಶ್ವನಾಥ ಅಡಪರು ಶ್ರೀ ದಿ. ಸೀತಾರಾಮ ಶೆಟ್ರು ಕೊಣಮ್ಮೆಲು, ಶ್ರೀ ನಾರಾಯಣ ತಾಳಿತ್ತಾಯರು, ಶ್ರೀ ಜಾರಪ್ಪ ಶೆಟ್ರು - ಇವರೆಲ್ಲರೂ ಈ ಹಿಂದಿನ ನಮ್ಮ ಪಂಚಾಯತಿನ ಅಧ್ಯಕ್ಷರಾಗಿದ್ದರು.

ಶ್ರೀ ನಾರಾಯಣ ತಾಳಿತ್ತಾಯರು, ಶ್ರೀ ಪಿ.ಬಿ. ಅಬೂಬಕ್ಕರ್ ಶ್ರೀ ವಿ. ದೇವಪ್ಪ ಶೆಟ್ರು, ಉಪಾಧ್ಯಕ್ಷರಾಗಿದ್ದರು. ಪ್ರಸ್ತುತ ಶ್ರೀ ವಿ. ದೇವಪ್ಪ ಶೆಟ್ರು ಅಧ್ಯಕ್ಷರು ಶ್ರೀ ಪಿ.ಪಿ. ಕುಂಞಬ್ಬ ಇವರು ಉಪಾಧ್ಯಕ್ಷರು, ಶ್ರೀ ಹೊನ್ನಪ್ಪ ನಾಯ್ಕರು ಸ್ಟೇಂಡಿಂಗ್ ಕಮಿಟಿಯ ಅಧ್ಯಕ್ಷರಾಗಿದ್ದು ನಮ್ಮ ಪಂಚಾಯತಿನ ಸರ್ವಾಂಗೀಣ ವಿಕಾಸನಕ್ಕಾಗಿ ಪ್ರಯತ್ನಿಸುತ್ತಿರುವರು.

ನಮ್ಮ ಪಂಚಾಯತಿನ ಇಳಿಜಾರು ಪ್ರದೇಶದಲ್ಲಿ ಕೃಷಿ ಕೂಲಿಗನುಕೂಲವಾದ ಸೊಪ್ಪು ಸೌದಿಗಳನ್ನು ಬೆಳೆಸುತ್ತಿರುವರು. ಇಲ್ಲಿಯ ಸಾಧಾರಣ 30 ಭೂ ಪ್ರದೇಶವು ಇಳಿಜಾರುಗಳಿಂದಲೇ ತುಂಬಿದ್ದು ಕೆಲವು ಕಡೆಗಳಲ್ಲಿ ಗೇರು ಕೃಷಿಯನ್ನೂ ಕಾಣಬಹುದು. ಇಲ್ಲಿ ವೈಜ್ಞಾನಿಕವಾಗಿ ಪರಿಶೀಲಿಸಿ ರಬ್ಬರು ಗಿಡಗಳನ್ನು ಬೆಳೆಸಲು ವಿಫುಲವಾದ ಅವಕಾಶಗಳಿವೆ. ಸಮತಲ ಪ್ರದೇಶದಲ್ಲಿ ತೆಂಗಿನ ಬೆಳೆಗಳನ್ನು ನಾವು ಕಾಣಬಹುದು. ಬಯಲುಪ್ರದೇಶದಲ್ಲಿ ಈ ಮೊದಲು ಧಾರಾಳ ಭತ್ತದ ಬೆಳೆಯನ್ನು ಬೆಳೆಸುತ್ತಿದ್ದರೂ, ಸದ್ಯ ಭತ್ತದ ಬೆಳೆಗೆ ಬೇಕಾದ ಕಾರ್ಮಿಕರು ದೊರೆಯದಿರುವುದರಿಂದಲೂ, ರಾಸಾಯನಿಕ, ಕೀಟ ನಾಶಕಗಳ ಬೆಲೆಯು ಅಧಿಕವಾಗಿರುವುದರಿಂದಲೂ, ಜಾನುವಾರು ಸಾಕಣೆಯು ತುಂಬಾ ವೆಚ್ಚದಾಯಕವಾಗಿರುವುದರಿಂದಲೂ, ವಿದ್ಯಾವಂತ ಯುವಕರು ಪಟ್ಟಣದ ಉದ್ಯೋಗವನ್ನು ಬಯಸಿ ವಲಸೆ ಹೋಗುತ್ತಿರುವುದರಿಂದಲೂ, ಭತ್ತದ ಬೆಳೆಯು ಕಡಿಮೆಯಾಗುತ್ತಾ ಬರುತ್ತಿದ್ದು ಅದರ ಬದಲಿಗೆ ಅಡಿಕೆ, ತೆಂಗುಗಳ ಕೃಷಿಯನ್ನು ಬೆಳೆಸುತ್ತಿರುವರು. ಎಡೆ ಬೆಳೆಯಾಗಿ ಬಾಳೆ, ಒಳ್ಳೆ, ಮೆಣಸು, ಕೊಕ್ಕೊಗಳನ್ನೂ ಉಪಬೆಳೆಯಾಗಿ ಹಲವು ವಿಧದ ತರಕಾರಿಗಳನ್ನೂ ಬೆಳೆಸುತ್ತಿರುವರು.

ನಮ್ಮ ಪಂಚಾಯತಿನಲ್ಲಿ 13 ಟ್ರಾನ್ಸ್‌ಫಾರ್ಮರ್‌ಗಳಿದ್ದು 1520 ಗೃಹ ಬಳಕೆಗೂ 602 ಕೃಷಿ ಕೆಲಸಕ್ಕೂ 4 ಕಡೆಗಳಲ್ಲಿ ವ್ಯವಸಾಯಕ್ಕೂ ವಿದ್ಯುತ್ತನ್ನು ಒದಗಿಸಿರುವರು. ಆದರೂ ನಮ್ಮ ಪಂಚಾಯತಿನ ಅರಿಚ್ಚೇಲು, ಬೊರ್ಕಳ ಮೊದಲಾದ ಕಡೆಗಳಿಗೆ ಕೃಷಿ ಹಾಗೂ ಗೃಹ ಬಳಕೆಗೆ ವಿದ್ಯುತ್ ಬೇಕೆಂದು ವಿನಂತಿಸಿಕೊಂಡಿದ್ದರೂ, ಇನ್ನೂ ದೊರಕಿರುವುದಿಲ್ಲ. ದೊರಕಿರುವ ಕಡೆಗಳಲ್ಲೂ ಕಡಿಮೆ ವೋಲ್ಟೇಜ್ ಹಾಗೂ ಆಗಾಗ ವಿದ್ಯುತ್ ನಿಲುಗಡೆಯಿಂದ ಜನರಿಗೆ ತೊಂದರೆಗಳಾಗಿವೆ. ಯೋಜನೆಗಳು 8 ಕಳೆಯುತ್ತಾ ಬಂದಿದ್ದರೂ, ಸಾವಿರಾರು ಕೋಟಿ ರೂಪಾಯಿಗಳು ಯೋಜನೆಗೆ ವೆಚ್ಚವಾಗಿದ್ದರೂ, ಇನ್ನೂ ಕುಡಿಯಲು ನೀರಿಲ್ಲದೆ, ವಾಸಿಸಲು ಮನೆಯಿಲ್ಲದೆ, ಬಡತನದ ರೇಖೆಗಿಂತಲೂ ಕೆಳಸ್ತರದಲ್ಲಿರುವ ಕುಟುಂಬಗಳ ಅನುಕೂಲತೆಗಾಗಿ, ನಮ್ಮಲ್ಲಿ ಲಭ್ಯವಿರುವ ಸಂಪನ್ಮೂಲಗಳನ್ನು ಬಳಸಿ, ದೊರೆಯಬಹುದಾದ ವಿಭಾಗಗಳನ್ನು ಲಕ್ಷ್ಯದಲ್ಲಿರಿಸಿಕೊಂಡು ಅತ್ಯಮೂಲ್ಯ ಸಂಪತ್ತೆನಿಸಿರುವ ಮಾನವ ಸಂಪನ್ಮೂಲವನ್ನು ಉಪಯೋಗಿಸಿಕೊಂಡು, ಕೃಷಿ, ನೀರಾವರಿ, ಮೃಗ ಸಂರಕ್ಷಣೆ, ವಿದ್ಯಾಭ್ಯಾಸ, ಕೈಗಾರಿಕೆ, ಪರಿಶಿಷ್ಟ ಪಂಗಡ, ಪರಿಶಿಷ್ಟ ಜಾತಿ ಯವರ ಅಭಿವೃದ್ಧಿಯನ್ನು ಸಾಧಿಸುವುದರೊಂದಿಗೆ, ಜನರನ್ನು ತಿಳುವಳಿಕೆವಂತರಾಗಿ ಮಾಡುವಂತೆಯೂ, ಸ್ವಂತ ಉದ್ಯೋಗ, ಗುಡಿ ಕೈಗಾರಿಕೆಗಳ ಅಭಿವೃದ್ಧಿ ಹೊಂದುವಂತೆ, ಆಗಲು ಗ್ರಾಮಸಭೆಯಿಂದ ದೊರಕಿದ ಸಲಹೆ ಸೂಚನೆಗಳನ್ನೂ, ದ್ವಿತೀಯ ಹಂತದ ಅಂಕೆ ಸಂಖ್ಯೆಗಳ ಸಂಗ್ರಹದಿಂದ ದೊರಕಿರುವ ವಿವರಗಳನ್ನೂ ಒಟ್ಟು ಕೂಡಿಸಿ, ಪಂಚಾಯತು ಸದಸ್ಯರ, ಡಿ.ಆರ್.ಪಿ.ಗಳ ವಲಯ ಕನ್ವೀನರ್‌ಗಳ ಮೂಲಕವೂ, ಬೇರೆ ಬೇರೆ ವಿಷಯ ವಿದಗ್ಧರನ್ನು ಸೇರಿಸಿ ಪಠನ ಪರ್ಯಟನೆಯನ್ನು ಮಾಡಿ, ಒರಿಯರೊಂದಿಗೆ ವಿಷಯಗಳನ್ನು ಪಡೆದು ಕೊಂಡು, ಈ ಎಲ್ಲಾ ತರದ ಮಾಹಿತಿಗಳ ಆಧಾರದಿಂದ ಪರಿಪಕ್ವವಾದ ವಿಕಸನ ರಿಪೋರ್ಟಿನ ಮುನ್ನುಡಿಯನ್ನು ನೀಡುತ್ತಿರುವೆವು. ಹಲವಾರು ಭಾಷೆಯ ವಿಧದ ಆಚಾರದ ಹಲವು ಹಬ್ಬಗಳನ್ನು ವಿಶಿಷ್ಟ ರೀತಿಯಿಂದ ಆಚರಿಸಿಕೊಂಡು ಬರುತ್ತಿರುವ ವಿಭಿನ್ನ ಸಮೂಹದ ಜನರು ನಮ್ಮ ಪಂಚಾಯತಿನಲ್ಲಿದ್ದರೂ ವಿಭಿನ್ನತೆಯಲ್ಲಿ ಏಕತೆಯನ್ನು ಸಾಧಿಸುವವರು ನಮ್ಮ ಜನರಾಗಿರುವರು.

ಯಕ್ಷಗಾನ, ಜಾನಪದ ಹಾಡುಗಳು, ತುಳು ಪಾಡ್ದನಗಳು ಹಲವು ವಿಧದ ನೇಮೋತ್ಸವಗಳು ಕೋಲ-ತಂಬಿಲಗಳನ್ನು , ಉರುಸು, ಸಾಂತ್‌ಮಾರ್ಯ ಸಂಗೀತ, ನೃತ್ಯ, ನಾಟಕ, ರಾಷ್ಟ್ರೀಯ ಹಬ್ಬಗಳನ್ನು ಎಲ್ಲರ ಸೇರಿಕೊಳ್ಳುವಿಕೆಯಿಂದ ಆಚರಿಸುವ ಪಂಚಾಯತು ನಮ್ಮದಾಗಿದೆ.

ಎಲ್ಲರ ಸೇರುವಿಕೆಯಿಂದ, ಸಮಾಲೋಚನೆಯಿಂದ, ಸಹಕಾರದಿಂದ, ತಯಾರಿಸಲ್ಪಟ್ಟಿರುವ ನಮ್ಮ ಪಂಚಾಯತಿನ ವಿಕಸನ ವರದಿಗೆ ಮುನ್ನುಡಿಯ ರೂಪದಲ್ಲಿ ನನ್ನ ಅನಿಸಿಕೆಗಳನ್ನು ಬರೆದು ವಿಕಸನ ವರದಿ ನಿಮ್ಮೆಲ್ಲರ ತುಂಬು ಹೃದಯದ ಸಹಕಾರವನ್ನು ಬಯಸುವ,

ವರ್ಕಾಡಿ
29-11-96

ವಿ. ದೇವಪ್ಪ ಶೆಟ್ರು
ಅಧ್ಯಕ್ಷರು
ವರ್ಕಾಡಿ ಗ್ರಾಮ ಪಂಚಾಯತು

ವರ್ಕಾಡಿ ಗ್ರಾಮ ಪಂಚಾಯತ್ ಜನಕೀಯ ಯೋಜನಾ ವಿಕಸನಾ ವರದಿ -1996

ಪಂಚಾಯತಿನ ಹೆಸರು	-ವರ್ಕಾಡಿ ಗ್ರಾಮ ಪಂಚಾಯತ್
ಒಳಗೊಳ್ಳುವ ಗ್ರಾಮಗಳು	- ಪಾವೂರು, ವರ್ಕಾಡಿ, ಕೊಡ್ಲಮೊಗರು, ಪಾತೂರು
ಬ್ಲೋಕ್ ಪಂಚಾಯತು ಡಿವಿಜನ್	- ಮಂಜೇಶ್ವರ
ಬ್ಲೋಕ್ ಪಂಚಾಯತು	- ಮಂಜೇಶ್ವರ
ತಾಲೂಕು	- ಕಾಸರಗೋಡು
ನಿಯೋಜಕ ಮಂಡಲ	-ಮಂಜೇಶ್ವರ
ವಿಸ್ತೀರ್ಣ	- 45.40 sq.km.
ಗಡಿಗಳು	
ಬಡಗು	-ಕರ್ನಾಟಕ ರಾಜ್ಯ (ನರಿಂಗಾಣ ಗ್ರಾಮ)
ಮೂಡು	-ಕರ್ನಾಟಕ ರಾಜ್ಯ (ಕನ್ಯಾನ ಗ್ರಾಮ ಪಂಚಾಯತ್)
ತೆಂಕು	- ಮೀಂಜ ಗ್ರಾಮ ಪಂಚಾಯತ್
ಪಡು	-ಮಂಜೇಶ್ವರ ಗ್ರಾಮ ಪಂಚಾಯತ್
ಜನಸಂಖ್ಯೆ	20821 (1991 ಕಾನೇಷುಮಾರಿ ಪ್ರಕಾರ)
ವಾರ್ಡುಗಳ ಸಂಖ್ಯೆ	10
ಅಧ್ಯಕ್ಷರ ಹೆಸರು	-ಶ್ರೀ ವಿ. ದೇವಪ್ಪ ಶೆಟ್ಟಿ
ಉಪಾಧ್ಯಕ್ಷರು	-ಶ್ರೀ ಪಿ.ಪಿ. ಕುಂಞಬ್ಬ
ಪುರುಷರು	10412
ಸ್ತ್ರೀಯರು	10409
ಸಾಕ್ಷರತಾ ಸಂಖ್ಯೆ, ಶತಮಾನ	ಪುರುಷರು ಸ್ತ್ರೀಯರು
ಒಟ್ಟು	8330 (80%) 8327 (80%)
	16657 (80%)

ಪರಿಶಿಷ್ಟ ಜಾತಿ (ಈಗಿನ ಲೆಕ್ಕಾಚಾರ)	(ಪುರುಷ	ಸ್ತ್ರೀ	ಒಟ್ಟು	ಶತಮಾನ
ಪರಿಶಿಷ್ಟ ಪಂಗಡ	399	355	757	3.62
	475	452	927	4.45

ಚರಿತ್ರೆ ಪಠಣ

1954ರ ನವಂಬರ ತಿಂಗಳಲ್ಲಿ ವರ್ಕಾಡಿ ಪಂಚಾಯತ್ ಆರಂಭವಾಯಿತು. ಆಗಿನ ಪಂಚಾಯತಿನ ಅಧ್ಯಕ್ಷರಾಗಿ ಶ್ರೀಮಾನ್ ಕಲ್ಲೂರು ವಿಶ್ವನಾಥ ಅಡಪರು ಆರಿಸಲ್ಪಟ್ಟರು. ಆರಂಭದ ಅವಧಿಯಲ್ಲಿ ಒಬ್ಬರೆ ಗುಮಾಸ್ತರು ಬರವಣಿಗೆ ಮತ್ತು ತೆರಿಗೆ ಸಂಗ್ರಹಕ್ಕಾಗಿ ನೇಮಕವಾಗಿದ್ದರು. ಶ್ರೀಮಾನ್ ನಾರಾಯಣ ನಾಯ್ಕರು ಆರಂಭದಲ್ಲಿ ಈ ಹುದ್ದೆಯಲ್ಲಿ ಕೆಲಸ ಮಾಡುತ್ತಿದ್ದರು. ಅವರಿಗೆ ಮಾಸಿಕ ವೇತನ ರೂಪಾಯಿ 15ರಂತೆ ತಲ್ಪಡುತಿತ್ತು. 1962ರಿಂದ ನಮ್ಮ ಪಂಚಾಯತ್ ಮೇಜರ್ ಪಂಚಾಯತಾಯಿತು. ಆಗ ಅಧ್ಯಕ್ಷರಾಗಿ ಶ್ರೀ ದಿವಂಗತ ಕೋಣಮ್ಮೆಲ್ ಸೀತಾರಾಮ ಶೆಟ್ಟರು ಅಧ್ಯಕ್ಷರಾಗಿದ್ದರು. ಇವರು ಅಧ್ಯಕ್ಷರಾಗಿ ಸುಮಾರು 13 ವರ್ಷಗಳ ಕಾಲ ಅಧಿಕಾರದಲ್ಲಿ ಇದ್ದರು. ಕಾರಣಾಂತರದಿಂದ ಅವರು ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ಇತ್ತರು. ಆಗ ಉಪಾಧ್ಯಕ್ಷರಾದ ಶ್ರೀ ನಾರಾಯಣ ತಾಳಿತ್ತಾಯರು ಅಧಿಕಾರ ವಹಿಸಿಕೊಂಡರು. 1979ರಲ್ಲಿ ಶ್ರೀ ನಾರಾಯಣ ತಾಳಿತ್ತಾಯರು ಮರಳಿ ಅಧ್ಯಕ್ಷರಾಗಿ ಚುನಾಯಿತರಾದರು. 1985ರಿಂದ 1995ರ ವರೆಗೆ ಅಂದರೆ ಎರಡು ಅವಧಿಯಲ್ಲಿ ಶ್ರೀ ಕೆ. ಜಾರಪ್ಪ ಶೆಟ್ಟರು ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿಕೊಂಡು ಬಂದಿದ್ದಾರೆ.

1962ರಲ್ಲಿ 4 ವಾರ್ಡುಗಳಿದ್ದು, ಮೇಜರ್ ಪಂಚಾಯತು ಆಯಿತು. 1978ರಲ್ಲಿ 5 ವಾರ್ಡುಗಳಾಗಿ ಬದಲಾಯಿತು. 1984ರಲ್ಲಿ 7 ವಾರ್ಡುಗಳು ಆಗಿದ್ದುದು, 1989ರಲ್ಲಿ 9 ವಾರ್ಡುಗಳಾಗಿ ವಿಭಜಿಸಲ್ಪಟ್ಟಿತು. 1995ರಲ್ಲಿ ಅದು 10 ವಾರ್ಡುಗಳಾಗಿ ವಿಭಜಿಸಲ್ಪಟ್ಟಿತು.

ಹಳೆಯ ಮದ್ರಾಸ್ ಪ್ರಾಂತ್ಯದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮೊದಲಾಗಿ ರೂಪೀಕರಿಸಲ್ಪಟ್ಟ ಪಂಚಾಯತುಗಳಲ್ಲಿ ವರ್ಕಾಡಿ ಪಂಚಾಯತು ಒಂದಾಗಿದೆ.

1954ರಲ್ಲಿ ಪಂಚಾಯತು ರೂಪುಗೊಳ್ಳುವಾಗ, ಅದಕ್ಕೆ ಈಗಿನ ನಾಲ್ಕು ಗ್ರಾಮಗಳ ಕೆಲವೇ ಭಾಗಗಳು ಮಾತ್ರ ಸೇರಿಕೊಂಡಿದ್ದವು. 1956ರ ನವಂಬರ್ ಒಂದರಂದು ಪ್ರಾಂತ್ ಪುನರ್ ವಿಂಗಡೆಯಾದಾಗ ಕಾಸರಗೋಡು ತಾಲೂಕು ಕೇರಳ ರಾಜ್ಯದೊಂದಿಗೆ ಸೇರ್ಪಡೆಯಾಯಿತು. ಆಗ ನಮ್ಮ ಪಂಚಾಯತು ಕೇರಳ ರಾಜ್ಯದ ಅತೀ ಉತ್ತರದ ಹಾಗೂ ಕೊನೆಯ ಪಂಚಾಯತಾಗಿ ರೂಪುಗೊಂಡಿತು. 1962ರಲ್ಲಿ ಗ್ರಾಮ ಪುನರ್ ನಿರ್ಮಾಣವಾದಾಗ ಈಗಿನ ಈ ನಾಲ್ಕು ಗ್ರಾಮಗಳು ಅಂದರೆ ಪಾವೂರು, ವರ್ಕಾಡಿ, ಕೊಡ್ಲಮೊಗರು ಮತ್ತು ಪಾತೂರುಗಳು ವರ್ಕಾಡಿ ಪಂಚಾಯತಿನ ಗ್ರಾಮಗಳಾದವು. ಈ ನಾಲ್ಕು ಗ್ರಾಮಗಳು ಆರಂಭದಲ್ಲಿ 9 ವಾರ್ಡುಗಳಾಗಿ, ಈಗ ಅವು 10 ವಾರ್ಡುಗಳಾಗಿ ವಿಭಜಿಸಲ್ಪಟ್ಟಿವೆ. 1995ರಲ್ಲಿ ವರ್ಕಾಡಿ ಗ್ರಾಮ ಪಂಚಾಯತ್ ಎಂಬ ಅಭಿನಾಮದಲ್ಲಿ

ಸುಭದ್ರವೂ, ಅಚ್ಚುಕಟ್ಟುತನದಿಂದಲೂ ಕೂಡಿದ ಗ್ರಾಮ ಪಂಚಾಯತ್ ಇದಾಗಿದೆ. ಈ ಪಂಚಾಯತಿನ ಉತ್ತರಗಡಿ ಗುಡ್ಡ ಬೆಟ್ಟಗಳಿಂದಲೂ ಕೂಡಿದ್ದು ಕರ್ನಾಟಕ ರಾಜ್ಯದ ಗಡಿಯಾಗಿದೆ. ದಕ್ಷಿಣದ ಗಡಿಯಾಗಿ ಮಂಚೇಶ್ವರ ಪುತ್ತೂರು ರಾಜರಸ್ತೆ ಮಾಂಜ ಗ್ರಾಮ ಪಂಚಾಯತಿನಿಂದ ಪ್ರತ್ಯೇಕಿಸಲ್ಪಡುತ್ತದೆ. ಹಾಗೆಯೇ ಮೂಡು ಆನೆಕಲ್ ಹೊಳೆ ಮತ್ತು ಕರ್ನಾಟಕ ರಾಜ್ಯವು ಗಡಿಯಾಗಿದ್ದು, ಪಡುಕಡೆಯಿಂದ ಮಂಚೇಶ್ವರ ಗ್ರಾಮ ಪಂಚಾಯತಿನ ಒತ್ತಿನಲ್ಲಿದೆ.

ಸಾಮಾಜಿಕ ಸಾಂಸ್ಕೃತಿಕ ಚರಿತ್ರೆಯ ಹಿನ್ನಲೆ
ನಿನ್ನೆಯ ಗಳಿಕೆಗಳೂ ಇಂದಿನ ಆಟೋಪವು :

20ನೇ ಶತಮಾನದ ಆದ್ಯ ದಶಕಗಳಲ್ಲಿ ಈ ಗ್ರಾಮಗಳು ಸಾಮಾನ್ಯ ಗ್ರಾಮಗಳಾಗಿದ್ದು, ಏನೊಂದು ವಿಶೇಷತೆಗಳು ಇಲ್ಲಿ ಇರಲಿಲ್ಲ. ಆದರೆ ಒಳ್ಳೆಯ ಕೃಷಿ ಭೂಮಿಗಳಿಂದ ಕೂಡಿದ್ದು ಧಾರಾಳ ಭತ್ತ ಬೆಳೆಯುವ ಕಣಜವಾಗಿತ್ತು. ಗದ್ದೆಯ ಬದಿಗಳಲ್ಲಿ ಧಾರಾಳ ತೆಂಗಿನ ಮರಗಳನ್ನು ನೆಟ್ಟು ಅದಕ್ಕೆ ಗಟ್ಟಿಯಾದ ಕಟ್ಟಪುಣಿ ಕಟ್ಟಿ ಉತ್ತಮವಾಗಿ ತೆಂಗಿನ ಕೃಷಿಗಳನ್ನು ಮಾಡುತ್ತಿದ್ದರು. ಗದ್ದೆಯ ಅಂಚುಗಳಲ್ಲಿ ಅಲ್ಲದೆ ಮನೆಯ ಸುತ್ತುಮುತ್ತಲು ತೆಂಗಿನ ಮರಗಳನ್ನು ಕೃಷಿ ಮಾಡುತ್ತಿದ್ದರು. ನೆರೆಯ ಗ್ರಾಮಗಳಿಗೆ ಹಾಗೂ ಹತ್ತಿರದ ಪೇಟೆಗಳಿಗೆ ಅಕ್ಕಿಯ ವ್ಯಾಪಾರ ಮಾಡುತ್ತಿದ್ದರು. ಭತ್ತದ ಕೃಷಿಯಲ್ಲದೆ, ಎರಡನೆ ಬೆಳೆ ಅಥವಾ ಮೂರನೇ ಬೆಳೆ ಬದಲು ಉದ್ದು, ಹೆಸರು, ದೊಡ್ಡ ಹೆಸರು, ರಾಗಿ, ತರಕಾರಿ, ಮೆಣಸು ಹೀಗೆ ವಿವಿಧ ಕೃಷಿಯನ್ನು ಮಾಡುತ್ತಿದ್ದರು. ಗ್ರಾಮಕ್ಕೆ ಬೇಕಾದಷ್ಟು ತರಕಾರಿ ಆಯಾಯ ಗ್ರಾಮಗಳಲ್ಲಿಯೇ ಬೆಳೆಯುತ್ತಿದ್ದರು. ಹೆಚ್ಚಾದ ತರಕಾರಿಗಳನ್ನು ತರಕಾರಿ ಬೆಳೆಸದವರಿಗೆ ದಾನದ ರೂಪದಲ್ಲಿ 'ಹಸುರುವಾಣ' ರೂಪದಲ್ಲಿ ಕೊಡುತ್ತಿದ್ದರು. ಹಿಂದಿನ ಗ್ರಾಮಗಳು ಹೆಚ್ಚಾಗಿ ಸ್ವಾವಲಂಬಿಗಳಾಗಿದ್ದವು. ಅಂದರೆ ಅವರಿಗೆ ಅನ್ಯ ಪ್ರದೇಶದಿಂದ ಕೆಲವೇ ವಸ್ತುಗಳು ಮಾತ್ರ ಅಗತ್ಯವಿತ್ತು. ಅವು ಮುಖ್ಯವಾಗಿ ಬೆಂಕಿ ಪೆಟ್ಟಿಗೆ, ಉಪ್ಪು, ಚಿಮಿಣಿ ಎಣ್ಣೆ, ಹತ್ತಿ ಬಟ್ಟೆ ಇತ್ಯಾದಿ. ಇವುಗಳನ್ನು ತರಿಸಿಕೊಳ್ಳುತ್ತಿದ್ದರು. ಹೆಚ್ಚಿನ ಸಾಮಾಗ್ರಿಗಳನ್ನು ಕೊಟ್ಟುಕೊಳ್ಳುವ ಸಂಪ್ರದಾಯದಂತೆ ಅಂದಿನ ಜನರು ಪಡೆಯುತ್ತಿದ್ದರು. ಆ ಕಾಲದಲ್ಲಿ ಹಣದ ರೂಪದಲ್ಲಿ ಚಲಾವಣೆ ಬಹಳ ಕಡಿಮೆ ಇತ್ತು. ಪ್ರತಿ ಹಳ್ಳಿಗಳಲ್ಲಿಯೂ, ಹಳ್ಳಿಯಲ್ಲಿ ಬೆಳೆಯುವ ವಸ್ತುಗಳನ್ನು ವಿನಿಮಯ ಪದ್ಧತಿಯಿಂದ ಇತರ ಕಡೆಯಿಂದ ಪಡೆಯುತ್ತಿದ್ದರು. ಅಪರೂಪವಾಗಿ ಕೆಲವು ಕಡೆಗಳಲ್ಲಿ ಅಡಿಕೆ ಕೃಷಿ ಮಾಡುತ್ತಿದ್ದರು. ಅದು ಆಗ ಅಷ್ಟು ಪ್ರಾಮುಖ್ಯ ಬೆಳೆಯಲ್ಲ. ಆ ಕಾಲ ಘಟ್ಟದಲ್ಲಿ ಕೆಲವೇ ಜಮೀನ್ದಾರರಲ್ಲಿ ಈ ಭೂ ಪ್ರದೇಶ ಹಂಚಿ ಹೋಗಿತ್ತು. ಹೆಚ್ಚಿನ ರೈತರು ಗೇಣಿ ಒಕ್ಕಲಿಗ ಅಥವಾ ಕೃಷಿ ಕಾರ್ಮಿಕರಾಗಿ ಊಳಿಗದ ಆಳಾಗಿ ಬದುಕುತ್ತಿದ್ದರು. ಗೇಣಿ ಒಕ್ಕಲಿಗೆ ಆ ಭೂ ಪ್ರದೇಶದಲ್ಲಿ ಏನೊಂದು ಹಕ್ಕು ಇರುತ್ತಿರಲಿಲ್ಲ. ಧನಿಗಾಗಿ ದುಡಿಯಲೇ ಬೇಕಿತ್ತು. ನೆಮ್ಮದಿ ಇರಲಿಲ್ಲ. ಒಂದನೇ ಲೋಕ ಮಹಾಯುದ್ಧದ ಸಂದರ್ಭದಲ್ಲಿ ಈ ಗ್ರಾಮಗಳ ಜನಜೀವನವು ಮತ್ತಷ್ಟು ಹದಗೆಟ್ಟಿತ್ತು. ಬೆಳೆಸಿದ ಆಹಾರವನ್ನು ಸರಕಾರವು ಲೆವಿ ಸಂಗ್ರಹಿಸುವ ನೆಪದಲ್ಲಿ ಬೆಳೆವ ರೈತರನ್ನು ಲೂಟಿ ಮಾಡುತ್ತಿತ್ತು. ಅದಕ್ಕೆ ತಕ್ಕ ಪ್ರೋತ್ಸಾಹವನ್ನು ಜಮೀನ್ದಾರರು ಕೊಡುತ್ತಿದ್ದರು. ಕಾರಣ ಲೆವಿಯಾಗಿ ಹಾಕಿದ ಸಾಮಾಗ್ರಿಗಳ ಬೆಲೆ ಬಹಳ ಕಡಿಮೆಯಾಗಿತ್ತು. ಹೊರ ಮಾರುಕಟ್ಟೆಯಲ್ಲಿ ಸರಕಾರ ಕೊಡುವ ಬೆಲೆಗಿಂತ ಹತ್ತು ಪಟ್ಟು ಹೆಚ್ಚು ಬೆಲೆ ಸಿಗುತ್ತಿತ್ತು. ಒಂದು ಕಡೆ ಜಮೀನ್ದಾರರು ರೈತರನ್ನು ಸುಲಿದರೆ ಇನ್ನೊಂದು ಕಡೆ ಸರಕಾರದ ಹೆಸರಿನಲ್ಲಿ ನೌಕರ ವರ್ಗದವರು ರೈತರನ್ನು ನಿರ್ಗತಿಕರನ್ನಾಗಿಸುತ್ತಿದ್ದರು. ಇಂತಹ ಶೋಷಣೆಗೊಳಗಾದ ರೈತರು ಮಾನಸಿಕವಾಗಿ ಅಂದಿನ ವ್ಯವಸ್ಥೆಯನ್ನು ತಿರಸ್ಕರಿಸುವ ಸ್ಥಿತಿಗೆ ಬಂದಿದ್ದರು. ಒಕ್ಕಲಿಗರು ತಮ್ಮ ಹಕ್ಕಿಗಾಗಿ ಮತ್ತು ಅದನ್ನು ಪಡೆಯುವುದಕ್ಕಾಗಿ ಕಾಯುತ್ತಿದ್ದರು. ಅಲ್ಲಲ್ಲಿ ಚಿಕ್ಕ ಪುಟ್ಟ ಧನಿ ಒಕ್ಕಲಿಗರ ಗಲಾಟೆಗಳು ಈ ಗ್ರಾಮದಲ್ಲಿ ಕಂಡು ಬಂತು. ಅಲ್ಲಲ್ಲಿ ಕೆಲವು ಸಂದರ್ಭಗಳಲ್ಲಿ ಹೆಚ್ಚೆಚ್ಚು ಬಿಗಡಾಯಿಸಿತು. ಇದನ್ನು ಹತ್ತಿಕ್ಕುವಲ್ಲಿ ಜಮೀನ್ದಾರರೂ, ದೊಡ್ಡ ಹಿಡುವಳಿಗಾರರೂ ಒಗ್ಗಟ್ಟಾಗಿ ಪ್ರಯತ್ನಿಸುತ್ತಿದ್ದರು. ಇದನ್ನು ಬಹು ಜನ ರೈತರು ಮತ್ತು ಚಿಕ್ಕ ಹಿಡುವಳಿದಾರರು ಎದುರಿಸಲು ಸನ್ನದ್ಧರಾದರು. ಅವರಿಗೆ ಬೆಂಬಲವಾಗಿ 'ಕುಡಿ ಕಡಪು' ವರ್ಗದ ಕೃಷಿ ಕಾರ್ಮಿಕರು ನಿಂತರು. ಸ್ವಾತಂತ್ರ್ಯ ನಂತರದ ಕಾಲದಲ್ಲಿ ಬಹುಜನರ ಮುಖ್ಯದೃಷ್ಟಿ ಉಳುವವನೇ ಹೊಲದೊಡೆಯನಾಗಬೇಕೆಂಬುದಾಗಿತ್ತು. ಇದಕ್ಕಾಗಿ ಅಲ್ಲಲ್ಲಿ ಪ್ರತ್ಯೇಕ ಪ್ರತ್ಯೇಕ ಪ್ರತಿಭಟನೆಗಳು ಆರಂಭವಾದವು. ಈ ಬಹು ಜನರ ಪ್ರತಿಭಟನೆಗಳ ಫಲವಾಗಿ 1960ರಿಂದ 1970ರ 10 ವರ್ಷಗಳ ಕಾಲಘಟ್ಟದಲ್ಲಿ ಹಲವಾರು ಭೂ ಪರಿಷ್ಕರೂ ನಿಯಮಗಳು ರೂಪು ತಳೆದವು. ಬಹುಜನ ಪ್ರಸ್ಥಾನಗಳ ಬೆಳವಣಿಗೆಯೂ, ಭೂ ಪರಿಷ್ಕರಣವೂ ಈ ನಾಡಿನ ಮುಖ್ಯ ಛಾಯೆಯನ್ನು ಬದಲಾಯಿಸಿತು. ಭದ್ರವಾಗಿ ನೆಲೆಸಿದ್ದ ಜಮೀನ್ದಾರೀ ಪದ್ಧತಿಯಲ್ಲಿ ಬಿರುಕು ಬಿಟ್ಟಿತ್ತು. 1951ರಲ್ಲಿ 10% ಜನರಿಗೂ ಕೃಷಿ ಭೂಮಿ ಸ್ವಂತವಾಗಿರಲಿಲ್ಲ. ಭೂಮಿಯು ಕೆಲವು ಶ್ರೀಮಂತ ಮನೆತನದ, ದೇವಸ್ಥಾನಗಳ ಮತ್ತು ಭೂತಸ್ಥಾನಗಳ ವಶವಾಗಿತ್ತು. 1970ರ ಭೂಪರಿಷ್ಕರಣದಿಂದ ಸಾವಿರಾರು ಒಕ್ಕಲುಗಳು ಮತ್ತು 'ಕುಡಿ ಕಡಪು'ದಾರರು ಕೊಡುತ್ತಿದ್ದ ಗೇಣಿ, ಕೃಷಿಕನಲ್ಲೇ ಉಳಿಯಿತು. ಅದು ಅವನ ಸ್ವಂತ ಆಸ್ತಿಯಾಯಿತು. ಆ ಭೂಮಿಯಲ್ಲಿ ಅವನಿಗೆ ಇಷ್ಟವಾದ ಬೆಳೆ ತೆಗೆಯುವ ಹಕ್ಕು ಅವನದೇ ಆಯಿತು. ಹಿಂದಿನ ಕೆಲವು ವರ್ಗದ ಜನರಿಗೆ ಸ್ವಂತ ಭೂಮಿ ಎಂಬುದು ಕನಸಿನ ಗಂಟಾಗಿತ್ತು. ಆದರೆ ಅದು ಈಗ ಎಲ್ಲರಿಗೆ ಸಾಧ್ಯವಾದುದು, ಒಂದು ರೀತಿಯ ಪವಾಡವೇ ಆಯಿತು. ಭೂಮಿಯಿಲ್ಲದವರಿಗೆ ಸರಕಾರವು ಕರೆದು ಕರೆದು ಭೂಮಿಯನ್ನು ಹಂಚಿತು.

ಹಿಂದುಳಿದ ಜಾತಿ, ಹಿಂದುಳಿದ ಪಂಗಡ, ಈ ವರ್ಗಗಳಿಗೆ ಪ್ರತ್ಯೇಕ ನಿಗಾ ಇಟ್ಟ ಭೂಭಾಗವನ್ನು ಕಾಯ್ದಿಟ್ಟು ವಿತರಿಸಲ್ಪಟ್ಟಿತ್ತು. ಈ ಗ್ರಾಮದಲ್ಲಿ

ಈ ರೀತಿಯಾಗಿ ಜಮೀನ್ದಾರರ ಹದ್ದು ಬಸ್ತಿನಲ್ಲಿದ್ದು ತೀರ್ವೆ ಕೊಡದೇ ಇರುತ್ತಿದ್ದ ಹಾಗೂ ಕೊಡುತ್ತಿದ್ದ ನೂರಾರು ಎಕ್ರೆ ಭೂಮಿ, ಆರಂಭದಲ್ಲಿ ಹಾಲ್ಕು ಎಕರೆಯಂತೆ ಮುಂದೆ ಇದ್ದ ಹಾಗೆ ಇದ್ದಷ್ಟು ಭೂಮಿಯು ಮಾರಲ್ಪಟ್ಟಿತ್ತು. ಈ ಎಲ್ಲಾ ಕಾರಣದಿಂದ ಇಂದು ಈ ಗ್ರಾಮ ಪಂಚಾಯತಿನಲ್ಲಿ 80%ಕ್ಕೂ ಹೆಚ್ಚು ಮಂದಿ ಭೂ ಹಿಡುವಳಿ ರಹಿತರಾಗಿದ್ದಾರೆ. ಭೂ ಒಡೆಯರಾಗಿದ್ದಾರೆ.

ವಿದ್ಯಾಭ್ಯಾಸ ಆರೋಗ್ಯ ನೆಲೆಯಲ್ಲಿ ಗಮನೀಯ ವ್ಯತ್ಯಾಸ ಉಂಟಾಗಿದೆ. ಹಿಂದೆ ಇಷ್ಟು ವಿಸ್ತಾರವಾಗಿದ್ದ ಈ ಗ್ರಾಮ ಪಂಚಾಯತಿನಲ್ಲಿ ಅಡಕಲಕಟ್ಟೆ, ಸುಂಕದಕಟ್ಟೆ, ಬಜಿಲಕರಿಯ, ಕಾಫಿರಿ ಎಂಬ ಕಡೆಗಳಲ್ಲಿ ಮಾತ್ರ ಪ್ರಾಥಮಿಕ ಶಾಲೆಗಳಿದ್ದುವು. ಆದರೆ ಈ ಶಾಲೆಗಳಲ್ಲಿ ಮುಂದುವರಿದ ಜಮೀನ್ದಾರರ ಮಕ್ಕಳು ಮಾತ್ರ ಕಲಿಯುತ್ತಿದ್ದರು. ಇನ್ನು ಕೆಲವು ಶ್ರೀಮಂತರು. ತಮ್ಮ ಮನೆಯಲ್ಲಿ ಅಯ್ಯಾ 'ಗುರು'ಗಳನ್ನು ಇಟ್ಟು ಮಕ್ಕಳಿಗೆ ಶಿಕ್ಷಣ ಕೊಡಿಸುತ್ತಿದ್ದರು. ಮೇಲೆ ಹೇಳಿದ ಶಾಲೆಗೆ ಸರಕಾರದಿಂದ ಗ್ರಾಂಟ್ ಮಾತ್ರ ಸಿಗುತ್ತಿತ್ತು. ಭೂ ಪರಿಷ್ಕರಣದ ನಂತರ ಅಲ್ಲಲ್ಲಿ ಶಾಲೆಗಳು ಸ್ಥಾಪನೆಗೊಂಡುವು. ಸರಕಾರವು ಗ್ರಾಂಟ್ ಕೊಡುವ ವ್ಯವಸ್ಥೆ ಮಾಡಿತು. ಈಗ ಈ ಪಂಚಾಯತಿನಲ್ಲಿ 5 ಪ್ರಾಥಮಿಕ ಶಾಲೆ, 3 ಹಿರಿಯ ಪ್ರಾಥಮಿಕ ಶಾಲೆ ಇತ್ತು 1 ಹೈಸ್ಕೂಲ್ ಇದೆ. ಆದರೆ ಒಂದೂ ತರಬೇತಿ ಕೇಂದ್ರವಿಲ್ಲ. ಸಾಕ್ಷರತೆಯಲ್ಲಿ ಈ ಪಂಚಾಯತು ಮುಂಚೂಣಿಯಲ್ಲಿ ನಿಂತಿದ್ದು ಸರ್ವತ್ರ ಸಾಕ್ಷರತರಾಗಿರುವ ಪಂಚಾಯತೆಂದು ಘೋಷಿಸಲ್ಪಟ್ಟಿದೆ.

ಇಂದು ಇಲ್ಲಿ ಹಳೆಯ ಹಲವು ಸಮಸ್ಯೆಯು ಹೋಗಿ ಹೊಸ ಸಮಸ್ಯೆಗಳು ಹುಟ್ಟಿಕೊಂಡಿವೆ. ಈ ಸಮಸ್ಯೆಗಳಿಗೆ ಕಾರಣವನ್ನು ಸರಿಯಾಗಿ ತಿಳಿದುಕೊಂಡು ಅದನ್ನು ಹೋಗಲಾಡಿಸಲು ಅಥವಾ ಕಡಿಮೆಯಾಗಿಸಲು ನಮ್ಮ ಪಂಚಾಯತಿನ ಮುಂದಾಳುಗಳು ಟೊಂಕ ಕಟ್ಟಿ ಹೋರಾಡುವುದು ಅಗತ್ಯವಾಗಿದೆ.

ವರ್ಕಾಡಿ ಪಂಚಾಯತ್ ಎದುರಿಸುತ್ತಿರುವ ಸಮಸ್ಯೆಗಳನ್ನು ಅವಲೋಕಿಸುವಾಗ ಅವು ಮುಖ್ಯವಾಗಿ ಒಂದು ಕೃಷಿ ವಲಯದಲ್ಲಿ ನಡೆಯುವವರ ಕೊರತೆ. ಇದರಿಂದ ಅಲ್ಲಲ್ಲಿ ಭೂಮಿ ನಿಧಾನವಾಗಿ ಪಾಳು ಬೀಳುತ್ತಿದೆ. ಅಥವಾ ಒಂದು ಕಾಲದಲ್ಲಿ ಭತ್ತದ ಕಣಜವಾಗಿದ್ದ ಈ ಗ್ರಾಮದ ಪ್ರದೇಶಗಳು ಇಂದು ವಾಣಿಜ್ಯ ಬೆಳೆಗಳಾದ ಅಡಿಕೆ, ತೆಂಗು, ಕೋಕೊ, ರಬ್ಬರ್, ಗೇರು ಹೀಗೆ ವಿವಿಧ ಕೊಕ್ಕೋ ಕೃಷಿಗಳ ಕಡೆ ದೃಷ್ಟಿ ಹರಿಸಿದ್ದಾರೆ. ಕೃಷಿಯಲ್ಲಿ ತೊಡಗಲು ಸಾಧ್ಯವಾಗದ ರೈತನ ಮಗ ಉದ್ಯೋಗಕಾಂಕ್ಷಿಯಾಗಿ ಪಟ್ಟಣಕ್ಕೆ ವಲಸೆ ಹೋಗಲು ಇಷ್ಟಪಡುತ್ತಾನೆ. ಅವನು ಹಳ್ಳಿಯಲ್ಲೇ ಇದ್ದು ಬೇಸಾಯ ಮಾಡಿ ವಿರಾಮ ಸಮಯದಲ್ಲಿ ಇತರ ಕಸುಬಿನಲ್ಲಿ ಮುಂದುವರಿಯುವ ದಾರಿ ತೋರಿಸಬೇಕಾಗಿದೆ. ಈ ನಿಟ್ಟಿನಲ್ಲಿ ಸರಕಾರ ಹಲವು ಯೋಜನೆಗಳನ್ನು ತಂದಿದೆ. ಅದನ್ನು ಗ್ರಾಮದಲ್ಲಿ ಅನುಷ್ಠಾಲಗೊಳಿಸುವಂತೆ ಪ್ರಯತ್ನ ಹೆಚ್ಚಿಸಬೇಕು. ವಿದ್ಯಾಭ್ಯಾಸದೊಂದಿಗೆ ಇತರ ಟೆಕ್ನಿಕಲ್ ವಿಷಯಗಳಲ್ಲಿಯೂ ತರಬೇತಿ ಸಿಗುವಂತೆ ಮಾಡಬೇಕು. ಕಡ್ಡಾಯವಾಗಿ, ವಿದ್ಯಾಭ್ಯಾಸ ಮಾಡುವಂತೆ ನೋಡಿಕೊಳ್ಳಬೇಕು. ಅದೇ ಸಂದರ್ಭದಲ್ಲಿ ಸುಲಭದಲ್ಲಿ ಪಾಸಾಗುವ, ತಪ್ಪು ಕ್ರಮವನ್ನು ಹೋಗಲಾಡಿಸಿ, ಹಿಂದಿನ ರೀತಿಯಲ್ಲಿ ಚೆನ್ನಾಗಿ ಕಲಿತು ಪಾಸಾಗುವಂತೆ ನೋಡಿಕೊಳ್ಳಬೇಕು. ಒಂದು ಕಾಲದಲ್ಲಿ ನಮ್ಮ ದೇಶದಲ್ಲಿಯೇ ಒಳ್ಳೆಯ ಶಿಕ್ಷಣ ಪದ್ಧತಿಯಿದ್ದ ಕೇರಳ ರಾಜ್ಯದ ಇಂದಿನ ಶಿಕ್ಷಣದ ಮಟ್ಟ 18ನೇ ಸ್ಥಾನಕ್ಕೆ ಬಂದಿದೆ ಎಂದರೆ ನಾವೆಷ್ಟು ಹಿಂದಕ್ಕೆ ಹೋಗಿದ್ದೇವೆ ಎಂದು ನೋಡಬೇಕು. 30 ಮಕ್ಕಳಿಗೆ ಒಬ್ಬ ಶಿಕ್ಷಕರನ್ನು ಒದಗಿಸುವ ನಮ್ಮ ವ್ಯವಸ್ಥೆ ಇಷ್ಟು ಹಾಳಾಗಲು ಕಾರಣವೇನು ಎಂದು ತಜ್ಞರು ಪರಿಶೀಲಿಸಬೇಕು.

ಆರೋಗ್ಯ ರಕ್ಷಣೆಗಾಗಿ ಹೇರಳ ಹಣ ಖರ್ಚು ಮಾಡಿದರೂ, ಅದರ ಉಪಯೋಗ ಸರಿಯಾಗಿ ಯಾರೂ ಪಡೆದುಕೊಳ್ಳುವುದಿಲ್ಲ. ಅದಕ್ಕೆ ಏನು ಕಾರಣ ಎಂದು ಪರಿಶೀಲಿಸಬೇಕು. ಇಂದು ಸ್ತ್ರೀಯರು ಹಲವು ಕ್ಷೇತ್ರಗಳಲ್ಲಿ ಮುಂಚೂಣಿಯಲ್ಲಿದ್ದಾರೆ. ಕೃಷಿ, ಕೈಗಾರಿಕೆ, ಪಶುಪಾಲನೆ ಇತ್ಯಾದಿ. ಇನ್ನು ಹೆಚ್ಚು ಹೆಚ್ಚು ಕ್ಷೇತ್ರಗಳಲ್ಲಿ ಅವರು ಮುಂದೆ ಬರುವಂತಾದರೆ ಗ್ರಾಮದ ಆರ್ಥಿಕ ಹಾಗೂ ಸಾಮಾಜಿಕ ಪ್ರಗತಿಯಾಗುವುದು. ಸ್ತ್ರೀಯರು ಹೆಣ್ಣು ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಹೆಚ್ಚು ಗಮನಹರಿಸಬೇಕಾಗಿದೆ. ಸಾಮಾಜಿಕವಾಗಿ ಶೋಷಣೆಗೆ ಒಳಗಾಗದಂತೆ ನೋಡಿಕೊಳ್ಳಬೇಕು.

ನಮ್ಮ ಪಂಚಾಯತಿನಲ್ಲಿ ಹಲವಾರು ಆರಾಧನಾ ಕೇಂದ್ರಗಳಿವೆ. ಮುಖ್ಯವಾಗಿ ವರ್ಕಾಡಿಯಲ್ಲಿರುವ ಶ್ರೀ ಕಾವಿ ಸುಬ್ರಹ್ಮಣ್ಯೇಶ್ವರ ದೇವಸ್ಥಾನ. ಇದು ಮಾಗಣೆಯಲ್ಲೇ ಹೆಸರಾಂತ ದೇವಸ್ಥಾನವಾಗಿದೆ. ಇಲ್ಲಿ ಷಷ್ಠಿ ದಿವಸ ವಾರ್ಷಿಕ ಜಾತ್ರೆ ವಿಜ್ರಂಭಣೆಯಿಂದ ಜರಗುತ್ತದೆ. ಇಲ್ಲಿ 16 ಕಂಬದ ಮಹಾಮಂಟಪವಿದೆ. ಹಿಂದೆ ಕೊಡಗಿನ ದೊರೆ "ಕಲ್ಯಾಣಪ್ಪನ ಕಾಟುಕಾಯಿ"ಮತ್ತು "ಸುಬ್ರಾಯರ ದಂಡ"ನ್ನು ಸಮರ್ಥವಾಗಿ ಪ್ರತಿಭಟಿಸಲು ಈ ಮಾಗಣೆಯ ಪ್ರಮುಖರು ಮಂಟಪದಲ್ಲಿ ಸೇರಿ ತೀರ್ಮಾನ ಕೈಗೊಂಡರು ಎಂದು ಇಲ್ಲಿಯ ಕೆಲವು ಹಿರಿಯರು ಹೇಳುತ್ತಿದ್ದಾರೆ. ಕಪಣ ಮೊಗರು ಎಂಬಲ್ಲಿ ಉಳ್ಳಾಲ್ತಿಕಟ್ಟೆಯಿದೆ. ಈ ಸ್ಥಳವು ಹಿಂದೆ ಪ್ರಮಾಣ ಮಾಡುವ ಕಟ್ಟೆಯಾಗಿತ್ತು ಎಂದು ಹಿರಿಯರು ಹೇಳುತ್ತಾರೆ. ಯಾವ ಕೋರ್ಟಿನಲ್ಲಿಯೂ, ಇತ್ಯರ್ಥವಾಗದ ವ್ಯಾಜ್ಯಗಳು ಇಲ್ಲಿ ತೀರ್ಮಾನವಾಗುತ್ತಿತ್ತು ಎನ್ನುತ್ತಾರೆ. ಭಟ್ಟಳ ಎಂಬಲ್ಲಿ ಗೋಪಾಲಕೃಷ್ಣ ದೇವಸ್ಥಾನವಿದೆ. ಇದಲ್ಲದೆ ಈ ಗ್ರಾಮದಲ್ಲಿ ಮಡಿಕತ್ತಾಯ, ಧೂಮಾವತಿ ಬಂಟ ಕಾರ್ನಿಕದ ದೈವಸ್ಥಾನಗಳಿವೆ. ಈ ದೈವಗಳಿಗೆ ವರ್ಷಕ್ಕೆ ಎರಡು ಬಾರಿ ಎರಡು ಕಡೆಗಳಲ್ಲಿ ನೇಮೋತ್ಸವಗಳು ನಡೆಯುತ್ತದೆ. ಸುಬ್ರಹ್ಮಣ್ಯ ದೇವಸ್ಥಾನವಲ್ಲದೆ 4 ಕಡೆಗಳಲ್ಲಿ ದೇವಸ್ಥಾನದ ಅವಶೇಷಗಳಿವೆ. ಅವು ಕೋಡಿ, ಬೋಳದ ಪದವು, ಕೊಂಡೆಮಾರು ಮತ್ತು ಬಜಿಲ ಕರಿಯ ಎಂಬಲ್ಲಿ ಇದೆ.

ಕೊಡ್ಲಮೊಗರು ಗ್ರಾಮದಲ್ಲಿ ಕೊಡ್ಲಮೊಗರು, ಪಿಲಿಕುಂಡ,

ಕೂರೇಲು, ಮಂಟಮೆ, ಬಗಂಬಿಲ, ಕಣ್ತೆಯೂರು ಎಂಬಲ್ಲಿ ಮಲರಾಯ ದೈವಸ್ಥಾನಗಳಿವೆ. ವಾರ್ಷಿಕೋತ್ಸವವಿದೆ. ಬೊಳ್ಳಾಡಿನಲ್ಲಿ ಮಹಮ್ಮಾಯಿ ದೇವಸ್ಥಾನವೂ, ಪಳ್ಳಿದ ಪಡ್ಪು ಎಂಬಲ್ಲಿ ರಾಜರಾಜೇಶ್ವರಿ ಭಜನಾ ಮಂಡಳಿಯೂ, ಗುವೇತ್ತಪಡ್ಪು ಎಂಬಲ್ಲಿ ವಿಷ್ಣುಮೂರ್ತಿ ದೈವಸ್ಥಾನವಿದ್ದು ಎರಡು ವರ್ಷಕ್ಕೊಮ್ಮೆ ಕಿಂಡ ಸೇವೆ ಉತ್ಸವವು ಜರಗುತ್ತದೆ.

ಪಾವೂರು ಗ್ರಾಮದಲ್ಲಿ ಒಂದು ಇಗರ್ಜಿ ಮತ್ತು 5 ಮಸೀದಿಗಳಿವೆ. ಪಿಲಿಚಾಮುಂಡಿ ಎಂಬ ದೈವಸ್ಥಾನವಿದೆ. ಈ ಭೂತಸ್ಥಾನದಲ್ಲಿ ವರ್ಷಕ್ಕೆ ಒಮ್ಮೆ ಜಾತ್ರೆ ನಡೆಯುತ್ತದೆ. ಪೊಯ್ಯೊನೇಮದ ಕಟ್ಟೆಯ ಪಿಲಿ ಚಾಮುಂಡಿ ದೈವಕ್ಕೆ ವಾರ್ಷಿಕ ನೇಮೋತ್ಸವ ಜರಗುತ್ತದೆ. ಕೂಟತ್ತಜೆ, ಕಣಂತೂರು ಎಂಬ ಸ್ಥಳಗಳಲ್ಲಿ ಅರಸು ದೈವಗಳ ಗುಡಿಗೋಪುರಗಳಿವೆ. ಇಲ್ಲಿ ವರ್ಷಂಪ್ರತಿ ನೇಮೋತ್ಸವಗಳು ಬಹಳ ವಿಜೃಂಭಣೆಯಿಂದ ಜರುಗುತ್ತದೆ.

ಪಾತೂರು ಗ್ರಾಮದಲ್ಲಿ ಸೂರ್ಯೇಶ್ವರ ದೇವಸ್ಥಾನವಿದೆ. ಮಲರಾಯ ದೈವಸ್ಥಾನವಿದೆ. ಇಲ್ಲಿ ವಾರ್ಷಿಕ ನೇಮೋತ್ಸವ ಜರಗುತ್ತದೆ. ಪಾತೂರಿನಲ್ಲಿ ಒಂದು ಪ್ರಸಿದ್ಧವಾದ ಮಸೀದಿ ಇದೆ. ಈ ಗ್ರಾಮದಲ್ಲಿರುವ ಗುತ್ತಿನ ಮನೆಯಲ್ಲಿ ಹಿಂದಿನ ಕಾಲದಲ್ಲಿ ತಮ್ಮೊಳಗಿನ ವ್ಯಾಜ್ಯಾಗಳನ್ನು ತೀರ್ಮಾನಿಸಿ ತೀರ್ಪುಕೊಡುವ ಸಂಪ್ರದಾಯವಿತ್ತು ಎಂದು ಹಿರಿಯರು ಹೇಳುತ್ತಿದ್ದಾರೆ. ಈ ಮನೆಯ ಚಾವಡಿಯು ನ್ಯಾಯ ಚಾವಡಿ ಎಂದು ಪ್ರಸಿದ್ಧವಾಗಿತ್ತು.

ಈ ಗ್ರಾಮ ಪಂಚಾಯತಿಗೆ ಸೇರಿದ ಜನರು ಯಕ್ಷಗಾನ ಪ್ರಿಯರು. ವರ್ಷದಲ್ಲಿ ಈ ಪ್ರದೇಶದಲ್ಲಿ ಹಲವಾರು ಮೇಳಗಳ ಹಲವಾರು ಪ್ರಸಂಗಗಳು ಜರಗುತ್ತವೆ. ಈ ಗ್ರಾಮಗಳಲ್ಲಿ ಹಲವಾರು ಯಕ್ಷಗಾನ ತಾಳ, ಮದ್ದಳೆಯ ಕೂಟಗಳಿದ್ದು ಹಿರಿಯರು ಕಿರಿಯರಿಗೆ ಯಕ್ಷಗಾನದಲ್ಲಿ ತರಬೇತಿ ಕೊಡುವ ಪರಿಪಾಠಗಳಿವೆ. ಯಕ್ಷಗಾನಲ್ಲದೆ, ಭಜನಾ ಸಂಘಗಳಿದ್ದು ವಾರದಲ್ಲಿ ಒಂದು ದಿನ ಯುವಕರು ಈ ಸಂಘದಲ್ಲಿ ಸೇರಿ ಭಜನೆಯನ್ನು ಮಾಡುತ್ತಾರೆ. ಹಿಂದುಳಿದ ಜಾತಿಯವರಿಂದ ನಡೆಸಿಕೊಂಡು ಬರುವ ಆಟಿ ಕಳಂಜ -ಕಂರ್ಗೊಳ್ ಗುಳಿಗ ಹೀಗೆ ವಿವಿಧ ನರ್ತನಗಳಿಂದ ಕೂಡಿದ ಸಾಂಸ್ಕೃತಿಕ ವ್ಯವಸ್ಥೆಯಿದೆ. ಹೆಚ್ಚಿನ ಜನರು ತಮ್ಮ ಹಿರಿಯರು ನಂಬಿಕೊಂಡು ಬಂದ ದೈವಕ್ಕೆ 'ಅಗೆಲ'ನ್ನು ಇರಿಸಿ ಪೂಜಿಸುವ ಸಂಪ್ರದಾಯ ಪ್ರತಿ ಕುಟುಂಬಗಳಲ್ಲೂ ಇದೆ. ಅಲ್ಲಲ್ಲಿ ಯುವಕರು ಸೇರಿ ಕ್ಲಬುಗಳನ್ನು ಮಾಡಿಕೊಂಡು ನಾಟಕಗಳನ್ನು ಪ್ರದರ್ಶಿಸುತ್ತಾರೆ. ಕೆಲವು ಕ್ಲಬಿನವರು ಸಾರ್ವಜನಿಕ ಸೇವೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಉಳಿದವರಿಗೆ ಮಾರ್ಗದರ್ಶಕರಾಗಿರುತ್ತಾರೆ. ನಮ್ಮ ಯುವಕರು ಇಂತಹ ಕ್ಲಬುಗಳಲ್ಲಿ ಸೇರಿ, ತಮಗೆ ತಮ್ಮ ಊರಿಗೆ ಒಳ್ಳೆಯದಾದ ವಿಚಾರಗಳಲ್ಲಿ ಸಕ್ರೀಯರಾಗಿ ಭಾಗವಹಿಸಿ ಹಲವಾರು ಪದ್ಧತಿಗಳಲ್ಲಿ ಸೇರಿ ಒಳ್ಳೆಯ ರೀತಿಯಲ್ಲಿ ಬದುಕಲು ಮುಂದೆ ಬರಬೇಕು.

ಕೆಲವು ಕಡೆ ಮಹಿಳಾ ಸಮಾಜಗಳೂ ಇದೆ. ಇವು ಸರಿಯಾದ ರೀತಿಯಲ್ಲಿ ಕಾರ್ಯ ಪ್ರವರ್ತಿಸುತ್ತಿಲ್ಲ. ಇಂತಹ ಸಂಸ್ಥೆಗಳಲ್ಲಿ ವಿದ್ಯಾವಂತೆಯರಾದ ಸ್ತ್ರೀಯರು ಸೇರಿ, ಮಹಿಳೆಯರಿಗಿರುವ ಸಮಸ್ಯೆಗಳನ್ನು ಚರ್ಚಿಸಿ ಸಮಾಜದಲ್ಲಿ ಅವರು ಮುಂದೆ ಬರುವಂತೆ ಮತ್ತು ಆರ್ಥಿಕವಾಗಿ ಅಭಿವೃದ್ಧಿಯಾಗುವಂತೆ ಪ್ರಯತ್ನಿಸಬೇಕಾಗಿದೆ. ಒಳ್ಳೆಯ ತಾಯಂದಿರಿಂದ ಉತ್ತಮ ಶೀಲದ ಮಕ್ಕಳನ್ನು ಸಮಾಜ ಆಶಿಸುವುದು. ಆದ ಕಾರಣ ಮುಂದಿನ ಸಮಾಜದ ಏಳಿಗೆಗಾಗಿ ಮಹಿಳೆಯರು ಎಲ್ಲಾ ಕ್ಷೇತ್ರಗಳಲ್ಲಿಯೂ ಮುಂದೆ ಬರಬೇಕಾಗಿದೆ. ಈಗ ಬೀಡಿ ಕಾರ್ಖಾನೆಗಳಲ್ಲಿ ಮತ್ತು ಶಾಲೆಗಳಲ್ಲಿ ಮಹಿಳೆಯರು ದುಡಿಯುತ್ತಿದ್ದಾರೆ. ನಮ್ಮ ಗ್ರಾಮಗಳಲ್ಲಿ ಇನ್ನು ಕೆಲವು ಸಂಸ್ಥೆಗಳನ್ನು ಸ್ಥಾಪಿಸಿ ಅದರಲ್ಲಿ ಹೆಚ್ಚಿನ ಮಹಿಳೆಯರು ದುಡಿಯುವ ಅವಕಾಶ ಒದಗಿಸಬೇಕಾಗಿದೆ. ಇದಕ್ಕಾಗಿ ಸರಕಾರ ಹಲವಾರು ವನಿತೆಯರಿಗಾಗಿ ಸವಲತ್ತುಗಳನ್ನು ಸಹಾಯವನ್ನು, ಒದಗಿಸುತ್ತಿದೆ. ಇದನ್ನು ಪಡೆದುಕೊಂಡು ಮಹಿಳೆಯರು ತಮ್ಮ ಒಡೆತನದ ಸಂಸ್ಥೆಯನ್ನು ಕಟ್ಟಿ ಹೆಚ್ಚು ಮಹಿಳಾಮಣಿಗಳು ಆರ್ಥಿಕ ಸ್ವಾವಲಂಬಿಗಳಾಗುವಂತೆ ಮಾಡಬೇಕಾಗಿದೆ. ಕೇರಳ ಸರಕಾರ ನೆರೆಯ ಇತರ ರಾಜ್ಯ ಸರಕಾರಗಳಿಗಿಂತ ಹೆಚ್ಚಿಚ್ಚು ಉಪಯುಕ್ತವಾದ ಯೋಜನೆಗಳನ್ನು ಹಾಕಿಕೊಂಡು ವನಿತೆಯರು ಭಾಗವಹಿಸುವಂತೆ ಮಾಡುತ್ತಿದೆ. ಆದರೆ ಆ ಸವಲತ್ತುಗಳನ್ನು ವನಿತೆಯರು ಹಾಗೂ ಸಮಾಜದವರು ಪಡೆಯುತ್ತಿಲ್ಲ. ಕಾರಣ ಭಾಷಾ ತೊಡಕು. ವರ್ತಮಾನ ಪತ್ರಿಕೆ ಹಾಗೂ ಎಲೆಕ್ಟ್ರಾನ್ ಮಾಧ್ಯಮಗಳಲ್ಲಿ ಪ್ರಚಾರ ಪಡಿಸುವ ಯೋಜನೆಗಳು ಮಲಯಾಳದಲ್ಲಿದ್ದು ಓದಲು -ಬರೆಯಲು ಮತ್ತು ಮಾತಾಡಲು ಬಾರದ ಕಾರಣ ಈ ಪ್ರದೇಶದವರಿಗೆ ತಿಳಿಯುವುದಿಲ್ಲ. ಕೆಲವು ಮಂದಿ ಮಾತ್ರ ಇದರ ಲಾಭ ಪಡೆಯುತ್ತಿದ್ದಾರೆ. ಹೆಚ್ಚು ಹೆಚ್ಚು ಜನರಿಗೆ ಈ ವಿಷಯ ತಿಳಿಯುವಂತೆ ಕನ್ನಡ ಮಾಧ್ಯಮದಲ್ಲಿ ಪ್ರಚಾರದ ಅಗತ್ಯವಿದೆ. ಈ ಪ್ರದೇಶದ ಕೆಲವು ವಿಶಿಷ್ಟ ಸಂಪ್ರದಾಯಗಳು ನಮ್ಮ ರಾಜ್ಯದ ಪ್ರದೇಶಗಳಿಗೂ ತಿಳಿಯಬೇಕು. ಇದನ್ನು ಪತ್ರಿಕೆ ಹಾಗೂ ಎಲೆಕ್ಟ್ರಾನ್ ಮಾಧ್ಯಮಗಳಿಂದ ಪ್ರಚಾರ ಮಾಡಬೇಕಿದೆ. ಇದಕ್ಕಾಗಿ ಇರುವ ಜಿಲ್ಲಾ ಪ್ರಸರಾಂಗ ವಿಭಾಗದ ವ್ಯವಸ್ಥಾಪಕರು ಇಲ್ಲಿಯ ಭಾಷೆ ಬಲ್ಲವರಲ್ಲದ ಕಾರಣ ಆ ಕುರಿತು ಯೋಚಿಸುವುದಿಲ್ಲ. ಇಲ್ಲಿ ಮುಖ್ಯ ಆಡು ಭಾಷೆಯಾಗಿ ತುಳು, ಕೊಂಕಣಿ, ಮಲೆಯಾಳವಿದೆ. ಕನ್ನಡ ವ್ಯವಹಾರ ಭಾಷೆಯಾಗಿದೆ. ಕನ್ನಡ ಭಾಷೆಯಲ್ಲಿ ಬರೆದು, ಓದಿ ವಿದ್ಯಾವಂತರಾಗುತ್ತಿದ್ದಾರೆ. ಪ್ರಚಾರಕ್ಕಾಗಿ ಕನ್ನಡದಲ್ಲಿ ಪತ್ರಿಕೆಗಳಲ್ಲಿ ಸರಿಯಾಗಿ ಕೆಲಸ ಮಾಡುವ ಲೈಬ್ರರಿ ಸಂಸ್ಥೆಗಳಿಲ್ಲ. ಕ್ಲಬುಗಳು ಲೈಬ್ರರಿ ಸಂಸ್ಥೆಗಳನ್ನು ಸ್ಥಾಪಿಸಿ ಜನರ ತಿಳುವಳಿಕೆಯನ್ನು ಹೆಚ್ಚಿಸಬೇಕು. ವಿದ್ಯಾವಂತರು ಇಂತಹ ವಿಚಾರದ ಕಡೆ ಗಮನ ಹರಿಸಬೇಕು. ಈ ಭಾಗದಲ್ಲಿ ಕೆಲಸ ಮಾಡುವ ಸರಕಾರಿ ಅಧಿಕಾರಿಗಳು ಕಡ್ಡಾಯವಾಗಿ, ಕನ್ನಡ, ತುಳು ಕಲಿತವರಾಗಿರಬೇಕು. ಜನಸಾಮಾನ್ಯರಿಗೆ ಸರಕಾರದ

ವಿಧಿವಿಧಾನ ಹಾಗೂ ಸಹಾಯ ಸವಲತ್ತುಗಳು ಏನು, ಅವುಗಳನ್ನು ಹೇಗೆ ಪಡೆಯಬಹುದು ಎಂದು ತಿಳಿಸಬೇಕು. ಅದಕ್ಕೆ ಈಗ ಭಾಷಾ ಮಾಧ್ಯಮವು ತೊಡಕಾಗುವುದು. ನಮ್ಮ ಹಳ್ಳಿಯ ಜನ ಈ ಕಾರಣದಿಂದ ಅಧಿಕಾರಿಗಳನ್ನು ಭೇಟಿ ಮಾಡಲು ಇಷ್ಟ ಪಡುವುದಿಲ್ಲ. ಆ ಕಾರಣ ಸರ್ಕಾರದ ಸಹಾಯ ಕೆಲವೇ ವ್ಯಕ್ತಿಗಳಿಗೆ ಸಿಕ್ಕಿ, ಅವರು ಮಾತ್ರ ಲಾಭ ಪಡೆಯುವಂತಾಗುವುದು. ಹೀಗಾಗದಂತೆ ಇನ್ನು ಮುಂದಾದರೂ ಪ್ರಯತ್ನಿಸಬೇಕು.

ಕಂಬಳ, ಕೋಳಿ ಅಂಕ ವಿವಿಧ ಭೂತದ ಕೋಲಗಳು, ಭೂತದ ನರ್ತನಗಳು, ಕೋಲಾಟಗಳು; ಜಾನಪದ ನರ್ತನಗಳು ಹೀಗೆ ವಿವಿಧ ರೀತಿಯ ಈ ಪ್ರದೇಶದ ಸಂಸ್ಕೃತಿಗಳಿಗೆ ಸಂಬಂಧಿಸಿದ ವಿಚಾರಗಳು ಈ ಪ್ರದೇಶದಲ್ಲಿ ಇದ್ದು ನಶಿಸಿ ಹೋಗದಂತೆ ಪ್ರಯತ್ನಿಸಬೇಕಾದುದು ಅಗತ್ಯವಾಗಿದೆ.

ಕೃಷಿ ಶಿಕ್ಷಣ, ಜಾನಪದ ಆರೋಗ್ಯ, ವಸತಿ, ಸಾರಿಗೆ ಶಕ್ತಿ ಮುಂತಾದ ರಂಗಗಳಲ್ಲಿ ತುಂಬಾ ಅಭಿವೃದ್ಧಿ ಆಗಬೇಕಾಗಿದೆ. ಈಗಿರುವ ವ್ಯವಸ್ಥೆ ಏನೂ ಸಾಕಾಗುವುದಿಲ್ಲ. ಕಾರಣ ಜನಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿರುವ ಕಾರಣ ಆ ರೀತಿಯ ವೇಗ ನಮ್ಮ ಮೇಲೆ ಹೇಳಿದ ರಂಗಗಳಲ್ಲಿ ಆಗಲು ಸಾಧ್ಯವಾಗುವುದಿಲ್ಲ. ಈಗಿರುವ ನಮ್ಮ ಸಂಪನ್ಮೂಲಗಳು ಸಾಕಾಗಲಾರವು. ನಮ್ಮ ಪಂಚಾಯತಿನಲ್ಲಿ ಸಂಪನ್ಮೂಲಗಳನ್ನು ಹೆಚ್ಚಿಸಲು ಪ್ರಯತ್ನಿಸುವುದು ಅಗತ್ಯವಾಗಿದೆ.

ನಮ್ಮ ಪಂಚಾಯತಿನ ಸಂಪನ್ಮೂಲಗಳನ್ನು ಹೆಚ್ಚಿಸಲು ನಾವು ಯೋಜನೆಯಲ್ಲಿ ಗಮನ ಕೊಡಬೇಕಾಗಿದೆ. ನಮ್ಮ ನಿರುದ್ಯೋಗಿಗಳಿಗೆ ಉದ್ಯೋಗ ಕಲ್ಪಿಸಲು ನಾವು ಪ್ರಯತ್ನಿಸಬೇಕು. ಮುಖ್ಯವಾಗಿ ಪಂಚಾಯತು ವ್ಯಾಪ್ತಿಯಲ್ಲಿರುವ ನಿರುದ್ಯೋಗಿಗಳನ್ನು ಪತ್ತೆ ಹಚ್ಚಿ ಅವರಿಗೆ ಉದ್ಯೋಗ ಒದಗಿಸಲು ಪ್ರಯತ್ನಿಸಬೇಕು.

II ಭೂಪ್ರಕೃತಿ

ಭೂ ಪ್ರಕೃತಿಯನುಸಾರ ವರ್ಕಾಡಿ ಗ್ರಾಮ ಪಂಚಾಯತನ್ನು ಮುಖ್ಯವಾಗಿ 5 ವಲಯಗಳಾಗಿ ವಿಂಗಡಿಸಬಹುದು.

1. ಉನ್ನತ ಸಮತಲ ಪ್ರದೇಶ
2. ಇಳಿಜಾರು ಪ್ರದೇಶ
3. ಬೆಟ್ಟು ಪ್ರದೇಶ
4. ಮಜಲು ಪ್ರದೇಶ
5. ಬಯಲು ಪ್ರದೇಶ

ಕ್ರಮಸಂಖ್ಯೆ	ಶೇಕಡ
1. ಉನ್ನತ ಸಮತಲ ಪ್ರದೇಶ	20%
2. ಇಳಿಜಾರು ಪ್ರದೇಶ	30%
3. ಬೆಟ್ಟು ಪ್ರದೇಶ	10%
4. ಮಜಲು ಪ್ರದೇಶ	20%
5. ಬಯಲು ಪ್ರದೇಶ	20%

1.ಉನ್ನತ ಸಮತಲ ಪ್ರದೇಶ

ಪಂಚಾಯತಿನ ಅತೀ ಎತ್ತರದ ಪ್ರದೇಶ ಪಾವೂರು. ವರ್ಕಾಡಿ, ಕೊಡ್ಲಮೊಗರು ಹಾಗೂ ಪಾತೂರು ಗ್ರಾಮಗಳಲ್ಲಿವೆ. ಈ ಪ್ರದೇಶಗಳಲ್ಲಿ ಕೆಲವು ಕಡೆ ಸಾಕಷ್ಟು ಮಣ್ಣು ಇಲ್ಲದೆ ಗಟ್ಟಿಯಾದ ಮುರಕಲ್ಲಿನಿಂದ ಕೂಡಿದ್ದು ಯಾವ ಕೃಷಿಯನ್ನು ಮಾಡಲು ಯೋಗ್ಯವಾಗಿರುವುದಿಲ್ಲ. ಅಲ್ಲಲ್ಲಿ ಗಾಳಿಮರ, ಗೆದುಮರಗಳನ್ನು ಬೆಳೆಸುತ್ತಾರೆ. ಹೆಚ್ಚಿನ ಭಾಗಗಳಲ್ಲಿ ಮುಳಿಹುಲ್ಲು ಮಾತ್ರ ಬೆಳೆಯುವುದು. ಇಲ್ಲಿ ನೀರಿನ ಆಶ್ರಯವಿರುವುದಿಲ್ಲ. ಬಾವಿ ತೋಡಿದರೂ ಬಹಳ ಆಳದಲ್ಲಿ ನೀರಿನ ನೆಲೆ ಸಿಕ್ಕುವ ಕಾರಣ ವಾರ್ಷಿಕ ಬೆಳೆಯನ್ನು ಬೆಳೆಸಲು ಸಾಧ್ಯವಾಗುವುದಿಲ್ಲ. ಹೆಚ್ಚಿನ ಪ್ರದೇಶಗಳಲ್ಲಿ ಕೆಂಪು ಕಲ್ಲನ್ನು ಕಡಿಯುತ್ತಾರೆ. ಕೃಷಿ ವಿಜ್ಞಾನ ಕೇಂದ್ರದವರು ಒದಗಿಸಿದ ವಿವಿಧ ಜಾತಿಯ ಗಿಡಗಳನ್ನು ನೆಟ್ಟಿರುತ್ತಾರೆ.

2. ಇಳಿಜಾರು ಪ್ರದೇಶ

ಈ ಪ್ರದೇಶಗಳಲ್ಲಿ ನೀರಾಶ್ರಯವಿಲ್ಲದಿದ್ದರೂ ಕಾಡು ಬೆಳೆಯುತ್ತದೆ. ಈ ಭಾಗಗಳಲ್ಲಿ ಗೇರು, ಮಾವು, ಸಾಗುವಾನಿ, ಹಲಸು ಮತ್ತು ಇತರ ಕಾಡುಮರಗಳು ಬೆಳೆಯುತ್ತಿವೆ. ಕೆರೆ-ಬಾವಿಗಳನ್ನು ತೋಡಿ ತೆಂಗಿನ ಕೃಷಿಯನ್ನು ಕೆಲವು ಕಡೆ ಮಾಡಿರುತ್ತಾರೆ. ಈಗ ಕೆಲವು ಪ್ರದೇಶಗಳಲ್ಲಿ ರಬ್ಬರ್, ಬಟ್ಟೆ, ಮೆಣಸು, ಕೃಷಿಯನ್ನು ಪ್ರಾರಂಭಿಸಿರುತ್ತಾರೆ. ಸರಕಾರದ ಪ್ರೋತ್ಸಾಹದಿಂದ ಗೇರುಕೃಷಿ ಮತ್ತು ಕಶಿ ಮಾವಿನ ನೆಡುತೋಪುಗಳನ್ನು ಮಾಡಿರುತ್ತಾರೆ. ಕೃಷಿ ಇಳಿಜಾರು ಪ್ರದೇಶದ ಮಣ್ಣು ಕೊಚ್ಚಿ ಹೋಗದ ಹಾಗೆ ಮತ್ತು ಕೆಳಗಿನ ಬಯಲು ಪ್ರದೇಶಗಳಲ್ಲಿ ನೀರಿನ ನೆಲೆ ದೊರೆಯುವ ಅನುಕೂಲತೆಗಾಗಿ 2-3 ಮೀ. ಎತ್ತರದ ಬಂಡ್‌ಗಳನ್ನು ಕಟ್ಟಬೇಕು. ಅಲ್ಲಲ್ಲಿ ಚಿಕ್ಕ-ಚಿಕ್ಕ ಹಳ್ಳಗಳನ್ನು, ಹೊಂಡಗಳನ್ನು ತೋಡುವುದು ಉತ್ತಮ. ಮಳೆಗಾಲದಲ್ಲಿ ನೀರು ಸರಾಗವಾಗಿ ಹರಿದು ಹೋಗದಂತೆ ನೋಡಿಕೊಳ್ಳಬೇಕು. ಬೆಟ್ಟದ ಇಳಿಜಾರಿನಲ್ಲಿ ಧಾರಾಳ ಸಸ್ಯಗಳನ್ನು ನೆಟ್ಟು, ಅದಕ್ಕೆ ಚಿಕ್ಕ -ಚಿಕ್ಕ ದಂಡೆಗಳನ್ನು ಕಟ್ಟಿದರೆ ಆ ಪ್ರದೇಶದ ಮಣ್ಣಿನ ಮೆಲ್ಪದರು ಸವೆದು ಹೋಗುವುದಿಲ್ಲ. ಈ ಮಣ್ಣು ಕೃಷಿಯೋಗ್ಯವಾದ ಸಾರಯುಕ್ತ ಮಣ್ಣಾಗಿದೆ. ಈ ಪ್ರದೇಶದಲ್ಲಿ ನೀರಾವರಿ ಒದಗಿಸಿ ಹಲವು

ಫಲಗಳನ್ನು ಪಡೆಯಬಹುದು. ಮದಕಗಳ ನಿರ್ಮಾಣ ಮಾಡಿ ನೀರಾವರಿ ಅನುಕೂಲತೆ ಒದಗಿಸಬಹುದು. ಮದಕಗಳ ಬಳಿಯಲ್ಲಿ ಕರಿಮೆಣಸು, ತೆಂಗು ಕೃಷಿ ಮಾಡಬಹುದು.

3. ಬೆಟ್ಟು ಪ್ರದೇಶ

ಈ ಪ್ರದೇಶದಲ್ಲಿ ಮಳೆಯ ನೀರು ಮತ್ತು ನೀರಾವರಿಯಿಂದ ಕೃಷಿ ಮಾಡಬಹುದು. ಇಳಿಜಾರು ಪ್ರದೇಶಗಳಲ್ಲಿ ಬೆಳೆಯುವ ಎಲ್ಲ ಬೆಳೆಗಳನ್ನು ಇಲ್ಲಿ ಬೆಳೆಸಬಹುದು. ಆ ಬೆಳೆಗಳಲ್ಲದೆ ಭತ್ತದ ಕೃಷಿ, ರಾಗಿ, ತರಕಾರಿ, ಮೆಣಸು ಹೀಗೆ ಅಲ್ಪಕಾಲದ ಬೆಳೆಗಳನ್ನು ಮಳೆಯ ನೀರನ್ನು ಆಶ್ರಯಿಸಿ ಬೆಳೆಸಬಹುದು.

4. ಮಜಲು ಪ್ರದೇಶ

ಮಳೆಯ ನೀರು ಶೇಖರಿಸಲ್ಪಡುವ ಭಾಗವಾದುದರಿಂದ ಈ ಪ್ರದೇಶದ ಮಣ್ಣು ಮೆಕ್ಕಲು ಮಣ್ಣಾಗಿರುತ್ತವೆ. ಕೆಲವು ಕಡೆ ಕೆಂಪು ಮಣ್ಣಾಗಿರುತ್ತದೆ. ಈ ಮಣ್ಣು ಭತ್ತದ ಕೃಷಿಗೆ ಯೋಗ್ಯವಾಗಿದೆ. ಈ ಪ್ರದೇಶದಲ್ಲಿ ಎರಡು ಬಾರಿ ಭತ್ತದ ಕೃಷಿ ಮಾಡುತ್ತಾರೆ. ಒಂದು ಬೆಳೆಗೆ ನೀರು ಹರಿದು ಬರುತ್ತಿದ್ದರೆ ಎರಡನೇ ಬೆಳೆಗೆ ನೀರಾವರಿ ವ್ಯವಸ್ಥೆಯಿಂದ ನೀರನ್ನು ಒದಗಿಸುತ್ತಾರೆ. ಈ ಪ್ರದೇಶದಲ್ಲಿ ಅಡಿಕೆ, ತೆಂಗು, ಕರಿಮೆಣಸು, ಕೊಕ್ಕೊ, ಕೃಷಿ ಮಾಡುತ್ತಾರೆ. ಅಡಿಕೆ ಕೃಷಿಗೆ ಈ ಪ್ರದೇಶ ಯೋಗ್ಯವಾದ ಕಾರಣ ಹೆಚ್ಚಾಗಿ ಈ ಪ್ರದೇಶಗಳಲ್ಲಿ ಅಡಿಕೆ ತೋಟಗಳೇ ತುಂಬಿರುತ್ತದೆ.

ಭತ್ತದ ಬೆಳೆ ಮಾಡದಿರುವಾಗ ತರಕಾರಿ, ಧಾನ್ಯ, ಕೃಷಿ ಮಾಡಲು ಉಪಯೋಗಿಸುತ್ತಾರೆ. ಈ ಪ್ರದೇಶಗಳಲ್ಲಿ ಹೆಚ್ಚಾಗಿ ರೈತರು ತಮ್ಮ ವಸತಿಗಳನ್ನು ಕಟ್ಟಿಕೊಂಡಿರುತ್ತಾರೆ.

5. ಬಯಲು ಪ್ರದೇಶ

ಇದು ವಿಸ್ತಾರದಲ್ಲಿ ಮಜಲು ಪ್ರದೇಶಕ್ಕಿಂತ ಹೆಚ್ಚಿದ್ದು ಸಮುದ್ರಮಟ್ಟದಿಂದ ಎತ್ತರಕ್ಕಿರುವ ಸಮತಟ್ಟಾದ ಪ್ರದೇಶವಾಗಿದೆ. ಈ ಭಾಗ ರೂಪುಗೊಂಡುದು ವಿವಿಧ ಘಟ್ಟಗಳಲ್ಲಿ ಎಂದು ಭೂ ಶಾಸ್ತ್ರಜ್ಞರು ಅಭಿಪ್ರಾಯ ಪಡುತ್ತಾರೆ. ಈ ಪ್ರದೇಶದ ಮಧ್ಯಭಾಗದಲ್ಲಿ ಮಂಜೇಶ್ವರ ಹೊಳೆಯು ಹರಿದು ಹೋಗುತ್ತದೆ. ಹೊಳೆಯ ಇಕ್ಕಡೆಯಲ್ಲಿ ಈ ಬಯಲು ಪ್ರದೇಶ ಹಬ್ಬಿಕೊಂಡಿದೆ. ಇನ್ನು ಕೆಲವು ಕೆಡೆಗಳಲ್ಲಿ ಈ ನದಿಯ ಉಪನದಿಯ ಇಕ್ಕೆಡೆಯಲ್ಲಿ ಬಯಲು ಪ್ರದೇಶ ಹಬ್ಬಿಕೊಂಡಿದೆ. ಹಿಂದಿನ ಕಾಲದಲ್ಲಿ ಭತ್ತ ಬೆಳೆಯುವ ಕಣಜ ಎಂದು ಭಾವಿಸಲ್ಪಟ್ಟಿದೆ. ಈ ಪ್ರದೇಶದ ಹೆಚ್ಚಿನ ಕಡೆಯಲ್ಲಿ ಎರಡು ಬೆಳೆಗಳನ್ನು ಕಷ್ಟವಿಲ್ಲದೆ ಬೆಳೆಸುವಂತಿದ್ದರು. 3ನೇ ಬೆಳೆಯನ್ನು ನೀರಾವರಿ ವ್ಯವಸ್ಥೆಯಿಂದ ನೀರು ಒದಗಿಸಿ ಬೆಳೆಸುತ್ತಿದ್ದರು. ಗದ್ದೆಯ ಬದಿಗಳಲ್ಲಿ ತೆಂಗಿನಮರಗಳನ್ನು ನೆಟ್ಟು ತೆಂಗಿನ ಕೃಷಿಯನ್ನು ಮಾಡುತ್ತಿದ್ದಾರೆ. ಭತ್ತದ ಕೃಷಿಯನ್ನು ಮಾಡದೇ ಇರುವಾಗ ಹೆಸರು, ಉದ್ದು, ಹುರುಳಿ ಮೊದಲಾದ ಧಾನ್ಯಗಳನ್ನು ಎಳ್ಳು, ಹರಳು ಮೊದಲಾದ ಎಣ್ಣೆ ಬೀಜಗಳನ್ನು ಬೆಳೆಸುತ್ತಿದ್ದರು. ಈಗ ಭತ್ತದ ಕೃಷಿಯು ಲಾಭದಾಯಕವಲ್ಲದ ಕಾರಣ ಭತ್ತದ ಕೃಷಿಯು ಕಡಿಮೆಯಾಗುತ್ತಾ ಬರುತ್ತಿದೆ. ಬದಲಾಗಿ ಈ ಗದ್ದೆಗಳಿಗೆ ಮಣ್ಣು ಅಥವಾ ಹೊಗೆ ತುಂಬಿ ಅಡಿಕೆ, ತೆಂಗಿನ ಗಿಡಗಳನ್ನು ನೆಟ್ಟು ವಾಣಿಜ್ಯ ಬೆಳೆಯನ್ನು ಬೆಳೆಯಲು ಪ್ರಾರಂಭಿಸಿದ್ದಾರೆ. ದೊಡ್ಡ ದೊಡ್ಡ ರೈತರು ಮಾತ್ರ ಭತ್ತದ ಕೃಷಿಯನ್ನು ಮಾಡುತ್ತಿದ್ದಾರೆ. ಚಿಕ್ಕ ರೈತರಿಗೆ ಭತ್ತದ ಕೃಷಿಯು ಲಾಭದಾಯಕವಾಗಿಲ್ಲ. ಕಾರಣ 50 ಸೆಂಟ್ಸ್, ಎಕರೆ ಪ್ರದೇಶದಲ್ಲಿ ಕೃಷಿ ಮಾಡಲು ಉಳಲು ಕೋಣಗಳು ಬೇಕು. ನೇಜಿ ನೆಡಲು ಕೊಯ್ಲು ಮಾಡಲು ಹೊರಗಿನಿಂದ ಜನರ ಅಗತ್ಯವಿದೆ. ಭತ್ತದ ಕೃಷಿಗೆ ಅನುಭವವಿರುವ ಕಾರ್ಮಿಕರು ಲಭ್ಯರಿಲ್ಲ. ಇರುವ ಕೆಲವೇ ಮಂದಿ ಕಾರ್ಮಿಕರು ಏಕಕಾಲದಲ್ಲಿ ಎಲ್ಲರಿಗೂ ಲಭ್ಯರಾಗುವುದಿಲ್ಲ. ಈ ಎಲ್ಲ ಕಾರಣದಿಂದ ಚಿಕ್ಕ ಹಿಡುವಳಿದಾರರು ಭತ್ತದ ಕೃಷಿಯಿಂದ ನಷ್ಟವನ್ನು ಅನುಭವಿಸುವ ಸಂದರ್ಭಗಳು ಬರುತ್ತಿವೆ. ಹಾಗಾಗಿ ಅಂತಹ ರೈತರು ಭತ್ತ ಬೆಳೆಯುವ ಪ್ರದೇಶದಲ್ಲಿ ತೆಂಗಿನ-ಅಡಿಕೆಯ ಕೃಷಿ ಮಾಡುತ್ತಿದ್ದಾರೆ.

ಈಗ ಈ ಪಂಚಾಯತಿನಲ್ಲಿ ಹೆಚ್ಚಿನವರು ಹೊರ ಪ್ರದೇಶದಿಂದ ಅಕ್ಕಿಯನ್ನು ತರಿಸಿಕೊಳ್ಳುತ್ತಿದ್ದಾರೆ. ರೇಶನ್ ಅಂಗಡಿಯಿಂದ ಪಡಿತರ ಸಿಗುವ ಅಕ್ಕಿಯನ್ನು ಆಶ್ರಯಿಸಿರುತ್ತಾರೆ. ಇದನ್ನು ಹೋಗಲಾಡಿಸಲು ಮುಖ್ಯವಾಗಿ ಕೃಷಿ ಕೆಲಸದಲ್ಲಿ ತರಬೇತಿ ಗೊಳಿಸಿದ ತಿಂಗಳ ಸಂಬಳದ ನೌಕರರ ಒಂದು ಪಡೆಯನ್ನು ಪಂಚಾಯತ್ ಮಟ್ಟದಲ್ಲಿ ಕಾದಿರಿಸಿಕೊಳ್ಳಬೇಕು. ಬೇಕಾದ ರೈತನು ತನಗೆ ಬೇಕಾದಷ್ಟು ಮಂದಿ ಕೂಲಿಯವರನ್ನು ಪಂಚಾಯತ್‌ನಲ್ಲಿ ವಿನಂತಿಸಿಕೊಂಡರೆ ಪಂಚಾಯತ್ ಕಳಿಸಿ ಕೊಡುವ ಕೂಲಿಯನ್ನು ಪಂಚಾಯತಿಗೆ ಸಲಾಯಿಸುವ ವ್ಯವಸ್ಥೆಯಿರಬೇಕು. ಈ ರೀತಿಯ ವ್ಯವಸ್ಥೆ ಮಾಡಿದರೆ ನಿರುದ್ಯೋಗ ಸಮಸ್ಯೆಯನ್ನು ಕಡಿಮೆ ಮಾಡಿಕೊಳ್ಳಬಹುದು. ಭತ್ತದ ಕೃಷಿಯನ್ನು ಹೆಚ್ಚಿಸಿಕೊಳ್ಳಬಹುದು. ಪಂಚಾಯತಿನ ಕೂಲಿಯವರಿಗೆ, ಸರಕಾರಿ ನೌಕರನಿಗೆ ಸಿಗುವ ಎಲ್ಲಾ ಅನುಕೂಲತೆಗಳು ದೊರೆಯುವಂತಾಗಬೇಕು. ಹಾಗಾದರೆ ನಿರುದ್ಯೋಗಿಗಳು ಪಂಚಾಯತಿನಲ್ಲಿ ಮಜೂರರಾಗಿ ಸೇರಿಕೊಳ್ಳುವರು.

ಜೀವನ ಪ್ರಕೃತಿ

ಆಧಾರ : ಖಾನೇಶುಮಾರಿ ಲೆಕ್ಕಗಳು (1991)

1991ರ ಖಾನೇಶುಮಾರಿ ಲೆಕ್ಕದ ಪ್ರಕಾರ ವರ್ಕಾಡಿ ಪಂಚಾಯತಿನ ಜನಸಂಖ್ಯೆ 20821 ಇದರಲ್ಲಿ ಗಂಡಸರು 10412 ಹೆಂಗಸರು 10409. ಈ ಗ್ರಾಮ ಪಂಚಾಯತಿನಲ್ಲಿ ಜುಮ್ಲಾ 3261 ಮನೆಗಳಿವೆ. ಮನೆಯೊಂದರ ಸರಾಸರಿ 6.38ರಂತೆ ಜನರಿದ್ದಾರೆ. ನಿರಕ್ಷರ ಸಂಖ್ಯೆ ಹೆಚ್ಚಿದೆ. ಸಾಕ್ಷರತಾ ದರ 65.69% ಬರುವುದು. SSLC ಆದವರ ಸಂಖ್ಯೆ 40.50. ಬಿರುದುದಾರಿಗಳ ಸಂಖ್ಯೆ ಬಹಳ ಕಡಿಮೆ ಇದೆ. ತಾಂ

ಬರುದುದಾರಿಗಳು ಕೆಲವೇ ವ್ಯಕ್ತಿಗಳಿರಬಹುದು. ವಿದ್ಯಾಭ್ಯಾಸ ಯೋಗ್ಯತೆವುಳ್ಳ ಸ್ತ್ರೀಯರ ಸಂಖ್ಯೆ ಗಂಡಸರಿಗಿಂತ ಕಡಿಮೆಯಾಗಿದೆ. ನ ಉದ್ಯೋಗ ಇರುವವರ ಸಂಖ್ಯೆ ಬಹಳ ಕಡಿಮೆ ಇದೆ. ಆಂಶಿಕ ದ್ಯೋಗಿಗಳ ಸಂಖ್ಯೆ ಸಾಮಾನ್ಯ ಜನಸಂಖ್ಯೆ 1/4 ಭಾಗದಷ್ಟಿರಬಹುದು ಂದು ತಿಳಿದು ಬರುತ್ತದೆ.

ಕೃಷಿ ಮತ್ತು ನೀರಾವರಿ (ಅಭಿವೃದ್ಧಿ ವರದಿ ಅವಲೋಕನ)

ಕೃಷಿ ಚರಿತ್ರೆ : ಈ ಶತಮಾನದಲ್ಲಿ ಈ ಪಂಚಾಯತಿನ ಕೃಷಿ ರಂಗದಲ್ಲುಂಟಾಗಿರುವ ಬದಲಾವಣೆಗಳ ಕಡೆ ಸಿಂಹಾವಲೋಕನ ಮಾಡಿದಾಗ ಈ ಕೆಳಗಿನ ವಿಚಾರಗಳು ತಿಳಿದು ಬರುತ್ತವೆ. ಸಂಪನ್ನವಾದ ಕೃಷಿ ಹಿನ್ನಲೆಯುಳ್ಳ ಪಂಚಾಯತ್ ನಮ್ಮದಾಗಿದೆ. ಹಿಂದೆ ಭತ್ತ ಬೆಳೆಸುವ ಪ್ರಧಾನ ಕೃಷಿಕರು ಈ ಪಂಚಾಯತಿನಲ್ಲಿದ್ದರು. ಹಿಂದಿನ ಕಾಲದಲ್ಲಿ ಒಬ್ಬ ವ್ಯಕ್ತಿಯ ದೊಡ್ಡಸ್ಥಿಕೆಯನ್ನು ತುಲನೆ ಮಾಡಲು ಅವರಿಗಿರುವ ಭತ್ತ ಬೆಳೆಸುವ ಸ್ಥಳವನ್ನು ಉಲ್ಲೇಖಿಸುವುದು ರೂಢಿಯಲ್ಲಿತ್ತು. ಆದರೆ ಈಗ ಂದು ಅಡಿಕೆ ಬೆಳೆಸುವ ಪರಿಮಿತಿಗೆ ಬದಲಾಗಿದೆ. ಅಂದರೆ ಭತ್ತದ ಕೃಷಿಯ ಬದಲು ಅಡಿಕೆ, ತೆಂಗು, ಕೊಕ್ಕೋ, ಬಾಳೆ, ಗೇರುಬೀಜ, ಎಳ್ಳೆಮೆಣಸು ಹೀಗೆ ವಿವಿಧ ವಾಣಿಜ್ಯ ಬೆಳೆಯನ್ನು ಬೆಳೆಸಲು ರೈತರು ಮುಂದಾಗಿದ್ದಾರೆ. ಇದಕ್ಕೆ ಮುಖ್ಯ ಕಾರಣ ಭತ್ತದ ಕೃಷಿಯು ಕಾಲಕಾಲಕ್ಕೆ ಸರಿಯಾಗಿ ಆಗಬೇಕಾಗಿದೆ. ಹಾಗೆ ಕೃಷಿ ಮಾಡಲು ಸಾಧ್ಯವಾಗುವುದಿಲ್ಲ. ಇದಕ್ಕೆ ಮುಖ್ಯ ಕಾರಣ ಒಂದನೇದಾಗಿ ಕೃಷಿ ಕಾರ್ಮಿಕರ ಕೊರತೆ, ಎರಡನೆಯದಾಗಿ ಪ್ರಕೃತಿಯ ಅಸಹಕಾರ. ನಮ್ಮ ಬೇಸಾಯ ಪದ್ಧತಿಯು ಹೆಚ್ಚಾಗಿ ಮಳೆಯ ನೀರನ್ನೇ ಆಶ್ರಯಿಸಿಕೊಂಡು ಮಾಡುವಂತದ್ದು. ಲವು ಕಡೆಯಲ್ಲಿ ಕೆರೆ ಬಾವಿಗಳ ನೀರನ್ನು ಆಶ್ರಯಿಸಿ ಭತ್ತ ಬೆಳೆಸುತ್ತಿದ್ದರು. ಂದೆ ತಪ್ಪದೆ ತೋಡಿಗೆ ಮಾಮೂಲು ಸ್ಥಳಗಳಲ್ಲಿ ಕಟ್ಟ ಕಟ್ಟುತ್ತಿದ್ದರು. ಇದರಿಂದ ಬಯಲಿನಲ್ಲಿ ನೀರು ಸಮೃದ್ಧವಾಗಿ ಶೇಖರವಾಗಿರುತ್ತಿತ್ತು. ಈ ಕಟ್ಟ ಕಟ್ಟಿಸುವ ಮೇಲುತನಿಖೆಯನ್ನು ಭೂಮಾಲೀಕನು ವಹಿಸಿಕೊಳ್ಳುತ್ತಿದ್ದನು. ಆ ಮಾಮೂಲು ಕಟ್ಟ ಕಟ್ಟಿಸುವ ಖರ್ಚನ್ನು ಇದಕ್ಕೆ ಸಂಬಂಧಿಸಿದವರಿಂದ ವಸೂಲು ಮಾಡುತ್ತಿದ್ದರು. ತಾವು ಬೆಳೆಸುವ ಭತ್ತದ ಕೃಷಿ ಭೂಮಿಯ ವಿಸ್ತಾರವನ್ನು ಹೊಂದಿಕೊಂಡು ಆಳುಗಳನ್ನು ಅಥವಾ ಭತ್ತವನ್ನೂ ಕೊಡುವ ಕ್ರಮವಿತ್ತು. ರೈತರು ತಪ್ಪದೆ ಹಾಗೆ ಮಾಡಿದುಕೊಳ್ಳುತ್ತಿದ್ದರು. ತಮ್ಮ ಗದ್ದೆಗಳಿಗೆ ಕಟ್ಟದಿಂದ ನೀರು ಬರುವುದು ಂತ ನಂತರ ಬಯಲಿನಲ್ಲಿರುವ ತಮ್ಮ ಕೆರೆಗಳಿಂದ ಏತದ ಮೂಲಕ ನೀರು ಒದಗಿಸುತ್ತಿದ್ದರು. ಈ ರೀತಿಯಾಗಿ 2-3 ಬೆಳೆಗಳನ್ನು ಮಾಡಿಯುತ್ತಿದ್ದರು. ಮನೆಮನೆಗಳಲ್ಲಿ ಧಾರಾಳ ಸಂಪತ್ತು ಇತ್ತು. ಕೆಲಸಕ್ಕೆ ಹೇಕಷ್ಟು ಮಜೂರರು ದೊರೆಯುತ್ತಿದ್ದರು. ಒಂದೊಂದು ಹಳ್ಳಿಯು ಎಲ್ಲಾ ರೀತಿಯಿಂದಲೂ ಸ್ವಾವಲಂಭಿಯಾಗಿತ್ತು. ಆದರೆ ಜಮೀನುದಾರಿ ಪದ್ಧತಿ ಹೋಗಿ ಉಳುವವವನೇ ಹೊಲದೊಡೆಯನಾದಾಗ ಪ್ರತಿಯೊಬ್ಬರೂ ಸ್ವತಂತ್ರರು. ತಮಗೆ ಸರಿಕಂಡಂತೆ ನಡೆದುಕೊಳ್ಳುತ್ತಿದ್ದರು. ಇದರಿಂದ ಕಟ್ಟ ಕಟ್ಟುವ ರೂಢಿ ಹೋಯಿತು. ಕೆರೆಗಳ ಸಂಖ್ಯೆ ಹೆಚ್ಚಾಯಿತು. ನೀರೆತ್ತಲು ಏತದ ಬದಲು ಪಂಪುಗಳು ಸ್ಥಾಪನೆಯಾದವು. ಧಾರಾಳ ನೀರು ಹಾಯಿಸಲು ಸಾಧ್ಯವಾಯಿತು. ಹಾಗೆಯೇ ಅಗತ್ಯಕ್ಕಿಂತ ಹೆಚ್ಚು ನೀರನ್ನು ಉಪಯೋಗಿಸಿ ನೀರಿನ ಕೃತಕ ಕ್ಷಾಮ ಉಂಟಾಗಲು ಎಡೆಯಾಯಿತು. ಈಗ 3 ಬೆಳೆ ಬೆಳೆಸುವ ಗದ್ದೆಗಳಲ್ಲಿ ಸರಿಯಾಗಿ ಒಂದು ಬೆಳೆಯನ್ನು ಬೆಳೆಸಲು ಸಾಧ್ಯವಾಗದಂತ ಕೃತಕ ಅಡಚಣೆಗಳು ಉಂಟಾಗಿವೆ. ತೋಡಿನ ಬದಿಯ ಅಂಚುಗಳು ಶಿಥಿಲಗೊಂಡು ತೋಡಿನಲ್ಲಿ ಹೊಯಿಗೆ ತುಂಬಿ ಚಿಕ್ಕ ಮಳೆ ಬಂದರೂ ನೆರೆಯ ನೀರು ಗದ್ದೆಯಲ್ಲಿ ತುಂಬಿಕೊಳ್ಳುವ ಪರಿಸ್ಥಿತಿ ಉಂಟಾಗಿದೆ. ನಮ್ಮ ಪಂಚಾಯತಿನ ಪಾವೂರು ಬಯಲಿನಲ್ಲಿ ಈಗ ಇಂತಹ ತೊಂದರೆಗಳನ್ನು ರೈತರು ಅನುಭವಿಸುತ್ತಿದ್ದಾರೆ. ಇದಕ್ಕೆ ಪರಿಹಾರವಾಗಿ ಹೊಳೆಯ ಹೊಯಿಗೆ ತೆಗೆಸಬೇಕು. ಹಿಂದೆ ಕಟ್ಟ ಕಟ್ಟುತ್ತಿದ್ದ ಕಡೆ ಚಿಕ್ಕ ಚಿಕ್ಕ ಅಣೆಕಟ್ಟುಗಳನ್ನು ಕಟ್ಟಬೇಕು. ಹೀಗೆ ಮಾಡಿದರೆ ಬಯಲಿನ ಜಲಕ್ಷಾಮವನ್ನೂ ಹೋಗಲಾಡಿಸಬಹುದು. ಅಲ್ಲದೆ ನೆರೆಯ ಬಾಧೆಯನ್ನು ಕಡಿಮೆ ಮಾಡಿಕೊಳ್ಳಬಹುದು.

ಉತ್ಪಾದನಾ ಮಟ್ಟ : ಮೊದಲಿಗಿಂತ ಉತ್ಪಾದನೆಯು ಕಡಿಮೆಯಾಗಿದೆ. ಕಾರಣ, ರೈತರು ಮಿತಿಗಿಂತ ಹೆಚ್ಚು ಕೃತಕ ಗೊಬ್ಬರಗಳನ್ನು ಉಪಯೋಗಿಸಿ ಮಣ್ಣಿನಲ್ಲಿರುವ ಫಲವತ್ತತೆಯು ಕಡಿಮೆಯಾಗುವಂತೆ ಮಾಡಿರುತ್ತಾರೆ. ಅವರಿಗೆ ಆ ನಿಟ್ಟಿನಲ್ಲಿ ಸರಿಯಾದ ಮಾರ್ಗದರ್ಶನವನ್ನೂ ಮಾಡಬೇಕಾಗಿದೆ.

ಕೃಷಿ ನಡೆಸಬಹುದಾದ ಭೂಮಿಯಲ್ಲಿ ಎಲ್ಲಾ ಭಾಗಗಳಲ್ಲೂ ಕೃಷಿ ಮಾಡಿಲ್ಲ. ಬಂಜರು ಬಿಡಲಾಗಿದೆ. ಕೆಲವು ಪ್ರದೇಶಗಳಲ್ಲಿ ನೀರಾವರಿಗೆ ಬೇಕಷ್ಟು ನೀರು ಲಭಿಸುತ್ತಿಲ್ಲ. ಗದ್ದೆಗಳನ್ನು ಮಣ್ಣಿನಿಂದ ತುಂಬಿ ಪರಿಸಲಾಗುತ್ತಿದೆ. ಸ್ಥಿರವಾಗಿ ಕೃಷಿ ಮಾಡುತ್ತಿದ್ದ ಗದ್ದೆಗಳನ್ನು ಬಂಜರಾಗಿ ಬಿಟ್ಟಿದ್ದಾರೆ. ಉತ್ತಮ ನಾಟಿಗಿಡಗಳು, ಬೀಜಗಳು ಉಪಯೋಗವಾಗುತ್ತಿಲ್ಲ. ಜೈವಿಕ ಗೊಬ್ಬರವನ್ನೂ ಹೆಚ್ಚು ಮಾಡಲು ಸಾಧ್ಯವಾಗುತ್ತಿಲ್ಲ. ಕಾರಣ ಜಾನುವಾರುಗಳನ್ನೂ ಸಾಕುವುದು ಲಾಭದಾಯಕವಲ್ಲ. ಅದೂ ಅಲ್ಲದೆ ಹಸುರೆಲೆ ಗೊಬ್ಬರದ ಕೊರತೆಯಿದೆ. ಹಟ್ಟಿಗೊಬ್ಬರವನ್ನು ಸುಟ್ಟು, ಸುಡು ಮಣ್ಣು ತಯಾರಿಸುವ ಅಶಾಸ್ತ್ರೀಯ ಪದ್ಧತಿ ರೂಢಿಯಲ್ಲಿದೆ. ಈ ಎಲ್ಲಾ ಕಾರಣಗಳನ್ನು ಹೋಗಲಾಡಿಸಿ ಆದಷ್ಟು ಹೆಚ್ಚು ಜೈವಿಕ ಗೊಬ್ಬರ ಕೃಷಿಗೆ ದೊರೆಯುವಂತೆ ಮಾಡಬೇಕಾಗಿದೆ. ಕೃಷಿ ಕಾರ್ಮಿಕರು ಸಿಗುವುದಿಲ್ಲ. 50-60 ವರ್ಷ ಪ್ರಾಯದ ಕೃಷಿ ಕಾರ್ಮಿಕರು ಮಾತ್ರ ಈ ಕೆಲಸದಲ್ಲಿ ತೊಡಗಿರುವರು. ಎಳೆ ಪ್ರಾಯದ ಯುವಕರು ಯುವತಿಯರು ಕೃಷಿ ಕೆಲಸದಲ್ಲಿ ಭಾಗವಹಿಸಲು ಇಷ್ಟ ಪಡುವುದಿಲ್ಲ.

ನೀರಾವರಿ ಸೌಕರ್ಯಗಳು : ನೀರಾವರಿಗಾಗಿ ಸೌಕರ್ಯಗಳನ್ನು ಹೆಚ್ಚಿಸಬೇಕಾಗಿದೆ. ಕೆರೆಗಳು, ಬಾವಿಗಳು, ಕೊಳವೆ ಬಾವಿಗಳು,

ತೋಡುಗಳು, ಕಟ್ಟಗಳು, ಅಣೆಕಟ್ಟುಗಳು, ಮದಕಗಳು ಮುಂತಾದುವು ಈಗ ಚಾರಿಯಲ್ಲಿರುವ ಹಿರಿ, ಕಿರಿಯ ನೀರಾವರಿ ಕಾರ್ಯಕ್ರಮಗಳಾಗಿವೆ. ಪರಂಪರಾಗತ ನೀರಾವರಿ ವ್ಯವಸ್ಥೆಗಳನ್ನು ಆವಿಷ್ಕರಿಸಿ ಹೆಚ್ಚು ಜಲವನ್ನು ಪಡೆದು ಹೆಚ್ಚು ಪ್ರದೇಶಗಳಲ್ಲಿ ಹಂಚುವಂತಹ ಯೋಜನೆಗಳನ್ನು ಕೈಗೊಳ್ಳಬೇಕಾಗಿದೆ.

ಉತ್ಪನ್ನಗಳ ಬೆಲೆ ಹಾಗೂ ಮಾರಾಟ : ಪಂಚಾಯತಿನಲ್ಲಿ ಕೃಷಿ ಉತ್ಪನ್ನಗಳ ಮಾರಾಟದ ವ್ಯವಸ್ಥೆಗಳಿಲ್ಲ. ರೈತನು ಬೆಳೆಸಿದ ಕೃಷಿ ಉತ್ಪನ್ನಗಳನ್ನು ಸಿಕ್ಕಿದ ಕ್ರಯಕ್ಕೆ ಮಾರಾಟ ಮಾಡುವ ಪರಿಸ್ಥಿತಿ ಇದೆ. ರೈತನಿಗೆ ಸಿಗಬೇಕಾದ ಬೆಲೆಯಲ್ಲಿ ಹೆಚ್ಚು ಪಾಲು ಮಧ್ಯವರ್ತಿಗಳ ಪಾಲಾಗುತ್ತಿದೆ. ಇದಕ್ಕೆ ಪ್ರತಿ ಪಂಚಾಯತಿನಲ್ಲೂ ಸಗಟು ಖರೀದಿಸುವ ಹಾಗೂ ಚಿಲ್ಲರೆ ಮಾರಾಟ ಮಾಡುವ ವ್ಯವಸ್ಥೆಗಳ ಅಗತ್ಯವಿದೆ. ಇದಕ್ಕಾಗಿ ಸಹಕಾರಿ ಸಂಘಗಳನ್ನು ಸ್ಥಾಪಿಸಿ ಖರೀದಿಸುವ ಮತ್ತು ಮಾರಾಟ ಮಾಡುವ ವ್ಯವಸ್ಥೆ ಮಾಡಿ ಶೇಖರಣಾ ಕೊಠಡಿಗಳನ್ನು ಪಂಚಾಯತ್ ಮಟ್ಟದಲ್ಲಿ ಕಟ್ಟಿಸಿ ರೈತರು ಇಲ್ಲಿ ಉತ್ಪಾದಿಸಿದ ವಸ್ತುಗಳನ್ನು ಸಂಗ್ರಹಿಸಿ, ಒಳ್ಳೆಯ ಬೆಲೆ ಬಂದಾಗ ಮಾರಾಟ ಮಾಡಲು ಆಸ್ಪದ ಒದಗಿಸಬೇಕಾಗಿದೆ. ಪ್ರತೀ ವಾರ್ಡುಗಳಲ್ಲಿಯೂ ವಾರದ ಸಂತೆಗಳನ್ನು ಜರಗಿಸಲು ಒಂದು ಕೇಂದ್ರವನ್ನು ಕಂಡುಕೊಳ್ಳಬೇಕಾಗಿದೆ. ಬೇರೆ ಬೇರೆ ದಿನಗಳಲ್ಲಿ ಬೇರೆ ಬೇರೆ ವಾರ್ಡುಗಳಲ್ಲಿ ವಾರದ ಸಂತೆ ಜರಗಿಸಿದರೆ ರೈತರಿಗೆ ಹಾಗೂ ಗ್ರಾಹಕರಿಗೆ ಬಹಳ ಅನುಕೂಲವಾಗುತ್ತದೆ.

ಸಂಬಳ-ಸೇವಾಸಂಸ್ಥೆಗಳು

ಕೃಷಿ ಕಾರ್ಮಿಕರ ಕೂಲಿ ದರ	ಗಂಡಾಳು	ಹೆಣ್ಣಾಳು
	ರೂ.	ರೂ.
ಉಳುವುದು	100	-
ಅಗೆಯುವುದು	75	-
ನಾಟ ನೆಡುವುದು-ಕಳೆ ಕೀಳುವುದು	75	45
ಕೊಯ್ಲು	100	60
ತೆಂಗಿನಕಾಯಿ ಕೊಯ್ಲು	1ಮರ ಹತ್ತಿದರೆ 1ತೆಂಗಿನಕಾಯಿ	
ತೆಂಗಿನಕಾಯಿ ಸುಲಿಯುವುದು	100 ತೆಂಗಿನ ಕಾಯಿ ಸುಲಿದರೆ ರೂ. 20	
ಅಡಿಕೆ ಕೊಯ್ಲು	1 ಎಕ್ರೆಗೆ ರೂ. 150	
ಅಡಿಕೆ ಸುಲಿಯುವುದು	1 ಕೆ.ಜಿ.ಗೆ ರೂ. 1.50	
ಮದ್ದು ಸಿಂಪಡಿಸುವುದು	1 ಕೆ.ಜಿ. ಗೆ ರೂ. 45	

ಕೃಷಿ - ಸಮಸ್ಯೆಗಳು

1. ಭತ್ತದ ಕೃಷಿಯು ಮುಖ್ಯವಾದ ವರಮಾನ ಮಾರ್ಗವಲ್ಲದುದರಿಂದಲೂ, ಆದಾಯಕರವಲ್ಲದುದರಿಂದಲೂ ಕೃಷಿಕರು. ಇದರ ಉತ್ಪಾದನೆಯಲ್ಲಿ ಹೆಚ್ಚಿನ ಉತ್ಸಾ ಕಾಣಿಸುವುದಿಲ್ಲ.
2. ಭತ್ತದ ಗದ್ದೆಗಳನ್ನು ಕಂಗು, ತೆಂಗು ನೆಡಲು ಉಪಯೋಗಿಸುತ್ತಾರೆ. ಗದ್ದೆಗಳಲ್ಲಿ ಮನೆಯನ್ನು ಕಟ್ಟುತ್ತಾರೆ. ಇದರಿಂದಾಗಿ ಭತ್ತದ ಬೆಲೆಯ ವಿಸ್ತೀರ್ಣವು ಕಡಿಮೆಯಾಗುತ್ತಾ ಬಂದಿದೆ.
3. ತೋಡುಗಳ ಇಬ್ಬದಿಗಳೂ ನೆರೆಯ ನೀರಿನ ರಭಸದಿಂದ ಜರಿದು ಮಳೆಗಾಲದಲ್ಲಿ ಕೃಷಿಯು ನಾಶವಾಗುತ್ತದೆ.
4. ನೀರಾವರಿಗೆ ಉಪಯೋಗಿಸುವ ಕೆರೆಗಳು ಉತ್ತಮ ಸ್ಥಿತಿಯಲ್ಲಿಲ್ಲ ಮತ್ತು ನೀರಾವರಿ ಕಾಲುವೆಗಳಿಲ್ಲ.
5. ಭತ್ತದ ಕೃಷಿಗೆ ಬಾಧಿಸುವ ಕ್ರಿಮಿಕೀಟಗಳು ಹೆಚ್ಚುತ್ತಾ ಹೋಗುತ್ತದೆ.
6. ನಾಣ್ಯ ಬೆಳೆಗಳಿಗೆ ಸಿಕ್ಕುವ ಪ್ರಾಧಾನ್ಯತೆ ಭತ್ತದ ಕೃಷಿಗೆ ಲಭಿಸುವುದಿಲ್ಲ. ಗ್ರೂಪ್, ಫಾರ್ಮಿಂಗ್ ಕಮಿಟಿಗಳು ಸರಿಯಾಗಿ ಕಾರ್ಯವೆಸಗುವುದಿಲ್ಲ. ಕೆಲವು ಕಡೆಗಳಲ್ಲಿ ಈ ಕಮಿಟಿಗಳಿಲ್ಲ.
7. ಕೃಷಿ ಉತ್ಪಾದನೆಯ ಖರ್ಚು ಹೆಚ್ಚಾಗಿ ಖರ್ಚಿಗೆ ಅನುಸಾರವಾಗಿ ಉತ್ಪನ್ನಗಳಿಗೆ ಬೆಲೆಯು ಲಭಿಸುವುದಿಲ್ಲ.
8. ರೈತರು ಈಗಲೂ ಹಳೆಯ ರೀತಿಯ ಕೃಷಿ ಕ್ರಮಗಳನ್ನ ಅನುಸರಿಸುತ್ತಾರೆ. ಹಳೆಯ ಉಪಕರಣಗಳನ್ನ ಉಪಯೋಗಿಸುತ್ತಾರೆ. ಕಾಲಕ್ಕೆ ಅನುಸಾರವಾಗಿ ಸುಧಾರಿತ ರೀತಿಗಳನ್ನು ಅನುಸರಿಸುವುದಿಲ್ಲ.
9. ಎತ್ತರ ಪ್ರದೇಶದಲ್ಲಿರುವ ಬೆಟ್ಟು ಗದ್ದೆಗಳನ್ನು ನೀರಿ ಅಭಾವದಿಂದ ಬಂಜರು ಬಿಡುತ್ತಾರೆ. ಗೇರು, ಗಾಳಿ ಸ ಇತ್ಯಾದಿಗಳನ್ನು ಬೆಳೆಸಲು ಪ್ರಾರಂಭ ಮಾಡುತ್ತಾರೆ.
10. ಯುವಕರು ಕೃಷಿ ಕೆಲಸಕ್ಕೆ ಇಷ್ಟಪಡದುದರಿಂದ, ಬೀಡಿ ಕೈಗಾರಿಕೆ, ಕಟ್ಟಡ ನಿರ್ಮಾಣ ಕೆಲಸ ಪಟ್ಟಣಗಳಿಗೆ ವಲಸೆ ಇತ್ಯಾದಿ ಕೆಲಸಗಳಿಂದ ಆಕರ್ಷಿಸಲ್ಪಡುತ್ತಾರೆ.
11. ಅಧಿಕ ಇಳುವರಿ ಭತ್ತದ ಬೀಜಗಳನ್ನು ಉಪಯೋಗಿಸದೆ ರೈತ ಈಗಲೂ ಅವರದೇ ಆದ ಊರಿನ ಬೀಜವನ್ನು ಉಪಯೋಗಿ ಇಷ್ಟಪಡುತ್ತಾರೆ. ಸುಧಾರಿತ ಬೀಜಗಳಲ್ಲಿ ರೈತರು ಹೆಚ್ಚಿನ ಆ ಕಾಣಿಸುವುದಿಲ್ಲ.
12. ತುಂಡು ಭೂಮಿಗಳಲ್ಲಿ ಲಾಭಕರವಾಗಿ ಕೃಷಿ ಮಾ

ಸಾಧ್ಯವಾಗುವುದಿಲ್ಲ. ನೀರಾವರಿ ಸೌಲಭ್ಯವು ಕಡಿಮೆಯಾಗಿದೆ. ಮಳೆ ನೀರನ್ನು ಆಶ್ರಯಿಸಿ ಮಾತ್ರವೇ ಬಯಲಿನಲ್ಲಿ ಕೃಷಿ ಮಾಡುತ್ತಾರೆ.

13. ಮಣ್ಣಿನ ಉತ್ಪಾದನಾ ಶಕ್ತಿಯು ಕಡಿಮೆಯಾಗುತ್ತಾ ಬರುತ್ತದೆ. ಜೈವ ಗೊಬ್ಬರಗಳು ಸಿಗುವುದು ಕಷ್ಟವಾಗಿದೆ. ರಾಸಾಯನಿಕ ಗೊಬ್ಬರಗಳ ಅಮಿತ ಬೆಲೆಯು ಕೃಷಿಯನ್ನು ಪ್ರತಿಕೂಲವಾಗಿ ಬಾಧಿಸಿದೆ. ಮಣ್ಣು ಪರಿಶೋಧನೆ ಮಾಡಿಯಲ್ಲ - ರಾಸಾಯನಿಕ ಗೊಬ್ಬರಗಳ ಉಪಯೋಗ.

14. ಚಿಗುರು ಕೊಳೆಯುವ ರೋಗ, ಕೆಂಪು ನೀರು ಹರಿಯುವುದು - ಕುರುವಾಯಿ, ಹಳದಿ ರೋಗ ಇವುಗಳ ತೆಂಗುಕೃಷಿಗಳನ್ನು ಬಾಧಿಸುವ ಪ್ರಧಾನ ರೋಗಗಳಾಗಿವೆ. ಇದಕ್ಕೆ ಪರಿಹಾರ ಮಾರ್ಗವನ್ನು ಕಂಡು ಹಿಡಿಯಲಿಲ್ಲ.

15. ಮಾರುಕಟ್ಟೆಗಳು ಇಲ್ಲ. ಅಡಿಕೆ, ತೆಂಗಿನಕಾಯಿ, ಬಾಳೆಗೊನೆ, ತರಕಾರಿ, ಗೇರುಬೀಜ, ಇವುಗಳನ್ನು ಖರೀದಿಸಿ ವಿಕ್ರಯಿಸುವ ಮಾರ್ಕೆಟಿಂಗ್ ಸ್ಥಾಪನೆಗಳಲ್ಲ. ಇವುಗಳನ್ನು ಉಪಯೋಗಿಸುವ ಅಡಿಕೈಗಾರಿಕೆಗಳಿಲ್ಲ.

16. ತರಕಾರಿ ಹಣ್ಣುಹಂಪಲು, ಧಾನ್ಯ ಬೆಳೆಗಳು ಮೊದಲಾದವುಗಳನ್ನು ಪ್ರೋತ್ಸಾಹಿಸುವುದಿಲ್ಲ.

17. ಭತ್ತದ ಗದ್ದೆಗಳಲ್ಲಿ ಸಮ್ಮಿಶ್ರ ಬೆಳೆಯಾಗಿ ಕೃಷಿ ಮಾಡುವ ತರಕಾರಿ, ಧಾನ್ಯಗಳು ಬಾಳೆ ಎಂಬಿವುಗಳು ಕಡಿಮೆಯಾಗುತ್ತಾ ಬರುತ್ತದೆ. ನೀರಾವರಿಯ ಅಸೌಕರ್ಯ, ಹೆಚ್ಚಿನ ಬೆಲೆಯಲ್ಲದಿರುವುದು; ಪ್ರಕೃತಿ ಕ್ಷೋಭೆಯಿಂದ ಉಂಟಾಗುವ ನಾಶ ನಷ್ಟಗಳು ಇದಕ್ಕೆ ಕಾರಣವಾಗಿದೆ.

18. ಶಾಸ್ತ್ರೀಯವಾದ ತೆಂಗು ಕೃಷಿ ಅವಲಂಬಿಸುವುದಿಲ್ಲ. ತೆಂಗುಗಳ ಅಂತರ ಬಹಳ ಕಡಿಮೆಯಾಗಿದೆ.

19. ತೆಂಗು ಕೃಷಿಗೆ ಬೇಕಾದ ನೀರಾವರಿಗೆ ಹೆಚ್ಚಿಗೆ ಗಮನ ಕೊಡುವುದಿಲ್ಲ.

20. ಕೊಳೆ ರೋಗ, ಹಳದಿ ರೋಗ ಎಂಬೀ ರೋಗಗಳು ಕಂಗು ಕೃಷಿಗೆ ಬಾಧಿಸುವುದರಿಂದ ಅಡಿಕೆ ಉತ್ಪಾದನೆಯು ಕಡಿಮೆಯಾಗಿದೆ.

21. ಒಂದು ನಾಣ್ಯ ಬೆಳೆಗೆ ಕೊಡುವ ಪ್ರಾಧಾನ್ಯತೆಯನ್ನು ಗೇರುಕೃಷಿಗೆ ಕೃಷಿಕರು ಕೊಡುವುದಿಲ್ಲ. ಕೀಟ ಬಾಧೆಯಿಂದ ಗೇರುಕೃಷಿಯು ನಾಶವಾಗುತ್ತದೆ. ಗೇರುಮರವನ್ನು ಕಡಿದು ಬೇರೆ ಕೃಷಿಯನ್ನು ಮಾಡುತ್ತಾರೆ.

22. ಕರಿಮೆಣಸಿನ ಕೃಷಿಗೆ ಬಾಧಿಸುವ ರೋಗದಿಂದ ಈ ಬೆಳೆಯು ವಂಶ ನಾಶವನ್ನು ಹೊಂದುವ ಭೀತಿಯಿದೆ.

23. ಕೃಷಿ ಭವನದಿಂದ ಬೇರೆ ಪರೀಕ್ಷಣಾ ಕೇಂದ್ರಗಳ ಫಲಗಳನ್ನು ರೈತರಿಗೆ ಮುಟ್ಟಿಸುವುದರಲ್ಲಿ ಫಲಪ್ರದವಾಗಿಲ್ಲ.

24. ಸಹಕಾರಿ ಸಂಘ ಮತ್ತು ದೇಶೀಕೃತ ಬ್ಯಾಂಕ್‌ಗಳಿಂದ ಕೃಷಿಕರಿಗೆ ಬೇಕಾದ ರೀತಿಯಲ್ಲಿ ಧನ ಸಂಗ್ರಹವು ಸಿಗುವುದಿಲ್ಲ. ಹೆಚ್ಚಿನ ಬಡ್ಡಿಯ ದರದಿಂದಲೂ ಬ್ಯಾಂಕಿನವರ ಶರತ್ತುಗಳಿಂದಲೂ ಈ ಧನ ಸಹಾಯವು ಸಿಗಲು ಕಷ್ಟವಾಗುತ್ತದೆ.

25. ವಿದ್ಯುತ್ತಿನ ಕ್ಷಾಮ, ಬೇಕಾದಷ್ಟು ಸೀಮೆಎಣ್ಣೆ ಸಿಗದಿರುವುದು. ಬೇಸಿಗೆ ಕಾಲದಲ್ಲಿ ನೀರಾವರಿಯು ತುಂಬಾ ಕಷ್ಟಕರವಾಗಿದೆ.

26. ಉಳುವ ಎತ್ತುಗಳು, ಕೋಣಗಳು ಕಡಿಮೆಯಾಗುವುದರಿಂದ ಗದ್ದೆ ಉಳುವುದು ಕಷ್ಟವಾಗಿದೆ.

27. ದೊಡ್ಡ ಮತ್ತು ಸಣ್ಣ ತೋಡುಗಳಿಗೆ ತಡೆ ಅಣೆಕಟ್ಟುಗಳು ಎಲ್ಲ ಕಡೆಗಳಲ್ಲಿ ಇಲ್ಲದಿರುವುದರಿಂದ ಕೃಷಿಗೆ ಬೇಕಾದಷ್ಟು ನೀರು ಸಿಗುವುದಿಲ್ಲ.

28. ಗುಡ್ಡೆಗಳ ಬದಿಯಲ್ಲಿ ಎತ್ತರದ ಪ್ರದೇಶಗಳಲ್ಲಿ ಕೆರೆಗಳು ಇಲ್ಲದಿರುವುದರಿಂದ ಇಂತಹ ಜಾಗದಲ್ಲಿ ಕೃಷಿ ಮಾಡುವುದಿಲ್ಲ.

29. ಕೃಷಿ ಸ್ಥಳದ ಹತ್ತಿರ ಬೇಕಾದ ಬೀಜ, ಗೊಬ್ಬರ, ಕೀಟನಾಶಕ ಸ್ಪ್ರೆಯರ್‌ಗಳು ಸಿಗುವುದಿಲ್ಲ.

30. ದೊಡ್ಡ ತೋಡಿನಲ್ಲಿ ಹೊಯಿಗೆ ತುಂಬಿ ಮಳೆಯ ನೀರು ನೆರೆಯಾಗಿ ಬಯಲಿನ ಕೃಷಿಯನ್ನು ನಾಶ ಮಾಡುತ್ತದೆ. ತೋಡಿನಿಂದ ಹೊಯಿಗೆಯನ್ನು ತೆಗೆಯುವ ವ್ಯವಸ್ಥೆಯಿಲ್ಲ.

31. ಕೃಷಿಯವಿಷಯದಲ್ಲಿ ತಜ್ಞರಿಂದ ಕೃಷಿ ಕಾರ್ಮಿಕರಿಗೆ ಯುವಕ, ಯುವತಿಯರಿಗೆ ತರಬೇತಿ ಕೊಡುವ ವ್ಯವಸ್ಥೆಯಿಲ್ಲ. ಮಣ್ಣಿನ ಸಂರಕ್ಷಣೆಯ ವಿಷಯದಲ್ಲಿ ರೈತರಿಗೆ ಅನುಭವವನ್ನು ಕೊಡುವ ವ್ಯವಸ್ಥೆಯಿಲ್ಲ.

ಸಾಧ್ಯತೆಗಳು

1. ಪಂಚಾಯತಿನ ತೋಡಿನ ಇಬ್ಬದಿಗಳಲ್ಲಿರುವ ಭತ್ತದ ಬಯಲುಗಳನ್ನು ಗ್ರೂಪುಗಳನ್ನಾಗಿ ಮಾಡಿ, ಸಮಗ್ರವಾದ ಕೃಷಿ ವಿಕಸನಕ್ಕೆ ಪದ್ಧತಿಗಳನ್ನು ಆವಿಷ್ಕರಿಸಿ ಗ್ರೂಪು ಸಮಿತಿಗಳ ಮುಖಾಂತರ ಕಾರ್ಯಗತಗೊಳಿಸಬೇಕು. ಗ್ರೂಪು ಸಮಿತಿಗಳು ಕ್ರಿಯಾತ್ಮಕವಾಗಿ ಪ್ರವರ್ತಿಸುವಂತೆ ವ್ಯವಸ್ಥೆಗಳನ್ನು ಮಾಡಬೇಕು.

2. ಈಗ ಇರುವ ತಡೆಅಣೆಗಳು (Cross bar) ಹಾಳಾಗಿರುವಲ್ಲಿ ಅವುಗಳನ್ನು ದುರಸ್ತಿ ಮಾಡಬೇಕು. ಕೃಷಿ ನೀರಾವರಿಗೆ ಬೇಕಾದ ಹೊಸ ಕ್ರೋಸ್ ಬಾರ್‌ಗಳನ್ನು ನಿರ್ಮಿಸಬೇಕು. ತೋಡಿನ ಬದಿಗಳು

ಜರಿದು ಹೋದುದನ್ನು ಕಲ್ಲಿನಿಂದ ಕಟ್ಟಿ,ನೆರೆಯ ನೀರು ಬಯಲಿಗೆ ಬರದಂತೆ ಏರ್ಪಾಡು ಮಾಡಬೇಕು.

3. ಭೂಗರ್ಭ ನೀರಿನ ಮಟ್ಟವು ಕಡಿಮೆಯಾಗುತ್ತಾ ಬರುತ್ತಿದೆ. ಕೆರೆಗಳು, ಬಾವಿಗಳು, ತೋಡುಗಳು ಬೇಸಿಗೆ ಕಾಲದಲ್ಲಿ ಬತ್ತಿ ಹೋಗುತ್ತದೆ. ನೀರಾವರಿಗೆ ಬೇಕಾದ ಕೆರೆಗಳನ್ನು ಜನರ ಸಹಭಾಗಿತ್ವದಿಂದ ನವೀಕರಿಸಿ ರಕ್ಷಿಸಲು ಸ್ಥಿರವಾದ ಕಾರ್ಯಕ್ರಮಗಳನ್ನು ಮಾಡಬೇಕು. ಬಯಲಿಗೆ ನೀರು ದೊರಕಿಸಲು ಬೇಕಾದ ಸಣ್ಣ ತೋಡುಗಳನ್ನು ಸ್ಥಿರವಾದ ಉಪಯೋಗಕ್ಕೆ ಕೃಷಿಕರ ಸಹಕಾರದಿಂದಲೇ ಮಾಡಬೇಕು.

4. ಕೃಷಿಕರಿಗೆ ಬೇಕಾದ ಕೆರೆ, ಅಣೆಕಟ್ಟು, ಕಾಲುವೆ, ಬಾವಿ ಇತ್ಯಾದಿಗಳ ನಿರ್ಮಾಣ ಕೆಲಸವನ್ನು ಈ ಪ್ರದೇಶದ ರೈತರ ಕಮಿಟಿಗಳ ಮುಖಾಂತರ ನಿರ್ವಹಿಸಬೇಕು.

5. ಮಣ್ಣು ಪರಿಶೋಧನೆಗೆ ಬೇಕಾದ ಸೌಕರ್ಯವನ್ನು ಮಾಡಿ ಅದರ ಆಧಾರದಲ್ಲಿಯೇ ಗೊಬ್ಬರ ಪ್ರಯೋಗ ಮಾಡಲು ನಿರ್ದೇಶಿಸಬೇಕು.

6. ಮಣ್ಣು ಮತ್ತು ನೀರಿನ ಸಂರಕ್ಷಣೆಯನ್ನು, ನೀರು ಹರಿಯುವ ಸರ್ವೆಯನ್ನು ಮಾಡಿ, ಬೇಕಾದ ಸ್ಥಳದಲ್ಲಿ ಪದ್ಧತಿಗಳನ್ನು ಆವಿಷ್ಕರಿಸಿ ನಡೆಸಬೇಕು. ಇದಕ್ಕೆ ಮಣ್ಣು ಸಂರಕ್ಷಣಾ ಇಲಾಖೆಯ ತಾಂತ್ರಿಕ ಸಹಾಯವನ್ನು ಪಡೆಯಬೇಕು.

7. ನೀರಾವರಿಗೆ ಹೆಚ್ಚು ನೀರು ಇರುವ ಪ್ರದೇಶಗಳನ್ನು ಕಂಡು ಹಿಡಿದು ಅಲ್ಲಿ ಪಂಪು ಸೆಟ್‌ಗಳನ್ನು ಸ್ಥಾಪಿಸಬೇಕು. ವಿದ್ಯುತ್ ಕನೆಕ್ಷನ್ ಕೊಡುವ ವ್ಯವಸ್ಥೆಗಳನ್ನು ಮಾಡಬೇಕು. ಯಾವಾಗಲೂ ವೋಲ್ಟೇಜು ಸ್ಥಿರವಾಗಿರುವಂತೆ ನೋಡಿಕೊಳ್ಳಬೇಕು.

8. ಭತ್ತದ ಕೃಷಿಯ ಕೀಟಬಾಧೆಯನ್ನು ತಡೆಯಲು ಬೇಕಾದ ಏರ್ಪಾಡುಗಳನ್ನು ಸ್ವೀಕರಿಸಬೇಕು. ಇದಕ್ಕಾಗಿ ಪರೀಕ್ಷಣಾ ಕೇಂದ್ರಗಳಲ್ಲಿ ದೊರೆತ ಫಲಗಳನ್ನು ಕೃಷಿಕರಿಗೆ ಮುಟ್ಟುವಂತೆ ನೋಡಿಕೊಳ್ಳಬೇಕು.

9. ಭತ್ತದ ಗದ್ದೆಗಳಲ್ಲಿ ತೆಂಗು, ಕಂಗುಗಳನ್ನು ನೆಟ್ಟು ತೋಟ ಮಾಡುವಂತಹ ಮತ್ತು ಕಟ್ಟಡ ಕಟ್ಟುವಂತಹ ಪ್ರವಣತೆಯನ್ನು ತಡೆಯುವಂತೆಯೂ, ಅದರ ದುಷ್ಫಲಗಳನ್ನು ವಿವರಿಸಿ ಅವರನ್ನು ಕೃಷಿಯ ಬಗ್ಗೆ ಒತ್ತಾಯಿಸಬೇಕು. ಅಲ್ಲದೆ ಇದನ್ನು ತಡೆಯಲು ಇರುವ ನಿಯಮಗಳನ್ನು ಕಠಿಣವಾಗಿ ನಡೆಸಲು ಕ್ರಮ ಕೈಗೊಳ್ಳಬೇಕು.

10. ರೋಗ ಪ್ರತಿರೋಧ ಶಕ್ತಿಯುಳ್ಳ ಮತ್ತು ಹೆಚ್ಚುವರಿ ಬೆಳೆಯನ್ನು ಕೊಡುವ ಬೀಜಗಳನ್ನೂ, ಗಿಡಗಳನ್ನೂ ಉಪಯೋಗಿಸಿದರೆ ಆಗುವ ಪ್ರಯೋಜನಗಳನ್ನು ರೈತರಿಗೆ ವಿವರಿಸುವ ವ್ಯವಸ್ಥೆ ಮಾಡಬೇಕು. ಮತ್ತು ಈ ತರದ ಬೀಜಗಳನ್ನು, ಗಿಡಗಳನ್ನು ಕಾಲಕಾಲಕ್ಕೆ ಒದಗಿಸುವ ಏರ್ಪಾಡು ಮಾಡಬೇಕು.

11. ಕೃಷಿ ಭೂಮಿಯನ್ನು ಬಂಜರು ಇಡುವುದಕ್ಕಿರುವ ಕಾರಣಗಳನ್ನು ಕಂಡು ಹಿಡಿದು, ಅದನ್ನು ಕೃಷಿ ಮಾಡಲು ಬೇಕಾದ ಎಲ್ಲಾ ಸಹಾಯ, ಸಹಕಾರಗಳನ್ನು ಮಾಡಿಕೊಡಬೇಕು:

12. ಚೈವ ಗೊಬ್ಬರಗಳ ಅಭಾವಗಳನ್ನು ಪರಿಹರಿಸಲು ದನ, ಕರುಗಳನ್ನು ಸಾಕುವುದು ಹಸಿರು ಬೇಲಿಗಳನ್ನು ಅಂದರೆ ಶೆರಿಸಿರಿಯ, ಸಿಬಾಬುಲು, ಮೊದಲಾದವುಗಳನ್ನು ಬೇಲಿಯಲ್ಲಿ ನೆಟ್ಟು ಹಸುರೆಲೆ ಗೊಬ್ಬರಗಳನ್ನು ಉತ್ಪಾದಿಸುವ ಏರ್ಪಾಡು ಮಾಡಬೇಕು.

13. ರೋಗದ ಮೂಲಕ ನಾಶವಾಗುವ ಕೃಷಿ ಬೆಳೆಗಳನ್ನು ಕೂಡಾ ಇನ್ಸೂರೆನ್ಸ್ ಪದ್ಧತಿಯಲ್ಲಿ ಸೇರಿಸಬೇಕು. ಕೃಷಿ ನಾಶಕ್ಕೆ ಕೊಡುವ ಸಾಂಪತ್ತಿಕ ಸಹಾಯಗಳನ್ನು ಆದಷ್ಟು ಬೇಗನೆ ಕೊಡುವ ಸಂವಿಧಾನವು ಬೇಕು.

14. ರೋಗಬಾಧಿತ ತೆಂಗಿನಗಿಡಗಳನ್ನು ಮುರಿದು ತೆಗೆದು, ಒಳ್ಳೆಯ ಉತ್ಪಾದನೆಯ ಹೈಬ್ರಿಡ್ ತೆಂಗಿನ ಸಸಿಗಳನ್ನು ನೆಡಲು ಕೃಷಿ ಭವನದಿಂದ ಪ್ರೋತ್ಸಾಹ ಕೊಡಬೇಕು.

15. ಕೃಷಿ ಯಂತ್ರೋಪಕರಣಗಳನ್ನು ಹೆಚ್ಚಾಗಿ ಬಳಕೆಗೆ ತರುವಂತೆ ಪ್ರೋತ್ಸಾಹವನ್ನು ನೀಡಬೇಕು. ಟ್ರ್ಯಾಕ್ಟರ್, ಟಿಲ್ಲರ್ ಮುಂತಾದ ಉಪಕರಣಗಳನ್ನು ಕೃಷಿ ಭವನದ ಮೂಲಕ ಅಥವಾ ಗ್ರೂಪ್ ಸಮಿತಿಗಳ ಮುಖಾಂತರವೂ ಸಿಗುವಂತಹ ವ್ಯವಸ್ಥೆ ಮಾಡಬೇಕು. ಈಗ ಇರುವ ಲಭ್ಯವನ್ನು ಹೆಚ್ಚಿಸಬೇಕು.

16. ಕೃಷಿಕರಿಗೆ ಸಾಲದ ಏರ್ಪಾಡನ್ನು ವಿಪುಲೀಕರಿಸಬೇಕು. ಕೃಷಿಕರಿಗೆ ಬೇರೆಯೇ ಸಹಕಾರಿ ಸಂಘಗಳನ್ನು ಸ್ಥಾಪಿಸಬೇಕು. ಇದರಲ್ಲಿ ಎಲ್ಲಾ ಕೃಷಿಕರೂ, ಮೆಂಬರ್‌ಶಿಪ್ ಕೊಡಬೇಕು. ಸಾಲದ ಶರತ್ತುಗಳನ್ನು ಉದಾರ ಮಾಡಬೇಕು.

17. ಶಾಸ್ತ್ರೀಯ ರೀತಿಯಲ್ಲಿ ತೆಂಗು, ಕಂಗು, ಭತ್ತದ ಕೃಷಿ, ತರಕಾರಿ, ಧಾನ್ಯ, ಗೇರು ಬೀಜದ ಕೃಷಿ, ಹಣ್ಣು ಹಂಪಲು, ಹೂವಿನ ಕೃಷಿಯನ್ನು ಮಾಡಲು ಬೇಕು ಬೇಕಾದ ಸಾಂಕೇತಿಕ ಪರಿಚಯವನ್ನು, ತರಬೇತಿಯನ್ನು ಆಗಾಗ ಕೊಡುತ್ತಿರಲು ಸಾಧ್ಯವಾಗಬೇಕು.

18. ಕೆಂಪು ನೀರು ಹರಿಯುವ ರೋಗ, ಮಂಡೆ ಕೊಳೆಯುವ ರೋಗ, ಕುರುವಾಯಿ, ಕಂಗಿನ ಕೊಲೆರೋಗ ಭತ್ತದ ಕೃಷಿಗೆ ಬರುವ ಬೆಂಕಿ ರೋಗ, ಎಲೆಸುರುಳಿ ರೋಗ ಇತ್ಯಾದಿ ರೋಗಗಳಿಗೆ ಪ್ರತಿನಿಧಿ ಇನ್ನೂ ಫಲಪ್ರದವಾಗಿ ನಿರ್ವಹಿಸಲು ಏರ್ಪಾಡುಗಳಿಲ್ಲ.

ರೋಗಗಳನ್ನು ತಡೆಯಲು ಸರಿಯಾದ ಏರ್ಪಾಡುಗಳು ಬೇಕು.

19. ತೋಟಗಳ ಬದಿಯಲ್ಲಿ, ಬಯಲು ಪ್ರದೇಶಗಳಲ್ಲಿ ಹುಲ್ಲು ಬೆಳೆಸುವುದು. ಇತರ ಬೆಳೆಗಳಾದ ಬಾಳೆ, ಅನನಾಸು, ಗೆಣಸು, ವೀಳ್ಯದೆಲೆ ಮೊದಲಾದವರನ್ನು ಕೃಷಿ ಮಾಡುವ ಸೌಕರ್ಯ ಮಾಡಬೇಕು.

20. ಬಯಲುಗಳಲ್ಲಿ ತರಕಾರಿ, ಧಾನ್ಯ ಬೆಳೆಗಳು, ಗೆಣಸು ಎಂಬಿವುಗಳನ್ನು ಧಾರಾಳವಾಗಿ ಕೃಷಿ ಮಾಡಲು ರೈತರನ್ನು ಪ್ರೋತ್ಸಾಹಿಸಬೇಕು. ಇದಕ್ಕಾಗಿ ಮಾದರಿ ಕೃಷಿ ತೋಟಗಳನ್ನು ನಿರ್ಮಿಸಿ ರೈತರಿಗೆ ಕೀಚನಾಶಿನಿ, ರಸಾಯನಿಕ ಗೊಬ್ಬರೆ ಇತ್ಯಾದಿಗಳನ್ನು ಕೊಡಬೇಕು. ಗ್ರೂಪು ಅಡಿಸ್ಥಾನದಲ್ಲಿ ಈ ಕೃಷಿ ಮಾಡುವಂತೆ ಅನುಕೂಲತೆ ಒದಗಿಸಬೇಕು.

21. ಮಾದರಿ ಕೃಷಿ ತೋಟಗಳಿಗೆ ಪಂಚಾಯತಿನಲ್ಲಿ ಅಂಗೀಕಾರವು ಒಳ್ಳೆಯ ತೋಟಗಳ ರೈತರಿಗೆ ಪ್ರೋತ್ಸಾಹವನ್ನು ಕೊಡಬೇಕು.

22. ಶಾಲಾ ವಿದ್ಯಾರ್ಥಿಗಳಿಗೆ ಕೃಷಿಯಲ್ಲಿ ಅಭಿರುಚಿ ಉಂಟು ಮಾಡಲು ಎಲ್ಲಾ ಶಾಲೆಗಳಲ್ಲಿ ಕೃಷಿ ತೋಟವನ್ನು ಶಾಲಾ ಮಕ್ಕಳಿಂದ ನಿರ್ಮಿಸಬೇಕು. ಕೃಷಿ ವಿಷಯದಲ್ಲಿ ಕ್ಲಾಸುಗಳನ್ನು ತೆಗೆಯಬೇಕು ಮತ್ತು ಶಾಲೆಗಳಲ್ಲಿ ಕಾರ್ಷಿಕ ಮೇಳವನ್ನು ಸಂಘಟಿಸಬೇಕು.

23. ಕೃಷಿ ಉತ್ಪನ್ನಗಳನ್ನು ಸಂಗ್ರಹಣೆ ಮಾಡುವ ಕೇಂದ್ರವನ್ನು ಸ್ಥಾಪಿಸಿ ಕೃಷಿಕರಿಗೆ ಅದರ ಉತ್ಪನ್ನಗಳನ್ನು ಲಾಭದಾಯಕವಾದ ರೀತಿಯಲ್ಲಿ ಮಾರಾಟ ಮಾಡುವ ಅವಕಾಶಗಳನ್ನು ಸ್ಥಾಪಿಸಬೇಕು. ಇದರಿಂದ ಮದ್ಯವರ್ತಿಗಳ, ವ್ಯಾಪಾರಸ್ಥರ ಲಾಭವನ್ನು ತಡೆಯಬಹುದು.

24. ಅಣಬೆ ಕೃಷಿ ಮತ್ತು ಹೂವಿನ ಕೃಷಿಯ ಸಾಧ್ಯತೆಗಳನ್ನು ಕಂಡು ಹಿಡಿದು ಇದನ್ನು ಮಾಡಲು ಇಷ್ಟ ಇದ್ದ ರೈತರಿಗೆ ಅನುಕೂಲತೆಗಳನ್ನು ಒದಗಿಸಬೇಕು.

25. ಒಂದೊಂದು ಪ್ರದೇಶದಲ್ಲಿ ಬೆಳೆಯುವ ಕೃಷಿ ಉತ್ಪನ್ನಗಳನ್ನು ಮಾರಲು ಪ್ರಾರಂಭದಲ್ಲಿ ಸಂತೆಗಳನ್ನು ಮತ್ತು ಇತರ ಮಾರಾಟ ಕೇಂದ್ರಗಳನ್ನು ಪ್ರಾರಂಭಿಸಬೇಕು.

26. ಕೃಷಿ ತ್ಯಾಜ್ಯ ವಸ್ತುಗಳಾದ ತೆಂಗಿನಸಿಪ್ಪೆ, ಅಡಿಕೆ ಸಿಪ್ಪೆ, ಭತ್ತದ ಹೊಟ್ಟು, ಬಾಳೆನಾರು, ಅನನಾಸಿನ ನಾರು ಇನ್ನಿತರ ಕೃಷಿ ತ್ಯಾಜ್ಯ ವಸ್ತುಗಳನ್ನು ಬಳಸಿ ಮಾಡಬಹುದಾದ ಕೈಗಾರಿಕೆ ಸ್ಥಾಪನೆಗಳನ್ನು ತೊಡಗಲು ಪ್ರೋತ್ಸಾಹ ಮಾಡಬೇಕು.

27. ಗೇರುಹಣ್ಣು, ಹಲಸಿನ ಹಣ್ಣು, ಮಾವಿನಕಾಯಿ ಮತ್ತು ಇತರ ಹಣ್ಣು ಹಂಪಲುಗಳನ್ನು ಸಂಸ್ಕರಿಸಿ ಸ್ಕ್ವೆಶ್ ಜಾಮ್, ಹಪ್ಪಳ, ಉಪ್ಪಿನಕಾಯಿ, ಮಾಂಬಳ ಮುಂತಾದವುಗಳನ್ನು ಮಾಡಲು ಕೇಂದ್ರಗಳನ್ನು ಸ್ಥಾಪಿಸಲು ಪ್ರೋತ್ಸಾಹ ನೀಡಬೇಕು. ಮಹಿಳೆಯರಿಗೆ ಇದು ಉದ್ಯೋಗವನ್ನು ಕಲ್ಪಿಸುವುದು.

28. ಅಡಿಕೆಯ ಕೊಳೆರೋಗವನ್ನು ತಡೆಯಲು, ಕೀಟನಾಶಕಗಳು, ಸ್ಪ್ರೇಯರ್ ಇವುಗಳನ್ನು ಅರ್ಧಕ್ರಯದಲ್ಲಿ ಕೊಟ್ಟು ಈ ಬೆಳೆಯನ್ನು ಪ್ರಧಾನ ನಾಣ್ಯ ಬೆಳೆಯಾಗಿ ತರಲು ಸಾಧ್ಯವಾಗಬೇಕು.

29. ಗೇರುಬೀಜ ಕೃಷಿಯನ್ನು ಮಾಡಿ, ಇದರ ಉತ್ಪಾದನೆಯನ್ನು ಹೆಚ್ಚಿಸಬೇಕು. ಬಂಜರು ಭೂಮಿ, ಪರಂಬೋಕು ಚಾಗಗಳಲ್ಲಿ ಗೇರು ಬೀಜ ಕೃಷಿಗೆ ಉಪಯೋಗಿಸಬೇಕು.

30. ರೋಗದಿಂದ ಒಳ್ಳೆ ಮೆಣಸಿನ ಕೃಷಿಯು ಸಂಪೂರ್ಣ ನಾಶವಾಗುವುದನ್ನು ತಡೆಯಲು ತಕ್ಕ ಸಮಯದಲ್ಲಿ ಕೀಟನಾಶಗಳನ್ನು ಉಪಯೋಗಿಸಲು ಮದ್ದು ಮತ್ತು ಸ್ಪ್ರೇಯರ್‌ಗಳನ್ನು ಒದಗಿಸಬೇಕು.

31. ಭೂಮಿಯ ವಿಸ್ತೀರ್ಣವನ್ನು ನೋಡದೆ ಬಾವಿ ತೋಡಲು ಲೋನು ಸಬ್ಸಿಡಿ ಸಮೇತ ಅನುವಾದಿಸಬೇಕು. ಲೋನುಗಳು ಸಮಯಕ್ಕೆ ಸಿಗುವಂತೆ ಧನಕಾರ್ಯ ಸ್ಥಾಪನೆಗಳು ಸಹಕರಿಸುವಂತೆ ಮಾಡಬೇಕು.

32. ಅವಶ್ಯಕತೆಯಿರುವ ರೈತರಿಗೆ ಉಳುವ ಎತ್ತುಗಳನ್ನು ಕೊಂಡುಕೊಳ್ಳಲು ಬೇಂಕಿನಿಂದ ಬೇಕಾದ ಹಣವನ್ನು ಸಂಪೂರ್ಣವಾಗಿ ಕೊಡುವಂತೆ ಏರ್ಪಾಡು ಮಾಡಬೇಕು.

33. ಕೃಷಿ ಕಾರ್ಮಿಕರ ಅಭಾವವನ್ನು ಹೋಗಲಾಡಿಸಲು ಅವರಿಗೆ ನ್ಯಾಯವಾದ ಸಂಬಳವನ್ನು ನಿರ್ಣಯಿಸಬೇಕು. ಅವರಿಗೆ ಪೆನ್‌ಶನ್ ಹೆಚ್ಚಿಸಬೇಕು. ಅವರ ಕ್ಷೇಮನಿಧಿಯಿಂದ ಅವರಿಗೆ ಹೆಚ್ಚಿನ ಸೌಲಭ್ಯಗಳು ದೊರೆಯುವಂತೆ ಮಾಡಬೇಕು. ಅವರಿಗೆ ಬರಗಾಲದ ಸಮಯದಲ್ಲಿ ಸೌಜನ್ಯವಾಗಿ ಆಹಾರ ಧಾನ್ಯಗಳನ್ನು ವಿತರಿಸಬೇಕು. ಹೀಗೆ ಮಾಡಿದರೆ ಹೆಚ್ಚಿನವರು ಕೃಷಿ ಕೆಲಸಕ್ಕೆ ಬರುವುದಕ್ಕೆ ಸಂಶಯವಿಲ್ಲ.

34. ಬಾವಿ, ಕೆರೆ, ತೋಡುಗಳಿಂದ ಕೃಷಿ ಸ್ಥಳಗಳಿಗೆ ನೀರು ಹೋಗಲು, ತೋಡು, ಕಾಲುವೆಗಳು ಇಲ್ಲದ ಕಡೆಯಲ್ಲಿ ಆಯಾ ಸ್ಥಳಗಳಿಗೆ ಅನುಸರಿಸಿ ಸಣ್ಣ ತೋಡು, ಕಾಲುವೆಗಳನ್ನು ಅಲ್ಲಿಯ ರೈತರ ಸಹಕಾರದಿಂದ ನಿರ್ಮಿಸಬೇಕು.

35. ಕ್ರಾಸ್‌ಬಾರ್‌ಗಳನ್ನು ನಿರ್ಮಿಸುವಾಗ, ತೋಡಿನ ಇಬ್ಬದಿಗಳಲ್ಲಿರುವ ಗದ್ದೆಗಳು ಸಮತಲದಲ್ಲಿ ಇಲ್ಲದಿದ್ದಾಗ ತಗ್ಗಿನ ಪ್ರದೇಶಕ್ಕೆ ನೀರನ್ನು ಕೊಂಡು ಹೋಗಲು ತೋಡಿಗೆ ಸಮಾಂತರವಾಗಿ ಕೈ ತೋಡುಗಳನ್ನು ನಿರ್ಮಿಸಿ, ಇಂತಹ ಪ್ರಶ್ನೆಗಳಿಗೆ ಪರಿಹಾರವನ್ನು ಕಂಡುಕೊಳ್ಳಬೇಕು.

36. ನರ್ಸರಿಗಳನ್ನು ತೊಡಗಲು ಸಾಧ್ಯತೆಯಿರುವ ಪ್ರದೇಶಗಳನ್ನು ಕಂಡು ಹಿಡಿದು, ಮಾದರಿ ನರ್ಸರಿಗಳಾಗಿ ಆರಂಭಿಸಬೇಕು. ಇದಕ್ಕಾಗಿ ಮಹಿಳೆಯರನ್ನು ಪ್ರೋತ್ಸಾಹಿಸಬೇಕು.

37. ಈ ಪಂಚಾಯತಿನ ಪ್ರತ್ಯೇಕ ತರದ ಘಟನೆಗೆ ಅನುಯೋಜ್ಯವಾದ ಕೃಷಿ ರೀತಿಯನ್ನು ನರ್ಸರಿ ಪಶು ಸಂಗೋಪನೆ, ಕೋಳಿ ಸಾಕಲು, ಹಂದಿ ಸಾಕಲು, ಮೀನು ಸಾಕಲು, ಬೇಕಾದ ಕಾರ್ಯಗಳನ್ನು ಮಾಡಿ ತೋರಿಸಲಿಕ್ಕೆ ಕೇರಳ ಕೃಷಿ, ವಿಶ್ವ ವಿದ್ಯಾಲಯದ ವತಿಯಿಂದ ಈಗ ಇರುವ ಕೃಷಿ ವಿಜ್ಞಾನ ಕೇಂದ್ರವನ್ನು ತೊಡಗಲು ಬೇಕಾದ ಏರ್ಪಾಡು ಮಾಡಲು ನೋಡಬೇಕು. ಈ ಕೇಂದ್ರವನ್ನು ಸರಕಾರದ ಮೂಲಕ ICARನಿಂದ .ತುಳು ಮತ್ತು ಕನ್ನಡ ಮಾತನಾಡುವ ಕೇರಳದ ಈ ಪ್ರದೇಶಕ್ಕೆ ಪ್ರತ್ಯೇಕವಾಗಿ ಸಿಗುವಂತೆ ನೋಡಬೇಕು. ಇದಕ್ಕೆ .ಬೇಕಾದ ಸ್ಥಳವನ್ನು ಕೇರಳ ಸರಕಾರವು ವರ್ಕಾಡಿ ಪಂಚಾಯತು ಮತ್ತು ಮೀಂಜ ಪಂಚಾಯತುಗಳಲ್ಲಿ ಕೊಟ್ಟಿರುತ್ತದೆ.

38. ಈ ಪಂಚಾಯತಿನ 5ನೇ ವಾರ್ಡಿನಲ್ಲಿ ನೀರೊಳಿಕೆ ಎಂಬಲ್ಲಿ ಒಂದು ಬೃಹತ್ ನೀರಾವರಿ ಯೋಜನೆಯನ್ನು ಕಾರ್ಯಗತಗೊಳಿಸಬೇಕು. ಇದಕ್ಕೆ P.W.D. Minor irrigation ಮತ್ತು ಕೃಷಿ ವಿಜ್ಞಾನ ಕೇಂದ್ರಗಳ ಸಹಕಾರವನ್ನು ಕೋರಿ ಈ ಪಂಚವಾರ್ಷಿಕ ಯೋಜನೆಯಲ್ಲಿ ತೊಡಗಬೇಕು.

39. ಭತ್ತದ ಕೃಷಿ ಲಾಭದಾಯಕವಲ್ಲದುದರಿಂದ ರೈತರಿಗೆ ಕಡಿಮೆ ಎಂದರೆ ರೂ. 2000/- ಹೆಕ್ಟರಿಗೆ ಸಬ್ಸಿಡಿಯಾಗಿ ಕೊಡುವರೇ ಏರ್ಪಾಡು ಮಾಡಬೇಕು.

40. ಕೃಷಿಯಂತ್ರ, ಪಂಪುಸೆಟ್ಟು, ಟಿಲ್ಲರ್ ಇಲೆಕ್ಟ್ರಿಕ್, ಮೋಟಾರ್ ರಿಪೇರಿ ಮಾಡುವರೆ ತರಬೇತಿಗಾಗಿ ಸ್ವ ಫಂಡು ತೆತ್ತು ಪಂಚಾಯತಿನಲ್ಲೇ ತರಬೇತಿ ನೀಡುವ ವ್ಯವಸ್ಥೆ ಮಾಡಬೇಕು.

41. ಕೃಷಿಕರಿಗೆ, ಡೀಸಿಲ್ ಸಬ್ಸಿಡಿಯಲ್ಲಿ ಕೊಡಬೇಕು. ಕೃಷಿಗೆ ಬೇಕಾದ ಸೀಮೆಎಣ್ಣೆಯ ಪರ್ಮಿಟನ್ನು ಕೃಷಿ ಭವನದಿಂದಲೇ ಸಿಗುವಂತೆ ಏರ್ಪಾಡು ಮಾಡಬೇಕು. ಇದಕ್ಕೆ ಸರಕಾರವನ್ನು ಒತ್ತಾಯಿಸಬೇಕು. ಕೃಷಿಗೆ ವಿದ್ಯುಚ್ಛಕ್ತಿಯನ್ನು ತಡಮಾಡದೇ ಕೊಡುವ ನಿರ್ದೇಶಗಳನ್ನು ನೀಡಬೇಕು. ದಿನದ 24 ಗಂಟೆಲೂ voltage ಕಡಿಮೆಯಾಗದೇ ವಿದ್ಯುಚ್ಛಕ್ತಿಯನ್ನು ಕೊಡಲು ಏರ್ಪಾಡು ಮಾಡಬೇಕು.

42. ರೈತರ 2ಚೈನು ಕುಮ್ಕಿಯನ್ನು ರೈತರಿಗೇ ಕೊಡಬೇಕು. ಬದಲಾಗಿ ಬೇರೆಯವರಿಗೆ ಕೊಡದಂತೆ ನೋಡಬೇಕು.

43. ಗ್ರೂಪು, ಸಮಿತಿಗಳನ್ನು ಪುನರ್‌ಜ್ಜೀವನ ಗೊಳಿಸಲು ಕೃಷಿ ಅಧಿಕಾರಿಗಳು, ಏರ್ಪಾಡು ಮಾಡಬೇಕು. ತಿಂಗಳಿಗೊಮ್ಮೆಯಾದರೂ ಸಭೆ ಸೇರಿ ಕೃಷಿ ಮೃಗ ಸಂರಕ್ಷಣೆಯ ವಿಷಯದಲ್ಲಿ ಚರ್ಚೆ ನಡೆಸಲು ಏರ್ಪಾಡು ಮಾಡಬೇಕು. ಪಶು ವೈದ್ಯಾಧಿಕಾರಿಗಳೂ, ಇತರ ಅಧಿಕಾರಿಗಳೂ ಇದರಲ್ಲಿ ಭಾಗವಹಿಸಬೇಕು. ರಾಸಾಯನಿಕ ಗೊಬ್ಬರ, ಕೀಟನಾಶಕಗಳು, ಪವರ್ ಟಿಲ್ಲರ್, ಇತ್ಯಾದಿಗಳು ಗ್ರೂಪ್ ಸಮಿತಿಗಳಲ್ಲೇ ಸಿಗುವಂತೆ ಏರ್ಪಾಡು ಮಾಡಬೇಕು.

44. ತೋಡಿನಲ್ಲಿ ಹೊಯಿಗೆ ತುಂಬಿ ಮಳೆಗಾಲದಲ್ಲಿ ಬಯಲಿಗೆ ನೀರು, ಹೊಯ್ಗೆಯೂ ಹರಿದು ಕೃಷಿ ನಾಶವನ್ನು ತಡೆಯಲು ತೋಡಿನ ಹೊಯ್ಗೆಯನ್ನು ಸಮಯಾನುಸೃತವಾಗಿ ತೆಗೆಯುವ ಏರ್ಪಾಡು ಮಾಡಬೇಕು.

45. ಕೂಟತ್ತಜೆಯಿಂದ ಕೂಡೇಲು ಸಾಧಾರಣ 15KM ಹೊಳೆಯ ಇಬ್ಬದಿಗಳಲ್ಲಿಯೂ ತಡೆಗೋಡೆಗಳ ನಿರ್ಮಾಣ, ಕೊಣಜೆಲಿನಿಂದ ಪಿಲಿಕುಂಡದ ತನಕ (ಇಬ್ಬದಿಗಳಲ್ಲಿ) ತಡೆಗೋಡೆಯನ್ನು ನಿರ್ಮಿಸುವುದು.

ವರ್ಕಾಡಿ ಪಂಚಾಯತಿನ ಕೃಷಿ ಅಭಿವೃದ್ಧಿಗೆ ಗ್ರಾಮಸಭೆಗಳಲ್ಲಿ ಮೂಡಿ ಬಂದ ಸಮಸ್ಯೆಗಳೂ, ಸಾಧ್ಯೆಗಳೂ 9ನೇ ಯೋಜನೆಯಲ್ಲಿ ಜನರ ಸಹಕಾರದಿಂದ ಸಾಕ್ಷಾತ್ಕರಿಸಿದರೆ, ನಮ್ಮ ಪಂಚಾಯತಿನ ಕೃಷಿ ಮೇಖಲೆಯಲ್ಲಿ ಒಂದು ಹೊಸ ಸ್ಫೂರ್ತಿ ಉಂಟಾಗುವುದೆಂಬುದಕ್ಕೆ ಸಂಶಯವಿಲ್ಲ.

ಹಾಗೆಯೇ ಗ್ರಾಮಸಭೆಗಳಲ್ಲಿ ಮೂಡಿ ಬಂದಿರುವ, ತಡೆಗೋಡೆಗಳು, ಕ್ರಾಸ್ ಬಾರ್‌ಗಳು, ಚಕ್ಕ್‌ಡಾಮ್ ಇತ್ಯಾದಿಗಳನ್ನು ಪ್ರೊಜೆಕ್ಟ್‌ನಲ್ಲಿ ಸೇರಿಸಿಕೊಳ್ಳುವುದು.

ಸಸಿಗಳ ವಿಸ್ತೀರ್ಣ ಮತ್ತು ಉತ್ಪಾದನೆ

ಕ್ರ.ಸಂ.	ಬೆಳೆಯ ಹೆಸರು	ವಿಸ್ತೀರ್ಣ	ಮೊತ್ತ ಉತ್ಪಾದನೆ	ಉತ್ಪಾದನೆ ಕ್ರಮತೆ Per Ht.
1.	ಭತ್ತ (ಒಂದನೇ ಬೆಳೆ	418 Ht	1045 MT	2500 Kg Ha
2.	ಭತ್ತ (2ನೇ ಬೆಳೆ)	292 Ha		876 MT 3000 Kg Ha
3.	ಭತ್ತ (3ನೇ ಬೆಳೆ)	15 Ha	45 MT	30000 Kg Ha
4.	ಧಾನ್ಯಗಳು	170 Ha	300 MT	1.75 MT Ha
5.	ತರಕಾರಿಗಳು	120 Ha	4.0 MT	3000 Kg Ha
6.	ತೆಂಗು	255 Ha	185.64ಸಾವಿರ	7200 Kg Ha
7.	ಬಾಳೆ	126 Ha	780 MT	6000 Kg Ha
8.	ಮರಗೆಣಸು	15 Ha	-	-
9.	ಒಳ್ಳೆ ಮೆಣಸು	14 Ha	7.00 MT	500 Kg Ha
10.	ಹಲಸು	2 Ha	-	-
11.	ಗೇರುಬೀಜ	165 Ha	60 MT	300 MT Ha
12.	ಮಾವು	2,00 Ha	-	-
13.	ರಬ್ಬರ್	2.00 Ha	-	-
14.	ಅಡಿಕೆ	354 Ha	265.5 MT	750 Kg Ha

ಮಾಹಿತಿ ಸಂಗ್ರಹ : ಕೃಷಿ ಭವನ ವರ್ಕಾಡಿ

ತೆಂಗು ಕೃಷಿ ಸಂಬಂಧಿಸಿದ ವಿವರಗಳು

ವಾರ್ಡ್ ನಂಬ್ರ ವಿಸ್ತೀರ್ಣ ತೆಂಗಿನ ಮರಗಳ ಸಂಖ್ಯೆ
ರೋಗಬಾಧಿತ ತೆಂಗುಗಳ ಸಂಖ್ಯೆ

		ಕಾಯಿ ಹಿಡಿಯುವ	ಕಾಯಿ ಕೊಯ್ಯುವ	ಒಟ್ಟು	ಬೆಳೆಯುವ	ಕೈಬೆಳೆಯಿಂದ	ಬಾಡಿಯುವ	ಒಟ್ಟು
1.	28.63ಹೆ	1861	3149	5010	12	15	-	27
2.	24.77 ಹೆ	2136	2200	4336	14	11	-	25
3.	22.61ಹೆ	1836	2122	3958	7	6	-	13
4.	40.25ಹೆ	4682	2398	7080	15	8	-	23
5.	18.07ಹೆ	0428	1735	3163	11	5	-	16
6.	17.00ಹೆ	1680	1283	2963	9	6	-	15
7.	23.62ಹೆ	1896	2239	4135	6	5	-	11
8.	28.64ಹೆ	2337	2685	5012	17	10	-	27
9.	19.00ಹೆ	1465	1846	3311	18	5	-	23
10.	33.00ಹೆ	1706	4070	5776	8	7	-	15

ಮಾಹಿತಿ ಸಂಗ್ರಹ : ಕೃಷಿ ಭವನ ವರ್ಕಾಡಿ

ಕೃಷಿ ಯಂತ್ರೋಕರಣಗಳ ಬಳಕೆಯ ವಿವರ ಪಟ್ಟಿ

ವಾರ್ಡ್ ನಂಬ್ರ ಉಳುವ ಯಂತ್ರಗಳು ಕೀಟನಾಶಿನಿ ಉಪಯೋಗಿಸುವ ಯಂತ್ರ ಮತ್ತು ಇತರ ತೆಂಗಿನಮರ ಹತ್ತುವ ಯಂತ್ರ ಫೋರ್ ಲೇಬಲ್ ಪಂಪ್‌ಸೆಟ್

	ಟ್ರಾಕ್ಟರ್	ಟಿಲ್ಲರ್	ಮಿನಿ ಕಲ್ಟಿವೇಟರ್	ರೋಟರ್ ಸ್ಪ್ರೇಯರ್	ಗಿವ್‌ಪ್ಯಾರ್ ಸ್ಪ್ರೇಯರ್	ಬಾಕ್ ಯುವ			
1.	-	1	-	4		-	-	1	175
2.	-	3	-	12		-	-	-	75
3.	-	1	-	20		1	-	1	110
4.	-	2	-	10		-	-	-	120
5.	-	1	-	8		-	-	-	105
6.	-	1	-	10		-	-	-	120
7.	-	2	-	14		-	-	2	110
8.	-	1	-	25		-	-	-	196
9.	-	2	-	8		1	1	1	114
10.	-	2	-	10		-	-	-	105

ಮಾಹಿತಿ ಸಂಗ್ರಹ -ಕೃಷಿ ಭವನ

ನೆಡುವ ಸಸ್ಯಗಳ ವಿತರಣೆಯ ವಿವರ

ಹೆಸರು		ವರ್ಷ		
		1993-94	1994-95	1995-96
1.	ತೆಂಗು	150 No	800 No	550 No
2.	ಮಾವು	407	560	-
3.	ಗೇರುಬೀಜ	3380	1070	2080
4.	ಹಲಸು	35		-
5.	ಕರಿಮೆಣಸು	-	8500	6000
6.	ಕೊಕೊ	350	-	-
7.	ಕನಂಗು	-	200	1000

8.	ಚಕ್ಕು	24	54	-
9.	ಗೋವ	153	24	-
10.	ಲವಂಗ	-	50	-
11.	ಚೆರಿ	319	-	-
12.	ಬಾಳೆಗಿಡ	3334	-	-
13.	ಭತ್ತದ ಬೀಜ	3058 Kg	2464 Kg	2580 Kg
14.	ಧಾನ್ಯ ಬೀಜ	280 Kg	340 Kg	392 Kg
15.	ತರಕಾರಿ ಬೀಜ	2710 Pvt.	1447 Pvt + 245 Kg	2110Pvt + 750Kg
16.	ಹಸಿರೆಲೆ ಗೊಬ್ಬರ ಬೀಜಗಳು	-1400Kg	150Kg	

ಮಾಹಿತಿ ಸಂಗ್ರಹ : ಕೃಷಿ ಭವನ

ರಸಾಯನಿಕ ಗೊಬ್ಬರ ಮತ್ತು ಕೀಟನಾಶನಿಯ ವಿತರಣೆಯ ವಿವರ

ಕ್ರ.ಸಂ.	ಸ್ಥಾಪನೆಯ ಹೆಸರು	1993-94 ರಸಾಯನಿಕ ಗೊಬ್ಬರ ಕೀಟನಾಶಿನಿ ಕ್ವಿಂ.	1994-95 ಕೀಟನಾಶಕ ರಸಾಯನಿಕ ಗೊಬ್ಬರ ಕ್ವಿಂ.	1995-96 ರಸಾಯನಿಕ ಗೊಬ್ಬರ ಕೀಟನಾಶಿನಿ ಕ್ವಿಂ.
	ಸಹಕಾರಿ ಸಂಘ	-	-	-
	ಸ್ವಕಾರ್ಯ ಸ್ಥಾಪನೆ	385396 801ML 10257 Kg.	750ML 389024 13085 Kg	397107 769 ML 912 Kg

ಮಾಹಿತಿ ಸಂಗ್ರಹ : ಕೃಷಿ ಭವನ

ಕಾರ್ಷಿಕ ಸಾಲಗಳ ವಿವರಗಳು 1995-96

ಕ್ರ.ಸಂ.	ಬ್ಯಾಂಕಿನ ಹೆಸರು	ರೂಪಾಯಿ (ಲಕ್ಷ)
1.	ಕೊಡ್ಲಮೊಗರು ವಾತ್ಸಲ್ಯ ಸೇವಾ ಸಹಕಾರಿ ಬ್ಯಾಂಕು	32,91,437
2.	ವರ್ಕಾಡಿ ಸೇವಾ ಸಹಕಾರಿ ಬ್ಯಾಂಕ್	50,14,385
	ಒಟ್ಟು	83,05,822

ಮಾಹಿತಿ ಸಂಗ್ರಹ : ಸಹಕಾರಿ ಬ್ಯಾಂಕುಗಳಿಂದ

ಸರಕಾರದಿಂದ ಸಹಾಯಧನ ಸಿಕ್ಕಿದ್ದು

ವಾರ್ಡ್ ನಂಬ್ರ	ಬಾವಿ	ತೂತುಬಾವಿ	ಕೆರೆ	ಕ್ರಾಸ್‌ಬಾರ್
1.	216	3	10	-
2.	115	8	20	3
3.	120	2	6	3
4.	120	2	-	-
5.	105	1	2	1
6.	80	1	10	-
7.	110	-	3	-
8.	185	1	2	-
9.	114	2	2	1
10.	120	2	1	-
ಒಟ್ಟು	1285	22	56	9

ಮಾಹಿತಿ ಸಂಗ್ರಹ : ಕೃಷಿ ಭವನ

	ಈಗಿರುವ ಜಲಾಶಯಗಳು				ಇನ್ನು ಹೆಚ್ಚಾಗಿ ಬೇಕಾದ ಜಲಾಶಯಗಳು			
ವಾರ್ಡ್	ಬಾವಿ	ಕೆರೆ	ತೂತುಬಾವಿ	ಅಣೆಕಟ್ಟು	ಬಾವಿ	ಕೆರೆ	ತೂತುಬಾವಿ	ಅಣೆಕಟ್ಟು
I	216	70	3	-	12	5	2	5
II	125	22	13	6	10	8	10	6
III	120	50	2	3	35	10	4	6
IV	120	60	1	5	21	1	5	5
V	105	63	6	3	25	6	5	16
VI	257	79	6	1	10	2	5	8
VII	110	58	7	7	12	2	10	8
VIII	185	45	1	-	7	3	5	8
IX	114	85	10	4	9	1	10	5
X	220	184	6	6	10	4	5	5

ಕೃಷಿಯೂ-ನೀರಾವರಿಯೂ

1.ಇಲ್ಲಿ ಬರುವ ಪ್ರಧಾನ ಮಣ್ಣಿನ ತರಗಳು ಅವುಗಳ ಗುಣ ನೆಲೆ

ಕ್ರ.ಸಂ.	ಮಣ್ಣು	ಗುಣನೆಲೆ
ಅ.	ಕೆಂಪು ಮಣ್ಣು	ಕೃಷಿ ಯೋಗ್ಯ.
ಆ.	ಮೆಕ್ಕಲು ಮಣ್ಣು	ಕೃಷಿಯೋಗ್ಯ
ಇ.	ಜಾಡಿ ಮಣ್ಣು	-
ಈ.	ಆವೆಮಣ್ಣು	-
ಉ.	ಮರಳು	ಕೃಷಿಗೆ ಸಾಧಾರಣ ಸಹಾಯ
ಊ.	ಕಲ್ಲು ಮಣ್ಣು	ಕೃಷಿಯೋಗ್ಯ
ಋ.	ಕಪ್ಪು	ಕಲ್ಲು

2. ನಮ್ಮ ಪಂಚಾಯತಿನಲ್ಲಿ ಮುಖ್ಯವಾಗಿ ಹರಿಯುವ ತೋಡುಗಳು

ಕ್ರ.ಸಂ.	ಹೊಳೆ	ಹರಿಯುವ ದೂರ	ಬೇಕಾದ	ಆಣೆಕಟ್ಟುಗಳು
ಅ.	ಮಂಜೇಶ್ವರ ಹೊಳೆ	9 K.M.		16
ಆ.	ಆನೆಕ್ಲು ಹೊಳೆ (ಉಪ್ಪಳ ಹೊಳೆ)	9 K.M.		4

3. ಚಿಕ್ಕ ತೋಡುಗಳು

ವಾರ್ಡು	ತೋಡುಗಳ ಸಂಖ್ಯೆ	ಹರಿಯುವ ದೂರ	ಬೇಕಾದ ಚಿಕ್ಕ ಆಣೆಕಟ್ಟು
I	4	4 KM	4
II	5	6 KM	6
III	6	4 KM	3
IV	3	4 KM	5
V	5	5 KM	5
VI	4	4 KM	6
VII	6	5 KM	7
VIII	6	6KM	10
IX	5	4 KM	4
X	8	6 KM	6

4: ತೋಡುಗಳಲ್ಲಿ ನೀರು ಇರುವ ಕಾಲಾವಧಿ : ಸಾಮಾನ್ಯ ದಶಂಬರ, ಜನವರಿ ತನಕ.

5. ಹೆಚ್ಚಿನ ಆಣೆಕಟ್ಟುಗಳು ಸರಿಯಾಗಿ ಇಲ್ಲ, ಅವುಗಳ ದುರಸ್ತಿ ಆಗಬೇಕು. ಅವುಗಳಲ್ಲಿ ಈಗ ನೀರು ನಿಲ್ಲುವುದಿಲ್ಲ.

6. ಆರುವ ದೊಡ್ಡ ಕೆರೆಗಳು ಇರುವುದು

1) ಅರಿಂಗುಳ 2) ತಚ್ಚಿರೆ 3) ನಲ್ಲೆಂಗಿ 4) ಉರ್ಣೆ 5) ನಾವಡದ ಬೈಲು 6) ನಡಿಮಾರು 7) ಮಡ್ವ 8) ಕೊಳ್ಳ 9) ದಿಪ್ಪ, ಇವುಗಳ ಹೂಳೆತ್ತಿ ರಿಪೇರಿ ಮಾಡಬೇಕಾಗಿದೆ.

ಇದರಲ್ಲಿ ಉರ್ಣೆ ಎಂಬಲ್ಲಿಯ ಕೆರೆಯಲ್ಲಿ ನೀರು ಒತ್ತುವುದರಿಂದ ಕೆರೆಯ ಮಧ್ಯದಲ್ಲಿ ಒಂದು ತೂತು ಬಾವಿ ಕೊರೆದು ನೀರಾಶ್ರಯ ಸಿಗುವಂತೆ ಮಾಡಬೇಕು. ಮಡ್ವದ ಕೆರೆಗೂ ತೂತು ಬಾವಿ ಅಗತ್ಯ.

7. ಕೃಷಿ ಭೂಮಿಯ ಮಣ್ಣು ಪರೀಕ್ಷಿಸಿದೆಯೇ? ಇಲ್ಲ. ಪಂಚಾಯತಿನ ಕೃಷಿ ಭೂಮಿಯ ಮಣ್ಣು ಪರೀಕ್ಷೆ ಮಾಡಬೇಕು.

8. ಸ್ಥಳದ ಸರ್ವೆ ಸರಕಾರ ಮಾಡಬೇಕು. ಯಾವ ರೀತಿಯ ಕೃಷಿ ಹೆಚ್ಚಾಗುತ್ತಿದೆ.

ಅ) ಅಡಿಕೆ, ಆ)ತೆಂಗು

9. ಯಾವ ತರದ ಕೃಷಿ ಕಡಿಮೆಯಾಗುತ್ತಿದೆ

ಅ) ಭತ್ತ -ತರಕಾರಿ

10. ಕೃಷಿಗೆ ಬಾಧಿಸುವ ರೋಗಗಳು ಯಾವುವು?

ಕೊಳೆರೋಗ, ಹಳದಿರೋಗ, ಎಲೆಚುಕ್ಕೆ ರೋಗ, ಇತ್ಯಾದಿ

ಪಶು ಸಂಗೋಪನೆ

ನಮ್ಮ ಗ್ರಾಮ ಪಂಚಾಯತು ಕೃಷಿ ಪ್ರಧಾನ ಪಂಚಾಯತಾಗಿದೆ. ಇಲ್ಲಿ ಪಶು ಸಂಗೋಪನೆಗೆ ಹೆಚ್ಚು ಮಹತ್ವ ಕೊಡುತ್ತಿದ್ದರು. ಹಿಂದಿನ ಕಾಲದಲ್ಲಿ ಒಬ್ಬ ಶ್ರೀಮಂತ ರೈತನನ್ನು ಗೊತ್ತುಪಡಿಸಲು ಆತನು ಸಾಕುತ್ತಿದ್ದ ಜಾನುವಾರುಗಳ ಸಂಖ್ಯೆಯಿಂದ ಸಾಧ್ಯವಿತ್ತು. ದೊಡ್ಡ ರೈತರು ಹಲವಾರು ಎತ್ತು, ಕೋಣಗಳನ್ನು, ಎಮ್ಮೆ, ದನಗಳನ್ನು ಸಾಕುತ್ತಿದ್ದರು. ಎತ್ತು ಕೋಣಗಳನ್ನು ಗದ್ದೆ ಊಳಲು, ಗಾಡಿ ಎಳೆಯಲು, ಗಾಣ ದೂಡಲು ಸಾಕುತ್ತಿದ್ದರು. ದನ, ಎಮ್ಮೆಗಳನ್ನು ಹಾಲು ಉತ್ಪಾದನೆಗೆ, ಮತ್ತು ಜೈವಿಕ ಗೊಬ್ಬರಕ್ಕಾಗಿ ಸಾಕುತ್ತಿದ್ದರು. ಭತ್ತದ ಕೃಷಿ, ತೋಟದ ಕೃಷಿ, ಬಾಳೆ ಕೃಷಿ ಹಾಗೂ ತರಕಾರಿ ಕೃಷಿಗೆ ಜೈವಿಕ ಗೊಬ್ಬರ ಅಗತ್ಯವಾಗಿದೆ.

ಹಿಂದಿನ ಕಾಲದಲ್ಲಿ ಜಾನುವಾರುಗಳನ್ನು ತಮ್ಮಿಷ್ಟ ಬಂದಂತೆ ಮೇಯಲು ಬಿಡಲಾಗುತ್ತಿತ್ತು. ಇಂದಿನಂತೆ ಬೇಲಿಗಳೋ, ಗೋಡೆಗಳೋ, ತೆಂಗಿನ ಕೃಷಿಗಳೋ ಅಂದು ಇರಲಿಲ್ಲ. ಆದುದರಿಂದ ಒಂದೇ ಮೇಳೆಯಲ್ಲಿ ಬಯಲು ಹಾಗೂ ಮೈದಾನ ಪ್ರದೇಶದಲ್ಲಿ ನೂರಾರು ಜಾನುವಾರುಗಳನ್ನು ಮೇಯಲು ಬಿಡುತ್ತಿದ್ದರು. ಆಗ ಜಾನುವಾರುಗಳನ್ನು ಸಾಕುವುದು ಕಷ್ಟವಾಗುತ್ತಿರಲಿಲ್ಲ. ಆದರೆ ಇಂದು ಅಂತಹ ಮೇವಿನ ಸ್ಥಳಗಳಿಲ್ಲ. ಕಟ್ಟಿ ಹಾಕಿ ಸಾಗಬೇಕಾಗಿದೆ. ಜಾನುವಾರು ಸಾಕುವುದು ದುಬಾರಿಯಾಗಿದೆ. ಹುಲ್ಲು, ಹಿಂಡಿಯ ಕ್ರಯ ದಿನದಿಂದ ದಿನಕ್ಕೆ ಏರುತ್ತಿದೆ.

ಈಗ ನಮ್ಮ ಹಳ್ಳಿಯಲ್ಲಿ ಸಾಕುತ್ತಿರುವ ಜಾನುವಾರುಗಳು ಉತ್ತಮ ತಳಿಗಳಲ್ಲ. ಇವು ಹೆಚ್ಚು ಹಾಲು ಈಯುವುದಿಲ್ಲ. ಈಗ ಉತ್ತಮ ತಳಿಗಳನ್ನು ಸಾಕಿ ಹೆಚ್ಚು ಹೆಚ್ಚು ಹಾಲು ಪಡೆಯಬೇಕಾಗಿದೆ. ಇದಕ್ಕಾಗಿ ಸರಕಾರದಿಂದ ಹಲವು ರೀತಿಯ ಪ್ರೋತ್ಸಾಹ ದೊರೆಯುತ್ತಿದೆ. ಅವುಗಳಲ್ಲಿ ಮುಖ್ಯವಾದವುಗಳು -

1. ಪಶು ವೈದ್ಯರಿಂದ ಉತ್ತಮ ತಳಿಗಳನ್ನು ಆರಿಸಲು ಸಹಾಯ.
2. ಪಶುಗಳನ್ನು ಖರೀದಿಸಲು ಸರಕಾರದಿಂದ ಸಾಲ ಸಹಾಯ
3. ಜಾನುವಾರುಗಳನ್ನು ಕಟ್ಟಲು ಉತ್ತಮ ಹಟ್ಟಿ ನಿರ್ಮಿಸಲು ಸಹಾಯ
4. ರೋಗ ಬಂದಾಗ ಉಚಿತವಾಗಿ ಪಶು ವೈದ್ಯರಿಂದ ಔಷಧೋಪಚಾರಗಳು
5. ಜಾನುವಾರುಗಳಿಗೆ ಸಹಾಯಧನದಿಂದ ಪಶು ಆಹಾರ ದೊರಕುವುದು. ಹೀಗೆ ಹಲವು ತರದ ಸಹಾಯ ಸವಲತ್ತು ದೊರೆಯುವುದು.

ಮಾಂಸದ ಕೋಳಿ ಸಾಕಣೆಯು ನಮ್ಮ ಪಂಚಾಯತಿನಲ್ಲಿ ಕೆಲವು ಕಡೆಗಳಲ್ಲಿ ಪ್ರಾರಂಭವಾಗಿದೆ. ಅವು ಇನ್ನು ಹೆಚ್ಚು ಹೆಚ್ಚು ಕಡೆಗಳಲ್ಲಿ ಪ್ರಾರಂಭಿಸುವಂತಾಗಬೇಕು. ಮೊಟ್ಟೆಯ ಕೋಳಿ ಸಾಕಣೆಯು ಕೆಲವು ಕಡೆಗಳಲ್ಲಿವೆ. ಆದರೆ ಈ ಗ್ರಾಮ ಪಂಚಾಯತಿಗೆ ಬೇಕಾದಷ್ಟು ಮೊಟ್ಟೆಗಳು ಸಿಗುತ್ತಿಲ್ಲ. ನಿರುದ್ಯೋಗಿ ಯುವಕರು ಮೊಟ್ಟೆ ಮತ್ತು ಮಾಂಸದ ಕೋಳಿಗಳನ್ನು ಸಾಕಿ ಹೆಚ್ಚು ಲಾಭ ಪಡೆಯಬಹುದು.

ಪ್ರಧಾನ ಸಮಸ್ಯೆಗಳು

1. ಪಶು ಆಹಾರದ ಬೆಲೆ ಹೆಚ್ಚುತ್ತಾ ಹೋಗಿದೆ.
2. ಭತ್ತದ ಕೃಷಿಯು ಗಣನೀಯವಾಗಿ ಕಡಿಮೆಯಾದ ಕಾರಣ ಸಾಕಷ್ಟು ಬೈಹುಲ್ಲು ದೊರೆಯುವುದಿಲ್ಲ.
3. ಮೃಗ ಸಂರಕ್ಷಣೆಗೆ ಅಗತ್ಯವಾದ ಸರಕಾರಿ ವ್ಯವಸ್ಥೆಗಳು ಸಾಲದು.
4. ಕೋಳಿ ಆಹಾರದ ಬೆಲೆ ಹೆಚ್ಚಿದ ಕಾರಣ ಮೊಟ್ಟೆ ಮತ್ತು ಮಾಂಸಕ್ಕಾಗಿರುವ ಕೋಳಿಗಳನ್ನು ಸಾಕಲು ಸಾಧ್ಯವಾಗುತ್ತಿಲ್ಲ.
5. ಹುಚ್ಚು ನಾಯಿಗಳ ಕಾಟ ಈ ಪಂಚಾಯತಿನಲ್ಲಿ ಆಗಾಗ ಕಾಣಿಸುಕೊಳ್ಳುತ್ತದೆ.
6. ಸಮಸ್ಯೆಗಳು : ಈ ಪಂಚಾಯತಿನಲ್ಲಿ ಹಾಲು ಹೆಚ್ಚು ಉತ್ಪಾದನೆಯುಳ್ಳ ಸುಧಾರಿತ ಜಾತಿಯ ದನಗಳು ತೀರಾ ಕಡಿಮೆ.
7. ವರ್ಕಾಡಿ ಪಂಚಾಯತಿನಲ್ಲಿ ಒಂದು ಮೃಗ ಆಸ್ಪತ್ರೆಯಿದೆ. ಅದರಲ್ಲಿ ಗೋವು ಡಾಕ್ಟರ್ ಮತ್ತು ಒಂದು ಕಂಪೌಂಡರ್ ಮಾತ್ರ ಇದ್ದಾರೆ.
8. ಇಲ್ಲಿ ಬೇಕಾದ ಮದ್ದುಗಳಿಲ್ಲ. ಉಪಕರಣಗಳಿಲ್ಲ. ವಾಹನಗಳಿಲ್ಲ. ಹುಲ್ಲುಗಾವಲುಗಳಿಲ್ಲ, ಹುಲ್ಲು ಬೆಳೆಸುವುದು ಇಲ್ಲ.
9. ಹಾಲು ಶೇಖರಿಸಿ ಮಾರಾಟ ಮಾಡಲು ಸೌಕರ್ಯಗಳಿಲ್ಲ
10. ದನಕರುಗಳನ್ನು ಸಾಕಲು, ಸಾಂಪತ್ತಿಕ ಸ್ಥಿತಿಯು ಜನರಿಗಿಲ್ಲ.
11. ಜೇನು ಸಾಕಣೆ, ಮೊಲ ಸಾಕಣೆ, ಕೋಳಿ ಸಾಕಣೆ, ಮೊದಲಾದವುಗಳನ್ನು ಮಾಡಲು ಬೇಕಾದ ಪರಿಜ್ಞಾನವಿಲ್ಲ.
12. ಕೋಳಿ ವಸಂತ, ಅಗೆಡು ಬಾತು ಹೋಗುವುದು ಮೊದಲಾದ ರೋಗಗಳು ರೈತರನ್ನು ಈ ಉದ್ಯೋಗದಿಂದ ನಿರುತ್ಸಾಹಧ್ಯನ್ನಾಗಿ ಮಾಡುತ್ತದೆ.

ಮೃಗ ಸಂರಕ್ಷಣೆಯ ವಿಷಯದಲ್ಲೂ ಮೊತ್ತವಾಗಿ ಈ ಪಂಚಾಯತಿನಲ್ಲಿರುವ ಜನರ ಪರಿಜ್ಞಾನದ ಕೊರತೆಯಿಂದ, ಈ ಕೆಳಗೆ ನಮೂದಿಸಿದ ರೀತಿಯ ಸೌಕರ್ಯಗಳನ್ನು ಮಾಡಲು ನಿರ್ದೇಶ ಬಂದಿದೆ.

1. ಒಂದು ವಾರ್ಡಿನಲ್ಲಿ 50ರ ವರೆಗೆ ಸುಧಾರಿತ ದನಗಳನ್ನು ವಿತರಣೆ ಮಾಡಬೇಕು. ಇದಕ್ಕೆ ಬೇಕಾದ ಲೋನು ಸೌಕರ್ಯಗಳನ್ನು ಆದ್ಯ ಕಾಲದಲ್ಲಿ ಒದಗಿಸಬೇಕು. ಈ ರೀತಿಯಲ್ಲಿ 10 ವಾರ್ಡುಗಳಲ್ಲಿಯೂ 10 ಯೂನಿಟ್‌ಗಳು ರೂಪುಗೊಳ್ಳಬೇಕು. ಈ ಯೂನಿಟ್‌ಗಳನ್ನು ಒಟ್ಟು ಸೇರಿಸಿ ಒಂದು ಸೊಸೈಟಿ ಮಾಡಬೇಕು. ಈ ಸೊಸೈಟಿಯ ಮುಖಾಂತರ ಹಾಲಿನ ಶೇಖರಣೆಯು, ವಿತರಣೆಯು ನಡೆಸಬೇಕು. ದನಕರುಗಳ ಆಹಾರವನ್ನು ಈ ಸೊಸೈಟಿಯ ಮುಖಾಂತರ ನಡೆಸಬೇಕು.
2. ಆಡು ಸಾಕುವ ಕೇಂದ್ರವನ್ನು ಸ್ಥಾಪಿಸಬೇಕು. ಕೃಷಿ ವಿಜ್ಞಾನ ಕೇಂದ್ರಕ್ಕೆ ಕೊಟ್ಟಿರುವ ಸ್ಥಳದಲ್ಲಿ 500 ಆಡುಗಳ ಒಂದು ಕೇಂದ್ರವನ್ನು ಸ್ಥಾಪಿಸಬೇಕು. ಇದಕ್ಕಾಗಿ 100ಕುಟುಂಬಗಳ ಒಂದು ಯೂನಿಟ್ ಸ್ಥಾಪಿಸಬೇಕು.
3. ಪ್ರತೀ ವಾರ್ಡುಗಳಲ್ಲಿಯೂ 100ಕುಟುಂಬಗಳನ್ನು ಸೇರಿಸಿ ಮಾಂಸದ ಕೋಳಿಗಳನ್ನು ಸಾಕುವ ಕೇಂದ್ರ ಮತ್ತು ಮೊಟ್ಟೆಗಳ ಮಾರಾಟ ಕೇಂದ್ರವನ್ನು ಸ್ಥಾಪಿಸಬೇಕು. ಇದಕ್ಕೆ ಬೇಕಾಗಿ ಲೋನು

ಸೌಕರ್ಯಗಳನ್ನು ಒದಗಿಸಬೇಕು. ಇದಕ್ಕೆ ಪಂಚಾಯತು ತಲದಲ್ಲಿ ಒಂದು ಸೊಸೈಟಿ ಮಾಡಬೇಕು. ಈ ಸೊಸೈಟಿಯ ಮೂಲಕ ಕೋಳಿ, ಮಾಂಸ ಮಾರಾಟ ಮತ್ತು ತಿನಸುಗಳ ಲಭ್ಯತೆಯಾಗಬೇಕು.

4. ಪ್ರತೀ ವಾರ್ಡಗಳಲ್ಲಿ 100 ಕುಟುಂಬಗಳನ್ನು ಸೇರಿಸಿ ಒಂದು ಕೋಳಿ ಸಾಕಣಾ ಕೇಂದ್ರಗಳನ್ನು ಮೊಟ್ಟೆಗಾಗಿ ಆರಂಭಿಸಬೇಕು. ಇದಕ್ಕೆ ಬೇಕಾದ ಲೋನು ಸೌಲಭ್ಯಗಳನ್ನು ಒದಗಿಸಬೇಕು. ಇದಕ್ಕಾಗಿ ಪಂಚಾಯತು ಕೇಂದ್ರೀಕೃತವಾಗಿ ಒಂದು ಸೊಸೈಟಿ ಸ್ಥಾಪಿಸಬೇಕು. ಈ ಸೊಸೈಟಿಯಲ್ಲಿ ಮೊಟ್ಟೆ ಮಾರಾಟ, ಮತ್ತು ಕೋಳಿ ತಿನಸುಗಳನ್ನು ಒದಗಿಸಬೇಕು.

5. ಈ ಪಂಚಾಯತಿನಲ್ಲಿ ಹುಲ್ಲಿನ ಕೃಷಿ ಇನ್ನೂ ತೊಡಗಲಿಲ್ಲ ರೈತರ ಅವಶ್ಯಕತೆಗಳಿಗನುಸರಿಸಿ ಹುಲ್ಲಿನ ಕೃಷಿ ಮಾಡಲು ಪ್ರೋತ್ಸಾಹ ಕೊಡಬೇಕು.

ವಾರ್ಡಿಗೆ ಒಂದರಂತೆ ಮೃಗಾಸ್ಪತ್ರೆ ಆರಂಭಿಸಬೇಕು. ವಾರ್ಡಿನ ಕಲವು ಕೇಂದ್ರಗಳಲ್ಲಿಯಾದರೂ ಪಶುವೈದ್ಯರು ಜಾನುವಾರುಗಳನ್ನು ತಿಂಗಳಿಗೊಮ್ಮೆ ಪರೀಕ್ಷಿಸುವ ಕಾರ್ಯಕ್ರಮ ಹಮ್ಮಿಕೊಳ್ಳಬೇಕು.

ಮಿಲ್ಕ್ ಸಹಕರಣ ಕೇಂದ್ರವನ್ನು ಪಂಚಾಯತಿನಲ್ಲಿ ಸ್ಥಾಪಿಸಬೇಕು.

ದನಕರುಗಳ ರೋಗ ವಿವರ

ಕ್ರಸ ರೋಗ	ದನ	ಎಮ್ಮೆ	ಆಡು	ಹಂದಿ	ನಾಯಿ	ಕೋಳಿ	ಬಾತುಕೋಳಿ	ಮೊಲ	ಆನೆ	ಇತರ
1. ಜೀರ್ಣಸಮಸ್ಯೆ	176	28	12	4	18	321	-	2	-	-
2. ಶ್ವಾಸಕೋಶ	47	29	11	4	8	-	-	-	-	-
3. ಅಮವ	68	3	-	-	-	-	-	-	-	-
4. ಚರ್ಮರೋಗ	64	-	-	-	21	-	-	-	-	-
5. ಧಾತು ಕಲ್ಪಣಗಳ ಅಭಾವ	112	21	-	-	-	-	-	-	-	
6. ಪಾರಾದ ರೋಗಗಳು	282	23	11	-	-	-	-	-	..	
7. ಪ್ರಜನನ ಸಂಬಂಧಿಗಳು	76	8	2	2	-	-	-	-	..	
8. ವಂಧ್ಯತ್ವ	24	12	-	-	-	-	-	-	-	-
9. ಅಜೀರ್ಣ ಹೊಟ್ಟೆಉಬ್ಬರ	46	12	1	-	-	-	-	-	-	
10. ಮುಟಿಗ ಜ್ವರ	224	-	-	-	-	-	-	-	-	-
11. ಸಾಂಕ್ರಾಮಿಕ ಜ್ವರ	-									
12. ವಿಷರೋಗ	-									
13. ಇತರರೋಗಗಳು	-									
14. ಶಸ್ತ್ರಕ್ರಿಯೆ	-									

ಮಾಹಿತಿ ಸಂಗ್ರಹ : ಗೋ ಆಸ್ಪತ್ರೆ ವರ್ಕಾಡಿ

ಮೀನುಗಾರಿಕೆ

ವರ್ಕಾಡಿ ಪಂಚಾಯತಿಗೆ ಕಡಲು ತೀರವಿಲ್ಲ. ಇಲ್ಲಿ ಬಯಲಿನ ಕೆರೆಯಲ್ಲಿ ಮತ್ತು ಹಿತ್ತಿಲ ಕೆರೆಯಲ್ಲಿ ಮೀನುಸಾಕಲು ರೈತರು ತಯಾರಿದ್ದಾರೆ. ಇದು ವರ್ಕಾಡಿ ಕೃಷಿ ವಿಜ್ಞಾನ ಕೇಂದ್ರದ ವತಿಯಿಂದ ಒಂದು 7-8 ವರ್ಷಗಳಿಂದ ಪ್ರಾರಂಭವಾಗಿರುತ್ತದೆ. ಅಷ್ಟರವರೆಗೆ ಇದನ್ನು ಯಾರು ಮಾಡುತ್ತಿರಲಿಲ್ಲ. ಈ ಪಂಚಾಯತಿನಲ್ಲಿ ಸುಮಾರು 100 ಮೀನುಗಳನ್ನು ಸಾಕಲು ಯೋಗ್ಯವಾದ ಕೆರೆಗಳನ್ನು ಕಂಡು ಹಿಡಿದು ಕೃಷಿ ವಿಜ್ಞಾನ ಕೇಂದ್ರದಿಂದ ಮೀನಿನ ಮರಿಗಳನ್ನು ಕೊಟ್ಟುಸಾಕಲು ಪ್ರೋತ್ಸಾಹಿಸುತ್ತಾರೆ. ಮಳೆಗಾಲದಲ್ಲಿ ನೀರು ಹರಿದು ಹೋಗುವುದರಿಂದ ಅದರಲ್ಲಿರುವ ಮೀನು ಹೋಗದಂತೆ ಏರ್ಪಾಡು ಮಾಡಬೇಕು. ಮೀನಿಗೆ ಬೇಕಾದ ಆಹಾರ, ಕೆರೆ ದುರಸ್ತಿಗೆ ಬೇಕಾದ ಸಹಾಯವನ್ನು ರೈತರಿಗೆ ಕೊಟ್ಟು ಮೀನಿನ ಮರಿಗಳನ್ನು ಪ್ರಾರಂಭದಲ್ಲಿಯೇ ಸೌಜನ್ಯವಾಗಿ ಕೊಟ್ಟರೆ ಮೀನು ಸಾಕಣೆಯನ್ನು ಹೇಗಾದರೂ ತೊಡಗಲು ಸಾಧ್ಯವಾಗುತ್ತದೆ. ಇಲ್ಲಿ ಮೀನುಗಾರಿಕೆಯಿಂದ ಜೀವನ ಮಾಡುವಂತಹ ಕುಟುಂಬದವರು ಇಲ್ಲ. ಮಂಜೇಶ್ವರ ಕಡೆಯಿಂದ, ಮಂಗಳೂರು ಕಡೆಯಿಂದ ತಂದು ಮಾರುವವರಿದ್ದಾರೆ. ಇದಕ್ಕೆ ಬೇಕಾದ ಮಾರುಕಟ್ಟೆಗಳು ಇಲ್ಲಿ ಇಲ್ಲ. ಮೀನು ತರಲು ಪ್ರತಿಯೊಂದು ವಾರ್ಡುಗಳಲ್ಲಿ ಮಾರುಕಟ್ಟೆಗಳು ಸ್ಥಾಪಿತವಾಗಬೇಕು. ಮೊರತನೆಯ ಸಮೀಪದ ಅರಿಂಗುಳದಲ್ಲಿ ಒಂದು ದೊಡ್ಡ ಕರೆಯಿದೆ. ಇದು ಸುಮಾರು ನಾಲ್ಕು ಎಕ್ರೆ ವಿಸ್ತೀರ್ಣವುಳ್ಳದ್ದು. ಇದರಲ್ಲಿ ಮೀನುಸಾಕಣೆ ಮಾಡಿದರೆ ಇಲ್ಲಿಯ ಜನರ ಮೀನಿನ ಅಭಾವವನ್ನು ಪರಿಹರಿಸಬಹುದು. ಈ ಬಗ್ಗೆ ವ್ಯವಸ್ಥೆ ಮಾಡಬೇಕು. ಅದೇ ರೀತಿಯಲ್ಲಿ ಧರ್ಮನಗರದ ನೀರೊಳಿಕೆ ಎಂಬಲ್ಲಿ ಒಂದು ಚೆಕ್ ಡಾಮ್ ಮಾಡಿ ರಿಸರ್ ವೇಯರಿನಲ್ಲಿ ಮೀನು ಸಾಕಲು ಏರ್ಪಾಡು ಮಾಡಬೇಕು. ಇದಕ್ಕೆ ಕೃಷಿ ವಿಜ್ಞಾನ ಕೇಂದ್ರದ ಸಾಂಕೇತಿಕ ವಿದಗ್ಧರನ್ನು ಉಪಯೋಗಿಸಿಕೊಳ್ಳಬೇಕು.

ಯುವಕರಿಗೆ ಮತ್ತು ಯುವತಿಯರಿಗೆ ಮೀನು ಸಾಕಣೆಯಲ್ಲಿ ತರಬೇತಿಯನ್ನು ಕೊಟ್ಟು ಅವರನ್ನು ಈ ಉದ್ಯಮಕ್ಕೆ ತೊಡಗಿಸಬೇಕು.

ಸುಬ್ರಹ್ಮಣ್ಯ ದೇವಸ್ಥಾನದ ಬಳಿಯಿರುವ ದೊಡ್ಡ ಕೆರೆಯಲ್ಲಿ ಮೀನು ಸಾಕಣಾ ವ್ಯವಸ್ಥೆ ಕೈಗೊಳ್ಳಬಹುದು.

ಮಾರ್ಗಗಳು

ಆರಂಭ ಘಟ್ಟದಲ್ಲಿ ನಮ್ಮ ಪಂಚಾಯತ್ತಿನಲ್ಲಿ ಮಾರ್ಗಗಳು ತೀರಾ ಕಡಿಮೆಯಾಗಿತ್ತು. ಇದ್ದ ಮಾರ್ಗಗಳು ಸರಿಯಾದ ಸಾರಿಗೆ ವ್ಯವಸ್ಥೆಗೆ ಅನುಕೂಲವಾಗಿರಲಿಲ್ಲ. ಕೆಲವುಮಾರ್ಗಗಳು ಊರಿನಜನರುಸಹಕಾರದಿಂದಲೂ,

ನಂತರ ಪಂಚಾಯತ್ತಿನಿಂದಲೂ, ಆಮೇಲೆ ಪಬ್ಲಿಕ್ ಡಿಪಾರ್ಟುಮೆಂಟಿನಿಂದಲೂ ಮಾರ್ಗಗಳನ್ನು ಮಾಡುತ್ತಿದ್ದರು.

ಮನುಷ್ಯನ ಜೀವನ ಅಗತ್ಯಗಳಿಗೆ ಸಾರಿಗೆ ವ್ಯವಸ್ಥೆಯು ಅತೀ ಅಗತ್ಯವಾಗಿದೆ. ನಮ್ಮ ಪಂಚಾಯತಿನಲ್ಲಿ ಕೆಲವು ಡಾಮರು ಮಾರ್ಗಗಳು, ಧೂಳು ಮಾರ್ಗಗಳು, ವಾಹನ ಸಂಚಾರವಿರುವ ಮಾರ್ಗಗಳು, ಸಂಚಾರ ರಹಿತ ಮಾರ್ಗಗಳು, ಕಾಲುದಾರಿಗಳು, ಇವೆ. ಆದರೂ ಇನ್ನೂ ಹಲವಾರು ಮಾರ್ಗಗಳ ಅವಶ್ಯಕತೆ ಇದೆ. ಕೆಲವು ಸಂಕಗಳ ಅಗತ್ಯವಿದೆ. ಕೆಲವು ಮಾರ್ಗಗಳ ಬದಿಯಲ್ಲಿ ಚರಂಡಿಗಳಲ್ಲದೆ, ಮಾರ್ಗಗಳು ಹಾಳಾಗುತ್ತದೆ. ಕೆಲವು ಹೊಳೆ ಬದಿಯ ಮಾರ್ಗಗಳು ಹೊಳೆಯಿಂದ ನೀರು ಮಗುಚಿ ಮಾರ್ಗದಲ್ಲಿ ತುಂಬಿ ಕೃಷಿ ಭೂಮಿಯನ್ನು ಹಾಳು ಮಾಡುತ್ತದೆ. ಇದರಲ್ಲಿ ಕೆಲವು ಮಾರ್ಗಗಳ ಪೈಕಿ ವಾಹನ ಸಂಚಾರಕ್ಕೆ ಅಗತ್ಯವಾದಂತಹದ್ದಿದೆ. ಗಡಿ ಪ್ರದೇಶವಾದ್ದರಿಂದ ಕಲ್ಲೂರು ಸಂಕವಾದರೆ ಕರ್ನಾಟಕ ಕೇರಳಕ್ಕೆ ಹತ್ತಿರವಾದ ಮಾರ್ಗವಾಗುವುದು. ಈ ಪ್ರದೇಶದಲ್ಲಿ ಬೆಸ್ಸುಗಳು, ಲಾರಿಗಳು, ರಿಕ್ಷಗಳು, ಟೆಂಪೊಗಳು, ಕಾರುಗಳು, ಜೀಪುಗಳು, ಸರಕಾರಿ ಬಸ್ಸು, ಸೈಕಲು, ಬೈಕ್, ಓಡಾಡುವುದು ಇದರಲ್ಲಿ ಬಸ್ಸು ಸಂಚಾರ ಕೆಲವೇ ಮಾರ್ಗಗಳು ಈ ಪಂಚಾಯತಿನ ಎಲ್ಲಾ ಕಡೆಗಳಿಗೂ ತಲಪುವಂತಹ, ಬಸ್ಸು ಸೌಕರ್ಯ ಇನ್ನು ಆಗಬೇಕಾಗಿದೆ. ಕೆಲವು ಮಾರ್ಗಗಳಿಗೂ ಕಾಲು ದಾರಿಗಳಿಗೂ ಜಾಗಗಳು ಅಗತ್ಯವಾಗಿದೆ. ಇದು ಊರಿನವರ ಸಹಕಾರಿದಂದ ಆಗಬೇಕಾಗಿದೆ. ಕೆಲವು ಮಾರ್ಗಗಳು ಓರೆ ಕೋರೆಯಾಗಿ ರಚಿತವಾಗಿರುವಂತಹ ಮಾರ್ಗವಾಗಿರುವುದರಿಂದ ಅಪಘಾತವಾಗುವ ಸಂಭವ ಹೆಚ್ಚು. ಇದನ್ನು ಸರಿಪಡಿಸಲು ಪ್ರಯತ್ನಿಸಬೇಕು. ಈಗ ಇರುವ ಮಾರ್ಗಗಳಿಗೆ ಸಂಕಗಳು ಅಗತ್ಯವಿದೆ. ಜನರ ಪ್ರಯಾಣಕ್ಕೆ ಅನುಕೂಲವಾಗುವಂತಹ ಮಣ್ಣಿನ ಮಾರ್ಗಗಳನ್ನು ಡಾಮರು ಮಾರ್ಗಗಳನ್ನಾಗಿ ಪರಿವರ್ತಿಸುವಂತಾಗಬೇಕು. ಮಾರ್ಗಗಳ ಕೊರತೆಯಿಂದಾಗಿ ಸರಕು, ಸಾಗಣಿಕೆಗೆ ಅನಾನುಕೂಲತೆಯಿರುವುದು ಮಾತ್ರವಲ್ಲದೆ ರೋಗ ರುಜಿನದವರನ್ನು ಕೊಂಡು ಹೋಗಲು, ಸಹಾಯಕವಾಗಲು ಅತೀ ಅಗತ್ಯ.

ಈಗ ಇರುವ ಮಾರ್ಗಗಳ ದುರಸ್ತಿಯನ್ನು ಮಾಡಬೇಕಾಗಿದೆ. ತಂಗುದಾಣದ ಅವಶ್ಯಕತೆ ಇದೆ. ಕಾಲು ದಾರಿಗಳಿಗೆ ಕೆಲವು ಕಡೆ ಸೇತುವೆಯ ಅವಶ್ಯಕತೆಯಿದೆ. ಈ ಪ್ರದೇಶದ ಜನರ ಸಹಕಾರದಿಂದ ಮಾಡುವುದು ಅಗತ್ಯ. ಮಾರ್ಗದ ಅಡಿಯಿಂದ ನೀರು ಹರಿದು ಹೋಗುವಂತೆ ಸುರಂಗ ಮಾಡಿ ನೀರು ಮಾರ್ಗದಲ್ಲಿ ನಿಲ್ಲದಂತೆ ಮಾಡಬೇಕು. ಜಲಸಾರಿಗೆ ಸಂಪರ್ಕಕ್ಕೆ ಅನುಕೂಲಕರವಾಗಲು ದೋಣಿಯ ವ್ಯವಸ್ಥೆಯು ಬೇಕಾಗುವುದು.

ಗ್ರಾಮಸಭೆಯಲ್ಲಿ ಬಂದಂತಹ ವಿಷಯಗಳನ್ನು ಅಲ್ಲಗಳೆಯುವಂತಿಲ್ಲ.

ವರ್ಕಾಡಿ ಪಂಚಾಯತಿನಲ್ಲಿರುವ ಪಿ.ಡಬ್ಲ್ಯೂ.ಡಿ. ರಸ್ತೆಗಳ ವಿವರಗಳನ್ನು ಈ ಕೆಳಗಿನ ಪಟ್ಟಿಯಲ್ಲಿ ತಿಳಿಸಲಾಗಿದೆ.

ಕ್ರ.ಸಂ	ಮಾರ್ಗಸೂಚಿ	NH	PWD	PANCHAYAT	DAMAR	METAL	MUD ROAD	K.M.
1.	ಮಜೇಶ್ವರ-ಉಪ್ಪಳ	-	-		-	-		9.835
2.	ಮಂಜೇಶ್ವರ-ತೌಡುಗೋಳಿ	-	-		-	-		2.560
3.	ಕೋಟೆಕ್ಕಾರ್-ಪಾವೂರು	-	-		-	-		4.800
4.	ಪಾತಮಂಗಲ-ಪಾವೂರು	-	-		-	-		2.175
5.	ಗೇರುಕಟ್ಟೆ-ವರ್ಕಾಡಿ	-		-	-	-		4.750
6.	ಸುಂಕದಕಟ್ಟೆ-ಸಂಪರ್ಕರಸ್ತೆ	-	-		-	-		6.465
7.	ಕುಜಾತ್ತೂರು-ಕುದುಮಾರ್-ಸಂಪರ್ಕರಸ್ತೆ	-						6.500
	ಒಟ್ಟು							37.085

ವರ್ಕಾಡಿ ಪಂಚಾಯತು ಮಾರ್ಗಗಳ ಒಟ್ಟು ಉದ್ದ - 105 KM

ದೈಗೋಳಿಯಿಂದ ಸುಳ್ಳಮೆವರೆಗಿನ ಮಾರ್ಗಕ್ಕೆ ಡಾಮರು ಹಾಕಿದೆ.

ಸುಂಕದಕಟ್ಟೆ (ಮಜಾಲ್‌ಪಳ್ಳ) -ತಾಮರ್ ಮಾರ್ಗಕ್ಕೆ ಮಜೀರ್ ಪಳ್ಳದಿಂದ 1/2 K.M. ವರೆಗೆ ಡಾಮರು ಹಾಕಲಾಗಿದೆ.

ಈ ಪಂಚಾಯತಿನಲ್ಲಿ ಸಮರ್ಪಣಾ ದಿನವನ್ನು ಆಚರಿಸಲಾಯಿತು. ಎಲ್ಲಾ ವಾರ್ಡಿನಲ್ಲಿಯೂ ಹೆಚ್ಚಿನ ಸಂಖ್ಯೆಯಲ್ಲಿ ಜನರು ಭಾಗವಹಿಸಿದರೆಂದು ತಿಳಿಸಲು ಸಂತೋಷ ಪಡುತ್ತೇವೆ. ಪ್ರತಿಯೊಂದು ವಾರ್ಡಿನಲ್ಲೂ ಅಗತ್ಯವಾದ ಮಾರ್ಗಗಳ ದುರಸ್ತಿ ಕಾರ್ಯವನ್ನು ಈ ದಿನದಂದು ನೆರವೇರಿಸಲಾಯಿತು.

ಈ ಕಾರ್ಯಕ್ರಮದಲ್ಲಿ ಪಂಚಾಯತು ಅಧ್ಯಕ್ಷರೂ, ಸದಸ್ಯರೂ, ಊರ ಮಹನೀಯರೂ, ಪಂಚಾಯತಿನ ಡಿ.ಆರ್.ಪಿ. ಶ್ರೀ ಕೆ. ಕಿಟ್ಟಣ್ಣ ಶೆಟ್ಟರು ಸಕ್ರೀಯವಾಗಿ ಭಾಗವಹಿಸಿದರು.

1. ಮಾರುಕಟ್ಟೆ : ಈ ಪ್ರದೇಶದ ಹೆಚ್ಚಿನ ಜನರು ಕೃಷಿಕರು, ಕೃಷಿ ಉತ್ಪನ್ನವಾದ ಬಾಳೆ, ತೆಂಗಿನಕಾಯಿ, ತರಕಾರಿಗಳು, ಹಣ್ಣು ಹಂಪಲು, ಉಪ್ಪಿನಕಾಯಿ, ಹಪ್ಪಳ, ಸೆಂಡಿಗೆ, ಕೆಲವು ತಿಂಡಿಗಳು, ತಂಪು ಪಾನೀಯಗಳು, ಗುಡಿ ಕೈಗಾರಿಕಾ ಉತ್ಪನ್ನಗಳು. ಇವುಗಳನ್ನು ಮಾರುಕಟ್ಟೆಗೆ ಸಾಗಿಸಿ ವ್ಯಾಪಾರ ನಡೆಸಲು ಅಗತ್ಯವಾದ ಮಾರುಕಟ್ಟೆಯು ಬೇಕಾಗಿದೆ. ಇದರಿಂದ ಹೆಚ್ಚಿನ ಜನರಿಗೆ ಕಡಿಮೆ ದರದಲ್ಲಿ ಒಳ್ಳೆಯ ವಸ್ತುಗಳು ಲಭಿಸುವಂತಾಗುತ್ತದೆ. ಅಲ್ಲದೆ ನಾವು ತಯಾರಿಸಿದಂತಹ ವಸ್ತುಗಳಿಗೆ ಉತ್ತಮವಾದ ಬೆಲೆಯೂ ಸಿಗುತ್ತದೆ. ಆರೋಗ್ಯ ರೀತಿಯಲ್ಲಿ ಇದು ಉತ್ತಮವಾಗಿದೆ. ಏಕೆಂದರೆ ಆಗ ತಾನೆ ಗಿಡದಿಂದ ಕೊಯ್ದು ತಂದತಹ

ತರಕಾರಿಗಳು ಹಸಿ ಹಸಿಯಾಗಿರುವುದರಿಂದ ಅದರಲ್ಲಿ ನೀರಿನ ಅಂಶವು ನಷ್ಟವಾಗಿರುವುದಿಲ್ಲ.

ಪಂಚಾಯತಿನಲ್ಲಿ ತರಕಾರಿ ಮಾರುಕಟ್ಟೆ, ಮೀನು ಮಾರುಕಟ್ಟೆ, ಗೇರು ಬೀಜ, ಅಡಿಕೆ, ಕರಿಮೆಣಸು, ಕೊಬ್ಬರಿ, ಕೋಳಿ ಮಾಂಸದ ಮಾರುಕಟ್ಟೆ, ಹಾಲಿನ ಡೈರಿ, ಇವುಗಳೆಲ್ಲ ಅತೀ ಅಗತ್ಯವಾಗಿದೆ. ಮಾರುಕಟ್ಟೆ ಇಲ್ಲದ್ದರಿಂದ ಕೊಂಡು ಕೊಳ್ಳುವವರಿಗೆ ಅನಾನುಕೂಲವಾಗಿದೆ. ನಮ್ಮ ಪಂಚಾಯತಿನ ಎಲ್ಲಾ ವಾರ್ಡುಗಳಲ್ಲಿ ಅಲ್ಲಲ್ಲಿ ವಾರದ ಸಂತೆಗಳನ್ನು ಮಾಡುವುದರಿಂದ ಕಡಿಮೆ ದರದಲ್ಲಿ ಜನರಿಗೆ ವಸ್ತುಗಳು ದೊರಕುವಂತಾಗುವುದು.

ಮಾರುಕಟ್ಟೆ ಇಲ್ಲದಿರುವುದರಿಂದಾಗಿ ಮದ್ಯವರ್ತಿಗಳು ಅತೀ ಹೆಚ್ಚು ಲಾಭ ಪಡೆವಂತಾಗುತ್ತದೆ. ಇದನ್ನು ಬೆಳೆಸಿದಂತಹ ಕೃಷಿಕನಿಗೆ ತುಂಬಾ ಅನ್ಯಾಯವಾಗುವುದು.

ನಮ್ಮ ಈ ಪಂಚಾಯತಿನ ವತಿಯಿಂದ ಸುಂಕದ ಕಟ್ಟೆಯಲ್ಲಿ ಅತೀ ಅಗತ್ಯವಾದ ಮಾರುಕಟ್ಟೆಯನ್ನು ಸ್ಥಾಪಿಸಬೇಕು.

ಮಾರುಕಟ್ಟೆಗೆ ಬೇಕಾದ ಸ್ಥಳಗಳು

1. ಸುಂಕದ ಕಟ್ಟೆ
2. ಸಸಿಗೋಳಿ
3. ಸುಳ್ಯಮೆ
4. ತಲಕಿ
5. ತಿಮ್ಮಂಗೂರು ಅಣೆ
6. ನಂದರ ಪದವು
7. ಕುಂಟ ಪದವು
8. ಬೋರ್ಕಳ
9. ಬೇಕರಿ ಜಂಕ್ಷನ್
10. ಪೊಯ್ಯತಬೈಲ್
11. ತೌಡುಗೋಳಿ
12. ಕೆದುಂಬಾಡಿ ಪದವು
13. ಗೇರುಕಟ್ಟೆ (ಪಾವೂರು ಶಾಲೆ ಬಳಿ)
14. ಕೆದಂಬಾಡಿ
15. ದೆಲಂತಬೆಟ್ಟು ಪೊಯ್ಯ (ದೇಳಂತಬೆಟ್ಟು)
16. ಗುವೆದ ಪಡ್ಪು
17. ಅಡೆಕಳ ಕಟ್ಟೆ
18. ಬಾಕ್ರ ಬೈಲ್
19. ಬಾಳೆಪುನಿ
20. ಸೊಡಂಕೂರು
21. ಮರತ್ತಣೆ
22. ಪಾವಳ

ಈ ಪಂಚಾಯತಿನಲ್ಲಿರುವ ವಾಹನಗಳ ಪಟ್ಟಿ ಈ ಕೆಳಗಿನಂತಿವೆ.

ಕ್ರ.ಸಂ.	ಪಂಚಾಯತಿನಲ್ಲಿರುವ ವಾಹನಗಳು	ಸಂಖ್ಯೆ
1.	ಆಟೋರಿಕ್ಷಾ	20
2.	ಕಾರು	9
3.	ಮಿನಿಲಾರಿ	4
4.	ಲಾರಿ	3
5.	ಮೋಟರ್ ಸೈಕಲ್	94
6.	ಸೈಕಲ್	50
7.	ಜೀಪು	22

ಪ್ರಯಾಣಿಕರ ಸೌಕರ್ಯಕ್ಕಾಗಿ ನಮ್ಮ ವರ್ಕಾಡಿ ಪಂಚಾಯತಿನಲ್ಲಿ ಆಗಬೇಕಾಗಿದ್ದ ಬಸ್ಸು ಸೌಕರ್ಯಗಳು

1. ಪೊಯ್ಯ ನಾವಡರ ಬೈಲು-ಬೇಕರಿ ರೋಡ್‌ನಲ್ಲಿ ವಾಹನ ಸೌಕರ್ಯ
2. ಕುಂಜತ್ತೂರಿನಿಂದ ಕೆದುಂಬಾಡಿ, ನಂದರಪದವು ವರೆಗೆ ಬಸ್ಸು ಸೌಕರ್ಯ
3. ತಲಪಾಡಿ, ಗೇರುಕಟ್ಟೆಯಿಂದ (M.L.A. ರೋಡು) ವರ್ಕಾಡಿಯವರೆಗೆ ಬಸ್ಸು ಸೌಕರ್ಯ ಬೇಕು.
4. ಸುಂಕದ ಕಟ್ಟೆಯಿಂದ ಕಲ್ಲೂರಿಗೆ, ಮತ್ತು ನಂದರಪದವಿಗೆ ಆಗಿ ಕರ್ನಾಟಕಕ್ಕೆ ಬಸ್ಸು ವ್ಯವಸ್ಥೆ.
5. ತೌಡುಗೋಳಿಯಿಂದ ಪಂಚಾಯತು ಮಾರ್ಗವಾಗಿ

ಸುಂಕದಕಟ್ಟೆಯವರೆಗೆ ಬಸ್ಸು ವ್ಯವಸ್ಥೆ.

6. ತೌಡುಗೋಳಿಯಿಂದ, ನಂದರ ಪಡ್ಪು ಆಗಿ ಕಾವಿ ಸುಬ್ರಹ್ಮಣ್ಯ ದೇವಸ್ಥಾನಕ್ಕೆ
7. ಬೇಕರಿಯಿಂದ ಕಾಪಿರಿಗೆ ಬಸ್ಸು ವ್ಯವಸ್ಥೆ
8. ಸುಂಕದಕಟ್ಟೆ, ಧರ್ಮನಗರ ತಾಮಾರ್ ನಂದರಪಡ್ಪು ಬಸ್ಸು ವ್ಯವಸ್ಥೆ.
9. ಬೇಕರಿ, ಚಾವಡಿ ಬೈಲ್, ತೌಡುಗೋಳಿಗೆ ಬಸ್ಸು
10. ಬೇಕರಿ, ಕಾಪಿಗಾಗಿ ಮುಡಿಮಾರಿಗೆ, ಕೆದುಂಬಾಡಿ, ತಲಪಾಡಿ
11. ಆನೆಕಲ್ಲು, ಕತ್ತರಿ ಕೋಡಿ, ಕುಂಟಪದವು, ಸಸಿಗೋಳಿ
12. ಆನೆಕಲ್ಲು, ಕುರುಡ ಪದವಿಗೆ.ಬಸ್ಸು (ಪೈವಳಿಕೆ ಪಂಚಾಯತು)
13. ಸುಂಕದ ಕಟ್ಟೆ, ರಾವಳಿಕೆ, ಅಡೆಕಳ ಕಟ್ಟೆಗೆ ಬಸ್ಸು ಸೌಕರ್ಯ
14. ಆನೆಕಲ್ಲು ಕತ್ತರಿಕೋಡಿ ಕಾಯರಡ್ಕ, ನೂಜಿ ಕುಂಟಪದವು ಆಗಿ ಸಸಿಗೋಳಿ

ಹೊಸತಾಗಿ ರಚಿತವಾಗಬೇಕಾಗಿದ್ದ ಮಾರ್ಗಗಳು

1. ಬೋಳಕಡದಿಂದ ಬಜಾಲ್ ಚಾಮುಂಡೇಶ್ವರಿ ದೇವಸ್ಥಾನದ ವರೆಗೆ ಮಾರ್ಗ
2. ಕಿಂಜ ಪಡ್ಪು, ಪಾವೂರು, ಮಜಿರ್‌ಪಳ್ಳ ಮಾರ್ಗ ನಿರ್ಮಾಣ
3. ಪೆರ್ಮನಂಜಿ, ಮುಡಿಮಾರ್ ಮಾರ್ಗ
4. ಬಳ್ಳೂರ್ ಕೋರಿಮುಗೇರು ವರೆಗೆ ಮಾರ್ಗ ನಿರ್ಮಾಣ
5. ಧರ್ಮನಗರದಿಂದ ಭಟ್ಕಳದ ಮಾರ್ಗ
6. ಭಟ್ಕಳದಿಂದ ಸುಕುಡಮಜಲ್ ವರೆಗೆ ಮಾರ್ಗ 1/2 ಕಿ.ಮೀ.
7. ಬೇಕರಿಯಿಂದ ತಾಮಲಚ್ಚಿಲ್ ವರೆಗೆ ಮಾರ್ಗದಿಂದ ಕ್ರಾಸ್ ಆಗಿ ತಮ್ಮನ ಬೆಟ್ಟು
8. ಬಾಕ್ರಬೈಲು ಚಡವಿನಿಂದ ಕಲ್ಲೆಗುರಿ ವರೆಗಿನ ಮಾರ್ಗ
9. ತಲೆಕಿಯಿಂದ ಉದ್ದೋಟಿ ಎಂಬಲ್ಲಿಗೆ ಮಾರ್ಗ
10. ನಡಿಬೈಲಿನಿಂದ ಪಪ್ಪಾಯಿ ಮೂಲೆ ವರೆಗೆ ಮಾರ್ಗ
11. ಬೆಳ್ಮಾರಿಯಿಂದ ಗುಂಡಿಯೂರಿಗೆ ಮಾರ್ಗ
12. ಪೊಯ್ಯತಬೈಲ್‌ನಿಂದ -ನಂದರ ಪದವಿನವರೆಗೆ ಮಾರ್ಗ
13. ಸುಂಕದ ಕಟ್ಟೆ, ಬೋಲದ ಪದವು ಹರಿಜನ ಕಾಲನಿಯಿಂದ ಕರ್ನಾಟಕಕ್ಕೆ ಲಿಂಕ್ ರೋಡ್
14. ಬೋರ್ಕಳ, ಬಂಡಿಮಾರು, ಕುರುಡಪದವು, ಪೈವಳಿಕೆಯವರೆಗೆ ಹೊಸ ಮಾರ್ಗ
15. ದೂಮಾವತಿ ದೇವಸ್ಥಾನಕ್ಕೆ ಮಾರ್ಗ (ಪಾವೂರಿನಿಂದ ಅರಿಬೈಲಿಗೆ)
16. ಕೊಣಬೈಲ್ ಸೊಡಂಕೂರು
17. ಬಾಳೆಪುನಿ ನಂದರಬೈಲ್
18. ಕಜೆಪದವು ಸೊಡಂಕೂರು
19. ಪಾತೂರು ಕುದುಂಬಳ ಬೈಲ್
20. ಪಿಲಿಚಾಮುಂಡಿ ಬೆಟ್ಟದಿಂದ ಕೊಡ್ಲ ಮೊಗರಿಗೆ

ನಿರ್ಮಿಸಬೇಕಾದ ಸಂಕಗಳ ವಿವರ

ಕ್ರ.ಸಂ. ಸ್ಥಳ

1. ನಾವಡರ ಬೈಲ್ ಸಂಕ
2. ಕೆದಕ್ಕಾರು ಕಾಲು ಸಂಕ
3. ಜೋಗಿ ಬೆಟ್ಟು - ಸಂಕ
4. ಕಲ್ಪನೆ, ಚಾವಡಿ ಬೈ, ನಲ್ಲಂಗಿ, ಪಾವೂರು ಪಾದೆ, ಕೋರಿಮೊಗರು, ಪಲ್ಲಿತೋಡು, ನೆಕ್ಕಿಲ, ಬಜಾಲ್, (ಕಾಲುಸಂಕಗಳು)
5. ನಡಿಬೈಲು -ತಿಮ್ಮಂಗೂರು ಪೊಯ್ಕೆ (ಸಂಕ)
6. ಬಜಲಕರಿ ಸಂಕ
7. ನಡಿಬೈಲು, ತಮ್ಮನ ಬೆಟ್ಟು, ಚಾಲಪಾದಿ ಗುದ್ವಲಿಕೋಡಿ ಉಜಾಲ್, ಪೊಯ್ಕೆ, ಭಟ್ಕಳ, ಬರೆಬೈಲು (ಕಾಲುಸಂಕಗಳು)
8. ಗುಂಡ್ಯೂರು, ಬಾಳೆಪುಣಿ (ಸಂಕ)ಕುದುಮಲೆ ಚಿಲ್, ಸೊಡುಕೂರು (ಕಾಲುಸಂಕಗಳು)
9. ಮಣಿಲ, ಕಪಿತಕಾರ್, ಬಪ್ಪಾಯಿಮೂಲೆ ಕಡೆಮಜಲ್ (ಕಾಲು ಸಂಕಗಳು)
10. ಕಾಪಿರಿ ಶಾಲೆಯ ಬಳಿ (ಕಾಲು ಸಂಕ)
11. ಉಡಿಪ್ರಕೋಡಿ, ಬದಿಯಾರು, ಮಜಾಲು (ಕಾಲು ಸಂಕಗಳು)
12. ಪಾರೆ, (ಸಂಕ)
13. ಕೊಡ್ಲಮೊಗರು (ಕಾಲುಸಂಕ) 25F ಉದ್ದ
14. ಸುಣ್ಣಂಗುಳಿ (ಕಾಲು ಸಂಕ) 26F ಉದ್ದ

15. ಕರುಮುಗರು (ಕಾಲು ಸಂಕ) 28F ಉದ್ದ

16. ಬೋಳ (2) ಕೊಣಬೈಲು (1) ಕಾಂತಮಜಲು

17. ಪಾವಳ, ಕೂಟಲ್ತಜೆ, ದಾಯಿದಲ, ಕೆದಕ್ಕಾರು

18. ಸೂಫಿಗುರಿ, ಮುಟ್ಟ, ಅರಿಬೈಲು, ಹೊಸಗದ್ದೆ

19. ಕಣಿಯೂರು ಬರೆ (2), ಕಾಂತ ಮಜಲು, ತುಪ್ಪೆ (2), ಮಡ್ಕ (2) ಕೊಡ್ಲಮೊಗರು ಎರುಗುಂಡಿ

ಕೆದಂಬಾಡಿ - ಕೊಂಟಗುರಿ, ಪಾವೂರು, ಕೋಡಿ ತೆನೀಕೆ, ಕಾಪಿರಿ, ನಡಿಚ್ಚಿಲು, ಸುಣ್ಣಂಗಳ, ಪಿಲಿಕ್ಕಳ(2) ಆಳಬೆ, ದಾಸಹಿತ್ತಿಲು, ಅಡೇಕಳ

ದೇವರ ಪಾಲು, ಬಳಸರಿ, ಮಂದರಬೆಲು (2) ತಮ್ಮನ ಬೆಟ್ಟು (2) ಸಿಪಾಯಿಮೂಲೆ, ತಿಮಂಗಳು ಬಜಲು ಕರಿಯ, ತಂತ್ರಿಪಾಲು, ನಾವಡರ ಬೈಲು ಕಾವಿ ದೇವಸ್ಥಾನದ ಬಳಿ, ಕಡಂಬರ ಬೈಲು, ಚಟ್ಟಾಕ್ರಳ ಕೊಪ್ಪಳ, ಪೆರ್ಮನಂದೆ, ಬಜಾಲ್,

ಕೊಂದಲ ಕುಮಾರ (2) ಕತ್ತಕೋಡಿ, ಮಂಟಮೆ ಪಂರ್ದಳ

ಕೈಗಾರಿಕಾ ಸ್ತರಗಳು

ಆರ್ಥಿಕ ಪ್ರಕೃತಿಯೆಯ ಅವಿಭಾಜ್ಯ ಘಟಕಗಳಾದ ಪ್ರಕೃತಿ ಸಂಪನ್ಮೂಲಗಳು ಸಾಮಾನ್ಯವಾಗಿ ನಿಷ್ಕ್ರಿಯಾವಸ್ಥೆಯಲ್ಲಿರುತ್ತವೆ. ಮನುಷ್ಯ ಸಂಪರ್ಕದ ಸ್ವಭಾವ ತೀವ್ರತೆಯನ್ನು ಹೊಂದಿಕೊಂಡು ಈ ಸಂಪನ್ಮೂಲಗಳು ಒಂದು ಪ್ರದೇಶದ ಸಾಧನೆಗಳನ್ನು ನಿರ್ಣಯಿಸುತ್ತವೆ. ಸಾಂಕೇತಿಕ ವಿದ್ಯೆ, ಧನ, ವಾಣಿಜ್ಯ ಪರವಾದ ಇತರ ಘಟಕಗಳು ಎಂಬಿವುಗಳ ವಿದಗ್ಧೆ ರೀತಿಯ ಒಂದು ಕೂಡುವಿಕೆ ಈ ರೀತಿಯ ಒಂದು ಕೂಡುವಿಕೆ ಈ ರೀತಿಯ ಸಂಪರ್ಕಗಳು ಆರ್ಥಿಕ ಸಾಧನೆಗಳನ್ನಾಗಿ ಮಾರ್ಪಡಿಸುತ್ತವೆ. ಪ್ರಕೃತಿ ಸಂರಕ್ಷಣೆ, ವಿಜ್ಞಾನದ ಎಳೆಗಳು ಎಂಬಿವು ಅವಿಭಾಜ್ಯ ಘಟಕಗಳಾಗಿರುವ, ಈ ಕಾಲ ಘಟ್ಟದಲ್ಲಿ, ಕೈಗಾರಿಕಾ ಅಭಿವೃದ್ಧಿ ಪ್ರಕ್ರಯ ಬಹಳಷ್ಟು ಸಂಕೀರ್ಣಮಯವಾಗಿದೆ. ನಮ್ಮಲ್ಲಿರುವ ಧಾರಾಳ ಪ್ರಕೃತಿಸಂಪತ್ತು, ಕಚ್ಚಾವಸ್ತುಗಳನ್ನು ಉತ್ಪನ್ನಗಳನ್ನಾಗಿ ಪರಿವರ್ತಿಸಲು ಯೋಗ್ಯ ರೀತಿಯಲ್ಲಿ ಕಾರ್ಯ ಪ್ರವೃತ್ತವಾಗುವ ಕೈಗಾರಿಕಾ ಘಟಕಗಳ ಅವಶ್ಯಕತೆಯಿದೆ. ನಮ್ಮ ಯುವ ಜನತೆ ಸಂಪನ್ಮೂಲದ ಅಭಾವ, ಸೂಕ್ತ ಮಾರ್ಗದರ್ಶನದ ಕೊರತೆ, ಬಡತನ, ಸರಕಾರೀ ನೌಕರಿಗೋಸ್ಕರದ ಅದಮ್ಯವಾದ ಹಂಬಲ, ಉದ್ಯೋಗಾರ್ಥಿಗಳನ್ನು ಉತ್ಪಾದಿಸುವ ವಿದ್ಯಾಭ್ಯಾಸ ಮೊದಲಾದ ಸಾಮಾಜಿಕ ಸಮಸ್ಯೆಗಳ ಹಂಬಲ, ಉದ್ಯೋಗಾರ್ಥಿಗಳನ್ನು ಉತ್ಪಾದಿಸುವ ವಿದ್ಯಾಭ್ಯಾಸ ಮೊದಲಾದ ಸಾಮಾಜಿಕ ಸಮಸ್ಯೆಗಳು ನಿವಾರಣೆ ಅತೀ ಅಗತ್ಯ.

ನಮ್ಮ ಯುವಜನತೆಗೆ ಕೈಗಾರಿಕಾ ರಂಗದ ಮಹತ್ವವೇನೆಂಬುದನ್ನು ತಿಳಿಯಪಡಿಸುವ ಜವಾಬ್ದಾರಿ ಗ್ರಾಮ ಪಂಚಾಯತುಗಳಿವೆ. ಈ ನಿಟ್ಟಿನಲ್ಲಿ ಕನಿಷ್ಠ ಪಂಚಾಯತಿಗೊಂದಾದರೂ ಕೈಗಾರಿಕಾ ತರಬೇತಿ ಶಾಲೆಯನ್ನು ತೆರೆದು ತನ್ಮೂಲಕ ಯೋಗ್ಯ ಅಪೇಕ್ಷಿತರನ್ನು ಗುರುತಿಸಿ ಅವರಿಗೆ ಸೂಕ್ತ ತರಬೇತಿ ನೀಡುವುದು ಅತೀ ಅಗತ್ಯ. ಆದುದರಿಂದ ಮಾರ್ಗ ನಿರ್ದೇಶನ, ಸಾಮಾಜಿಕ ಉತ್ತೇಜನ, ಮೂಲಭೂತ ಸೌಕರ್ಯಗಳು. ಎಂಬಿವು ಗುರಿಯಾಗಿರುವ ಪಂಚಾಯತು ಮಟ್ಟದ ಕೈಗಾರಿಕಾ ಅಭಿವೃದ್ಧಿ ನಡೆಸಬೇಕಾಗಿದೆ.

ನಮ್ಮ ಕೈಗಾರಿಕಾ ರಂಗಕ್ಕೆ ಅಂಟಿರುವ ಕೆಲವು ಪಿಡುಗುಗಳ ನಿವಾರಣೆ ಅತೀ ಅಗತ್ಯ. ನಮ್ಮ ಕೈಗಾರಿಕಾರಂಗದಲ್ಲಿ ಆಸಕ್ತರಿಗೆ ಉತ್ಪಾದನಾ ಸಾಧ್ಯತೆಗಳ ಬಗ್ಗೆ ಸ್ಪಷ್ಟವಾದ ತಿಳುವಳಿಕೆ ಇಲ್ಲದಿರುವುದು. ಆದುದರಿಂದ ಪಂಚಾಯತು ಆಸಕ್ತಿಯುಳ್ಳವರನ್ನು ಗುರುತಿಸಿ ಅವರಿಗೆ ಯೋಗ್ಯ ರೀತಿಯಲ್ಲಿ ಕಡಿಮೆ ಖರ್ಚಿನಲ್ಲಿ ಹೆಚ್ಚು ಉತ್ಪನ್ನಗಳನ್ನು ಹೇಗೆ ಉತ್ಪಾದಿಸಬಹುದು, ನಮ್ಮಲ್ಲಿನ ಪರಿಸರಕ್ಕೆ ಎಂತಹ ಕೈಗಾರಿಕೆ ಅತೀ ಅಗತ್ಯ. ನಮ್ಮ ಉತ್ಪನ್ನಗಳಿಗೆ ಮಾರುಕಟ್ಟೆಯಲ್ಲಿ ಹೇಗೆ ಬೇಡಿಕೆ ದೊರೆಯಬಹುದೆಂಬುದರ ಬಗ್ಗೆ ಅರಿವು ಮೂಡಿಸುವುದು, ಸ್ಥಿತಿ ವಿವರಗಳ ಮಾಹಿತಿ ಕೊಡುವುದು ಅನಿವಾರ್ಯ.

ಉತ್ತಮ ಯೋಜನೆಗಳು ಜ್ಯಾರಿಗೆ ಬಂದು ಫಲಕಾರಿಯಾಗಲು ನಮ್ಮಲ್ಲಿ ಯೋಗ್ಯ ಸ್ಕೀಮುಗಳ ಕೊರತೆಯಿದೆ. ಈಗ ನಮ್ಮಲ್ಲಿ ಚಾಲ್ತಿಯಲ್ಲಿರುವ ಸ್ಕೀಮುಗಳ ಬಗ್ಗೆ ಅರಿವು ಮೂಡಿಸುವುದು ಅವುಗಳಲ್ಲಿ ಅತೀ ಸೂಕ್ತವಾದುದನ್ನು ಆರಿಸಲು ತರಬೇತಿ ನೀಡುವುದು. ಅಲ್ಲಲ್ಲಿ ಗುಡಿ ಕೈಗಾರಿಕೆಗಳನ್ನು ಪ್ರೋತ್ಸಾಹಿಸುವುದು.

ಯುವಕರ ಉತ್ಸಾಹಕ್ಕೆ ಸರಕಾರದ ವತಿಯಿಂದ ನೀರಸ ಪ್ರಕ್ರಿಯೆ ಬರಬಾರದು. ಸರಕಾರವು ಆ ಸಂಸ್ಥೆಯ ಬಗ್ಗೆ ನಿಯಂತ್ರಣಾ ಮನೋಭಾವವನ್ನು ತಳೆಯಬಾರದು. ಅವರಿಗೆ ಎಲ್ಲಾ ವಿಧದಲ್ಲೂ ಪ್ರೋತ್ಸಾಹ, ಸಹಕಾರ ಸಲಹೆಗಳನ್ನು ನೀಡುವುದು ನಮ್ಮ ಉದ್ದೇಶ. ನಮ್ಮಲ್ಲಿ ಸೂಕ್ತ ಮಾರುಕಟ್ಟೆಯ ವ್ಯವಸ್ಥೆಯನ್ನು ನಿವಾರಿಸಿ ಕೈಗಾರಿಕಾ ಘಟಕಗಳ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸಲು ನೆರವಾಗುವುದು. ಉತ್ಪನ್ನಗಳ ಗುಣಮಟ್ಟವನ್ನು ಅಭಿವೃದ್ಧಿಪಡಿಸುವುದು ಸೂಕ್ತ ಸಲಹೆಗಳ ಮೂಲಕ ಉತ್ಪನ್ನಗಳ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸುವಂತೆ ಮಾಡುವುದು.

ನಮ್ಮ ಜನತೆಯಲ್ಲಿ ಆಸಕ್ತಿಯಿದ್ದರೂ ಸಾಮಾಜಿಕ ಸಮಸ್ಯೆಗಳಿಂದಾಗಿ ಅವರು ಕೈಗಾರಿಕಾ ಘಟಕಗಳನ್ನು ತೆರೆಯಲು ಸಾಧ್ಯವಾಗುತ್ತಿಲ್ಲ. ಜನತೆಯಲ್ಲಿ ವಿದ್ಯಾಭ್ಯಾಸದ ಗುಣಮಟ್ಟವನ್ನು ವೃದ್ಧಿಪಡಿಸುವುದು.

ಕಷ್ಟಪಟ್ಟು ದುಡಿಯುವ ಜನತೆಗೆ ಯಾವ ಉದ್ಯೋಗವಾದರೂ ಒಂದೇ. ಮನಸ್ಸು ಅತೀ ಅಗತ್ಯ. ಮನಸ್ಸಿದ್ದರೆ ಮಾರ್ಗವಿದೆ. ಎನ್ನುವುದನ್ನೂ ಮರೆಯಬಾರದು. ಸರಕಾರಿ ಉದ್ಯೋಗವೆಂಬುದು ನಮ್ಮ ಯುವಕರ ಸಾಲಿಗೆ ಮರೀಚಿಕೆಯಂತಾಗಿದೆ. ಆದುದರಿಂದ ಸ್ವ ಉದ್ಯೋಗವನ್ನು ಪ್ರೋತ್ಸಾಹಿಸಿ ಯುವಕರನ್ನು ಕ್ರಿಯಾಶೀಲರನ್ನಾಗಿ

ಮಾಡುವುದು ಅತೀ ಅಗತ್ಯ.

ಸ್ವಯಂ ಉದ್ಯೋಗ ಅಥವಾ ಕೈಗಾರಿಕೆಗಳಿಗೆ ಬೇಕಾದ ಸಹಾಯಕ ವಿದ್ಯಾಭ್ಯಾಸವನ್ನು ಕೊಡುವುದು ಉಚಿತ ವಿದ್ಯಾಭ್ಯಾಸವನ್ನು ಕೊಟ್ಟು ಅವರಿಗೆ ಸಾಂಪತ್ತಿಕ ಸಹಾಯವನ್ನು ನೀಡುವುದು. ಕೈಗಾರಿಕಾ ರಂಗದಲ್ಲಿ ತಕ್ಕಮಟ್ಟಿಗೆ ಯಶಸ್ಸನ್ನು ಪಡೆದ ಕೈಗಾರಿಕೋದ್ಯಮಗಳಿಂದ ಆಸಕ್ತರಿಗೆ ವ್ಯಾವರಿಕ ತರಬೇತಿಯನ್ನು ನೀಡುವುದು. ಕಿರು , ಬೃಹತ್ ವ್ಯಾಪಾರ ಸಂಸ್ಥೆಗಳ ಸಂಖ್ಯೆ.

ಪ್ರತಿಯೊಂದು ಪ್ರದೇಶಕ್ಕೂ ಅನುಗುಣವಾದ ಉದ್ಯಮಗಳನ್ನು ಕಂಡು ಹಿಡಿಯುವುದಕ್ಕೆ ಮುಂದಾಗಿ ಆ ಪ್ರದೇಶದಲ್ಲಿ ನೆಲೆಯಲ್ಲಿರುವ ನೌಕರರ ಸ್ಥಿತಿಗತಿ, ಪ್ರಕೃತಿ ಸಂಪನ್ಮೂಲಗಳು, ಮಾರುಕಟ್ಟೆ, ಸ್ಥಳ, ಜಲವೈದ್ಯತಿ, ಮೊದಲಾದ ಮೂಲಭೂತವಾದ ಸೌಕರ್ಯಗಳ ಲಭ್ಯತೆ ಎಂಬಿವುಗಳನ್ನು ಅರಿತಿರಬೇಕಾದುದು ಅತೀ ಅಗತ್ಯ. ಈ ರೀತಿಯ ತಿಳುವಳಿಕೆಯಿಂದ ಒಂದೆ ಪ್ರದೇಶದ, ಪ್ರತ್ಯೇಕವಾದ ಸ್ವಭಾವ ಗುಣಗಳನ್ನು ವ್ಯಕ್ತವಾದ ರೀತಿಯಲ್ಲಿ ಅರ್ಥೈಸುವುದರೊಂದಿಗೆ ಅವುಗಳಿಗುಣವಾದ ಕೈಗಾರಿಕಾ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವುದು.

ನಮ್ಮ ಪಂಚಾಯತು ಮಟ್ಟದಲ್ಲಿ ಒಂದು ಕೈಗಾರಿಕಾ ಸಮಿತಿಯ ರೂಪೀಕರಣ ಮಾಡುವುದು. ಇದರ ಮೂಲಕ ನಮ್ಮ ಪ್ರೇಶದ ಸಮಿತಿಯ ಹಾಗೂ ಇತರ ವಿಷಯಗಳನ್ನು ಸಂಗ್ರಹಿಸುವುದು. ನಮ್ಮ ಕೈಗಾರಿಕೆಗಳಿಗೆ ಬೇಕಾದ ಸಂಪನ್ಮೂಲಗಳಾದ ಧಾತುಗಳು -ಲೋಹಗಳು, ಸಮುದ್ರೋತ್ಪನ್ನಗಳು, ಹತ್ತಿ, ತೆಂಗಿನ ಸಿಪ್ಪೆ, ಮೊದಲಾದ ಕಚ್ಚಾ ಸಾಮಾಗ್ರಿಗಳು ಲಭಿಸುವಂತೆ ಮಾಡುವುದು.

ನಮ್ಮ ಕೈಗಾರಿಕೆಗಳಿಗೆ ಪ್ರಾದೇಶಿಕವಾಗಿ ಸಿಗಬಹುದಾದ ಉದ್ಯೋಗ ವಿದಗ್ಧರ ಹಾಗೂ ನುರಿತ ಕಾರ್ಮಿಕರ ಸೇವನೆ ಲಭಿಸುವಂತೆ ಮಾಡುವುದು. ಹೊಸ ಕೈಗಾರಿಕೆಗಳನ್ನು ತೆರೆಯುವಾಗ ಈಗ ನೆಲೆಯಲ್ಲಿರುವ ಕೈಗಾರಿಕೆಗಳನ್ನು ಅಭಿವೃದ್ಧಿ ಪಡಿಸುವುದು ಅವುಗಳ ಕಾರ್ಯದಕ್ಷತೆಯನ್ನು ಹೆಚ್ಚಿಸಲು ಪ್ರೋತ್ಸಾಹ ನೀಡುವುದು.

ನಮ್ಮಲ್ಲಿ ಕೈಗಾರಿಕಾ ಘಟಕಗಳನ್ನು ತೆರೆಯಲು ಬೇಕಾದ ಸ್ಥಳಗಳು ಅಲ್ಲಲ್ಲಿ ಇವೆ. ಕೈಗಾರಿಕೆಗಳು ತಲೆ ಎತ್ತಬೇಕಾದರೆ ಆ ಸ್ಥಳದ ಮೂಲಭೂತ ಸೌಕರ್ಯಗಳನ್ನು ಗಮನದಲ್ಲಿರಿಕೊಳ್ಳಬೇಕು. ಅಲ್ಲಿಗೆ ಬೇಕಾದ ವಿದ್ಯುತ್ ಪೂರೈಕೆ, ಜಲಲಭ್ಯತೆ, ಸಾರಿಗೆ ವ್ಯವಸ್ಥೆ, ಸಂಪನ್ಮೂಲ (ಕಚ್ಚಾವಸ್ತು)ಗಳ ಪೂರೈಕೆ ಇತ್ಯಾದಿ. ಉತ್ಪನ್ನಗಳನ್ನು ವಿತರಿಸಲು ಯೋಗ್ಯ ಮಾರುಕಟ್ಟೆಯನ್ನು ತೆರೆಯುವುದು ಕೂಡ ಅಗತ್ಯ.

ಭೂವಿಕಸನ, ಕಟ್ಟಡ ನಿರ್ಮಾಣ ಮೊದಲಾದವು ಸ್ಥಾಪಿಸಲು ಉದ್ದೇಶಿಸಿರುವ ಕೈಗಾರಿಕಾ ಉದ್ಯಮಗಳಿಗೆ ಯೋಗ್ಯವಾದ ರೀತಿಯಲ್ಲಿರಬೇಕು. ಉದ್ಯಮ ರಂಗವು ಉತ್ತಮ ರೀತಿಯಲ್ಲಿ ಮುಂದೆ ಬರಬೇಕಾದರೆ ನಷ್ಟದಲ್ಲಿ ಪ್ರವರ್ತಿಸುವ ಉದ್ಯಮಿಗಳನ್ನು ಗುರುತಿಸಿ ಅವರಿಗೆ ಸೂಕ್ತ ರೀತಿಯಲ್ಲಿ ಸಂಪತ್ತಿನ ಸಹಾಯ ನೀಡುವುದು ಅತೀ ಅಗತ್ಯ.

ನಮ್ಮೆಲ್ಲಾ ಕೈಗಾರಿಕೆಗಳು ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸಲು ಅವುಗಳಿಗೆ ಸೂಕ್ತ ಸಮಯದಲ್ಲಿ ಕಚ್ಚಾ ವಸ್ತುಗಳ ಪೂರೈಕೆ ಅತೀ ಅಗತ್ಯ. ಉತ್ಪನ್ನಗಳ ವಿತರಣೆಗಾಗಿ ಅಲ್ಲಲ್ಲಿ (ಬೇಡಿಕೆ ಹೆಚ್ಚಿರುವ ಕಡೆಗಳಲ್ಲಿ) ಹೊಸ ಹೊಸ ಮಾರುಕಟ್ಟೆಗಳನ್ನು ತೆರೆಯುವ ಅವಶ್ಯಕತೆಯಿದೆ. ಮತ್ತು ನಮ್ಮಲ್ಲಿನ ಉತ್ಪನ್ನಗಲಿಗೆ ಬೇರೆಡೆಗಳಲ್ಲಿ ಬೇಡಿಕೆ ಲಭಿಸುವಂತೆ ಮಾಡಲು ಕ್ರಮ ಕೈಗೊಳ್ಳುವುದು. ವ್ಯಾಪಾರಿ ಶೃಂಖಲೆಯನ್ನು ಸೃಷ್ಟಿಸುವುದು ಯೋಗ್ಯವಾದ ಸಾಂಕೇತಿಕವಿದ್ಯೆಯನ್ನೂ, ಯಂತ್ರ ಸಾಮಾಗ್ರಿಗಳನ್ನೂ ಆಯ್ಕೆ ಮಾಡುವುದು ಮೊದಾದ ರಂಗಗಳಲ್ಲಿ ಸಹಾಯ ಒದಗಿಸುವುದು.

ನಮ್ಮಲ್ಲಿ ಕೈಗಾರಿಕಾ ಘಟಕಗಳು ಸೂಕ್ತ ರೀತಿಯಲ್ಲಿ ಕಾಯ ಪ್ರವೃತ್ತನಾಗಲು ಕೈಗಾರಿಕಾ ಅಭಿವೃದ್ಧಿ ಸಮಿತಿಯ ರೂಪೀಕರಣವಾಗಬೇಕಾಗಿದೆ. ಇದರಲ್ಲೂ ಪಂಚಾಯತಿನ ಜನಪ್ರತಿನಿಧಿಗಳು, ಉದ್ಯಮಿಗಳು, ಉದ್ಯೋಗಿಗಳು ಮೊದಲಾದವರನ್ನು ಪ್ರತಿನಿಧಿಗಳನ್ನು ಆಯ್ಕೆ ಮಾಡುವುದು. ಇದರು ಉದ್ದೇಶ ಪ್ರಾದೇಶಿಕ ಕೈಗಾರಿಕಾ ಉದ್ಯಮಿಗಳಿಗೆ ಪ್ರೋತ್ಸಾಹ ನೀಡುವುದು. ಕೈಗಾರಿಕೆಗಳ ಆರೋಗ್ಯಕರ ಅಭಿವೃದ್ಧಿಗಾಗಿ ಶಕ್ತಿಮೀರಿ ದುಡಿಯುವುದು. ಕೈಗಾರಿಕೆಗಳ ಉತ್ಪಾದನಾ ವಲಯ ಸಮಾಜದ ಸಮಗ್ರವಾದ ಹಿತ ಹಾಗೂ ಸಂರಕ್ಷಣೆಯನ್ನು ನಿರ್ವಹಿಸುತ್ತದೆ. ಎಂಬ ಪ್ರಜ್ಞೆಯ.ನ್ನು ಜನತೆಯಲ್ಲಿ ಮೂಡಿಸುವ ಅಗತ್ಯವಿದೆ.

ಜನರನ್ನು ಕೈಗಾರಿಕಾ ವಲಯದ ಕಡೆಗೆ ಆಕರ್ಷಿಸುವುದು ನಮ್ಮ ಪ್ರಧಾನ ಉದ್ದೇಶವಾಗಿದೆ. ಈ ನಿಟ್ಟಿನಲ್ಲಿ ನಮ್ಮ ಪಂಚಾಯತು ಈ ಕೆಳಗಿನ ಕೆಲಸ ಕಾರ್ಯಗಳನ್ನು ಮಾಡಲು ಉದ್ದೇಶಿಸುತ್ತಾನೆ.

1. ಜನರ ಸಹಭಾಗಿತ್ವದೊಂದಿಗೆ ಪಂಚಾಯತಿನಲ್ಲಿ ಕೈಗಾರಿಕಾ ವಲಯದ ಸಾಧ್ಯತೆಗಳ ಬಗ್ಗೆ ಅವಲೋಕನ ನಡೆಸಿ ಪ್ರಚಾರ ಮಾಡುವುದು.

2.ಸೆಮಿನಾರುಗಳು, ಕೈಗಾರಿಕಾ ಉದ್ಯಮಿಗಳ ತರಬೇತಿಗಳು ಪ್ರದರ್ಶನಗಳು ಕೈಗಾರಿಕಾ ಘಟಕಗಳಿಗೆ ಭೇಟಿ ಕೊಡಿಸುವುದು ಸಿನಿಮಾ ಪ್ರದರ್ಶನಗಳು ಎಂಬಿವುಗಳ ಮೂಲಕ ಉತ್ಪಾದನಾ ಕ್ಷೇತ್ರದ ವಿವಿಧ ಸಾಧ್ಯತೆಗಳ ಬಗ್ಗೆ ಜನರಿಗೆ ತಿಳುವಳಿಕೆ ಮೂಡಿಸುವುದು:

3. ಕೈಗಾರಿಕೆಗಳ ಕುರಿತು ವಿವರಗಳನ್ನು ಸಂಗ್ರಹಿಸಿ ಉಪಯುಕ್ತವಾಗುವಂತೆ ವಿತರಣೆ ಮಾಡುವುದು.

4. ಕೈಗಾರಿಕಾ ಸಮೂಹ 'ಔಟ್‌ವರ್ಕರ್' ಉತ್ಪಾದನಾ ಸಂಪ್ರದಾಯ ಮೊದಲಾದ ಒಗ್ಗಟ್ಟನ್ನು ಹೆಚ್ಚಿಸಲು ಪ್ರಯತ್ನಿಸುವುದು.

5. ಕೈಗಾರಿಕಾ ಅಭಿವೃದ್ಧಿಯ ಕೆಲಸಗಳು ಪರಿಸರ ಸಂರಕ್ಷಣೆಯನ್ನು ಗಮನದಲ್ಲಿರಿಸಿದವುಗಳೆಂದು ತಿಳಿಯಪಡಿಸುವುದು.

6. ಮಾರುಕಟ್ಟೆ, ಕಚ್ಚಾ ಸಾಮಾಗ್ರಿಗಳು, ಸಾಂಕೇತಿಕ ವಿದ್ಯೆ, ಆರ್ಥಿಕ

ಸಹಾಯ ಎಂಬಿವುಗಳಿಗೆ ಹೊಸ ಸಂಪರ್ಕವನ್ನು ರೂಪಿಸುವುದು.

7. ಪ್ರಾದೇಶಿಕವಾಗಿ ಕೈಗಾರಿಕಾ ಉದ್ಯಮ ಸ್ವಭಾವವನ್ನು ಬೆಳೆಸುವುದು.

ಕೈಗಾರಿಕೆಗಳು ಅಭಿವೃದ್ಧಿಯಾಗಬೇಕಾದರೆ ವ್ಯಾಪಾರ ಸಂಸ್ಥೆಗಳು ಸರಿಯಾದ ರೀತಿಯಲ್ಲಿ ಸಹಕರಿಸುವಂತಿರಬೇಕು. ನಾವು ಪ್ರಾದೇಶಿಕವಾಗಿ ಉತ್ಪಾದಿಸಿದ ಉತ್ಪಾದನೆಗಳನ್ನು ವ್ಯಾಪಾರ ಮಾಡುವುದು; ಕಿರು ಉದ್ಯಮ ರಂಗವನ್ನು ಪ್ರೋತ್ಸಾಹಿಸಲು ಸಹಕಾರಿಯಾಗುತ್ತದೆ. ಹೊಸ ಮಾರುಕಟ್ಟೆಗಳನ್ನು ತೆರೆಯುವುದು. ಕಾಲಾನುಸಾರವಾದ ರೀತಿಯಲ್ಲಿ ಉತ್ಪನ್ನಗಲಿಗೆ ಗುಣಪರದ ಉನ್ನತಿಯನ್ನು ದೃಢಪಡಿಸುವುದು. ಇವುಗಳಿಗೆ ಬೇಕಾದ ತರಬೇತಿಯನ್ನು ನೀಡುವುದು ಸಾರ್ವಜನಿಕ ವ್ಯಾಪಾರಿ ಕೇಂದ್ರದ ಜವಾಬ್ದಾರಿಯಾಗಿದೆ.

ಕೈಗಾರಿಕೆಯ ಅಭಿವೃದ್ಧಿಗಾಗಿ ವಿದ್ಯಾಸಂಸ್ಥೆಗಳಲ್ಲಿ ಕೈಗಾರಿಕೋದ್ಯಮ ಕ್ಲಬ್ಬುಗಳ ರೂಪೀಕರಿಸುವುದು. ವೃತ್ತಿ ತರಬೇತಿಯನ್ನು ಮಕ್ಕಳಿಗೆ ಕಡ್ಡಾಯವಾಗಿ ಕೊಡಿಸುವುದು. ಪ್ರಚಾರ ಬೋರ್ಡುಗಳ ಸ್ಥಾಪನೆ, ಸೆಮಿನಾರುಗಳನ್ನು ನಡೆಸುವುದು ಮೊದಲಾದವುಗಳ ಮೂಲಕ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸುವುದು.

ಕೈಗಾರಿಕೋದ್ಯಮ ಕ್ಲಬ್ಬುಗಳಲ್ಲಿ ಉತ್ಪಾದಿಸಿದ ನೋಟು ಪುಸ್ತಕಗಲು ಕಾಗದದಿಂದ ತಯಾರು ಮಾಡಿದ ಕೌತುಕ ವಸ್ತುಗಳು ಎಂಬಿವುಗಳೆಲ್ಲ ಪ್ರಾದೇಶಿಕವಾಗಿ ಮಾರುವುದರಿಂದ ಸಮಾಜದಲ್ಲಿ ಒಂದು ಉದ್ಯಮ ಗುಣ ವಿದ್ಯಾರ್ಥಿಗಳಲ್ಲಿ ಉತ್ಪಾದನಾ ವ್ಯಾಪಾರ ಪ್ರಕ್ರಿಯೆಯ ತಿಳುವಳಿಕೆಯ ಮೂಡಿಸಲು ಸಾಧ್ಯ. ಈ ರೀತಿ ಮಕ್ಕಳಿಗೆ ಎಳವೆಯಲ್ಲಿಯೇ ಸೂಕ್ತ ತರಬೇತಿ ನೀಡುವುದು.

ಆರ್ಥಿಕವಾಗಿ ಹಿಂದುಳಿದ, ಪರಿಶಿಷ್ಟ ಜಾತಿ/ ಪರಿಶಿಷ್ಟ ವರ್ಗದ ಜನತೆ ಹೆಚ್ಚು ಹೆಚ್ಚಾಗಿ ಕೈಗಾರಿಕಾ ರಂಗದಲ್ಲಿ ಮುಂದೆ ಬರುವಂತೆ ಮಾಡುವುದು ಅತೀ ಅಗತ್ಯ ಹೀಗೆ ಹಿಂದುಳಿದ ಜನತೆ ಆರ್ಥಿಕವಾಗಿ ಮುಂದೆ ಬರುವಂತೆ ಮಾಡುವುದು ನಮ್ಮ ಪ್ರಧಾನ ಲಕ್ಷ್ಯವಾಗಿದೆ. ಆಸಕ್ತಿಯುಳ್ಳ ಜನತೆಗೆ ಸಾಧ್ಯವಾದರೆ ಜಿಲ್ಲೆಯ ಒಳಗೂ, ಹೊರಗೂ ತರಬೇತಿ ನೀಡುವುದು.

ಬೃಹತ್ ಉದ್ಯಮಗಳನ್ನು ತೆರೆಯಲು ಅವಶ್ಯವಾದ ಸಹಾಯ ನೀಡುವುದು ಕೈಗಾರಿಕಾ ಉದ್ಯೋಗಾರ್ಥಿಗಳಿಗೆ ಹಾಗು ಅಂತವರನ್ನು ಗುರುತಿಸಿ ಅವರಿಗೆ ಸ್ವಯಂ ಉದ್ಯೋಗದ ಅಡಿಯಲ್ಲಿ E.D.p. (Enterpreenre Development programme) ತರಬೇತಿ ವೇಳೆ ಮುಂಗಡನೆ ನೀಡುವುದು.

ಆಯೋಜಿತ ಸ್ವಯಂ ಉದ್ಯೋಗ ಯೋಜನೆಯ ಮೂಲಕ ಬೇಂಕುಗಳ ಬೃಹತ್ ಸಂಪತ್ತು. ನಮ್ಮ ಯುವಜನರ ಮುಖ್ಯ ಸಮಸ್ಯೆಯಾದ ನಿರುದ್ಯೋಗಕ್ಕೆ ಪರಿಹಾರ ಕಾಣುವುದಕ್ಕೂ ಉತ್ಪಾದನೆ ಹೆಚ್ಚಿಸುವುದಕ್ಕೂ ಉಪಯುಕ್ತವಾಗಿದೆ ಇದನ್ನು ಮನಗಂಡು ನಾವು ಬೇಂಕುಗಳನ್ನು ಸಾಲ - ನಿಕ್ಷೇಪ ಅನುಪಾತದಲ್ಲಿನ ಕಡಿತದ ಹೆಸರಿನಲ್ಲಿ ಟೀಕಿಸದೆ ಆ ಯೋಜನೆಗೂ ಗ್ರಾಮಾಭಿವೃದ್ಧಿಗೂ ಉತ್ಪಾದನೆಗೂ ಉತ್ಪಾದನಾ ಕ್ಷಮತೆಗೂ ಈ ನಿಟ್ಟಿನಲ್ಲಿ ಪರಮಾವಧಿ ಶ್ರಮಿಸಬೇಕು. ಬೇಂಕುಗಳಿಂದ ಉದ್ಯೋಗಾಧಿಕಾರಿಗಳಿಗೆ ಆಗುವ ಅನ್ಯಾಯವನ್ನು ತಡೆಯುವುದು.

ನಮ್ಮ ಗ್ರಾಮೀಣ ಪ್ರದೇಶದ ಕೈಗಾರಿಕೆಗಳಿಗೆ ಮಾರಕವಾದ ಕೆಲವು ಸಮಸ್ಯೆಗಳನ್ನು ನಿವಾರಿಸಲು ನಾವು ನಮ್ಮ ಪಂಚಾಯತು ಮಟ್ಟದಲ್ಲಿ ಜಾಗೃತರಾಗುವುದು. ಬೃಹತ್ ಕಂಪೆನಿಗಳ ಬೆಳವಣಿಗೆಯು ನಮ್ಮ ಕಿರುಕೈಗಾರಿಕೆಗಲ ಮೇಲೆ ದುಷ್ಪರಿಣಾಮ ಬೀರುತ್ತದೆ. ಅದನ್ನು ತಡೆಯಲು ಕ್ರಮ ಕೈಗೊಳ್ಳುವುದು.

ನಮ್ಮ ಕೈಗಾರಿಕೆಗಳಲ್ಲಿ ಉತ್ಪಾದಿಸಿದ ಉತ್ಪನ್ನಗಲನ್ನು ಮಾರುಕಟ್ಟೆಗೂ ವಾಣಿಜ್ಯಕೇಂದ್ರಕ್ಕೂ ತಲುಪಿಸಲು ನಮ್ಮ ಸಾರಿಗೆ ಮಾಧ್ಯಮವನ್ನು ಶಕ್ತಪಡಿಸುವುದು.

ನಮ್ಮ ಜನತೆಗೆ ಮಾರುಕಟ್ಟೆಯ ಬಗ್ಗೆ, ಅದೇ ರೀತಿ ಮಾರಾಟ ವಲಯದ ಬಗ್ಗೆ ಸೂಕ್ತವಾದ ಅನುಭವದ ಕೊರತೆಯಿದೆ. ಅದನ್ನು ನಿವಾರಿಸಲು ಪ್ರಯತ್ನಿಸುವುದು. ಉತ್ತಮ ರೀತಿಯಲ್ಲಿ ಪ್ರಚಾರ ಪಡಿಸಲು ಜಾಹೀರಾತು ಪಡಿಸುವುದು ಗುಣಮಟ್ಟದ ಉತ್ಪತ್ತಿ, ಕಾದಿರಿಸುವುದಕ್ಕೆ ಫಲಪ್ರದವಾದ ವ್ಯವಸ್ಥೆ ಮಾಡುವುದು.

ನಮ್ಮ ಯೋಜಿತ ಉದ್ಯೋಗ ಯೋಜನಗೆಳು ಗೆಲುವು ಸಾಧಿಸಬೇಕಾದರೆ ಉದ್ಯಮಿಗಳಿಗೆ ವಾಣಿಜ್ಯಕ್ಕೆ ಬೇಕಾದ ಎಲ್ಲಾ ಸಹಾಯಗಳು ಸಿಗಬೇಕು. ಮೊದಲಲ್ಲಿ ಬ್ಲೋಕ್ ಮಟ್ಟದಲ್ಲಿ ಇದಕ್ಕಾಗಿ ಕಿರುಮಟ್ಟದ ಸ್ವಯಂ ಉದ್ಯೋಗ, ಉದ್ಯಮಿಗಳ ಉತ್ಪಾದನೆಗಳು, ಉಪ ಭೋಕ್ತಾರರಿಗೆ ಸ್ಥಿರವಾಗಿ ಕೊಳ್ಳಲು ಸಾಧ್ಯವಾಗುವಂತೆ ಮಾರಾಟ ಕೇಂದ್ರಗಳನ್ನು ಸ್ಥಾಪಿಸುವುದು. ಇದನ್ನು ಮುನ್ನಡೆಸಲು ಪ್ರತ್ಯೇಕ ಸಹಕಾರಿ ಸಂಘಗಳು DWCRA ಎಂಬ ಯೂನಿಟುಗಳನ್ನು ರೂಪೀಕರಿಸುವುದು. ಈ ಮೂಲಕ IRDP ಮೇಳದಲ್ಲಿ ವರ್ಷಕ್ಕೆ ಒಮ್ಮೆ ಮಾತ್ರ ಜನರಿಗೆ ಕೊಳ್ಳಲು ಸಾಧ್ಯವಾಗುತ್ತಿರುವಂತೆ ಮಾಡುವುದು. ನಮ್ಮ ಗ್ರಾಮೀಣ ಉತ್ಪನ್ನಗಳಿಗೆ ಗುಮಮಟ್ಟವಿದ್ದರೂ ಇಂದಿನ ಪರಿಸ್ಥಿತಿಯಲ್ಲಿ ಬೃಹತ್ ಕೈಗಾರಿಕೆಗಳ ಉತ್ಪನ್ನಗಳೊಂದಿಗೆ ಸ್ಪರ್ಧಿಸಲು ಸಾಧ್ಯವಾಗುತ್ತಿಲ್ಲ. ಅದಕ್ಕಾಗಿ ಯೋಗ್ಯ ರೀತಿಯಲ್ಲಿ ಕ್ರಮ ಕೈಗೊಳ್ಳುವುದು.

ನಮ್ಮಲ್ಲಿ ಇರುವ ಕಚ್ಚಾವಸ್ತುಗಳನ್ನು ಉತ್ಪನ್ನಗಳಾಗಿ ಬದಲಾಗಬೇಕಾದುದು ಅತೀ ಅಗತ್ಯ. ಇನ್ನು ಬರುವ ಒಂಭತ್ತನೇ ಯೋಜನೆಯಡಿಯಲ್ಲಿ ನಮ್ಮ ಪಂಚಾಯತಿನಲ್ಲಿ ಹತ್ತು ಹಲವು ಕೈಗಾರಿಕಾ ಘಟಕಗಳು ಕಾರ್ಯ ಪ್ರವೃತ್ತವಾಗುವಂತೆ ಮಾಡಬೇಕಾಗಿದೆ. ಈ ನಿಟ್ಟಿನಲ್ಲಿ ನಾವು ಉದ್ದೇಶಿಸಿದ ಸೂಕ್ತ ಯೋಜನೆಗಳನ್ನು ನಾವು ಈ ಕೆಳಗೆ ನಮೂದಿಸುತ್ತೇವೆ.

ಗುಡಿ ಕೈಗಾರಿಕೆಯ ಯಂತ್ರೋಪಕರಣಗಳನ್ನು (IRDP) ಪಡೆದವರು ಮತ್ತು ಪಡೆಯಲು ಇಚ್ಚಿಸುವವರು

ವಾರ್ಡ್ ಸಂಖ್ಯೆ	ಅಪೇಕ್ಷಿತರು	ಉಪಕರಣಗಳನ್ನು ಪಡೆದವರು	ಪಡೆಯಲು ಬಾಕಿಯವರು
I	18	10	8
II	15	7	8
III	13	6	7
IV	16	9	7
V	15	5	10
VI	16	4	12
VII	15	3	12
VIII	14	3	11
IX	9	4	5
X	8	3	5

ದಾರಿದ್ರ್ಯ ರೇಖೆಯಿಂದ ಕೆಳಗಿರುವವರ ವಿವರ

ವಾರ್ಡ್ ಸಂಖ್ಯೆ	ಒಟ್ಟು ಮನೆಗಳು	SC/ST ಜನರ ಸಂಖ್ಯೆ ಇರುವ ಮನೆಗಳು	ಅಕ್ಷರಸ್ಥರ ಸಂಖ್ಯೆ	ಒಟ್ಟು ಜನಸಂಖ್ಯೆ ಕೆಳಗಿನ ವಿವರಗಳು
I	204	20	90	12192
II	154	32	86	10144
III	209	5	72	8 201
IV	224	32	87	11213
V	220	11	92	14206
VI	250	10	86	16234
VII	163	13	74	13150
VIII	175	6	83	14161
IX	135	12	76	15120
X	140	6	63	13127

ಒಂಭತ್ತನೇ ಪಂಚವಾರ್ಷಿಕ ಯೋಜನೆಯ ಕಾಲಾವಧಿಯಲ್ಲಿ ನಮ್ಮ ಪಂಚಾಯತನ್ನು ಒಂದು ಕೈಗಾರಿಕಾ ಕೇಂದ್ರವನ್ನಾಗಿ ಪರಿವರ್ತಿಸುವ ಧ್ಯೇಯ ನಮ್ಮದಾಗಿದೆ. ನಿಮ್ಮ ವಾರ್ಡ್‌ನ ಜನತೆಗೆ ಬೇಕಾದ ಸಿದ್ಧವಸ್ತುಗಳು ನಮ್ಮಲ್ಲೇ ಸಿಗುವಂತಾಗಬೇಕು ಹಾಗು ನಮ್ಮಲ್ಲಿ ಉಳಿದ ಉತ್ಪನ್ನಗಳನ್ನು ಬೇಡಿಕೆಯಿದ್ದ ಸ್ಥಳಗಳಿಗೆ ರಫ್ತುಮಾಡುವುದು ಕೂಡ ಅತೀ ಅಗತ್ಯ.

ನಮ್ಮ ಪಂಚಾಯತಿನ ಮಟ್ಟಿಗೆ ಹೇಳುವುದಿದ್ದರೆ ಇದುವರೆಗೆ ನಮ್ಮಲ್ಲಿ ಬೆಳೆದು ಬಂದ ಕೈಗಾರಿಕೆಗಳು ತೀರ ಕಡಿಮೆ. ಒಂದು ಮಠ ಸಿಗಿಯುವ ಕಾರ್ಖಾನೆ, ಬಿಸ್ಕೆಟ್ ಕಾರ್ಖಾನೆ, ಎಣ್ಣೆಗಿರಣಿ, ಅಕ್ಕಿ ಗಿರಣಿಗಳನ್ನು ಬಿಟ್ಟರೆ ಇತರ ಕೈಗಾರಿಕೆಗಳ ಸಂಖ್ಯೆ ಶೂನ್ಯ ನಮ್ಮಲ್ಲಿ ಸಿಗುವ ಕಚ್ಚಾ ವಸ್ತುಗಳನ್ನು ಇತರ ಕಡೆಗಳಿಂದ ಸರಿಯಾದ ಸಮಯದಲ್ಲಿ ಆಮದು ಮಾಡುವುದು ಅತೀ ಅಗತ್ಯ. ಕೈಗಾರಿಕೆಗಳಿಗೆ ಬೇಕಾದ ಇಂದನ, ನೀರು ಇತ್ಯಾದಿಗಳನ್ನು ಪೂರೈಸಲು ಕ್ರಮಕೈಗೊಳ್ಳುವುದು.

ಇಪ್ಪತ್ತೊಂದನೆಯ ಶತಮಾನದ ಹೊಸ್ತಿಲಲ್ಲಿ ಬಂದು ನಿಂತಿರುವ ನಮ್ಮ ದೇಶವನ್ನು ಶ್ರೀಮಂತ ದೇಶವನ್ನಾಗಿ ಪರಿವರ್ತಿಸುವ ಜವಾಬ್ದಾರಿ ಈ ದೇಶದ ಪ್ರತಿಯೊಬ್ಬ ಪೌರನದ್ದಾಗಿದೆ. ಹೀಗಾಗಬೇಖಿದ್ದರೆ ನಾವು ಇತರರ ಸಹಾಯವನ್ನು ಯಾಚಿಸದೆ ಸ್ವಾವಲಂಭಿಗಳಾಗಬೇಕು.

ನಮ್ಮ ಜನತೆ ಕೈಗಾರಿಕೆಯನ್ನು ತೆರೆಯಬೇಕಿದ್ದರೆ ಅವರಿಗೆ ಸೂಕ್ತ ತರಬೇತಿ ಅಗತ್ಯ. ನಮ್ಮ ಪಂಚಾಯತು ಸಂಪೂರ್ಣವಾಗಿ ಕೃಷಿಯನ್ನು ಆಶ್ರಯಿಸಿದ ಪ್ರದೇಶವೆಂದರೆ ತಪ್ಪಾಗಲಾರದು. ಇಲ್ಲಿನ ಜನತೆಗೆ ವಿದ್ಯಾಭ್ಯಾಸ ಕೂಡ ಅತೀ ಕಡಿಮೆ. ಮಾಧ್ಯಮಿಕ ಶಿಕ್ಷಣವನ್ನು ಪೂರೈಸಿದವರು ತೀರ ವಿರಳ. ಪರಿಶಿಷ್ಟ ಜಾತಿ ಅಥವಾ ವರ್ಗಕ್ಕೆ ಸೇರಿದವರಲ್ಲಿ ಇವರ ಸಂಖ್ಯೆ ತೀರ ವಿರಳ. ಕೆಲವರಂತೂ ಕೆಲಸ ಮಾಡದೆ ಸೋಮಾರಿಗಳಾಗಿ ಆಲಸಿಗಳಾಗಿವೆ ತಿರುಗುತ್ತಿರುವುದು ಕಂಡು ಬರುತ್ತದೆ. ಇದು ನಮ್ಮ ಪ್ರಗತಿಗೆ ಕೊಡಲಿಯೇಟು. ನಮ್ಮ ಜನತೆಯನ್ನು ಎಚ್ಚರಿಸಬೇಕು. ಕೈಗಾರಿಕಾ ಕ್ರಾಂತಿಯ ಶಾಂತಿಯ ಅಲೆ ಇಲ್ಲಿ ಬೀಸುವಂತೆ ಮಾಡುವುದು ನಮ್ಮ ಉದ್ದೇಶವಾಗಿದೆ.

ಕೈಗಾರಿಕಾ ಕ್ರಾಂತಿಯನ್ನು ಮಾಡುವ ಉದ್ದೇಶದಿಂದ ನಮ್ಮ ಪಂಚಾಯತಿನ ಕೇಂದ್ರ ಪ್ರದೇಶವೊಂದರಲ್ಲಿ ತಾಂತ್ರಿಕ ಶಿಕ್ಷಣ ತರಬೇತಿ ಶಾಲೆಯೊಂದನ್ನು ತೆರೆಯುವುದು ನಮ್ಮಲ್ಲಿರುವ ಹೈಸ್ಕೂಲಿನಲ್ಲಿ ವೃತ್ತಿ ಶಿಕ್ಷಣ ಕೇಂದ್ರವನ್ನು ತೆರೆಯುವುದು. ತಾಂತ್ರಿಕ ಶಿಕ್ಷಣ ಕೇಂದ್ರದಲ್ಲಿ ಕನಿಷ್ಟ ಏಳನೇ ತರಗತಿ ತೇರ್ಗಡೆಯಾದ ಅರ್ಹ ಅಭ್ಯರ್ಥಿಗಳಿಗೆ ಉಚಿತವಾಗಿ ತರಬೇತಿಕೊಡುವುದು. ಪರಿಶಿಷ್ಟ ಜಾತಿ, ವರ್ಗ ಹಾಗೂ ದಾರಿದ್ರ್ಯ ರೇಖೆಯಿಂದ ಕೆಳಗಿರುವ ಅಪೇಕ್ಷಿತರಿಗೆ ಸೂಕ್ತ ತರಬೇತಿ ಕೊಡುವುದು. ಉದ್ದೇಶಿಸಿದ ತರಬೇತಿ ಶಾಲೆಯಲ್ಲಿ ಮೋಟಾರು ರಿಪೇರಿ, ಕಂಪ್ಯೂಟರ್, ವಯರಿಂಗ್ TV ರಿಪೇರಿ ಇತ್ಯಾದಿ ತಾಂತ್ರಿಕ ಕ್ಷೇತ್ರಕ್ಕೆ ಸಂಬಂಧಿಸಿದ ಪ್ರತಿಯೊಂದು ಪ್ರಬೇಧಗಳ ಬಗ್ಗೆ ಸೂಕ್ತ ತರಬೇತಿ ಕೊಡುವುದು ತರಬೇತಿಯ ಕಾಲಾವಧಿಯಲ್ಲಿ ಊಟ ತಿಂಡಿಗಳ ಖರ್ಚನ್ನು ಪಂಚಾಯತೇ ಬರಿಸುವುದು. ವಿದ್ಯಾರ್ಥಿಗಳಿಗೆ ಭತ್ತ ಕೊಡುವುದು. ತರಬೇತಿ ಪಡೆದ ಪ್ರತಿಯೊಬ್ಬನಿಗೂ ಕೂಡ ಸ್ವ-ಉದ್ಯೋಗ ನಡೆಸಲು ಎಲ್ಲಾ ರೀತಿಯಲ್ಲೂ ನೆರವಾಗುವುದು.

ನಮ್ಮ ಸಂಸ್ಕೃತಿಯ ಪ್ರತೀಕಗಳಾದ ಗುಡಿಕೈಗಾರಿಕೆಗಳು ಈಗ ದೂರವಾಗುತ್ತಿರುವುದು ತುಂಬಾ ದುಃಖಕರವಾದ ಸಂಗತಿಯಾಗಿದೆ. ಗುಡಿಕೈಗಾರಿಕೆಗಳನ್ನು ಪ್ರೋತ್ಸಾಹಿಸಿ, ನಮ್ಮ ಸಂಸ್ಕೃತಿಯನ್ನು ಉಳಿಸಿ, ಕರಕುಶಲ ಕಲೆಗಳನ್ನು ನೀರೆರೆದು ಇನ್ನೂ ಬೆಳೆಸಬೇಕಾಗುವುದು ಅತೀ ಅಗತ್ಯ. ಈಗ ಕೈಮಗ್ಗ, ಮಡಿಕೆ ತಯಾರಿ, ಚಾಪೆ ಹೆಣೆಯುವುದು ಬುಟ್ಟಿ ತಯಾರಿ, ಮರದ ಕೆಲಸ, ಚಿನ್ನದ ಕೆಲಸ ಕಬ್ಬಿಣದ ಕೆಲಸ ಇತ್ಯಾದಿಗಳನ್ನು ಪ್ರೋತ್ಸಾಹಿಸುವುದು ಅತೀ ಅಗತ್ಯ.

ನಮ್ಮ ಪಂಚಾಯತಿನ ಕೆಲವು ಪ್ರದೇಶಗಳಲ್ಲಿ ಹತ್ತಿ ಬೆಳೆಗೆ ಯೋಗ್ಯವಾದ ಮಣ್ಣು ಇರುವುದು ಕಂಡು ಬರುತ್ತದೆ. ಅಂತಹ ಪ್ರದೇಶಗಳಲ್ಲಿ ರೈತರಿಗೆ ಹತ್ತಿ ಬೆಳೆಸಲು ಪ್ರೋತ್ಸಾಹಿಸುವುದು ಅಲ್ಲಿ ಬೆಳೆಸಿದ ಹತ್ತಿಯನ್ನು ಕಚ್ಚಾ ವಸ್ತುವನ್ನಾಗಿಸಿ ನಮ್ಮ ಪಂಚಾಯತಿನ ಪ್ರತಿಯೊಂದು ವಾರ್ಡುಗಳಲ್ಲಿ ತಲಾ ಎರಡಂತೆ ಕೈ ಮಗ್ಗದ ಗುಡಿಕೈಗಾರಿಕೆಗಳನ್ನು ತೆರೆಯುವುದು. ಈ ಮೂಲಕ ನಮ್ಮ ಊರಿನ ಜನತೆ ನಮ್ಮಲ್ಲೆ ನಾವು ತಯಾರಿಸಿದ ಬಟ್ಟೆಬರೆಗಳನ್ನು ಬಳಸಲು ಸೂಕ್ತ ಆರುಕಟ್ಟೆ ತೆರೆಯುವುದು ನಮ್ಮಲ್ಲಿ ಜನತೆ ಖಾದಿ ಬಟ್ಟೆಯನ್ನು ಧರಿಸಲು ಪ್ರೋತ್ಸಾಹಿಸುವುದು. ಈ ಮೂಲಕ ನಮ್ಮ ರಾಷ್ಟ್ರಪಿತನ ಕನಸ್ಸನ್ನು ನನಸಾಗಿಸುವುದು ಖಾದಿ ಬಟ್ಟೆಯಿಂದ ಸಿದ್ಧ ಉಡುಪುಗಳನ್ನು ತಯ ಾರಿಸಲು ಸಿದ್ಧ ಉಡುಪುಗಳ ತಯಾರಿ ಮಾಡವ ಒಂದು ಕೇಂದ್ರವನ್ನು ಕೂಡ ತೆರೆಯುವುದು. ಇಲ್ಲಿ ಉತ್ಪಾದಿಸಿದ ಉತ್ಪನ್ನ (ಸಿದ್ಧ ಉಡುಪು)ಗಳನ್ನು ವಾರದ ಸಂತೆಯಲ್ಲಿ ವ್ಯಾಪಾರ ಮಾಡುವುದು. ಹೆಚ್ಚಿನ ಉಡುಪುಗಳನ್ನು ಹಬ್ಬದ ಸಂದರ್ಭಗಳಲ್ಲಿ ಕಡಿತ ಬೆಲೆಯಲ್ಲಿ ಮಾರಾಟ ಮಾಡುವುದು.

ನಮ್ಮಲ್ಲಿ ಮಡಿಕೆ ತಯಾರಿಗೆ ಬೇಕಾದ ಉತ್ತಮ ಮಣ್ಣಿದೆ. ಆಸಕ್ತ 'ಕುಂಬಾರ' ವರ್ಗದ ಜನತೆಯನ್ನು ಗುರುತಿಸಿ ಮಡಿಕೆ ತಯಾರಿ ಕೇಂದ್ರವನ್ನು ತೆರೆಯಲು ಸಹಾಯ ಮಾಡುವುದು. ಮಣ್ಣಿನ ಪಾತ್ರೆಯಲ್ಲಿ ಬೇಯಿಸಿದ ಆಹಾರಗಳಿಗೆ ಹೆಚ್ಚಿನ ರುಚಿಯಿದೆ ಎನ್ನುವುದನ್ನೂ ನಮ್ಮ ಜನತೆಗೆ ತಿಳಿಯಪಡಿಸುವುದು. ಆರೋಗ್ಯಕ್ಕೆ ಕೂಡ ಒಳ್ಳೆಯದು. ನಮ್ಮ ಊರಲ್ಲಿ ಮಾರಾಟವಾಗಿ ಉಳಿದ ಮಡಿಕೆಗಳನ್ನು ಇತರ ಕಡೆಗಳಿಗೆ ರಫ್ತು ಮಾಡುವುದು. ಊರಿನ (ಪಂಚಾಯತಿನ) ಕುಂಬಾರರ ಸಹಕಾರಿ ಸಂಘವನ್ನು ತೆರೆದು ಅವರ ಏಳಿಗೆಗೆ ಶ್ರಯಿಸುವುದು. ಇದರ ಮೂಲಕ ಅವರ ಮಕ್ಕಳ ವಿದ್ಯಾಭ್ಯಾಸಕ್ಕೆ ಸಹಾಯ ಮಾಡುವುದು.

ಚಾಪೆ ಹೆಣೆಯಲು ಪ್ರತಿ ವಾರ್ಡ್‌ಗಳಲ್ಲಿ ಒಂದು ತರಬೇತಿ ಶಾಲೆಯನ್ನು ತೆರೆಯುವುದು. 'ಬುಟ್ಟಿ' ನಮಗೆ ಬೇಕಾದ ಅತೀ ಅಗತ್ಯದ ಗುಡಿಕೈಗಾರಿಕೆಯ ಉತ್ಪನ್ನವಾಗಿದೆ. ಈಗ ಈ ಬುಟ್ಟಿಗಳನ್ನು ಪೂರೈಸುವವರ ಸಂಖ್ಯೆ ಅತೀ ಕಡಿಮೆಯಾಗುತ್ತಿದೆ. ರೈತರು, ಬಳಕೆದಾರರು ಬದಲಿ ವ್ಯವಸ್ಥೆ ಮಾಡುತ್ತಿದ್ದಾರೆ. ಹೀಗಾಗಬಾರದು ಅನ್ನುವುದು ನಮ್ಮ ಲಕ್ಷ್ಯ. ಬುಟ್ಟಿ ತಯಾರಿಸುವ ಜನರನ್ನು ಗುರುತಿಸಿ ಅವರನ್ನು ಪ್ರೋತ್ಸಾಹಿಸುವುದು. ಇತರರಿಗೂ ಅದರ ತರಬೇತಿಯನ್ನು ಕೊಡುವ ಹಾಗೆ ಮಾಡುವುದು. ಅವರ ಉತ್ಪನ್ನಗಳಿಗೆ ಬೆಲೆ ನಿಶ್ಚಯಿಸುವುದು ಕೂಡ ಪಂಚಾಯತಿನ ಜವಾಬ್ದಾರಿ.

ನಮ್ಮಲ್ಲಿ ಮರದ ಕೆಲಸ ಒಂದು ಮುಖ್ಯ ಉದ್ಯಮವಾಗಿದೆ. ಈಗ ಈ ಉದ್ಯಮಕ್ಕೆ ಕೊಡಲಿಯೇಟು ಬೀಳುತ್ತದೆ. ಕಾರಣ ಮರದ ಅಭಾವ, ಕಾಂಕ್ರೀಟ್ ಹಾಗೂ ಕಬ್ಬಿಣದ ಪೀಠೋಪಕರಣಗಳ ಬಳಕೆ ಹಾಗೂ ತಯಾರಿ ಹೆಚ್ಚುತ್ತಿರುವುದು ನಮ್ಮ ಶಿಲ್ಪ ಶಾಸ್ತ್ರದ ಪ್ರತೀಕವಾದ 'ಬಡಗಿ'ಗಳನ್ನು ಗುರುತಿಸಿ ಅವರಿಗೆ ಸೂಕ್ತ ಸಹಾಯ ನೀಡುವುದು. ಅವರ ಸಹಕಾರಿ ಸಂಘ ತೆರೆಯುವುದು ಅವರಿಗೆ ಕ್ಷೇಮನಿಧಿ ಏರ್ಪಡಿಸುವುದು. ಮರದ ಕೆಲಸದಲ್ಲಿ ಆಸಕ್ತಿ ಹೊಂದಿದ ಯುವಕರನ್ನು ಗುರುತಿಸಿ ಅವರಿಗೆ ತರಬೇತಿ ಕೊಡುವುದು. ತರಬೇತಿಯ ಸಮಯದಲ್ಲಿ ಅವರಿಗೆ ವಿದ್ಯಾರ್ಥಿ ವೇತನ ಹಾಗೂ ಇತರ ಭತ್ತೆಗಳನ್ನು ನೀಡುವುದು.

ನಮ್ಮ ಪಂಚಾಯತಿನ ಗುಡಿಕೈಗಾರಿಕೆಯ ವರ್ಗಕ್ಕೆ ಸೇರಿದವುಗಳಲ್ಲಿ ಬೀಡಿ ಕೈಗಾರಿಕೆ ಕೂಡ ಒಂದು ಹೆಚ್ಚಾಗಿ ಗ್ರಾಮ ಪ್ರದೇಶದ ಜನತೆ ಬೀಡಿಯನ್ನೇ ಆಶ್ರಯಿಸಿಕೊಂಡು ತಮ್ಮ ಜೀವನವನ್ನು ನಿರ್ವಹಿಸುತ್ತಾರೆ. ಆದರೆ ಈ ಬೀಡಿ ಉದ್ಯೋಗಿಗಳಿಗೆ ವೇತನ ತುಲ್ಯತೆಯಲ್ಲಿ ಇವರು ಕೆಲವು ಕಂಟ್ರಾಕ್ಟುದಾರರ ಶೋಷಣೆಗೆ ತುತ್ತಾಗುತ್ತಿರುವುದು ನಮ್ಮ ದುರದೃಷ್ಟಕರ. ಇವರನ್ನು ನಮ್ಮಲ್ಲಿ ಕೇರಳ ಸಹಕಾರ ವಲಯದಲ್ಲಿ ಪ್ರವರ್ತಿಸುವ ದಿನೇಶ್ ಬೀಡಿಯ ಬ್ರಾಂಚ್ ಕಡಿಮೆ ಕೆದುಂಬಾಡಿ, ಸುಂಕದಕಟ್ಟೆ ತಲಾ ಒಂದೊಂದು ಇವೆ. ಮುಂಬರುವ ವರ್ಷಗಳಲ್ಲಿ ಬೀಡಿ ಉದ್ಯೋಗಿಗಳ ಏಳಿಗೆಗಾಗಿ ನಮ್ಮ ಪಂಚಾಯತಿನ ಪ್ರತಿವಾರ್ಡುಗಳಲ್ಲಿ ತಲಾ ಒಂದೊಂದು ಬೀಡಿ ಬ್ರಾಂಚುಗಳನ್ನು ತೆರೆಯುವ ಉದ್ದೇಶ ನಮ್ಮದು. ಇದಕ್ಕಾಗಿ ಆಸಕ್ತಿಯುಳ್ಳ ಸ್ಥಳೀಯ ಯುವಕ ಯುವತಿಯರನ್ನು ಗುರುತಿಸುವ ಕೆಲಸ ಕಾರ್ಯವಾಗಬೇಕಾಗಿದೆ. ಅವರಿಗೆ ಸಿಗಬೇಕಾದ ಎಲ್ಲಾ ಸವಲತ್ತುಗಳನ್ನು ಸರಿಯಾದ ಸಮಯದಲ್ಲಿ ಒದಗಿಸುವಂತೆ ಮಾಡುವುದು ನಮ್ಮ ಮುಖ್ಯ ಉದ್ದೇಶವಾಗಿದೆ.

ಅದೇ ರೀತಿ ಧಾರಾಳವಾಗಿ ಗೆರಟೆ, ತೆಂಗಿನಗರಿಗಳು, ಕಂಗಿನ ಹಾಳೆ ತೆಂಗಿನ ಸಿಪ್ಪೆ ಇತ್ಯಾದಿಗಳು ಲಭಿಸುವುದರಿಂದ ಅವುಗಳನ್ನು ಉಪಯೋಗಿಸಿ ಕಾರ್ಯಾಚರಿಸುವ ಒಂದು ಕೈಗಾರಿಕಾ ವಲಯವನ್ನು ಪ್ರತಿ ವಾರ್ಡುಗಳಲ್ಲಿ ತೆರೆಯುವುದು. ಈ ಕೇಂದ್ರದಲ್ಲಿ ನಮಗೆ ಬೇಕಾದ ಗೆರಟೆಯಿಂದ ತಯಾರಿಸಿದ ಸೌಟು ಹಾಗೂ ಇತರ ಕರಕುಶಲ ವಸ್ತುಗಳನ್ನು ತಯಾರಿಸಲು ಸೂಕ್ತ ತರಬೇತಿ ನೀಡುವುದು. ಕಂಗಿನ ಹಾಳೆಗಳಿಂದ ಮುಟ್ಟಾಳೆ ತಯಾರಿ ತೆಂಗಿನ ಸೋಗೆಯಿಂದ ಗೊರಬೆ ಇತ್ಯಾದಿಗಳ ತಯಾರಿಗೆ ಬೇಕಾದ ತರಬೇತಿ ನೀಡುವುದು ನಮ್ಮ ಮುಖ್ಯ ಉದ್ದೇಶ. ಈ ರೀತಿ ನಮ್ಮ ಕೈಕಸುಬುಗಳಿಗೆ ಸಂಬಂಧಿಸಿದ ಗುಡಿಕೈಗಾರಿಕೆಗಳನ್ನು ಪ್ರೋತ್ಸಾಹಿಸುವುದು ನಮ್ಮ ಮುಖ್ಯ ಧ್ಯೇಯವಾಗಿದೆ.

ನಮ್ಮ ಪಂಚಾಯತಿನಲ್ಲಿ ಕೆಲವು ಬೃಹತ್ ಕೈಗಾರಿಕೆಗಳು ಕೂಡ ತಲೆ ಎತ್ತುವಂತೆ ಮಾಡಬೇಕಾಗಿದೆ. ನಮ್ಮ ಪಂಚಾಯತಿನ ಪ್ರತಿವಾರ್ಡುಗಳಲ್ಲಿ ಕೃಷಿಕರ ಸಮಸ್ಯೆಯನ್ನು ನಿವಾರಿಸಲು ಕೃಷಿಕರಿಗೆ ಬೇಕಾದ ಯಂತ್ರೋಪಕರಣಗಳನ್ನು ತಯಾರಿಸುವ ಒಂದು ಕೈಗಾರಿಕಾ ಘಟಕವನ್ನು ತೆರೆಯುವುದು. ರೈತರು ಬೆಳೆಸಿದ ಹಣ್ಣು ಹಂಪಲಗಳಾದ ಅನಾನಸು, ಮಾವು, ಚಿಕ್ಕು, ಹಲಸಿನ ಹಣ್ಣು ಇತ್ಯಾದಿಗಳನ್ನು ಸಂಸ್ಕರಣ ಮತ್ತು ಬಾಟ್ಲಿ / ಪ್ಯಾಕು ಮಾಡುವ ಕಾರ್ಖಾನೆಯನ್ನು ತೆರೆಯುವುದು. ಅವುಗಳ ರಫ್ತಿಗೆ ಸೂಕ್ತ ಕ್ರಮ ಕೈಗೊಳ್ಳುವುದು. ಅತೀ ಅಗತ್ಯ ವಾಗಿದೆ.

ನಮ್ಮ ಕೃಷಿ ಉತ್ಪನ್ನಗಳಾದ ಅಡಿಕೆ, ತೆಂಗಿನ ಕಾಯಿಗಳನ್ನು ಸಂಸ್ಕರಣೆ ಮಾಡುವ ಕೇಂದ್ರಗಳನ್ನು ತೆರೆಯುವುದು. ತೆಂಗಿನ ಎಣ್ಣೆಯಿಂದ ಇತರ

ಔಷಧೀಯ ತೈಲಗಳ ತಯಾರಿ ನಡೆಸುವುದು ಅವುಗಳ ವಿತರಣೆಗೆ ಸೂಕ್ತ ಮಾರುಕಟ್ಟೆಯನ್ನು ತೆರೆಯುವುದು. ನಮ್ಮ ರೈತರ ಇತರ ಉತ್ಪನ್ನಗಳಾದ ಕಾಳು ಮೆಣಸು, ಕೆಂಪು ಮೆಣಸು, ಸಾಸಿವೆ, ಅರಿಸಿನ ಇತ್ಯಾದಿಗಳನ್ನು ಹುಡಿ ಮಾಡಿ ಸಾಂಬಾರು ಪುಡಿ ತಯಾರಿಸುವ ಕೈಗಾರಿಕೆಗಳನ್ನು ನಮ್ಮ ಪ್ರತಿ ವಾರ್ಡುಗಳಲ್ಲಿ ತೆರೆಯುವುದು.

ನಮ್ಮಲ್ಲಿ ಲಭ್ಯವಿರುವ ಗಿಡಮೂಲಿಕೆಗಳನ್ನು ಬಳಸಿ ನಮಗೆ ಯೋಗ್ಯವಾದ ಆಯುರ್ವೇದ ಔಷಧಿಯನ್ನು ತಯಾರಿಸುವ ಒಂದು ಔಷಧ ಶಾಲೆಯನ್ನು ತೆರೆಯುವುದು ನಮ್ಮ ಉದ್ದೇಶವಾಗಿದೆ.

ಹಣ್ಣಿನ ರಸಗಳನ್ನು ಬಳಸಿ ತಂಪು ಪಾನೀಯಗಳನ್ನು ತಯಾರಿಸುವ ಒಂದು ಜ್ಯೂಸ್ ಸೆಂಟರ್‌ನ್ನು ನಮ್ಮ ಪಂಚಾಯತಿನ ಕೇಂದ್ರ ಭಾಗದಲ್ಲಿ ತೆರೆಯುವುದು. ಅಲ್ಲಿ ತಯಾರಿಸಿದ ಜ್ಯೂಸ್‌ಗಳನ್ನು ನಮ್ಮ ಪಂಚಾಯತಿನ ಇತರ ಕಡೆಗಳಿಗೆ ತಲುಪಿಸಲು ವ್ಯವಸ್ಥೆ ಮಾಡುವುದು. ಜೊತೆಗೆ ಇಲ್ಲಿಗೆ ಬೇಕಾದ ಹಣ್ಣು ಹಂಪಲು, ಹಾಲು ಇತ್ಯಾದಿಗಳನ್ನು ತರುವುದು ಇಂತಹ ಕೆಲಸಗಳನ್ನು ಜನಸಹಕಾರದಿಂದ ನಡೆಸುವುದು.

ಕೋಳಿ ಒಂದು ಉತ್ತಮ ಆಹಾರ. ನಮ್ಮ ಮನೆಗಳಲ್ಲಿ ಕೋಳಿ ಸಾಕಲು ಕೆಲವು ತಾಂತ್ರಿಕ ಅಡಚಣೆಗಳಿರುತ್ತವೆ. ಆದುದರಿಂದ ನಮ್ಮ ಪಂಚಾಯತಿನ ಪ್ರತೀ ವಾರ್ಡುಗಳಲ್ಲಿ ತಲಾ ಎರಡರಂತೆ ಕೋಳಿ ಸಾಕಣಾ ಹಾಗೂ ಅವುಗಳ ಮಾಂಸ ವಿತರಿಸುವ ಘಟಕವನ್ನು ತೆರೆಯುವುದು ಅವುಗಳಿಗೆ ಬೇಕಾದ ಆಹಾರಗಳ ಪೂರೈಕೆಯನ್ನು ಒದಗಿಸುವುದು. ಕೋಳಿಗಳಿಗೆ ಹಾಗು ನಮ್ಮ ಜಾನುವಾರುಗಳಿಗೆ ಬೇಕಾದ ಪೌಷ್ಟಿಕ ಆಹಾರಗಳನ್ನು ಒದಗಿಸಲು ಉತ್ತಮ ಗುಣಮಟ್ಟದ ಪಶು ಹಾಗೂ ಕೋಳಿ ಆಹಾರ ಸಂಸ್ಕರಣಾ ಕೇಂದ್ರವೊಂದನ್ನು ನಮ್ಮ ಪಂಚಾಯತು ಪರಿಸರದಲ್ಲಿ ತೆರೆಯುವುದು. ನಮ್ಮಲ್ಲಿ ಬಳಕೆಯಾಗಿ ಮತ್ತೂ ಉಳಿದರೆ ಅವುಗಳನ್ನು ವಿತರಿಸಲು ಯೋಗ್ಯ ಮಧ್ಯವರ್ತಿಗಳನ್ನು ನೇಮಿಸುವುದು. ಹೀಗೆ ಅವರಿಗೆ ಸ್ವ-ಉದ್ಯೋಗವನ್ನು ಕಲ್ಪಿಸುವುದು.

ನಾವು ನಿರ್ಮಿಸುವ ಕಟ್ಟಡಗಳಿಗೆ ಬೇಕಾದ ಕಿಟಕಿ, ಬಾಗಿಲುಗಳು, ಡಿಸೈನ್ಸ್‌ಗಳು ಸೂಕ್ತ ಸಮಯದಲ್ಲಿ ಸಿಗುವಂತಾಗಲು ನಮ್ಮ ಪಂಚಾಯತಿನ ವ್ಯಾಪ್ತಿಯಲ್ಲಿ ಬರುವ ಒಂದು ಸ್ಥಳದಲ್ಲಿ ಸಿಮೆಂಟಿನ Hollow Blocks ಕಿಟಕಿ, ಮತ್ತು ಮರದ ಕಿಟಕಿ, ಬಾಗಿಲುಗಳು, ಫರ್ನಿಚರ್ಸ್ ಇತ್ಯಾದಿಗಳನ್ನು ಒದಗಿಸಲು ಜನ ಸಹಭಾಗಿತ್ವದಲ್ಲಿ ಒಂದು ಕಿರುಕೈಗಾರಿಕೆಯನ್ನು ತೆರೆಯುವುದು.

ನಮ್ಮ ಮನೆಗಳಿಗೆ ಬೇಕಾದ ಕಬ್ಬಿಣದ ಸಾಮಾಗ್ರಿಗಳು (ಗೇಟುಗಳು, ಕಿಟಕಿ ಡಿಸೈನ್ಸ್) ಇತ್ಯಾದಿಗಳ ತಯಾರಿಸುವ ಇಂಜಿನಿಯರಿಂಗ್ ವರ್ಕ್ಸ್ ಕೇಂದ್ರಗಳನ್ನು ನಮ್ಮ ಪಂಚಾಯತು ವ್ಯಾಪ್ತಿಯಲ್ಲಿ ಎರಡು ವಾರ್ಡುಗಳಿಗೆ ತಲಾ ಒಂದರಂತೆ ತೆರೆಯುವುದು ಅಲ್ಲಿಗೆ ಬೇಕಾದ ವಿದ್ಯುತ್, ಸಾರಿಗೆ ವ್ಯವಸ್ಥೆ, ಸಂಪರ್ಕದ ವ್ಯವಸ್ಥೆ ಇತ್ಯಾದಿಗಳನ್ನು ಮಾಡುವುದು. ಈ ಘಟಕಗಳಲ್ಲಿ ಉತ್ತಮ ಗುಣಮಟ್ಟದ ಕಬ್ಬಿಣದ ಫರ್ನಿಚರ್ಸ್ ತಯಾರಿಸಿ ಹೊರರಾಜ್ಯಕ್ಕೆ ರಫ್ತು ಮಾಡುವುದು. ಅಲ್ಲಿ ನಮ್ಮ ಏಜೆನ್ಸಿಯನ್ನು ತೆರೆಯುವುದು.

ಈಗ ಪ್ಲಾಸ್ಟಿಕ್ ಬಳಕೆ ದಿವಸದಿಂದ ದಿವಸಕ್ಕೆ ಹೆಚ್ಚುತ್ತಿದೆ. ನಮಗೆ ಬೇಕಾದ ಪ್ಲಾಸ್ಟಿಕ್ ಪಾತ್ರೆಗಳನ್ನು ದೂರದಿಂದ ತರುವಾಗ ತುಂಬ ಜಾಗ್ರತೆ ವಹಿಸಬೇಕಾಗುತ್ತದೆ. ಜನತೆಯ ಈ ಸಂಕಷ್ಟ ನಿವಾರಣೆಗೆ ನಮ್ಮ ಪಂಚಾಯತು ವ್ಯಾಪ್ತಿಯಲ್ಲಿ ಪ್ಲಾಸ್ಟಿಕ್ ಇಂಡೆಸ್ಟ್ರಿಯೊಂದನ್ನು ತೆರೆಯುವುದು ನಮ್ಮ ಪ್ರಧಾನ ಉದ್ದೇಶವಾಗಿದೆ. ಈ ಘಟಕದಲ್ಲಿ ಪ್ಲಾಸ್ಟಿಕ್ ಬಕೇಟ್, ಗ್ಲಾಸ್, ಪೈಪ್ಸ್, ಇತ್ಯಾದಿ ಬಹುಪಯೋಗಿ ಸಾಮಾಗ್ರಿಗಳ ಉತ್ಪಾದನೆ ಮತ್ತು ರಫ್ತು ಮಾಡುವುದು. ಉತ್ತಮ ಗುಣಮಟ್ಟದ ಕುರ್ಚಿ, ಸೋಫಾಗಳ ತಯಾರಿ ಮಾಡುವುದು. ಅವುಗಳನ್ನು ಮಾರುಕಟ್ಟೆಯ ಮೂಲಕ ವಿತರಿಸಲು ಮಾರುಕಟ್ಟೆಯೊಂದನ್ನು ತೆರೆಯುವುದು.

ನಮ್ಮಲ್ಲಿಗೆ ಬೇಕಾದ ಅಲ್ಯೂಮಿನಿಯಂ ಅದುರುಗಳನ್ನು ಆಮದು ಮಾಡಿ ನಮಗೆ ಬೇಕಾದ ಅಲ್ಯುಮಿನಿಯಂ ಪಾತ್ರೆಗಳನ್ನು ತಯಾರಿಸುವ ಕೇಂದ್ರವೊಂದನ್ನು ನಮ್ಮ ಪಂಚಾಯತು ಪರಿಸರದಲ್ಲಿ ತೆರೆಯುವುದು ಅತೀ ಅಗತ್ಯ. ಈ ಕೈಗಾರಿಕೆಯಲ್ಲಿ ನಮಗೆ ಬೇಕಾದ ಎಲ್ಯುಮಿನಿಯಂ ಪಾತ್ರೆಗಳು, ಬಾಟ್ಲಿಗಳು, ಪೈಪುಗಳು ಕಪಾಟುಗಳು ಕಿಟಕಿ ಇತ್ಯಾದಿಗಳನ್ನು ತಯಾರಿಸುವುದು.

ನಮ್ಮ ಪಂಚಾಯತಿನಲ್ಲಿ ಉತ್ತಮ ರೀತಿಯಲ್ಲಿ ಕಾರ್ಯಪ್ರವೃತ್ತವಾಗುವ ಒಂದು ಪ್ರಿಂಟಿಂಗ್. ಪ್ರೆಸ್‌ನ ಅವಶ್ಯಕತೆಯಿದೆ. ಈಗ ಇಲ್ಲಿನ ಜನತೆ ಮುದ್ರಣಕ್ಕಾಗಿ ಮಂಜೇಶ್ವರಕ್ಕೆ ಹೋಗಬೇಕಾಗುತ್ತದೆ. ಮುಂಬರುವ ವರ್ಷಗಳಲ್ಲಿ ನಮ್ಮ ಜನತೆಯ ಈ ಬೇಡಿಕೆಯನ್ನು ಈಡೇರಿಸುವುದು ನಮ್ಮ ಉದ್ದೇಶವಾಗಿದೆ. ಆಧುನಿಕ ರೀತಿಯ ತಂತ್ರಜ್ಞಾನವನ್ನ ಅಳವಡಿಸಿ ಕಾರ್ಯನಿರ್ವಹಿಸುವ ಸರಕಾರಿ ಮುದ್ರಣಾಲಯವೊಂದನ್ನು ತೆರೆದು ಇಲ್ಲಿನ ಜನತೆಗೆ ಉಚಿತದರದಲ್ಲಿ ಮುದ್ರಣ ಮಾಡಿಕೊಡುವುದು ನಮ್ಮ ಪ್ರಧಾನ ಗುರಿಯಾಗಿದೆ. ಇಲ್ಲಿ ನಮ್ಮ ಇಲಾಖೆಗಳಿಗೆ ಸಂಬಂಧಿಸಿದ ಎಲ್ಲಾ ಅರ್ಜಿ, ಕಾಗದ ಪತ್ರಗಳು ಲಭಿಸುವಂತೆ ಮಾಡುವುದು. ಟೈಪ್‌ರೈಟಿಂಗ್, ಫೋಟೊ ಸ್ಟಾಟ್ (Xerox) ಘಟಕಗಳನ್ನು ತೆರೆಯುವುದು ವಿದ್ಯಾವಂತ, ಆಸಕ್ತ ಯುವಕ , ಯುವತಿಯರನ್ನು ಗುರುತಿಸಿ ಅವರಿಗೆ ಸೂಕ್ತ ತರಬೇತಿಯನ್ನು ಕೊಡುವುದು.

ಮನುಷ್ಯನು ಶ್ರೀಮಂತನಾದಂತೆ ತನ್ನ ಜೀವನ ಕ್ರಮದ ಶೈಲಿಯನ್ನೇ ಬದಲಾಯಿಸುತ್ತಾನೆ. ಗುಡಿಸಲಿನಿಂದ ಹಂಚಿನ ಮನೆಗೆ, ಹಂಚಿನಿಂದ ಕಾಂಕ್ರೀಟ್ ಮನೆಗೆ ಅವನ ವಾಸ್ತವ್ಯ ಬದಲಾಗುತ್ತಿದೆ. ಈಗ ನೆಲಕ್ಕೆ ಸಾರಣೆಯ ಬದಲು ಮೊಸೈಕ್ ಹಾಕುವ ಪದ್ಧತಿ ಜ್ಯಾರಿಯಲ್ಲಿದೆ. ಆದರೆ ಈ ಮೊಸೈಕ್ ಕರೀದಿಸಲು ದೂರದ ಕಾಸರಗೋಡಿಗೋ ಮಂಗಳೂರಿಗೋ ಹೋಗಬೇಕಾಗಿ ಬರುವುದು ನಮ್ಮ ದುರದೃಷ್ಟಕರ ಸಂಗತಿ. ಜನತೆಯ ಈ ಸಂಕಷ್ಟವನ್ನು ದೂರೀಕರಿಸಲು ನಮ್ಮ ಪರಿಸರದಲ್ಲಿ ಆಧುನಿಕ ರೀತಿಯ

ಉತ್ತಮ ಸಿಮೆಂಟ್ ಹಾಗೂ ಮೊಸೈಕ್ ವಿತರಣೆಗಾಗಿ ಒಂದು ಕೈಗಾರಿಕೆಯನ್ನು ತೆರೆಯುವುದು ಅತೀ ಅಗತ್ಯ.

ಜನತೆಯ ಆರ್ಥಿಕ ಗುಣಮಟ್ಟವನ್ನು ಅಭಿವೃದ್ಧಿ ಪಡಿಸಲು ಗೇರು ಬೀಜದ ಕೃಷಿಯನ್ನು ಪ್ರೋತ್ಸಾಹಿಸುವುದು ನಮ್ಮ ಉದ್ದೇಶವಾಗಿದೆ. ಗೇರು ಉತ್ಪನ್ನಗಳಿಗೆ ಮಾರುಕಟ್ಟೆಯಲ್ಲಿ ಉತ್ತಮ ಬೇಡಿಕೆಯಿದೆ. ಮ್ಮ ಈ ಯೋಜನೆಯಲ್ಲಿ ನಮ್ಮ ಪಂಚಾಯತಿನ ವ್ಯಾಪ್ತಿಯಲ್ಲಿ ಶೇರು ಬೀಜ ಸಂಸ್ಕರಣಾ ಕೇಂದ್ರವೊಂದನ್ನು ತೆರೆಯುವುದು. ಅದರ ಪರಿಸರದಲ್ಲಿ ಆಧುನಿಕ ರೀತಿಯ ಉತ್ತಮ ಗುಣಮಟ್ಟದ ತಿಂಡಿಗಳನ್ನು ತಯಾರಿಸುವ ಬೇಕರಿಯೊಂದನ್ನು ತೆರೆಯುವುದು. ಅಲ್ಲಿ ತಯಾರಿಸಿದ ಉತ್ಪನ್ನಗಳನ್ನು ವಿತರಿಸಲು ಸೂಕ್ತ ಕ್ರಮಗಳನ್ನು ಕೈಗೊಳ್ಳುವುದು ಬೇರೆ ಕಡೆಗಳಿಂದ ನಮಗೆ ಬೇಕಾದ ಕಚ್ಚಾವಸ್ತುಗಳನ್ನು ಆಮದು ಮಾಡುವುದು.

ಆಸಕ್ತ ನಿರುದ್ಯೋಗಿಗಳನ್ನು ಗುರುತಿಸಿ ಅವರಿಗೆ ಕಸೂತಿ ಕೆಲಸದಲ್ಲಿ ಪ್ರಾವೀಣ್ಯತೆಯನ್ನು ಕೊಟ್ಟು, ನಮ್ಮಲ್ಲಿ ರೆಡಿಮೇಡ್ (ಸಿದ್ಧ ಉಡುಪು) Garment ಒಂದನ್ನು ತೆರೆಯುವುದು. ಇಲ್ಲಿನ ಉಡುಪುಗಳ ಗುಣಮಟ್ಟವನ್ನು ಹೆಚ್ಚಿಸಿ, ಉಡುಪುಗಳಿಗೆ ಮಾರುಕಟ್ಟೆಯಲ್ಲಿ ಉತ್ತಮ ಬೇಡಿಕೆ ಸಿಗುವಂತೆ ಮಾಡುವುದು ನಮ್ಮ ಪ್ರಧಾನ ಲಕ್ಷ್ಯವಾಗಿದೆ.

ನಮ್ಮ ಪಂಚಾಯತಿನ ಪಾವೂರು, ಕತ್ತರಿಕೋಡಿ, ಕೂಟತ್ತಜೆ ಪ್ರದೇಶಗಳಲ್ಲಿ ಧಾರಾಳವಾಗಿ ಕಪ್ಪು ಕಲ್ಲು ಈ ಕಲ್ಲಿಗೆ ಈಗ ಧಾರಾಳ ಬೇಡಿಕೆ ಕೂಡ ಇದೆ. ಈ ಕಲ್ಲಿನಿಂದ ಸಿದ್ಧ ಉತ್ಪನ್ನಗಳನ್ನು ತಯಾರಿಸುವುದು ಅತೀ ಅಗತ್ಯ. ಕಡೆಯುವ ಕಲ್ಲು ಇತ್ಯಾದಿಗಳ ತಯಾರಿಕೆಯನ್ನು ಮಾಡಬಹುದು. ಈ ಕಲ್ಲುಗಳನ್ನು ಯೋಗ್ಯ ಉತ್ಪನ್ನಗಳಾಗಿ ಪರಿವರ್ತಿಸುವ ಕೈಗಾರಿಕೆಯನ್ನು ಜನಗಳ ಸಹಭಾಗಿತ್ವದೊಂದಿಗೆ ತೆರೆಯುವುದು ಇದಕ್ಕೆ ಸಂಬಂಧಿಸಿದ ಸಹಕಾರಿ ಸಂಘವೊಂದನ್ನು ನಡೆಸುವುದು.

ನಮ್ಮ ಪಂಚಾಯತಿನ ಬೋರ್ಕಳ ಅಡೆಕಳಕಟ್ಟೆ, ಕಜೆಪದವು, ಸುಂಕದ ಕಟ್ಟೆ, ವರ್ಕಾಡಿ, ಪಾವೂರು, ಕೆದುಂಬಾಡಿ ಮೊದಲಾದೆಡೆಗಳಲ್ಲಿ ಧಾರಾಳವಾಗಿ ಕೆಂಪು ಕಲ್ಲಿನ ಅಸ್ತಿತ್ವವಿರುವುದು ಕಂಡು ಬರುತ್ತಿದೆ. ಈ ಪ್ರದೇಶಗಳಲ್ಲಿ ಈಗ ಖಾಸಗೀರಂಗದಲ್ಲಿ ಯಾಂತ್ರೀಕೃತ ರೀತಿಯಲ್ಲಿ ಕಲ್ಲು ಕಡಿಯುವ ಉದ್ಯಮವು ಕಾರ್ಯಾಚರಿಸುತ್ತಿದೆ. ಈ ಉದ್ಯಮವನ್ನು ಸಹಕಾರಿ ವಲಯಕ್ಕೆ ಹಸ್ತಾಂತರಿಸಿ ಕಲ್ಲುಕಡಿಯುವ ಉದ್ಯಮದಲ್ಲಿ ಆಸಕ್ತವಂತರನ್ನು ಗುರುತಿಸಿ ಸಹಕಾರಿ ಸಂಘವೊಂದನ್ನು ತೆರೆಯುವುದು. ಇದು ಬಹಳ ಲಾಭದಾಯಕವಾದ ಉದ್ಯಮವಾಗಿರುವುದರಿಂದ ಹೇರಳ ಸಂಪನ್ಮೂಲವನ್ನು ಸಂಗ್ರಹಿಸಬಹುದು. ಸಂಘದ ಮೂಲಕ ಅಗತ್ಯವಿದ್ದಷ್ಟು ಯಂತ್ರೋಪಕರಣಗಳ ಖರೀದಿ ಮಾಡುವುದು. ಯಂತ್ರಗಳನ್ನು ದುರಸ್ತಿಗೊಳಿಸುವ ಘಟಕವೊಂದನ್ನು ತೆರೆಯುವುದು. ಕಲ್ಲಿನ ಸಾಗಣೆಗೆ ಲಾರಿಗಳನ್ನು ಖರೀದಿಸುವುದು. ಈ ಮೂಲಕ ಸ್ವ-ಉದ್ಯೋಗವನ್ನು ಪ್ರೋತ್ಸಾಹಿಸುವುದು.

ಕೈಗಾರಿಕಾ ಸಹಕಾರೀ ಸಂಘಗಳು

ನಮ್ಮ ಪಂಚಾಯತಿನಲ್ಲಿ ವಾಹನಗಳ ಸಂಖ್ಯೆಯೇನು ಕಡಿಮೆಯಿಲ್ಲ. ಈ ವಾಹನಗಳು ಕೆಟ್ಟು ಹೋದರೆ ಅವುಗಳ ಬಿಡಿ ಭಾಗಗಳನ್ನು ತರಬೇಕಿದ್ದರೆ ಮಂಗಳೂರಿಗೋ, ಕಾಸರಗೋಡಿಗೋ ಹೋಗಬೇಕಾಗಿ ಬರುವ ಸಂದರ್ಭಗಳೇ ಹೆಚ್ಚು. ಸಣ್ಣ ಪುಟ್ಟ ವರ್ಕ್ ಶಾಪ್‌ಗಳಿದ್ದರೂ ನುರಿತ ಅನುಭವೀ ಕೆಲಸಗಾರರ ಕೊರತೆಯಿರುತ್ತದೆ. ಈ ಸಮಸ್ಯೆಯನ್ನು ನಿವಾರಿಸಲು ಈಗ ಇರುವ ಸಣ್ಣ ಪುಟ್ಟ ಘಟಕಗಳಿಗೆ ಪ್ರೋತ್ಸಾಹ ಕೊಟ್ಟು ಅವರ ಕಾರ್ಯಾಧ್ಯಕ್ಷತೆಯನ್ನು ಹೆಚ್ಚಿಸುವುದು. ಅವರಿಗೆ ಬೇಕಾದ ಯಂತ್ರೋಪಕರಣಗಳನ್ನು ಖರೀದಿಸಲು ಸಹಾಯ ನೀಡುವುದು ನೂತನವಾಗಿ ವರ್ಕ್‌ಶಾಪ್‌ಗಳನ್ನು ತೆರೆಯಲು ಆಸಕ್ತಿ ಹೊಂದಿದವರನ್ನು ಗುರುತಿಸಿ ಅವರಿಗೆ ಸಹಾಯ ಧನ ಹಾಗೂ ಮಾರ್ಗದರ್ಶನ ಮತ್ತು ತರಬೇತಿಯನ್ನು ಕೊಡುವುದು.

ಯಂತ್ರೋಪಕರಣಗಳ ಬಿಡಿ ಭಾಗಗಳನ್ನು ಆಮದು ಮಾಡಿ ಇಲ್ಲಿನ ವರ್ಕ್‌ಶಾಪ್ ಕೆಲಸಗಾರರಿಗೆ ಒದಗಿಸಲು ಎಲ್ಲಾ ತರದ ವಾಹನಗಳಿಗೆ ಬೇಕಾದ ಬಿಡಿ ಭಾಗಗಳನ್ನು ವಿತರಿಸುವ ಕೇಂದ್ರವೊಂದನ್ನು ತೆರೆಯುವುದು.

ನಮ್ಮ ಪಂಚಾಯತಿನ ಎಲ್ಲಾ ತರದ ಕೈಗಾರಿಕಾ ವಲಯಗಳಿಗೆ ಸೂಕ್ತ ಆರ್ಥಿಕ ಸಹಾಯ ನೀಡಲು ಕೈಗಾರಿಕಾ ಸಹಕಾರಿಸಂಘವೊಂದನ್ನು ತೆರೆಯುವುದು. ನಮ್ಮ ಪಂಚಾಯತಿನಲ್ಲಿ ಎಲ್ಲಾ ತರದ ಗುಡಿಕೈಗಾರಿಕೆಗಳಿಗೂ ಸಂಬಂಧಿಸಿದ ಸಹಕಾರಿ ಸಂಘಗಳನ್ನು ಸ್ಥಾಪಿಸಿ ಗುಡಿ ಕೈಗಾರಿಕೆ ತೆರೆಯಲು ನೆರವಾಗುವುದು ಅತೀ ಅಗತ್ಯ.

ವಿದ್ಯಾಭ್ಯಾಸ

ವಿದ್ಯಾಭ್ಯಾಸವು ಒಂದು ನಿರಂತರ ಪ್ರಕ್ರಿಯೆಯಾಗಿದೆ ಇದು ಕೇವಲ ಒಂದು ಹಂತಕ್ಕೆ ಮಾತ್ರ ಸಂಬಂಧಿಸಿದ್ದಲ್ಲ. ಮನುಷ್ಯನು ಹುಟ್ಟಿನಿಂದ ಸಾವಿನವರೆಗೆ ಒಂದಲ್ಲ ಒಂದು ವಿಷಯವನ್ನು ಕಲಿಯುತ್ತಿರುತ್ತಾನೆ. ಶಿಕ್ಷಣವೆಂಬುದು ಮಗುವಿನ ಸರ್ವತೋಮುಖ ವಿಕಾಸವಾಗಿದೆ. ಮಹಾತ್ಮಗಾಂಧೀಯವರು ಹೇಳಿದ ಹಾಗೆ ಮಗುವಿನಲ್ಲಿ ಅಡಗಿದ ಸುಪ್ತ ಪ್ರತಿಭೆಗಳನ್ನು ಬೆಳಕಿಗೆ ತರುವುದು ಶಿಕ್ಷಣವಾಗಿದೆ.

ನಮ್ಮ ಶಿಕ್ಷಣ ಪದ್ಧತಿಗಳನ್ನು ಮುಖ್ಯವಾಗಿ ಎರಡಾಗಿ ವಿಂಗಡಿಸಲು ನಮಗೆ ಸಾಧ್ಯವಿದೆ. ಮೊದಲನೆಯದಾಗಿ ನಮ್ಮ ಔಪಚಾರಿಕ ವಿದ್ಯಾಸಂಸ್ಥೆಗಳು - ಶಾಲೆ ಕಾಲೇಜುಗಳು ಇತ್ಯಾದಿ. ಎರಡನೆಯದಾಗಿ ಅನೌಪಚಾರಿಕ ವಿದ್ಯಾ ಪದ್ಧತಿ- ಇಲ್ಲಿ ಯಾವುದೇ ರೀತಿ ನಿಯಮಗಳ ಚೌಕಟ್ಟು ಕಲಿಯುವವನಿಗಿರುವುದಿಲ್ಲ.

ಅಂತೂ ನಮ್ಮ ದೇಶದ ಹಿತದೃಷ್ಟಿಯಿಂದ ನಮ್ಮ ಭವಿಷ್ಯವನ್ನುದ್ದೇಶಿಸಿ ನಾವು ನಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣವನ್ನು ಒದಗಿಸಬೇಕಾಗಿದೆ. ವಿದ್ಯಾಭ್ಯಾಸದ ಗುಣಮಟ್ಟ ದಿನದಿಂದ ದಿನಕ್ಕೆ

ಕುಸಿಯುತ್ತಿದೆ. ವಿದ್ಯಾಭ್ಯಾಸದ ಗುಣಮಟ್ಟವನ್ನು ಕಾಪಾಡಲು ನಾವು ಶಕ್ತಿಮೀರಿ ದುಡಿಯಬೇಕಾಗಿದೆ. ಇಂದಿನ ಮಕ್ಕಳೇ ಮುಂದಿನ ಜನಾಂಗ ಎನ್ನುವುದನ್ನು ನಾವು ಮರೆಯಬಾರದು. ಶಿಕ್ಷಣವೆಂಬುದು ಸಾಮಾಜಿಕ ಪ್ರಕ್ರಿಯೆಯಾಗಿದೆ. ಸಮಾಜದ ಸರ್ವತೋಮುಖವಾದ ಅಭಿವೃದ್ಧಿಯನ್ನು ಗುರಿಯಾಗಿಸಿರಿ ಕಾರ್ಯ ನಿರ್ವಹಿಸಬೇಖಾದ ಹೊಸ ತಲೆಮಾರೊಂದನ್ನು ನಿರ್ಮಿಸುವುದು ಶಿಕ್ಷದ ಪ್ರಧಾನ ಗುರಿಯಾಗಿದೆ. ಶಿಕ್ಷಣವು ಒಂದು ಅಭಿವೃದ್ಧಿ ಕಾರ್ಯಕ್ರಮವೂ ಆಗಿದೆ. ಆದುದರಿಂದ ಒಂದು ಪ್ರದೇಶದಲ್ಲಿ ದೀರ್ಘ ಕಾಲಿಕ ಹಾಗೂ ಸ್ಥಿರವಾದ ಸಾಧನೆಗಳನ್ನುಂಟು ಮಾಡಲು ಶಿಕ್ಷಣಕ್ಕೆ ಸಾಧ್ಯವಾಗಬೇಕು.

ಶಿಕ್ಷಣ ರಂಗದಲ್ಲಿ ಕೇರಳವು ಇತರ ರಾಜ್ಯಗಳಿಗೆ ಮಾದರಿಯಾಗಿ ನಿಂತಿದೆ. ಸಾಕ್ಷರತಾ ಆಂದೋಲನದ ಮೂಲಕ ಎಲ್ಲರಿಗೂ ಅಕ್ಷರಾಭ್ಯಾಸವನ್ನು ಮೂಡಿಸಿದ ಹೆಗ್ಗಳಿಕೆಗೆ ಪಾತ್ರವಾದ ರಾಜ್ಯ ನಮ್ಮದಾಗಿದೆ. ಐದು ವರ್ಷ ಪ್ರಾಯ ಪೂರ್ತಿಯಾದ ಹೆಚ್ಚಿನ ಮಕ್ಕಳು ತಮ್ಮ ಔಪಚಾರಿಕ ವಿದ್ಯಾಭ್ಯಾಸವನ್ನು ಪ್ರಾರಂಭಿಸುತ್ತಾರೆ. ನಮ್ಮಲ್ಲಿ ಸಾರ್ವತ್ರಿಕ ಹಾಗೂ ಉಚಿತ ಪ್ರಾಥಮಿಕ ವಿದ್ಯಾಭ್ಯಾಸ ಗುಣಮಟ್ಟ ದಿವಸದಿಂದ ದಿವಸಕ್ಕೆ ಕುಸಿಯುತ್ತಿರುವುದು ದುಃಖಕರ ಸಂಗತಿಯಾಗಿದೆ. ನಮ್ಮಲ್ಲಿನ 85% ಮಕ್ಕಳು ಕೂಡ ನಿಗದಿತ ಅಂಕಗಳಿಸಿ ಮಾಧ್ಯಮಿಕ ಪರೀಕ್ಷೆಯಲ್ಲಿ ಉತ್ತೀರ್ಣರಾಗುತ್ತಿಲ್ಲ. ಕಾರಣ ನಮ್ಮ ಶಿಕ್ಷಣ ನೀತಿಯಲ್ಲಿ ಕೆಲವು ಲೋಪದೋಷಗಳಿರುವುದು ಎಂದು ಸ್ಪಷ್ಟವಾಗುವುದು.

ನಮ್ಮ ಮಕ್ಕಳ ಶಿಕ್ಷಣದ ಗುಣಮಟ್ಟವನ್ನು ಅಭಿವೃದ್ಧಿ ಪಡಿಸಲು ಮಕ್ಕಳ ಉನ್ನತ ಫಲಿತಾಂಶವನ್ನು ಲಕ್ಷ್ಯವಾಗಿಟ್ಟುಕೊಂಡು ನಮ್ಮ ಶಿಕ್ಷಣಪದ್ಧತಿಯಲ್ಲಿ ನಮಗೆ ಕೆಲವು ಬದಲಾವಣೆ ಸುಧಾರಣೆಗಳನ್ನು ಮಾಡಲು ಸಾಧ್ಯವಿದೆ. ಅವುಗಳು ಅಧ್ಯಾಪಕರಿಗೆ ಉತ್ತರ ತರಬೇತಿ ನೀಡುವುದು

ನವೀನ ರೀತಿಯ ಬೋಧನಾ ಪದ್ಧತಿಯನ್ನು ಅಳವಡಿಸುವುದು ಉತ್ತಮ ರೀತಿಯಲ್ಲಿ ಮೌಲ್ಯಮಾಪನ ನಡೆಸುವುದು. ಶಿಕ್ಷಣೇತ್ತರ ಚಟುವಟಿಕೆಗಳಲ್ಲಿ ಮಕ್ಕಳಿಗೆ ಆಸಕ್ತಿ ಮೂಡಿಸುವುದು. ಮಕ್ಕಳಿಗೆ ಮನೆಯಲ್ಲಿರುವ ಸಮಸ್ಯೆಗಳ ನಿವಾರಣೆಗೆ ತಕ್ಕ ಕ್ರಮ ಕೈಗೊಳ್ಳುವುದು ಸಾಮಾಜಿಕವಾಗಿ ಹಿಂದಳಿದವರನ್ನು ಮೇಲಕ್ಕೆ ತರುವುದು.

ಪರೀಕ್ಷಾ ಕ್ರಮದಲ್ಲಿ ಸುಧಾರಣೆ ತರುವುದು.

ಜೀವನಕ್ಕೂ ಶಿಕ್ಷಣಕ್ಕೂ ಯಾವುದೇ ರೀತಿಯ ಸಂಬಂಧ ಇಲ್ಲದಿರುವುದು. ಹೆತ್ತವರಿಗೆ ಶಿಕ್ಷಣದ ಬಗ್ಗೆ ಅರಿವು ಇಲ್ಲದಿರುವುದು. ಶಿಕ್ಷಣದ ಬಗ್ಗೆ ನೆಲೆ ನಿಂತಿರುವ ತಪ್ಪು ಕಲ್ಪನೆಗಳು.

ಪ್ರಾದೇಶಿಕ ವಿದ್ಯಾವಂತರಿಗೆ ಶಿಕ್ಷಣ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಲು ಅವಕಾಶ ಇಲ್ಲದಿರುವುದು.

P.T.A. Mother PTA ಗಳನ್ನು ಹೆಚ್ಚು ಶಕ್ತಗೊಳಿಸುವುದು.

ಮೇಲೆ ಹೇಳಿದ ಸೂಚಿಸಿದ ಎಲ್ಲಾ ಕ್ರಮಗಳನ್ನು ಕೈಗೊಂಡು ನಮ್ಮ ಮಕ್ಕಳ ಭವಿಷ್ಯವನ್ನು ಉತ್ತಮ ಪಡಿಸುವುದು ನಮ್ಮ ಮುಖ್ಯ ಧ್ಯೇಯವಾಗಿದೆ.

ನೆಲೆಯಲ್ಲಿರುವ ಔಪಚಾರಿಕ ವಿದ್ಯಾಸಂಸ್ಥೆಗಳು :

ನಮ್ಮ ಪಂಚಾಯತಿನಲ್ಲಿ ವಿದ್ಯಾಭ್ಯಾಸ ಸೌಕರ್ಯಗಳು ತೀರ ಕಡಿಮೆ ಐದು, ಕಿರಿಯ ಪ್ರಾಥಮಿಕ ಶಾಲೆಗಳು, ಮೂರು ಹಿರಿಯ ಪ್ರಾಥಮಿಕ ಶಾಲೆಗಳು ಹಾಗೂ ಕೇವಲ ಒಂದೇ ಒಂದು ಹೈಸ್ಕೂಲು ಮಾತ್ರ ಇಲ್ಲಿನ ಔಪಚಾರಿಕ ವಿದ್ಯಾಭ್ಯಾಸ ಕೇಂದ್ರಗಳಾಗಿವೆ. ಈ ಕೇಂದ್ರಗಳು ಇಲ್ಲಿನ ಮಕ್ಕಳ ಮಟ್ಟಿಗೆ ಏನೇನೂ ಸಾಲದು. ನಮ್ಮ ಪಂಚಾಯತು ಗುಡ್ಡ ಬೆಟ್ಟಗಳಿಂದ ಆವರಿಸಿದ ಸ್ಥಳವಾದುದರಿಂದ ಆ ಗಿರಿಪ್ರದೇಶಗಳು ಸಾರಿಗೆ ಸೌಕರ್ಯದಿಂದಲೂ ವಂಚಿತವಾಗಿವೆ. ಆ ತೀರ ಹಿಂದುಳಿದ ಪ್ರಾದೇಶದ ಪುಟ್ಟ ಮಕ್ಕಳು 3-4ಕಿ.ಮೀ. ದೂರದಲ್ಲಿರುವ ಪ್ರಾಥಮಿಕ ಶಾಲೆಗಳನ್ನು ಸೇರುವಾಗ ಒಮ್ಮೊಮ್ಮೆ ಮಧ್ಯಾಹ್ನದ ಊಟದ ಸಮಯವಾಗುವುದು ಕೂಡ ಉಂಟು. ನಮ್ಮ ಪಂಚಾಯತಿನ ಕೆಲವು ಭಾಗದ ಮಕ್ಕಳು ತಮ್ಮ ಶಿಕ್ಷಣಕ್ಕಾಗಿ ಹೊರ ರಾಜ್ಯವನ್ನೇ ಅವಲಂಭಿಸಿರುವುದು ನಮಗೆ ಕಂಡು ಬರುತ್ತದೆ. ಮುಂದಿನ ನಮ್ಮ ಯೋಜನೆಯ ಕಾಲಾವಧಿಯಲ್ಲಿ ನಮ್ಮಲ್ಲಿನ ಮಕ್ಕಳ ವಿದ್ಯಾಭ್ಯಾಸದ ಸಮಸ್ಯೆಗಳನ್ನು ದೂರೀಕರಿಸಬೇಕಾದುದು ನಮ್ಮ ಮುಖ್ಯ ಕರ್ತವ್ಯವಾಗಿದೆ. ಈಗ ನೆಲೆಯಲ್ಲಿರುವ ಶಾಲೆಗಳಿಗೆ ತೊಂದರೆಯಾಗದ ರೀತಿಯಲ್ಲಿ ಹೊಸ ನೂತನ ಶಾಲೆಗಳನ್ನು ತೆರೆಯುವುದು ನಮ್ಮ ಉದ್ದೇಶವಾಗಿದೆ.

ಮಕ್ಕಳು, ಉದ್ಯೋಗಸ್ಥರು, ಅಧ್ಯಾಪಕರು ಮುಂತಾದ ವಿವರ :-

ನಮ್ಮ ಪಂಚಾಯತು ವಿದ್ಯಾಭ್ಯಾಸಮಟ್ಟದಲ್ಲಿ ತೀರ ಹಿಂದೆಉಳಿದಿದೆ. ನಮ್ಮಲ್ಲಿರುವ ಶಾಲೆಗಳಲ್ಲಿ ಒಟ್ಟು 3072 ಮಂದಿ ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ನಮ್ಮ ಶಾಲೆಗಳಲ್ಲಿ ಹುಡುಗರು ಹಾಗೂ ಹುಡುಗಿಯರು ಒಟ್ಟಿಗೆ ವಿದ್ಯಾಭ್ಯಾಸವನ್ನು ಮಾಡುತ್ತಿದ್ದಾರೆ. ಇಲ್ಲಿರುವ ಒಂಭತ್ತು ಶಾಲೆಗಳ ಪೈಕಿ ಎಂಟು ಶಾಲೆಗಳು ಕೂಡಾ ಖಾಸಗೀ ಶಾಲೆಗಳಾಗಿವೆ. ನಮ್ಮ ಶಾಲೆಗಳಲ್ಲಿರುವ ಮಕ್ಕಳಲ್ಲಿ ಹುಡುಗರ ಸಂಖ್ಯೆಯೇ ಹೆಚ್ಚಾಗಿದೆ. ಈಗ 1666 ಹುಡುಗರೂ 1406 ಮಂದಿ ಹುಡುಗಿಯರೂ ತಮ್ಮ ವಿದ್ಯಾಭ್ಯಾಸವನ್ನು ಮುಂದುವರಿಸುತ್ತಿದ್ದಾರೆ.

ನಮ್ಮ ಪಂಚಾಯತಿನ ಕೆಲವು ಭಾಗಗಳಲ್ಲಿ ಪರಿಶಿಷ್ಟ ಜಾತಿ ಹಾಗೂ ವರ್ಗಗಳ ಜನರು ಹೆಚ್ಚಾಗಿ ವಾಸಿಸುತ್ತಾರೆ. ಅವರ ಮಕ್ಕಳ ವಿದ್ಯಾಭ್ಯಾಸದ ಗುಣಮಟ್ಟವನ್ನು ಹೆಚ್ಚಿಸಲು, ಅವರಿಗೆ ಪ್ರೋತ್ಸಾಹ ಕೊಡಲಾಗುತ್ತಿದೆ. ಮಕ್ಕಳಿಗೆ ಸರಕಾರವು ಸ್ಕೋಲರ್‌ಶಿಪ್ ಹಾಗೂ ಉಚಿತ ಪುಸ್ತಕ, ಬಟ್ಟೆಬರೆಗಳನ್ನು ಒದಗಿಸುತ್ತದೆ ನಮ್ಮ ಪಂಚಾಯತಿನಲ್ಲಿ 266 ವಿದ್ಯಾರ್ಥಿಗಳು ಪರಿಶಿಷ್ಟ ಜಾತಿ ಹಾಗೂ ವರ್ಗಕ್ಕೆ ಸೇರಿದವರಾಗಿದ್ದಾರೆ. ಈಗ ಅವರ ವಿದ್ಯಾಭ್ಯಾಸದ ಗುಣಮಟ್ಟವು ಉತ್ತಮಗೊಳ್ಳುತ್ತಿದೆ. ಪ್ರಾಥಮಿಕ ಹಂತ (ಕಿರಿಯ) ದಲ್ಲಿ ಎಲ್ಲಾ ಮಕ್ಕಳಿಗೂ ವಿದ್ಯಾಭ್ಯಾಸ

ಇಲಾಖೆಯವರು ಸೌಜನ್ಯವಾಗಿ ಪುಸ್ತಕಗಳನ್ನು ಒದಗಿಸುವ ಪದ್ಧತಿಯ ಎರಡು ವರ್ಷಗಳಿಂದೀಚೆಗೆ ನಮ್ಮಲ್ಲಿ ಜ್ಯಾರಿಯಲ್ಲಿದೆ.

ಶಾಲೆಯಲ್ಲಿರುವ ಮಕ್ಕಳ ವಿವರಗಳು

ಶಾಲೆಯ ಹೆಸರು	ಹುಡುಗರು	ಹುಡುಗಿಯರು	ಒಟ್ಟು ಮಕ್ಕಳು
1. ಜಿ.ಎಲ್. ಪಿಯಸ್ ಪಾತೂರು	51	57	108
2. ಎಸ್.ವಿ.ವಿ. ಎಚ್.ಎಸ್. ಕೊಡ್ಲಮೊಗರು	369	277	646
3. ಎ.ಎಲ್.ಪಿ.ಎಸ್. ಪಾವೂರು	175	119	294
4. ಎಸ್.ವಿ.ವಿ.ಎ.ಯು ಪಿ.ಎಸ್. ಕೊಡ್ಲಮೊಗರು	504	422	926
5. ಎ.ಯು.ಎ.ಎಸ್. ಆನೆಕಲ್ಲು	152	139	291
6. ಎ.ಯು.ಪಿ.ಎನ್. ಬಾಕ್ರಬೈಲು	231	223	454
7. ಎಸ್.ಎಸ್.ಎ.ಎಲ್.ಪಿ.ಎಸ್ ಮೂಡುರು ತೋಕೆ	83	86	169
8. ಎ.ಎಲ್.ಪಿ.ಎಸ್. ಕಾಪ್ರಿ	22	30	52
9.S.V.B ಎಲ್‌ಪಿಎಸ್. ಬಜಲಕರಿಯ	79	53	132
ಒಟ್ಟು	1666	1406	3072

ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ಮಕ್ಕಳ ವಿವರ

SL. No.	Name of the school	Boys	Girls	Total
1.	A.U.P.S. Anekal	24	29	53
2.	A.U.P.S. Bakrabail	24	17	41
3.	S:V.B. Alp School Bajakakaria	2	1	13
4.	S.V.V. AUPS School Kadlomogaru	32	32	64
5.	ALP School Kapri	1	1	2
6.	ALP School Pavoor	19	18	37
7.	Govt LP School Pathur	-	-	-
8.	S.S. ALP School Moodoor thoke	7	15	22
9.	SVV. High school Kodlamogaru	20	24	44
	Total	129	137	266

ನಮ್ಮ ಪಂಚಾಯತಿನಲ್ಲಿ ತೆರೆಯಲು ಉದ್ದೇಶಿಸಿದ ವಿದ್ಯಾಸಂಸ್ಥೆಗಳ ಸ್ಥಳಗಳು

ವರ್ಗಗಳು	ಬಾಲವಾಡಿಗಳು	ಕಿರಿಯ ಪ್ರಾಥಮಿಕ ಶಾಲೆಗಳು	ಹಿರಿಯ ಪ್ರಾಥಮಿಕ ಶಾಲೆಗಳು	ಮಾಧ್ಯಮಿಕ ಶಾಲೆಗಳು
I	ಕಲ್ಲಿ	ಕಲ್ಲಿ	ಪಾವೂರು	
I	ಕುಂಪವವು	ಕುಂಪವವು	ಡ್ಯಾಲ್ಲಗಳ್	ಆನೆಕ್ಲು
I	ಬೋಡ್ಡೋಡಿ	ಪಾಪನಕಾರಿಯ	ಒಪ್ಪಕೋಡಿ	ಪೂಮಗೋಡಿ
IV	ತೋಕೆ ಮೂಡಿ ಬಳಿ	ಶಾಲೆ ದೇವಾಲಯದ ಬಳಿ		ತೋಮೋಳಿ
V	ಮಂಜಲ್ಪಲು	ಪಿಮಂಗಲ ಆಕೆ		
VI	ಕೋಣಿ ಮನೆ	ಕುಯಾಡಿ	ಪಾವೂರು	ಪಾವೂರು
VII	ಆರ್ಡಪಲ್ಕೆದಪ್ಪು	ಪಲ್ಕೆದಪ್ಪು		
VIII	ಅಜ್ಜಿಲು ಸಂಚಯ	ಮುಳಿಕ್ಕಸ್ಥಳ		ಕುಂಪವವು
IX	ಕಟೆಮವು ಪಾವೂರು	ಮಾನಕಪ್ಪು		ಕಟೆಮವು
X	ಪೂಮಾಣಿ	ಪೈಮ್ಕಿ	ಸುಂಕಪ್ಕೆ	ಮುಟ್ಲು

ಶಾಲೆಗಳು ಅಧ್ಯಾಪಕ ವಿದ್ಯಾರ್ಥಿ ಹಾಗು ಇತರ ಸಿಬಂದಿ ವರ್ಗಗಳ ವಿವರಗಳು

ಕ್ರಮ ಸಂಖ್ಯೆ	ಶಾಲೆಗಳ ಹೆಸರುಗಳು	ಅಧ್ಯಾಪಕರ ಸಂಖ್ಯೆ	ಪಾಠೇತರ ಸಿಬ್ಬಂದಿಗಳ ಸಂಖ್ಯೆ	ಒಟ್ಟು ಮಕ್ಕಳ ಸಂಖ್ಯೆ
1	A.U.P.S.School Anekal	11	1	291
2	AUPS Bakrabail	13	1	454
3	S.V.S.ALP School Bajakakaria	5	Nil	132
4	S.V.V.AUPS School Kodlamogaru	25	1	926
5	ALP S Kapri	3	Nil	52
6	ALP S Pavoor	5	Nil	294
7	Govt.LP School Pathur	5	1	108
8	S.S.ALP.School Moodoor Thoke	6	Nil	169
9	S.V.V.High School Kodlamogaru	20	3+1	646
Total	94	8	372	

ನಮ್ಮ ಪಂಚಾಯತಿನ ಕಾಪ್ರಿ ಎಲ್.ಪಿ. ಶಾಲೆಯು ನಷ್ಟದಲ್ಲಿ ಪ್ರವರ್ತಿಸುವ ಶಾಲೆ ಎಂದು ನಮ್ಮ ಸರಕಾರದಿಂದ ಗುರುತಿಸಲ್ಪಟ್ಟಿದೆ. ಕಾರಣ ಈ ಶಾಲೆಯಲ್ಲಿ ಮಕ್ಕಳ ಸಂಖ್ಯೆಯು ನೂರಕ್ಕಿಂತ ಕೆಳಗಿಳಿದಿರುವುದು. ಮುಂಬರುವ ವರ್ಷದಲ್ಲಿ ಈ ಶಾಲೆಗೆ ಬಿದ್ದಿರುವ ಈ ಹಣೆ ಪಟ್ಟಿಯನ್ನು ನಾವು ತೆಗೆದು ಹಾಕಬೇಕಾಗಿದೆ: ಆ ಶಾಲೆಗೆ ಬರುವ ಮಕ್ಕಳ ಸಂಖ್ಯೆಯನ್ನು ಕನಿಷ್ಠ ನೂರಕ್ಕೆ ಏರಿಸುವ ಎಲ್ಲಾ ಶ್ರಮ ನಡೆಸುವುದು ವಿದ್ಯಾಭ್ಯಾನಿಗಳಾದ ನಮ್ಮೆಲ್ಲರ ಮುಖ್ಯ ಹೊಣೆಗಾರಿಕೆಯಾಗಿದೆ. ಪ್ರಾಥಮಿಕ ವಿದ್ಯಾಭ್ಯಾಸಕ್ಕೆ ಸಂಬಂಧಿಸಿದ ಎಲ್ಲಾ ವಿದ್ಯಾಲಯಗಳಲ್ಲಿರುವ ಪ್ರಾಥಮಿಕ ಸಮಸ್ಯೆಗಳನ್ನು ನಿವಾರಿಸಲು ಆದ್ಯತೆ ಕೊಡುವುದು. ಬಾಕಿ ಉಳಿದ ಯಾವುದೇ ಪ್ರಾಥಮಿಕ ಶಾಲೆಗಳಿಗೆ ನಷ್ಟದಲ್ಲಿ ಪ್ರವರ್ತಿಸುವ ಶಾಲೆ ಎಂಬ ಹೆಗ್ಗುರುತು ಲಭಿಸದಂತೆ ಮಾಡುವುದು ಅಂದರೆ ನೂತನ ಶಾಲೆಗಳನ್ನು ನಿರ್ಮಿಸುವಾಗ ಸಮಾಲೋಚಿಸಿ

ತೀರ್ಮಾನ ಕೈಗೊಳ್ಳುವುದು. ಪ್ರಾಥಮಿಕ ಶಾಲೆಗಳ ಗುಣಮಟ್ಟವನ್ನು ಉತ್ತಮಗೊಳಿಸುವ ಉದ್ದೇಶದಿಂದ ಆ ಶಾಲೆಗಳ ಉಪಾಧ್ಯಾಯರನ್ನು ಆಗಾಗಾಚುರುಕುಗೊಳಿಸುವ ಉದ್ದೇಶದಿಂದ ಶಾಲಾ ಸಂಕೀರ್ಣವು (School Complex) ಪುನರುಜ್ಜೀವ ಪಡೆಯಬೇಕಾಗಿದೆ. ಆದುದರಿಂದ ಲೀಡ್‌ಸ್ಕೂಲ್‌ನ ಕಾರ್ಯಾಧ್ಯಕ್ಷತೆಯನ್ನು ಹೆಚ್ಚಿಸಬೇಕಾಗಿದೆ. ಪ್ರತಿತಿಂಗಳು ಪ್ರತಿಯೊಂದು ವಿಷಯದ ಬಗ್ಗೆ ಇರುವ ಪ್ರಾಥಮಿಕ ಶಾಲಾ ಅಧ್ಯಾಪಕರ ಸಮಸ್ಯೆಗಳನ್ನು ವಿವಾರಿಸಲು ಪ್ರಯತ್ನಿಸುವುದು ಅಲ್ಲಿಗೆ ಹೆಚ್ಚಿನ ಸೌಕರ್ಯಗಳನ್ನು ಒದಗಿಸುವುದು ಅತೀ ಅಗತ್ಯವಾಗಿದೆ.

ಮುಂಬರುವ ಶೈಕ್ಷಣಿಕ ವರ್ಷದಲ್ಲಿ ನಮ್ಮ ಮಕ್ಕಳನ್ನು ಕಲಿಕೆಯ ಗುಣಮಟ್ಟದಲ್ಲಿ ಉತ್ತಮರನ್ನಾಗಿ ಮಾಡುವುದು ಅತೀ ಅಗತ್ಯವಾಗಿದೆ. ನಮ್ಮ ಪಂಚಾಯತು ದಿನಾಚರಣೆಯನ್ನು ಆಚರಿಸುವ ಅಂಗವಾಗಿ ನಮ್ಮ ಶಾಲೆಗಳ ಮಕ್ಕಳಿಗಾಗಿ ಕ್ರೀಡಾ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ವಿಜೃಂಭಣೆಯಿಂದ ನಡೆಸುವುದು. ನೂತನವಾಗಿ ನಿರ್ಮಿಸಬೇಕಾದ ಶಾಲೆಗಳು :

ನಮ್ಮ ಪಂಚಾಯತಿನ ಎಲ್ಲಾ ವಾರ್ಡುಗಳಲ್ಲಿ ಮುಖ್ಯವಾಗಿ ಪ್ರಾಥಮಿಕ ಶಾಲೆಗಳಿಲ್ಲ ಆದುದರಿಂದ ದೂರದ ಪ್ರದೇಶದ ಜನರಿಗೆ ತಮ್ಮ ಮಕ್ಕಳನ್ನು ಶಾಲೆಗೆ ಸೇರಿಸಲು ಹೆಚ್ಚಿನ ತೊಂದರೆಗಳಾಗುತ್ತವೆ. ಆ ಮಕ್ಕಳು ಶಾಲೆಗೆ ಸೇರುವಾಗ ಅವನಿಗೆ ಪ್ರಾಯ ಏಳು ದಾಟಿರುವುದು ಸ್ವಾಭಾವಿಕ. ಯಾಕೆಂದರೆ ಸುಮಾರು ಮೂರರಿಂದ ಮೂರುವರೆ ಕಿ.ಮೀ. ದೂರದಲ್ಲಿರುವ ಶಾಲೆಗೆ ನಡೆದುಕೊಂಡೇ ಹೋಗಲು ಎಳವೆಯ ಕಂದಮ್ಮಗಲಿಗೆ ಸಾಧ್ಯವಿಲ್ಲ. ಆದುದರಿಂದ ಜನವಾಸ ಅಧಿಕವಿರುವ ಪ್ರದೇಶಗಳಲ್ಲಿ ಮಕ್ಕಳ ಪ್ರಾಥಮಿಕ ವಿದ್ಯಾಭ್ಯಾಸಕ್ಕೆ ಸಂಬಂಧಿಸಿ ನೂತನ ಕಿರಿಯ ಪ್ರಾಥಮಿಕ ಶಾಲೆಗಳನ್ನು ತೆರೆಯುವುದು ಅತೀ ಅಗತ್ಯ. ಎಳೆಯ ಮಕ್ಕಳ ಹಿತದೃಷ್ಟಿಯಿಂದ ನಮ್ಮ ಪಂಚಾಯತಿನಲ್ಲಿ ನೂತನವಾಗಿ ಐದಕ್ಕಿಂತಲೂ ಹೆಚ್ಚು ಶಾಲೆಗಳನ್ನು ತೆರೆಯುವುದು ಅತೀ ಅಗತ್ಯ.

ನಮ್ಮ ಪಂಚಾಯತಿನಲ್ಲಿ ಕೇವಲ ಒಂದೇ ಒಂದು ಸರಕಾರೀ ಕಿರಿಯ ಪ್ರಾಥಮಿಕ ಶಾಲೆಯಿದೆ. ಈ ಶಾಲೆಯ ಒಂದು ಮಾದರಿ ಶಾಲೆ ಎಂದು ಇಲಾಖೆಯವರಿಂದ ಗುರುತಿಸಲ್ಪಟ್ಟಿದ್ದು ಎಲ್ಲರಿಗೂ ಹೆಮ್ಮೆಯ ವಿಷಯ. 1995-96ನೇ ಶೈಕ್ಷಣಿಕ ವರ್ಷದಲ್ಲಿ ಕೈಗೊಂಡ ಉತ್ತಮ ಪದ್ಧತಿಗಳಿಗೆ ಪೂರಕವಾಗಿ ಈ ಪ್ರೋತ್ಸಾಹಕ, ಬಹುಮಾನ ಬಂದಿರುತ್ತದೆ. ವಿದ್ಯಾಭ್ಯಾಸದ ಗುಣಮಟ್ಟ ಅಭಿವೃದ್ಧಿ ಪದ್ಧತಿಯ ಅಡಿಯಲ್ಲಿ ಲೋಕ ಬ್ಯಾಂಕಿನ ಸಾಂಪತ್ತಿಕ ಸಹಾಯದಿಂದ ಜಿಲ್ಲೆಯಲ್ಲಿ ಜ್ಯಾರಿಯರುವ DPEP ಪದ್ಧತಿಯ ಮೂಲಕ ಉತ್ತಮ ಶಾಲೆಯೆಂದು ಗುರುತಿಸಲ್ಪಟ್ಟ ಸರಕಾರಿ ಕಿರಿಯ ಪ್ರಾಥಮಿಕ ಶಾಲೆ ಪಾತೂರು ಇದನ್ನು ಹಿರಿಯ ಪ್ರಾಥಮಿಕ ಶಾಲೆಯನ್ನಾಗಿ ಪರಿವರ್ತಿಸಬೇಕೆಂಬುದು ನಮ್ಮ ಪಂಚಾಯತಿನ ಆಶಯವಾಗಿದೆ. ಈಗ ಈ ಪ್ರದೇಶದ ಮಕ್ಕಳು ತಮ್ಮ ಪ್ರಾಥಮಿಕ ವಿದ್ಯಾಭ್ಯಾಸವನ್ನು ಪೂರ್ತಿಗೊಳಿಸಲು ಕರ್ನಾಟಕದ ಕೆಲವು ಶಾಲೆಗಳನ್ನೋ ಅಥವಾ ನಮ್ಮ ಪಂಚಾಯತಿನಲ್ಲಿಯೇ ಇರುವ ದೂರದ UPಯಾ High schoolಗಳನ್ನೋ ಆಶ್ರಯಿಸಬೇಕಾಗುತ್ತದೆ. ಕಚೆ ಪದವು ಎಂಬಲ್ಲಿ ನೂತನ High School ಒಂದನ್ನು ತೆರೆದು ನಮ್ಮ ಪಂಚಾಯತಿನಲ್ಲಿ ಮಾಧ್ಯಮಿಕ ಶಿಕ್ಷಣಕ್ಕಿದ್ದ ಸಮಸ್ಯೆಯನ್ನು ಸ್ವಲ್ಪ ಮಟ್ಟಿಗೆ ದೂರೀಕರಿಸಬಹುದು. ಇಲ್ಲಿ High Shcool ಒಂದನ್ನು ತೆರೆದರೆ ಆ ಶಾಲೆಗೆ ಹೆಚ್ಚಿನ ಮಕ್ಕಳನ್ನು ಆಕರ್ಷಿಸಲು ಸಾಧ್ಯವಾದೀತು.

ನಮ್ಮ ಪಂಚಾಯತ್‌ನ ಪಾವೂರು ಪ್ರದೇಶದಲ್ಲಿ ನೂತನ High Schoolನ ಅವಶ್ಯಕತೆಯಿದೆ. (Up & High School) ಈ ಆ ಪ್ರದೇಶವು ಜನಸಾಂದ್ರತೆಯ ಪ್ರದೇಶವಾಗಿದೆ. ಅಲ್ಲಿರುವ ಕೇವಲ ಒಂದು ಕಿರಿಯ ಪ್ರಾಥಮಿಕ ಶಾಲೆ ಮಾತ್ರ. ಕಿರಿಯ ಪ್ರಾಥಮಿಕ ಮಟ್ಟದ ವಿದ್ಯಾಭ್ಯಾಸ ಪಡೆದರೂ ನಂತರದ ವಿದ್ಯಾಭ್ಯಾಸಕ್ಕಾಗಿ ದೂರದ ಮಂಜೇಶ್ವರ ಪಂಚಾಯತೇ ಆಸರೆ. ಅಲ್ಲಿಗೆ ಹೋಗುವುದಂತೂ ತುಂಬಾ ಪ್ರಯಾಸ. ಸಾರಿಗೆ ವ್ಯವಸ್ಥೆಯಂತೂ ಸರಿಯಿಲ್ಲ. ತಮ್ಮ ಪ್ರಾಣವನ್ನೇ ಕಳೆದುಕೊಳ್ಳುತ್ತಾರೋ ಎನ್ನುವ ಹಾಗೆ ಆ ಪುಟ್ಟ ಬಸ್ಸುಗಳ ಮೆಟ್ಟಿಲುಗಳಲ್ಲಿ ನೇತಾಡುವ ಶ್ಯವನ್ನಂತೂ ನೋಡುವಾಗ ಇತರರಿಗೆ ಮರುಕ ಹುಟ್ಟುತ್ತದೆ. ಆದುದರಿಂದ ಈ ಊರಿನ ಪುಟ್ಟ ಮಕ್ಕಳ ಪ್ರಯಾಸವನ್ನು ತಪ್ಪಿಸಲು ಈ ಪ್ರದೇಶದಲ್ಲಿ ಸರ್ವಸಜ್ಜಿತ, ಎಲ್ಲಾ ರೀತಿಯ ಸೌಕರ್ಯಗಳಿಂದ ಕೂಡಿದ Up ಹಾಗೂ High schoolನ ಅವಶ್ಯಕತೆಯಿದೆ. ಜನತೆಯ ಈ ಅವಶ್ಯಕತೆಯನ್ನು ನೆರವೇರಿಸುವುದು ನಮ್ಮ ಮುಖ್ಯ ಉದ್ದೇಶವಾಗಿದೆ.

ಈಗ ಇರುವ ಹೈಸ್ಕೂಲಿನಲ್ಲಿ ಹಾಗು ನೂತನವಾಗಿ ನಿರ್ಮಾಣವಾಗಲಿರುವ ಹೈಸ್ಕೂಲುಗಳಲ್ಲಿ ಮಕ್ಕಳಿಗೆ ವೃತ್ತಿಪರ ಶಿಕ್ಷಣ ಕೊಡುವುದು ಅತೀ ಅಗತ್ಯ. ಅದಕ್ಕೋಸ್ಕರ ಆ ಶಾಲೆಗಳಲ್ಲಿ ವೃತ್ತಿ ಶಿಕ್ಷಣಕ್ಕೆ ಸಂಬಂಧಿಸಿದ ತರಗತಿಗಳನ್ನು ತೆರೆಯುವುದು (vocation Higher Secondary Eduction).

ಈಗ ವಿದ್ಯಾವಂತ ಜನತೆ ಅಂದರೆ ಸಾಮಾನ್ಯವಾಗಿ ಮಾಧ್ಯಮಿಕ ಶಿಕ್ಷಣವನ್ನು ಪಡೆದವರು ಕೂಡ ಕೃಷಿಯ ಬಗ್ಗೆ ಆಸಕ್ತಿ ಇಷ್ಟೇನಂತೆ ಕಂಡು ಬರುತ್ತಿಲ್ಲ. ಅದಕ್ಕೋಸ್ಕರ ಪ್ರತಿ ಹೈಸ್ಕೂಲುಗಳಲ್ಲಿ Future farmers club ಗಳನ್ನು ತೆರೆಯುವುದು ಅತೀ ಅಗತ್ಯ. ಶಾಲಾ ಪರಿಸರದಲ್ಲಿ ಹೂವಿನ ಗಿಡಗಳನ್ನು ಬೆಳೆಸುವುದು ತರಕಾರಿಗಳನ್ನು ಬೆಳೆಸುವುದು ಇತ್ಯಾದಿ ಚಟುವಟಿಕೆಗಳ ಮೂಲಕ ಮಕ್ಕಳಿಗೆ ಕೃಷಿಯ ಬಗ್ಗೆ ಆಸಕ್ತ ಮೂಡುವಂತೆ ಮಾಡುವುದು.

ಪ್ರಾಥಮಿಕ ಶಾಲಾ ಮಕ್ಕಳಿಗೆ ಮಳೆಗಾಲದ ಆರಂಭದಲ್ಲಿ ಅವರ ಪರಿಸರದಲ್ಲಿ ಬೆಳೆಸಲು ಯೋಗ್ಯವಾದ ತರಕಾರಿ ಬೀಜಗಳನ್ನು ಒದಗಿಸುವುದು. ಅವರ ತರಕಾರಿ ಕೃಷಿಯ ಬಗೆಗಿನ ಯೋಗಕ್ಷೇಮವನ್ನು ವಿಚಾರಿಸುವುದು ಅಗತ್ಯವಿದ್ದಾಗ ಅಧ್ಯಾಪಕರು ಅವರ ಮನೆಗೆ ಹೋಗಿ ಮಕ್ಕಳಿಗೆ ಸೂಕ್ತ ಮಾರ್ಗದರ್ಶನ ಒದಗಿಸುವುದು

ಅಧ್ಯಯನ ನೆಲೆ

ಅಧ್ಯಾಪಕ - ವಿದ್ಯಾರ್ಥಿಗಳ ಸಂಬಂಧ ಉತ್ತಮವಾಗಿದೆ. ಪ್ರಾಥಮಿಕ ಶಾಲೆಗಳ ವಿದ್ಯಾರ್ಥಿಗಳ ಗುಣಮಟ್ಟ ಅಭಿವೃದ್ಧಿಯಾದಂತೆ ಕಂಡು ಬರುತ್ತಿದೆ. ಅಧ್ಯಾಪಕರು ಉತ್ತಮರೀತಿ ಬೋಧನೋಪಕರಣಗಳನ್ನು ನಿರ್ಮಿಸಿ ಬಹಳ ಚೆನ್ನಾಗಿ ಚಟುವಟಿಕೆಗಳ ಮೂಲಕ ವಿದ್ಯಾರ್ಥಿಗಳಿಗೆ ಸೂಕ್ತ ಮಾರ್ಗದರ್ಶನ ನೀಡುತ್ತಿದ್ದಾರೆ. ಶಿಸ್ತು ಎಂಬುದು ಎಲ್ಲಾ ಶಾಲೆಗಳಲ್ಲಿ ಎದ್ದು ಕಾಣುತ್ತಿರುವ ವಿಶೇಷತೆಯಾಗಿದೆ. ಶಾಲೆಯ ರಿಸರ ಸುಂದರವಾಗಿದೆ. ಹೂವಿನ ತೋಟ ನಿರ್ಮಾಣ. ಗೋಡೆಗಳಲ್ಲಿ ಮಕ್ಕಳಿಗೆ ಎಟಕುವ ರೀತಿಯಲ್ಲಿ ಕರಿಹಲಗೆಗಳ ನಿರ್ಮಾಣ ಇತ್ಯಾದಿ ರೀತಿಯಲ್ಲಿ ಶಾಲೆಯ ಪರಿಸರವನ್ನು ಅಧ್ಯಾಪಕರೂ, ವಿದ್ಯಾರ್ಥಿಗಳೂ ಆಕರ್ಷಕವಾಗಿರಿಸಿದ್ದಾರೆ.

ಮಕ್ಕಳ 'ಅಭಿವೃದ್ಧಿ ಪತ್ರ' ದ ಕಡೆಗೆ ದೃಷ್ಟಿ ಹಾಯಿಸಿದಾಗ ಇತ್ತೀಚೆಗಿನ ವರ್ಷಗಳಲ್ಲಿ ಅವರ ಗುಣ ಮಟ್ಟದಲ್ಲಿ ಅಭಿವೃದ್ಧಿಯಾಗಿರುವುದು ಕಂಡು ಬರುತ್ತಿದೆ. ಪ್ರತಿತಿಂಗಳು ಮಾಡಿದ ಪಾಠಗಳಿಗೆ ಸಂಬಂಧಿಸಿ ಆಯಾ ವಿಷಯಗಳ ಮೌಲ್ಯಮಾಪನ (Monthly Test) ನಡೆಯುತ್ತಿದೆ. ವರ್ಷದ I ಹಾಗೂ II Term ಗಳಲ್ಲಿ ಅದುವರೆಗೆ ಮಾಡಿದ ವಿಷಯಗಳಲ್ಲಿ ಪರೀಕ್ಷೆ ಮಾಡಿ ಅಭಿವೃದ್ಧಿ ಪತ್ರದಲ್ಲಿ ಅಂಕಗಳನ್ನು ದಾಖಲಿಸಿ, ರಕ್ಷಕರನ್ನು ಶಾಲೆಗೆ ಬರಿಸಿ ಮಕ್ಕಳ ಅಭಿವೃದ್ಧಿಯ ಬಗ್ಗೆ ಸಮಾಲೋಚಿಸಿ ಅವರಸಹಿ ಪಡೆದುಕೊಳ್ಳುವ ಪದ್ಧತಿ ನಮ್ಮ ಪಂಚಾಯತಿನ ಎಲ್ಲಾ ಶಾಲೆಗಳಲ್ಲಿ ಇತ್ತೀಎಗಿನ ವರ್ಷಗಳಲ್ಲಿ ಬೆಳೆದು ಬಂದಿದೆ. ಮಾರ್ಚ್ ತಿಂಗಳ ಕೊನೆಗೆ ನಡೆಯುವ ವಾರ್ಷಿಕ ಪರೀಕ್ಷೆಗೆ ಸಂಬಂಧಿಸಿ ಶೇಕಡಾ 90 (ಕನಿಷ್ಟ) ಮಂದಿ ವಿದ್ಯಾರ್ಥಿಗಳನ್ನು ಅವರ ಹಾಜರಾತಿ, ಮಾರ್ಕು ಇತ್ಯಾದಿಗಳ ಆಧಾರದ ಮೇಲೆ ಉತ್ತೀರ್ಣಗೊಂಒಲಿಸುವ ಪದ್ಧತಿಯಿದೆ.

ಮಾಧ್ಯಮಿಕ ಹಂತದ ಶಿಕ್ಷಣ ಫಲಿತಾಂಶವನ್ನು ಗಮನಿಸಿದಾಗ ನಮಗೆ ಬಹಳ ವ್ಯಥೆಯುಂಟಾಗುತ್ತದೆ. ಹತ್ತು ವರ್ಷಗಳ ಕಾಲ ನಿರಂತರ ಅಧ್ಯಯನ ಮಾಡಿ ಆ ವರ್ಷದ ಕೊನೆಯ ಹಂತದಲ್ಲಿ ನಡೆಸಿದ ಪರೀಕ್ಷೆಯಲ್ಲಿ ಶೇಕಡ 35 ಅಂಕಗಳನ್ನು ಪಡೆಯುವುದು ಕೂಡ ವಿದ್ಯಾರ್ಥಿಗಳಿಗೆ ಸಾಧ್ಯವಾಗುತ್ತಿಲ್ಲ. ಫಲಿತಾಂಶ ಇತ್ತೀಚೆಗಿನ ವರ್ಷಗಳಲ್ಲಿ ತೀರಾ ಇಳಿಮುಖವಾಗುತ್ತಿದೆ. ಮುಂಬರುವ ವರ್ಷಗಳಲ್ಲಿ ನಮ್ಮ ಪಂಚಾಯತಿನ SSLc ಮಕ್ಕಳ ಫಲಿತಾಂಶವನ್ನು ಉತ್ತಮಗೊಳಿಸಲು ಸೂಕ್ತ ಕ್ರಮ ಕೈಗೊಳ್ಳುವುದು ಅತೀ ಅನಿವಾರ್ಯವಾಗಿದೆ. ಮಕ್ಕಳು ತಮ್ಮ ಪಠ್ಯ ವಿಷಯಗಳಲ್ಲಿ ಹೆಚ್ಚಿನ ಆಸಕ್ತಿಯನ್ನು ಹೊಂದುವಂತೆ ಮಾಡಲು ಅವರಿಗೆ ಬೆಳಿಗ್ಗೆ ಮತ್ತು ಸಂಜೆ ನುರಿತ ಅಧ್ಯಾಪಕರಿಗೆ Tution Class ನಡೆಸುವುದು.

ನಮ್ಮ ಪಂಚಾಯತಿನ ಯಾವುದೇ ಶಾಲೆಗಳಲ್ಲಿ ಅಧ್ಯಾಪಕರ ಕೊರತೆಗಳಿಲ್ಲ. ಅಧ್ಯಾಪಕ -ವಿದ್ಯಾರ್ಥಿ ಅನುಪಾತವು ಸರಿಯಿದೆ ಎನ್ನಬಹುದು. ನಮ್ಮಲ್ಲಿರುವ 8 ಪ್ರಾಥಮಿಕ ಶಾಲೆಗಳಲ್ಲಿ ಹಾಗೂ ಒಂದು ಹೈಸ್ಕೂಲಿಗೆ ಸಂಬಂಧಿಸಿ 94 ಅಧ್ಯಾಪಕರೂ 8 ಇತರ ಸಿಬಂಧಿ ವರ್ಗದ ನೌಕರರೂ ಇದ್ದಾರೆ

ಅಧ್ಯಾಪಕರೆಲ್ಲರೂ ಉತ್ತಮ ಬೋಧನಾ ಸಾಮರ್ಥ್ಯವನ್ನು ಹೊಂದಿದವರಾಗಿರುತ್ತಾರೆ. ಆದರೆ ಇತ್ತೀಚೆಗಿನ ವರ್ಷಗಳಲ್ಲಿ ಮಕ್ಕಳ ಬೌದ್ಧಿಕ ಮಟ್ಟವೇ ಕುಸಿಯುತ್ತಿದೆಯೇ ಅವರ ಫಲಿತಾಂಶವು ಎಂಬಂತೆ ಕಂಡು ಬರುತ್ತಿದೆ. ಆದುದರಿಂದ ಅವರ ಫಲಿತಾಂಶವನ್ನು ಅಭಿವೃದ್ಧಿಗೊಲಿಸಲು ಕ್ರಮ ಕೈಗೊಳ್ಳುವುದು ಅನಿವಾರ್ಯ.

ಚೈತನ್ಯ: ಇಂದಿನ ಕಾಲದಲ್ಲಿ ಮನುಷ್ಯ ಜೀವನಕ್ಕೆ ಚೈತನ್ಯವು ಅತೀ ಮುಖ್ಯ ಪಾತ್ರವಾಹಿಸುತ್ತದೆ. ಉದಾಹರಣೆಗೆ, ವಿದ್ಯುಚ್ಛಕ್ತಿ ಸೌರಶಕ್ತಿ ಇತ್ಯಾದಿ ಈ ಪಂಚಾಯತಿನ ಹೆಚ್ಚಿನ ಪ್ರದೇಶಗಳ ಮನೆಗಳಲ್ಲಿ ವಿದ್ಯುಚ್ಛಕ್ತಿ ಇಲ್ಲ. ಕೆಲವು ಕಡೆಗಳಲ್ಲಿ ವಿದ್ಯುತ್ ಲೈನ್ ಹಾದು ಹೋದರೂ ಹತ್ತಿರದ ಪ್ರದೇಶದ ಮನೆಗಳಿಗೆ ವಿದ್ಯುತ್ ಸಂಪರ್ಕ ದೊರಕಿಲ್ಲ. ಪಂಚಾಯತ್‌ನ ಮಾರ್ಗಗಳ ಬದಿಯಲ್ಲಿ ದಾರಿ ದೀಪಗಳಿಲ್ಲ. ಟ್ರಾನ್ಸ್‌ಫಾರ್ಮರ್ ಕಡಿಮೆಯಾಗಿರುವುದರಿಂದ ಬೆಳಕಿನ ಅಭಾವ ತೋರುತ್ತದೆ. ಇದಕ್ಕೆ ಅಗತ್ಯವಾದ ಕಡೆಗಳಲ್ಲಿ ಶಕ್ತಿಯುತವಾದ ಇನ್ನು ಹೆಚ್ಚಿಗೆ ಟ್ರಾನ್ಸ್‌ಫಾರ್ಮರ್‌ಗಳನ್ನು ಹಾಕಬೇಕಾಗುವುದು. ಪಂಚಾಯತಿನ ಕೆಲವು ಮನೆಗಳಲ್ಲಿ ವೈಯರಿಂಗ್ ಮಾಡಿದ್ದರೂ ವಿದ್ಯುತ್ ಸಂಪರ್ಕ ಸಿಕ್ಕಿಲ್ಲ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಮನೆಗಳಿಗೆ ಕೂಡಾ ವಿದ್ಯುತ್ ಸಂಪರ್ಕವಿಲ್ಲ. ಈಗ ನಮ್ಮ ವರ್ಕಾಡಿ ಪಂಚಾಯತಿನಲ್ಲಿ ಸೌರಶಕ್ತಿಯ ಉಪಯೋಗದ ಬಳಕೆಗೆ ಸಂಬಂಧಿಸಿದ ಕೇಂದ್ರವು ಸ್ಥಾಪಿತವಾಗಿದೆ. ಇದರ ಸಹಯೋಗದಿಂದಲೂ ಕೆಲವು ರೀತಿಯ ಉಪಕರಣಗಳಿಂದ ಪ್ರಯೋಜನ ಪಡೆಯಲಾಗಿದೆ. ಇದರ ಪ್ರಯೋಜನವು ಅನೇಕ ಮಂದಿಗೆ ತಿಳಿದಿಲ್ಲ. ವಿದ್ಯುತ್ ಬಳಕೆಯಲ್ಲಿ ಮಿತವ್ಯಯವನ್ನು ಸಾಧಿಸಬೇಕು. "ಯಾವುದು ಅತಿಯಾಗದೆ ಮಿತಿಯಲ್ಲಿರಬೇಕು".

ಸಮಸ್ಯೆಗಳು : ನಮ್ಮ ಪಂಚಾಯತು ಕೃಷಿ ಭೂಮಿಯಾಗಿದೆ. ನೀರಾವರಿ ಪಂಪುಗಳಿಗೆ, ಕೈಗಾರಿಕಾ ಯಂತ್ರಗಳಿಗೆ, ದಿನಬಳಕೆಯ ಉಪಯೋಗಕ್ಕೆ ಅತೀ ಅಗತ್ಯವಾಗಿದೆ. ಆದರೆ ಅತೀ ಕಡಿಮೆ ಶಕ್ತಿಯ ವಿದ್ಯುತ್ತಿನ ಪ್ರಭಾವದಿಂದ ಈ ಎಲ್ಲಾ ಕೆಲಸಗಳಿಗೆ ಹಾನಿಕರವಾಗಿದೆ. ದಿನದ ಹೆಚ್ಚಿನ ಗಂಟೆಗಳು ವಿದ್ಯುತ್ ನಿಲುಗಡೆಯಾದ ಕಾರಣ ಅಗತ್ಯವಾದಂತಹ ಮದ್ದುಗಳನ್ನು, ಶೇಖರಿಸಿಡುವಂತಹ ರೇಫ್ರಿಜರೇಟರ್‌ರಿಗೆ ತೊಂದರೆಯಾಗುತ್ತದೆ. ಇದರಿಂದಾಗಿ ಶೇಖರಿಸಿಸಿಟ್ಟಂತಹ ಮದ್ದು ಹಾಳಾಗುವುದು. ನಡೆದು ಹೋಗುವಂತಹ ಮಾರ್ಗಗಳಲ್ಲಿ ಕಾಲುದಾರಿಗಳಲ್ಲಿ ದಾರಿದೀಪ ಇಲ್ಲದ ಕಾರಣ ಸಂಚಾರಿಗಳಿಗೆ ತುಂಬಾ ತೊಂದರೆಯಾಗುವುದು. ಬಳಕೆದಾರನಿಗೆ ಶೀಘ್ರದಲ್ಲಿಯೇ ವಿದ್ಯುತ್ ದೊರಕುವಂತಾಗಬೇಕು. ಕುಟಿರ ಜ್ಯೋತಿ ಕಾರ್ಯಕ್ರಮದಲ್ಲಿ ಅರ್ಜಿಗಳನ್ನು ತೆಗೆದುಕೊಂಡಿದ್ದಾರೆ. ಅವರಿಗೆ ಕೂಡಲೇ ವಿದ್ಯುತ್ ಸಂಪರ್ಕ ಒದಗಿಸಲಿಲ್ಲ. ಹೆಚ್ಚಿನ ಗ್ರಾಮಸಭೆಗಳಲ್ಲಿ ಈ ವಿಷಯವನ್ನು

ಪ್ರಸ್ತಾಪಿಸಿದ್ದಾರೆ. ದಾರಿದ್ರ್ಯ ರೇಖೆಗಿಂತ ಕಡಿಮೆ ಆದಾಯ ಇರುವ ಮನೆಗಳಿಗೆ ವಿದ್ಯುತ್ ಸಂಪರ್ಕ ಇಲ್ಲ.

ಸಾಧ್ಯತೆಗಳು : ವರ್ಕಾಡಿ ಪಂಚಾಯತಿನ ಯಾವುದೇ ಭಾಗದಲ್ಲಾದರೂ 110 ಕಿಲೋವಾಟ್ಸ್ ವಿದ್ಯುತ್ ಸಬ್‌ಸ್ಟೇಶನ್ ಸ್ಥಾಪಿಸಬೇಕು. ವಿದ್ಯುಚ್ಛಕ್ತಿಯ ಕಡಿತವನ್ನು ನಿವಾರಿಸಬೇಕು. ಸ್ಟೆಟ್ ಅಪ್ ಉಪಯೋಗಿಸುವುದನ್ನು ಕಡಿಮೆ ಮಾಡಬೇಕು.

ವಿದ್ಯುತ್ ದುರುಪಯೋಗಿಸುವುದನ್ನು ತಡೆಗಟ್ಟಬೇಕು. ಲೈನ್ ಹೋಗುವಾಗ ಬದಿಗಳಲ್ಲಿರುವ ಮರಗಳ ಕೊಂಬೆ, ರೆಂಬೆಗಳನ್ನು ವಿದ್ಯುತ್ ತಂತಿಗಳಿಗೆ ತಗಲದಂತೆ ಆ ಪ್ರದೇಶದ ಜನರು ಮುಂಜಾಗ್ರತೆ ವಹಿಸಬೇಕು. ವಿದ್ಯುತ್ ಇಲಾಖೆಯ ಅಧಿಕಾರಿಗಳ ಕಾರ್ಯದಕ್ಷತೆಯನ್ನು ಚುರುಕುಗೊಳಿಸಬೇಕು. ಮೇಲೆ ಹೇಳಿದಂತಹ ಸಮಸ್ಯೆಗಳಿಗೆ ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಪರಿಹಾರ ಒದಗಿಸಿಕೊಡುವುದು.

ಇಂಧನದ ಬಗ್ಗೆ ವಿವಿಧ ಮೂಲದಲ್ಲುಂಟಾದ ಬದಲಾವಣೆಗಳಾದ ವಾಣಿಜ್ಯಕರಣಗಳ ಬಗ್ಗೆ ಚರ್ಚಿಸುವುದು ಎಲ್ಲಾ ಬಗೆಯ ಇಂಧನಗಳನ್ನು ಮಿತಿಯಾಗಿ ಬಳಸುವಂತೆ ಜನರಿಗೆ ಅರಿವು ನೀಡುವುದು. ಅದರಲ್ಲಿ ಯಾವುದೇ ರೀತಿಯ ಸಮಸ್ಯೆಗಳಿದ್ದರೆ ಅದಕ್ಕೆ ಪರಿಹಾರ ನೀಡುವುದು. ತಮ್ಮ ದಿನನಿತ್ಯದ ಬಳಕೆಯ ಇಂಧನದ ಸಾಮಾನ್ಯಲೆಕ್ಕ ತಿಳಿದಿರಬೇಕು. ಅಪಾಯ ಸ್ಥಿತಿಯಲ್ಲಿರುವ ಕಂಬಗಳನ್ನು ಬದಲಾಯಿಸಿ ಹೊಸ ಕಂಬ ಹಾಕಬೇಕು.

ಸಂಬಂಧಪಟ್ಟ ಅಧಿಕಾರಿಗಳು ಪಂಚಾಯತಿಗೆ ಬಂದು ಮಾಹಿತಿ ಪಡೆಯುವುದು.

ವಿದ್ಯುತ್ ಬಳಕೆಯ ವಿವರಗಳು

1.	ಗೃಹೋಪಯೋಗಿ	1520
	ವ್ಯಾಪಾರ	76
	ವ್ಯವಸಾಯಿಕ	5
	ಕೃಷಿಗೆ	602

ಈಗಿರುವ ಟ್ರಾನ್ಸ್‌ಫಾರ್ಮರ್‌ಗಳು

ಈ ಪಂಚಾಯತಿನಲ್ಲಿ 13

ಟ್ರಾನ್ಸ್‌ಫಾರ್ಮರ್‌ಗಳಿವೆ.

ಸುಂಕದಕಟ್ಟೆ, ದೈಗೋಳಿ, ಧರ್ಮನಗರ,

ಪಳ್ಳತಪಡ್ಪು, ಗೊವೆತಪಡ್ಪು, ಕತ್ತರಿಕೋಡಿ,

ಮುರತ್ತಣೆ, ಪಾವೂರು, ಕಾಪಿರಿ, ಸುಣ್ಣಂಗಳ,

ಚೇಂಡೆಲ್, ಕೋಟೆಮಾರ್.

ಈ ಪಂಚಾಯತಿನಲ್ಲಿ ಅಗತ್ಯವಾಗಿ ಬೇಕಾದ ಟ್ರಾನ್ಸ್‌ಫಾರ್ಮರ್‌ಗಳ ಜಾಗ

ಕ್ರ.ಸಂ.	ಬೇಕಾದ ಸ್ಥಳಗಳು
1.	ಉರ್ಣೆ, ಬೋಳತಪದವು, ಪಿಲಿಕ್ಕಳ, ಬಟ್ಟಿಯಡ್ಕ, ತೋಕೆ, ತಿಮ್ಮಂಗೂರು, ನಡಿಬೈಲು, ಬೊಳ್ಳ, ಬೋರ್ಕಳ, ಕುಂಟಪದವು, ಕಾಯರಡ್ಕ, ಆನೆಕಲ್ಲು, ತಲಕ್ಕಿ, ಸೊಡಂಕೂರು, ಬಾಳೆಪುಣಿ, ಕೂಟತಜೆ, ಪುರುಷಕೋಡಿ, ಪೊಯ್ಯತ್ತಬೈಲು, ದಿಪ್ಪ, ಜೋಗಿಬೆಟ್ಟು, ಕಾಪ್ಪ, ಅರಿಬೈಲು, ಪೊಯ್ಯೆ, ಪಾವೂರು, ಮುಡಿಮಾರು, ತಚ್ಚಿಟ್ಟೆರ್, ಅಮ್ಮೆ

ವಿದ್ಯುತ್ ಸಂಪರ್ಕಕ್ಕೆ ಅರ್ಜಿ ಕೊಟ್ಟು ಇನ್ನು ಸಿಗದವರ ಅರ್ಜಿಗಳ ಲೆಕ್ಕ

ಕ್ರ.ಸಂ.	ವಿಧ	ಸಂಖ್ಯೆ
1.	ಸಾಮಾನ್ಯ	385
2.	ಓ.ಟಿ.ಪಿ.	-
3.	ಓ.ವೈ.ಇ.ಸಿ.	28
4.	ಕೃಷಿಗೆ	290

ಕಾಲೋನಿಗಳಿಗೆ ಉಚಿತವಾಗಿ ವಿದ್ಯುತ್ ಸಂಪರ್ಕ ಒದಗಿಸಿದ ಸ್ಥಳಗಳು (S.T.)/(S.C.)

ಕ್ರ.ಸಂ.	ಹೆಸರು	ಧರ್ಮಾರ್ಥವಾಗಿ ವಿದ್ಯುತ್ ಸಂಪರ್ಕ ಒದಗಿಸಿದ ವಿವರ
1.	ಆನೆಕಲ್ಲು	15
2.	ಕತ್ತರಿಕೋಡಿ	41
3.	ಕೊಡ್ಲಮೊಗರು	-
	(ವಯರಿಂಗ್ ಆಗಿದೆ) ಸಂಪರ್ಕ ದೊರೆತಿಲ್ಲ	

ಇಂಧನ : ಕೇರಳದಲ್ಲಿ ಕ್ರಮೇಣ ಇಂಧನ ಸಮಸ್ಯೆಯನ್ನು ಎದುರಿಸಬೇಕಾಗಬಹುದು. ನಮ್ಮ ಪಂಚಾಯತಿನಲ್ಲಿ ಈ ಸಮಸ್ಯೆಗಳ ವಿವರವನ್ನು ಈಗಾಗಲೇ ತಿಳಿದಿರಬಹುದು. ವಾಹನ ಸಂಚಾರಕ್ಕೆ, ಕೈಗಾರಿಕಾ ಯಂತ್ರಗಳಿಗೆ, ಅಡುಗೆ ಅನಿಲಗಳಿಗೆ, ಇಂಧನದ ಅಗತ್ಯವಿದೆ. ಸೀಮೆಎಣ್ಣೆ, ಕಲ್ಲಿದ್ದಲು, ಅನಿಲ, ವಿದ್ಯುತ್ ಎಂಬಿವುಗಳು ವಾಣಿಜ್ಯ ಇಂಧನಗಳು. ಸೌದೆ, ತೆಂಗಿನಮರದ ಭಾಗಗಳು, ಕಸಕಡ್ಡಿ ಜೈವಿಕ

ಇಂಧನವಾಗಿ ಪರಿಗಣಿಸಲ್ಪಟ್ಟಿದೆ. ಇಂಧನವನ್ನು ನಾಲ್ಕು ವಿಭಾಗಗಳಾಗಿ ವಿಂಗಡಿಸಲಾಗಿದೆ.

1) ವಾಣಿಜ್ಯ 2) ಗೃಹಕ್ಕೆ 3) ಕೈಗಾರಿಕೆ 4)ಕೃಷಿ

ಈ ಪಂಚಾಯತಿನ ಹೆಚ್ಚಿನ ಮನೆಗಳಲ್ಲಿ, ಹೊಟೇಲು ಉದ್ಯಮಗಳಲ್ಲಿ ಕಟ್ಟಿಗೆಯನ್ನು ಇಂಧಿನವಾಗಿ ಬಳಸುತ್ತಾರೆ. ಗೊಬ್ಬರದ ಗ್ಯಾಸ್ ನಮ್ಮ ಪಂಚಾಯತಿನಲ್ಲಿ ಒಂದು ಕಡೆಯಲ್ಲಿದೆ. ಪಂಚಾಯತಿಗೆ ಒಳಪಟ್ಟ ಕೆಲವೇ ಮನೆಗಳಲ್ಲಿ ಅಡುಗೆ ಅನಿಲದ ಉಪಯೋಗವಿದೆ. ಕೆಲವು ಕಡೆ ಸೀಮೆಎಣ್ಣೆಯ ಉಪಯೋಗವಿದೆ. ಕೆಲವು ಕಡೆಗಳಲ್ಲಿ ವಿದ್ಯುಚ್ಛಕ್ತಿಯ ಉಪಯೋಗವಿದೆ. "ಕಾಡು ಉಳಿಸಿ ನಾಡು ಬೆಳೆಸಿ" ಎಂಬ ನಾಣ್ನುಡಿಯಂತೆ ಖಾಲಿ ಇರುವಂತಹ ಜಾಗಗಳಲ್ಲಿ ಮರಗಳನ್ನು ನೆಡುವುದು ಉತ್ತಮ.

ಸಮಸ್ಯೆಗಳು : ಕಟ್ಟಿಗೆ ಸುಲಭ ಬೆಲೆಯಲ್ಲಿ ಸಿಗುವಂತೆ ಮಾಡುವುದು. ಅಡುಗೆ ಅನಿಲ ಎಲ್ಲರಿಗೆ ದೊರಕುವಂತಾಗಲು ಅದರ ಕೇಂದ್ರವನ್ನು ಸ್ಥಾಪಿಸಬೇಕು. ಒಂದು ಸಿಲಿಂಡರಿಗೆ ಹೆಚ್ಚಿಗೆ ಹಣವನ್ನು ಕೊಡಬೇಕಾಗುವುದು. ವಿದ್ಯುಚ್ಛಕ್ತಿ ಇಂಧನದ ಕೊರತೆಯಿಂದ ಕೈಗಾರಿಕೆಗೆ ಕೃಷಿಗೆ ತೊಂದರೆಯಾಗುವುದು.

ಸಾಧ್ಯತೆಗಳು : ಕಟ್ಟಿಗೆಯ ಒಲೆಯನ್ನು 2ರೀತಿಯಲ್ಲಿ ಉಪಯೋಗಿಸಬಹುದು. 1) ಹೊಗೆ ಸಹಿತ 2) ಹೊಗೆ ರಹಿತ. ಹೊಗೆ ರಹಿತ ಒಲೆಗಳನ್ನು ಉಪಯೋಗಿಸುವುದರಿಂದ ಕಟ್ಟಿಗೆಯ ಖರ್ಚು ಕಡಿಮೆ. ಗೊಬ್ಬರ ಗ್ಯಾಸ್ ತಯಾರಿಸುವುದರಿಂದ ಅಡುಗೆ ಅನಿಲಯದ ಪರಿಹಾರವಾಗುವುದು. ವಾಣಿಜ್ಯ ಇಂಧನಗಳಿಗೆ ಹೆಚ್ಚಿಗೆ ಪ್ರೋತ್ಸಾಹ ನೀಡುವುದು ಅಗತ್ಯ. ಗೊಬ್ಬರ ಗ್ಯಾಸನ್ನು ತಯಾರಿಸಲು ಸಬ್ಸಿಡಿ ದೊರಕುವ ಸೌರಶಕ್ತಿಯ ಬಳಕೆಯನ್ನು ಹೆಚ್ಚು ಜನಪ್ರಿಯ ಕಾರ್ಯಕ್ರಮವನ್ನಾಗಿಸಬೇಕು. **ಮನೆಗಳಿಗೆ ಸೌರಶಕ್ತಿಯಿಂದಲೆ ಕಡಿಮೆ ವೆಚ್ಚದಲ್ಲಿ ದೀಪ ಉರಿಸುವಂತಾಗಬೇಕು.**

ನಮ್ಮ ವರ್ಕಾಡಿ ಪಂಚಾಯತಿನ ಇಂಧನದ ವಿವರ

ಕ್ರ.ಸಂ.	ಇಂಧನ	ಸಂಖ್ಯೆ	ತೂಕ (ಅಳತೆ)
1.	ಕಟ್ಟಿಗೆ ಒಲೆ	5500	10037 ಟನ್
2.	ಹೊಗೆ ರಹಿತ ಒಲೆ	500	435 ಟನ್
3.	ಗ್ಯಾಸ್	-	-
4.	ಸೀಮೆಎಣ್ಣೆ, ಸ್ಟವ್	4235	1545775 ಲೀಟರ್
5.	ಇಲೆಕ್ಟ್ರಿಕ್ ಸ್ಟವ್	40	-
6.	ಗೊಬ್ಬರ ಗ್ಯಾಸ್	10	-

ಮಾಹಿತಿ ಅನರ್ಪ

ಕ್ಷೇಮ ಕಾರ್ಯ

ಒಂದು ಪಂಚಾಯತಿನ ಬಡಜನತೆಯ ಕುರಿತಾದ ವಿಶ್ಲೇಷಣೆ ಅಂದರೆ ಬಡಜನತೆಯ, ಸಾಮಾಜಿಕ, ಆರ್ಥಿಕ, ಪ್ರಾದೇಶಿಕ ವೈಶಿಷ್ಟ್ಯತೆಗಳ ಕುರಿತಾದ ವಿವರಣೆ. ನಮ್ಮ ದೇಶದಲ್ಲಿ ಇದುವರೆಗೆ 8 ಯೋಜನೆಗಳು ಅಂತ್ಯವಾಗುತ್ತಾ ಬಂದರೂ ಈ ಪ್ರದೇಶದ ಜನರಿಗೆ ಸರಿಯಾದ ಪ್ರಯೋಜನ ಸಿಗಲಿಲ್ಲ. ಸಮಾಜ ಕ್ಷೇಮ ಕಾರ್ಯ ಸರಿಯಾದ ರೀತಿಯಲ್ಲಿ ಫಲಪ್ರದವಾಗಲು ನಮ್ಮ ಪಂಚಾಯತಿನ ವಾರ್ಡುಗಳ ಜನರ ಜೀವನ ರೀತಿಯ ಬಗ್ಗೆ ಸರಿಯಾದ ಚಿತ್ರಣ ಅಗತ್ಯವಾಗಿದೆ.

"ಉದ್ಯೋಗಂ ಪುರುಷ ಲಕ್ಷಣಂ" ಎಂಬಂತೆ ಎಷ್ಟೋ ಮಂದಿ ವಿದ್ಯಾವಂತ ಯುವಕರು ಬೇರೆ ಬೇರೆ ರೀತಿಯ ಪದವಿಗಳನ್ನು ಪಡೆದು ಸಣ್ಣ ಪುಟ್ಟ ಕೆಲಸಗಳನ್ನು ಮಾಡಲು ಹಿಂಜರಿಯುತ್ತಾರೆ. ಅದೇ ರೀತಿಯಲ್ಲಿ ತಮ್ಮ ಶಾರೀರಿಕ ತೊಂದರೆಗಳಿಂದ ತಮ್ಮ ದಿನನಿತ್ಯದ ಕಾರ್ಯಗಳನ್ನು ಮಾಡಲು ಅಸಮರ್ಥರಾಗಿದ್ದಾರೆ. ಇಳಿವಯಸ್ಸಿನ ಎಷ್ಟೋ ಮಂದಿ ತಮ್ಮ ಜೀವನಕ್ಕೆ ಇನ್ನೊಬ್ಬರನ್ನು ಆಶ್ರಯಿಸಬೇಕಾದ ಪರಿಸ್ಥಿತಿ ಇದೆ. ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸಲು ಸಾಮರ್ಥ್ಯವಿಲ್ಲದೆ ವಿದ್ಯಾಭ್ಯಾಸಕ್ಕೆ ತಡೆಯಾದ ಮಾಹಿತಿಗಳು ನಮ್ಮಲ್ಲಿ ದೊರಕವೆ. ಕೃಷಿ ಕಾರ್ಮಿಕರಿಗೆ ಸಿಗುವ ಪಿಂಚಣಿ ದೊರೆಯದೆ ತೊಂದರೆ ಗೀಡಾದ ಕುಟುಂಬಗಳು ಕೆಲವು. ಇದರಲ್ಲಿ ಪರಿಶಿಷ್ಟ ವರ್ಗ -ಪರಿಶಿಷ್ಟ ಜಾತಿಗಳ ಜನರು ಸೇರಿರುತ್ತಾರೆ. ಇಂತಹವರಿಗೆ ಸರಕಾರದ ಇಲಾಖೆಗಳ ಮೂಲಕ ವಿತರಿಸಲಾಗುತ್ತಿರುವ ಸಹಾಯ ಸರಿಯಾದ ಸಮಯದಲ್ಲಿ ಸಿಗುತ್ತಿಲ್ಲ. ಹಾಗೆಯೇ ಸಮಾಜಕ್ಷೇಮ ಕಾರ್ಯಗಳಲ್ಲಿ ನಿರತರಾಗಿರುವ ಜನರಿಗೆ ಸಂಘ ಸಂಸ್ಥೆಗಳಿಗೆ ಪ್ರೋತ್ಸಾಹ ದೊರಕಬೇಕಾಗಿದೆ.

ವಿದ್ಯಾಭ್ಯಾಸ ಎಂದರೆ ಕೇವಲ ಶಾಲಾ, ಕಾಲೇಜುಗಳಲ್ಲಿ ಕಲಿತ ಪಠ್ಯ ಪುಸ್ತಕದ ವಿಷಯ ಮಾತ್ರವಲ್ಲ ಮನುಷ್ಯನ ಜೀವನಕ್ಕೆ ಅನುಕೂಲವಾದ ವಿಷಯಗಳನ್ನು ತಿಳಿದುಕೊಳ್ಳುವುದೇ ವಿದ್ಯಾಭ್ಯಾಸವಾಗಿದೆ. ಈ ಪಂಚಾಯತಿನ ಕೆಲವು ಜನರಿಗೆ ಕೃಷಿ ಪಿಂಚಣಿ, ನಿರುದ್ಯೋಗ ಭತ್ತೆ ಮೊದಲಾದ ಸೌಕರ್ಯಗಳು ದೊರೆಯುತ್ತಿವೆ.

ಸಮಸ್ಯೆ : ಬಡಜನರಿಗೆ ದೊರೆಯುವ ಸರಕಾರದ ಸವಲತ್ತುಗಳು ಈ ಪ್ರದೇಶದ ಜನರಿಗೆ ಸರಿಯಾದ ಕ್ರಮದಲ್ಲಿ ವಿತರಣೆಯಾಗದಿರುವುದು. I.R.D.P. ಪಟ್ಟಿಯಲ್ಲಿ ಅನರ್ಹರಾದ ಕುಟುಂಬಗಳು ಸೇರಿರುವುದು. ಇದರಿಂದಾಗಿ ಅರ್ಹರಾದವರಿಗೆ ಸಿಗಬೇಕಾದ ಸಹಾಯ ಇಲ್ಲದಾಗುವುದು. ಯೋಜನೆಯಲ್ಲಿ ಕೆಲವೊಂದು ಅವ್ಯವಹಾರಗಳು ನಡೆಯುವುದರಿಂದ ಯೋಜನೆಯ ಫಲ ದೊರೆಯದೆ ಹೋಗಬಹುದು. ಮದ್ಯವರ್ತಿಗಳು ಸರಿಯಾಗಿ ತಮ್ಮ ಕಾರ್ಯಗಳನ್ನು ನಿರ್ವಹಿಸದೇ ಇರುವುದರಿಂದ ಜನಸಾಮಾನ್ಯರಿಗೆ ಸಿಗಬೇಕಾದ ಅಗತ್ಯ ಮಾಹಿತಿಗಳು ದೊರೆಯುತ್ತಿಲ್ಲ. ಮಾಹಿತಿ ದೊರೆಯುವಾಗ ಯೋಜನೆಯ ಅವಧಿ ಮುಗಿದಿರುತ್ತದೆ.

ಇದರಿಂದಾಗಿ ಯೋಜನೆಯ ನಿಜವಾದ ಉದ್ದೇಶ ಈಡೇರುತ್ತಿಲ್ಲ. ಅಲ್ಲದೇ ಯೋಜನೆಯು ಸರಿಯಾದ ರೂಪರೇಖೆಯನ್ನು ಹೊಂದಿರುವುದಿಲ್ಲ. ಯೋಜನೆಯಲ್ಲಿ ಯುವ ಜನತೆಯನ್ನು ಪ್ರೇರೇಪಿಸುವ ಕಾರ್ಯಕ್ರಮಗಳು ಇಲ್ಲದಿರುವುದರಿಂದ ಯುವ ಜನತೆ ಯೋಜನೆಯಲ್ಲಿ ತಮಗೆ ಯಾವುದೇ ಸಂಬಂಧವಿಲ್ಲವೆಂದು ಸುಮ್ಮಗಿರುತ್ತಾರೆ: ಇದರಿಂದಾಗಿ ಯೋಜನೆ ನಿರೀಕ್ಷಿಸಿದ ಫಲ ಕೊಡುತ್ತಿಲ್ಲ.

(ಪರಿಹಾರ) ಸಾಧ್ಯತೆ :

ಬಡ ಜನತೆಗೆ ಸರಕಾರದ ವತಿಯಿಂದ ದೊರೆಯುವ ಸವಲತ್ತುಗಳ ಬಗ್ಗೆ ಸರಿಯಾದ ಮಾಹಿತಿಯನ್ನು ಒದಗಿಸುವ ವ್ಯವಸ್ಥೆ ಮಾಡುವುದು. ಇದಕ್ಕಾಗಿ ವಾರ್ತಾ ಪತ್ರಿಕೆ, ರೇಡಿಯೋ ಇತ್ಯಾದಿ ಬಹುಜನ ಸಂಪರ್ಕ ಮಾಧ್ಯಮದ ಸಹಾಯ ಪಡೆಯುವುದು. I.R.D.P.ಯಲ್ಲಿ ಅರ್ಹರಾದ ಜನರನ್ನು ಮಾತ್ರ ಸೇರಿಸುವಂತೆ ಮಾಡುವುದು. ಇದಕ್ಕಾಗಿ ಸನ್ನದ್ಧ ಸೇವಕರ ಸಹಕಾರ ಪಡೆಯುವುದು. ಸರಕಾರದ ಯೋಜನೆಯ ಜನಸಾಮಾನ್ಯರನ್ನು ಮುಟ್ಟುವಂತೆ ಮಾಡಲು ವ್ಯಾಪಕ ಕ್ರಮ ಕೈಗೊಳ್ಳಬೇಕು. ಇದಕ್ಕಾಗಿ ಯುವಕ ಮಂಡಲ, ಇಲ್ಲೇ ಯುವತಿ ಮಂಡಲವನ್ನು ಪ್ರೋತ್ಸಾಹಿಸುವುದು. ವಿದ್ಯಾವಂತ ಯುವಕ - ಯುವತಿಯರಿಗೆ ಸ್ವಂಯ ಉದ್ಯೋಗದ ಬಗ್ಗೆ ಆಸಕ್ತಿ ತೋರಿಸುವುದು. ತಾಂತ್ರಿಕ ವಿದ್ಯಾಲಯ ಕೈ ಕಸುಬುಗಳಿಗೆ ಸಂಬಂಧಿಸಿದ ಕಾರ್ಯಾಲಯವನ್ನು ತೆರೆದು ಯುವ ಜನತೆಗೆ ತರಬೇತಿ ನೀಡುವುದು. ಅಗತ್ಯವಿದ್ದಲ್ಲಿ ಯೋಗ್ಯ ರೀತಿಯಲ್ಲಿ ಧನಸಹಾಯ ಒದಗಿಸುವುದು. ಜನತೆಯ ಆರೋಗ್ಯವನ್ನು ಕಾಪಾಡಲು ಬಾಲವಾಡಿಗಳು, ಯುವಕ, ಯುವತಿ ಸಂಘವನ್ನು ಕೇಂದ್ರೀಕರಿಸಿ ಆರೋಗ್ಯ ಕ್ಷೇಮ ಸೌಕರ್ಯಗಳಾದ ರೋಗ ಪ್ರತಿರೋಧ ಚಿಕಿತ್ಸಾ ಸೌಕರ್ಯ ಪೋಷಕ ಆಹಾರಗಳ ಕುರಿತು ಮಾಹಿತಿ ಒದಗಿಸುವುದು. ಈ ಎಲ್ಲಾ ಕಾರ್ಯಕ್ರಮಗಳ ಫಲಾನುಭವವನ್ನು ಪರಸ್ಪರ ಹಂಚಿಕೊಳ್ಳಲು ಗ್ರಾಮಸಭೆಯನ್ನು ಉಪಯೋಗಿಸುವುದು. ಅದೇ ರೀತಿ ಸರಕಾರದಿಂದ ದೊರೆಯುವ ಸವಲತ್ತುಗಳನ್ನು ಗ್ರಾಮಸಭೆಯಲ್ಲಿ ಗ್ರಾಮ ಜನತೆಗೆ ತಿಳಿಸಿ ಅವರು ಅದರ ಫಲ ಪಡೆಯುವಂತೆ ಪ್ರೇರೇಪಿಸುವುದು. ಅದೇ ರೀತಿ ದುಡಿಯಲು ಅಸಮರ್ಥರಾಗಿರುವ ಆರ್ಥಿಕವಾಗಿ ಹಿಂದುಳಿದ ಜನತೆಗೆ ಪಿಂಚಣಿ ಸೌಕರ್ಯವನ್ನು ಕಾಲಕಾಲಕ್ಕೆ ಒದಗಿಸುವುದು. ಅಂತೆಯೇ ಸರಕಾರ ಜ್ಯಾರಿಗೆ ತಂದಿರುವ ಕ್ಷೇಮ ಕಾರ್ಯಗಳಲ್ಲಿ ಸಹಕರಿಸಿದ ಸಂಘ ಸಂಸ್ಥೆಗಳನ್ನು ಪ್ರೋತ್ಸಾಹಿಸಲು ಬಹುಮಾನ ನೀಡುವುದು. ಇತ್ಯಾದಿಗಳನ್ನು ಮಾಡುವುದು. ಗ್ರಾಮೀಣ ಜನರ ಸೌಕರ್ಯಕ್ಕಾಗಿ ಅಗತ್ಯವಿರುವಲ್ಲಿ ನ್ಯಾಯಬೆಲೆಯ (ಪಡಿತರ) ಅಂಗಡಿ ತೆರೆಯುವುದು ಅಗತ್ಯ. I.R.D.P. ಹೆಸರನ್ನು ನೊಂದಾಯಿಸುವಾಗ ಪಂಚಾಯತು ಸದಸ್ಯರ ನಿರ್ದೇಶನದಂತೆ ಸೇರಿಸಬೇಕು.

ಸ್ಮಶಾನ : ಪ್ರತಿವಾರ್ಡಿಗೆ ಎರಡರಂತೆ ಸ್ಮಶಾನವನ್ನು ಸ್ಥಾಪಿಸಬೇಕು. ಪಂಚಾಯತಿಗೆ ಒಂದು ವೈದ್ಯಾಶ್ರಮ ಸ್ಥಾಪಿಸಬೇಕು.

ವಸತಿ : ವರ್ಕಾಡಿ ಪಂಚಾಯತಿನ ಹೆಚ್ಚು ಪ್ರದೇಶಗಳು, ಗುಡ್ಡಗಳಿಂದಲೂ, ಪಾರೆಗಳಿಂದಲೂ, ಬಯಲು ಪ್ರದೇಶಗಳಿಂದಲೂ ಕೂಡಿರುವುದು. ಈ ಪ್ರದೇಶವು ಹೆಚ್ಚಿಗೆ ಹಳ್ಳಿ ಜೀವನದಿಂದ ಕೂಡಿದೆ. ಹಿಂದಿನ ಕಾಲದಲ್ಲಿ ಕೆಲವಾರು ಕಡೆಗಳಲ್ಲಿ ಮಾತ್ರ ದೊಡ್ಡ ದೊಡ್ಡ ಮನೆಗಳಿಂದಲೂ ಸಹ ಕುಟುಂಬಗಳಿಂದಲೂ ವಾಸಿಸುತ್ತಿದ್ದರು. ಆದರೆ ಈಗ ಆ ಪರಿಸ್ಥಿತಿಗಳು ಕಡಿಮೆ. ಜನರೆಲ್ಲರೂ ಪ್ರತ್ಯೇಕವಾಗಿರಲು ಬಯಸುತ್ತಾರೆ. ಆದ್ದರಿಂದ ಹೆಚ್ಚಾಗಿ ಮನೆಗಳನ್ನು ಕಾಣಬಹುದು. ಅದರಲ್ಲೂ ಮಾರ್ಗಸಂಪರ್ಕ ವಿರುವ ಭಾಗದಲ್ಲಿ ಹೆಚ್ಚು ಮನೆಗಳಿವೆ. ಸಾಮಾನ್ಯವಾಗಿ ಬಯಲು ಪ್ರದೇಶಗಳಲ್ಲೂ ವಾಸಿಸುತ್ತಾರೆ. ಗುಡ್ಡ ಪ್ರದೇಶಗಳಲ್ಲಿ ಮನೆಗಳು ವಿರಳವಾಗಿರುತ್ತದೆ. ಆದರೂ ನೀರಿನ ಆಶ್ರಯವಿರುವಲ್ಲಿ ಅಲ್ಲಲ್ಲಿ ಮನೆಗಳನ್ನು ಕಾಣಬಹುದು. ಹೆಚ್ಚಿನ ಮನೆಗಳೆಲ್ಲ ಹಿಂದಿನ ಕಾಲದಲ್ಲಿ ಮುಳಿಮನೆಗಳಾಗಿದ್ದವು. ಈಗ ಹೆಚ್ಚಾಗಿ ಹಂಚಿನ ಮನೆಗಳನ್ನು ಕಾಣಬಹುದು. ಇನ್ನು ಮುದುವರಿದರೆ ಕಾಂಕ್ರಿಟ್ ಮನೆಗಳನ್ನು ಕಾಣಬಹುದು. ಪಂಚಾಯತಿನಲ್ಲಿ ಪರಿಶಿಷ್ಟಜಾತಿ/ಪ' ರಿ ಶಿಷ್ಟ ವರ್ಗದವರ ಮನೆಗಳು ಮೊದಲಿಗೆ ಸೋಗೆ ಮನೆಗಳಿದ್ದವು. ಸರಕಾರದ ವತಿಯಿಂದ ಹಂಚಿನ ಮನೆಗಳಾಗಿ ಪರಿವರ್ತಿಸಿದ್ದಾರೆ. ಈ ಪಂಚಾಯತಿನ ವತಿಯಿಂದ ಮನೆಕಟ್ಟಲು ಸ್ಥಳವಿಲ್ಲದವರಿಗೆ 4 ಸೆಂಟ್ಸ್ ಭೂಮಿಯನ್ನು ವಿತರಿಸಿದೆ. ಪರಿಶಿಷ್ಟಜಾತಿ/ಪರಿಶಿಷ್ಟ ವರ್ಗದವರಿಗೆ ಮನೆಯನ್ನು ಕಟ್ಟಿಕೊಟ್ಟಿದೆ. ತೀರಾ ಕಡಿಮೆ ಆದಾಯ ಇರುವ ಜನರಿಗೆ ಮನೆ ಕಟ್ಟಿ ಕೊಡುವ ಯೋಜನೆಯನ್ನು ರೂಪೀಕರಿಸಲಾಗಿದೆ. ಮರಗಳ ಅಭಾವದಿಂದಾಗಿ ಕಾಂಕ್ರೀಟ್ ಮನೆಗಳನ್ನು ನಿರ್ಮಿಸಬೇಕಾಗುವುದು. ಮನೆಯ ಗೋಡೆಯನ್ನು ಮೊದಲು ಮಣ್ಣಿನಿಂದ ನಿರ್ಮಿಸುತ್ತಿದ್ದರು. ಈಗ ಹೆಚ್ಚಾಗಿ ಕಲ್ಲಿನಿಂದ ಕಟ್ಟುತ್ತಾರೆ. ಹಂಚು ಹಾಕಬೇಕಾಗಿದ್ದರೂ ದೂರದ ಊರಿನಿಂದ ತರಬೇಕಾಗುವುದು. ಈಗಲೂ ಈ ಪಂಚಾಯತಿನಲ್ಲಿ ಮನೆಯಿಲ್ಲದ ಎಷ್ಟೋ ಕುಟುಂಬಗಳು ಇವೆ. ಬಾಡಿಗೆ ಮನೆಯಲ್ಲಿ ವಾಸಿಸುವ ಕುಟುಂಬವಿದೆ.

ಸಮಸ್ಯೆಗಳು: ಕೆಲವು ಮನೆಯವರಿಗೆ ಜಾಗದ ಪಟ್ಟೆ ಲಭಿಸಿಲ್ಲ. ಕೆಲವರಿಗೆ ಸ್ವಂತವಾದ ಸ್ಥಳವಿಲ್ಲ. ಸ್ಥಳವಿದ್ದರೂ ಮನೆಕಟ್ಟುವಷ್ಟು ವರಮಾನವಿಲ್ಲ. ಮನೆಗೆ ಹಂಚು ಹಾಕಿಸಲು ಸಾಧ್ಯವಾಗದವರೂ ಮುಳಿ ಮನೆಯಲ್ಲಿ ವಾಸಿಸುತ್ತಾರೆ. ವಿಶೇಷ ರೀತಿಯ ವಿನ್ಯಾಸಗಳಿಂದ ರಚಿತವಾದ ಮನೆಗಳು ತೀರ ವಿರಳ. ಕೆಲವೊಂದು ಮನೆಗಳು ವಿಶೇಷ ರೀತಿಯ ವಿನ್ಯಾಸಗಳಿಂದ ಕೂಡಿದವುಗಳಿವೆ. ತೋಡಿನ ಬದಿಗಳಲ್ಲಿ ಅಥವಾ ಹೊಳೆ ಬದಿಗಳಲ್ಲಿ ಮನೆಗಳನ್ನು ನಿರ್ಮಿಸುವುದು ಅಪಾಯಕಾರಿಯಾಗಿದೆ. ಕಟ್ಟಡ

ನಿರ್ಮಾಣ, ಸಾಮಾಗ್ರಿ, ಭೂಮಿಯ ಕೊರತೆ, ಬೆಲೆ ಏರಿಕೆ, ಕಾರ್ಮಿಕರ ಕೊರತೆ, ಸಾಲ ದೊರಕದೆ ಇರುವ ತೊಂದರೆಗಳು, ತಜ್ಞರ ಕೊರತೆ, ವಸತಿ ಸಹಕಾರಿ ಸಂಘಗಳ ಕೊರತೆ, ಗೋಡೆಗಳ ಸಂಖ್ಯೆಗಳ ಹೆಚ್ಚಳ ಇದರಿಂದ ಪರಿಸರ ಸಮಸ್ಯೆ.

ಸಾಧ್ಯತೆಗಳು :

ವಸತಿ ನಿರ್ಮಾಣ ಸಂಸ್ಥೆಗಳ ಚಟುವಟಿಕೆಗಳನ್ನು ಹೆಚ್ಚಿಸುವ ಕಾರ್ಯಕ್ರಮಗಳು. ಕಟ್ಟಡಗಳ ಬೆಲೆ ನಿಯಂತ್ರಿಸುವ ಕಾರ್ಯಕ್ರಮ. ಕಡಿಮೆ ವೆಚ್ಚದ ನಿರ್ಮಾಣ ರೀತಿಯ ಕುರಿತು ಪ್ರಚಾರ. ಕಾರ್ಮಿಕರ ನೈಪುಣ್ಯತೆಯನ್ನು ಹೆಚ್ಚಿಸುವ ತರಬೇತಿ, ದುಂದುವೆಚ್ಚದ ಮನೆ ನಿರ್ಮಾಣವನ್ನು ನಿಯಂತ್ರಿಸುವ ತಕ್ಕ ತೆರಿಗೆ, ಕಟ್ಟಡಗಳ ಗುಣ ಸ್ವಭಾವವನ್ನುಳಿಸಲು ಸೇವಾ ಸಂಘಗಳು, ಮನೆಕಟ್ಟಲು ಲೈಸನ್ಸ್ ಸರಳಗೊಳಿಸುವುದು.

ಪಂಚಾಯತಿನಲ್ಲಿ ಗೃಹ ನಿರ್ಮಾಣ ಕಾರ್ಯಗಳನ್ನು ಸುಲಭ ರೀತಿಯಲ್ಲಿ ಕಾರ್ಯರೂಪಕ್ಕೆ ತರಲು ಕೆಲವು ಸಹಕಾರಿ ಸಂಘಗಳು ರಿಯಾಯಿತಿ ದರದ ಬಡ್ಡಿಗಳ ಸಾಲವನ್ನು ಕೊಡಬೇಕು. ರಾಷ್ಟ್ರೀಕೃತ ಬ್ಯಾಂಕ್‌ಗಳು ಈ ದಿಸೆಯಲ್ಲಿ ಮುಂದೆ ಬಂದರೆ ಹೆಚ್ಚು ಫಲಕಾರಿ. ಮೇಲೆ ಹೇಳಿದ ಎಲ್ಲಾ ವಿಷಯಗಳಿಗೂ ಸುಲಭ ವಿಧಾನದಲ್ಲಿ ಸಾಲ ಸೌಲಭ್ಯಗಲು ಸಿಗುವಂತಾಗಬೇಕು.

ಮುಳಿ ಮನೆಯಲ್ಲಿ ತೀರಾ ದುರ್ಬಲವಾಗಿರುವುದರಿಂದ ಅವರಿಗೆ ಮನೆ ಕಟ್ಟಲು ಸಹಾಯ ಒದಗಿಸಬೇಕು.

ಭವನ ನಿರ್ಮಾಣಗಳ ಬಗ್ಗೆ ವಿವರಣೆಯನ್ನು ಕೆಳಗೆ ಕೊಟ್ಟಿರುವ ಪಟ್ಟಿಯಲ್ಲಿ ಸೂಚಿಸಲಾಗಿದೆ.

ಕ್ರ.ಸಂ.	ಮನೆ ಆಗತ್ಯವಿರುವ ಮನೆಗಳ ಸಂಖ್ಯೆ	ವಿವಿಧ ಯೋಜನೆಗಳಲ್ಲಿ ಪೂರ್ತಿಯಾದ ಕೊಟ್ಟ ಮನೆಗಳು	ಮನೆಗಳು	ಇನ್ನು ಮನೆ ಕಟ್ಟಲು ಆಯ್ಕೆ ಮಾಡಬೇಕಾದ ಮನೆಗಳು
	I.R.D.P.S.92			
1.	45	4	4	45
2.	25	6	6	25
3.	50	7	7	50
4.	75	3	3	75
5.	50	8	8	50
6.	35	2	2	35
7.	50	5	5	50
8.	22	7	7	22
9.	28	4	4	28
10.	25	4	4	25

ಈ ಪಂಚಾಯತಿನಲ್ಲಿರುವ ವಿವಿಧ ರೀತಿಯ ಮನೆಗಳ ಪಟ್ಟಿ ಈ ಕೆಳಗೆ ಕೊಡಲಾಗಿದೆ.

ವಾರ್ಡ್	ಮಡಲು	ಹಂಚು	ಕಾಂಕ್ರೀಟ್	ಮುಳಿ	ಒಟ್ಟು
1	-	669	14	25	708
II	9	506	25	19	559
III	-	380	10	10	400
IV	-	563	11	28	602
V	-	625	50	35	710
VI	-	549	42	4	595
VII	-	582	12	20	614
VIII	-	365	13	11	389
IX	427	5	20	452	
X	-	365	9	22	396
ಒಟ್ಟು	9	5031	191	194	5425

ಪಂಚಾಯತಿನಿಂದ ಸಿಕ್ಕಿದ ಅಂಕಿ ಅಂಶಗಳು

ನಮ್ಮ ಪಂಚಾಯತಿನಲ್ಲಿರುವ ಮನೆಗಳು ಮತ್ತು ಮನೆಯ ಅತ್ಯಾವಶ್ಯಕ ಸೌಕರ್ಯಗಳು

ಒಟ್ಟು ಮನೆ	ಕಕ್ಕುಸ	ವಿದ್ಯುತ್	ಬಾವಿ	ಗೋಡೆ
	ಉಂಟು	ಇಲ್ಲ	ಉಂಟು	ಇಲ್ಲ
	ಉಂಟು	ಇಲ್ಲ	ಉಂಟು	ಇಲ್ಲ
5429	171	5258	1295	4134
3226	2203	5329	100	

ಮುಳಿ ಮನೆಯಲ್ಲಿರುವವರು ತೀರಾ ದುರ್ಬಲ ವರ್ಗದವರಾಗಿರುವುದರಿಂದ ಅವರಿಗೆ ಮನೆ ಕಟ್ಟಲು ಸಹಾಯ ಒದಗಿಸಬೇಕು ಅಥವಾ ಮನೆ ಕಟ್ಟಿ ಕೊಡಬೇಕು.

ಸಂಸ್ಕೃತಿ

ಪಂಚಾಯತಿನ ಸಮೃದ್ಧವಾದ ಅಭಿವೃದ್ಧಿಯು ಅಲ್ಲಿಯ ಸಂಸ್ಕೃತಿಯನ್ನು ಎತ್ತಿ ಹಿಡಿಯುತ್ತದೆ. ವರ್ಕಾಡಿ ಪಂಚಾಯತಿನಲ್ಲಿ ಬಹಳ ಹಿಂದಿನಿಂದಲೂ ಉತ್ತಮವಾದ ಸಂಸ್ಕೃತಿಯು ತಲೆ ಎತ್ತಿ ನಿಂತಿತ್ತು ಎಂಬುದನ್ನು ಮರೆಯುವಂತಿಲ್ಲ. ಹಿಂದೆ ಈ ಪ್ರದೇಶವು ಬ್ರಿಟೀಷರ, ರಾಜರ ಕೈ ಕೆಳಗಿತ್ತು. ಆಮೇಲೆ ಜಮೀನುದಾರ ವಶದಲ್ಲಿತ್ತು. ಹಿಂದೆಯೇ ಕಲೆಗಳಲ್ಲಿ ಜನರಿಗೆ ಅರಿವಿತ್ತು. ಯಕ್ಷಗಾನ, ನಾಟಕ, ಮೊದಲಾದವುಗಳು ಪ್ರಚಲಿತದಲ್ಲಿತ್ತು. ಹಲವು ಧಾರ್ಮಿಕ ವಿಭಾಗಗಳು ಅವುಗಳ ಪ್ರಧಾನ ಆರಾಧನಾಲಯಗಳು ವಾರ್ಷಿಕೋತ್ಸವಗಳು ಈ ಪ್ರದೇಶದ ವೈಶಿಷ್ಟ್ಯವಾಗಿತ್ತು. ಹಲವಾರು ದೇವಾಲಯಗಳು, ಮಸೀದಿಗಳು ಇಗರ್ಜಿ, ದೈವಸ್ಥಾನಗಳು ಬನಗಳು, ಹಿಂದೂ ಮುಸ್ಲಿಂ ಕ್ರೈಸ್ತರ ಪವಿತ್ರ ಸ್ಥಳಗಳು ಪಂಚಾಯತಿನ ಒಂದೊಂದು ವಾರ್ಡಿನಲ್ಲೂ ಒಂದೊಂದು ರೀತಿಯ ವಿಷಯಗಳಲ್ಲಿ ಪವಿತ್ರತೆಯನ್ನು ಪಡೆದಿದೆ. ಉದಾಹರಣೆಗೆ ದೇವಸ್ಥಾನಗಳಲ್ಲಿ ನಡೆಯುವ ಜಾತ್ರೆಗಳು ಮಸೀದಿಗಳಲ್ಲಿ ನಡೆಯುವ ಉರೂಸ್, ಚರ್ಚ್‌ನಲ್ಲಿ ನಡೆಯುವ ಹಬ್ಬಗಳು ಕೆಲವು. ಹಿಂದಿನಿಂದಲೆ ಈ ಪ್ರದೇಶದಲ್ಲಿ ಜಾತಿ ಪದ್ಧತಿಗಳು ಇದ್ದರೂ ಜನರು ಸಾಮರಸ್ಯ ಜೀವನ ನಡೆಸುತ್ತಿದ್ದೆಂಬುದಕ್ಕೆ ಎರಡು ಮಾತಿಲ್ಲ.

ಈ ಪ್ರದೇಶದಲ್ಲಿ ಭೂ ಮಾಲಿಕರ ಎದುರಾಗಿ ಹೋರಾಡಿದ ಶ್ರಮಜೀವಿಗಳು ಸ್ವಾತಂತ್ರ್ಯ ಪ್ರೇಮಿಗಳು ಇಲ್ಲಿ ಜೀವಿಸಿದ್ದರು. ಈ ರೀತಿಯ ಘಟನೆಗಳಿಂದ ನೊಂದ ಜನರು ಈಗಲೂ ಕೆಲವರು ಜೀವಂತರಾಗಿರಬಹುದು. ಈ ಪಂಚಾಯತಿನಲ್ಲಿ ಹಲವಾರು ಪಂಗಡ ಭಾಷೆಗಳಿವೆ. ಹೆಚ್ಚಾಗಿ ತುಳು, ಕನ್ನಡ, ಮಲೆಯಾಳ ಕೊಂಕಣಿ ಭಾಷೆಗಲು ಮನೆ ಮಾತಾಗಿವೆ. ಭೂತಾರಾಧನೆಗಳನ್ನು ನಾವು ಹೆಚ್ಚಿನ ಕಡೆಗಳಲ್ಲಿ ಕಾಣಬಹುದು. ಜಾನಪದ ಕಲೆಗಲಾದ ಕಂರ್ಗೊಳು, ಮಾದಿರ, ಆಟಿಕಳಂಜ ಕಂಬಳ ಈ ಪ್ರದೇಶದಲ್ಲಿ ಕಾಣಬಹುದು. ವಿಶೇಷ ಹಬ್ಬಗಳ ಸಮಯದಲ್ಲಿ ವೊಸರು ಕುಡಿಕೆ, ಗಣೇಶೋತ್ಸವಗಳನ್ನು ವಿಜೃಂಭಣೆಯಿಂದ ಆಚರಿಸುತ್ತಾರೆ. ಕೆಲವು ಕಡೆಗಳಲ್ಲಿ ಭಜನೆ ಮಂದಿರಗಳನ್ನು ಕಾಣಬಹುದು.

ಯಾವುದೇ ಪ್ರದೇಶದ ಸಂಸ್ಕೃತಿಗೆ ಅಲ್ಲಿರುವಂತಹ ಸಂಘ ಸಂಸ್ಥೆಗಳು ಕೂಡಾ ಪೂರಕವಾಗಿದೆ. ನಮ್ಮ ವರ್ಕಾಡಿ ಪಂಚಾಯತಿನಲ್ಲಿ ಹಲವಾರು ಸಂಘ ಸಂಸ್ಥೆಗಳಿವೆ. ಕೆಲವು ಕಾರ್ಯ ಪ್ರವೃತ್ತವಾಗಿದ್ದರೆ ಕೆಲವು ಹೆಸರಿಗೆ ಮಾತ್ರ. ಇನ್ನುಳಿದವು ವಾರ್ಷಿಕೋತ್ಸವಗಳು ಆಟೋಟ ಸ್ಪರ್ಧೆಗಳನ್ನು ಮಾತ್ರ ಜರಗಿಸುತ್ತವೆ. ಇಲ್ಲಿ ವಾಚನಾಲಯವನ್ನು ಕಾಣಲು ಸಾಧ್ಯವಿಲ್ಲ. ನಮ್ಮ ಸಂಸ್ಕೃತಿಯನ್ನು ಬೆಳೆಸುವಲ್ಲಿ ಓದುವಿಕೆಯು ಅತೀ ಮುಖ್ಯವಾಗಿದೆ. ಅದರಲ್ಲೂ ಸ್ತ್ರೀ ವಿದ್ಯಾಭ್ಯಾಸಕ್ಕೆ ಹೆಚ್ಚು ಮಹತ್ವ ಕೊಡಬೇಕಾಗಿದೆ. ಪಂಚಾಯತಿನ ವತಿಯಿಂದ ಕ್ರೀಡಾಂಗಣಗಳು, ಕಲಾತರಬೇತು ಕೇಂದ್ರಗಳು, ಸಾಂಸ್ಕೃತಿಕ ಕಟ್ಟಡಗಳು, ಕಲಾ ತರಬೇತಿ ಕೇಂದ್ರಗಳು, ಸಾಂಸ್ಕೃತಿಕ ಕಟ್ಟಡಗಳು ಅಗತ್ಯವಾಗಿದೆ. ಜಾತ್ರೆಗಳ ಸಮಯದಲ್ಲಿ ಕೋಳಿ ಅಂಕ ಜರುಗಿಸುವುದು ಇಲ್ಲಿಯ ವಾಡಿಕೆಯಾಗಿದೆ.

ಸಮಸ್ಯೆಗಳು : ವಾಚನಾಲಯ ಹಾಗೂ ಗ್ರಂಥಾಲಯಗಳ ಕೊರತೆಯು ಈ ಪಂಚಾಯತಿನಲ್ಲಿದ್ದು, ಇದು ಓದುವ ಹವ್ಯಾಸವಿರುವ ಯುವಜನರಿಗೆ ಒಂದು ಕೊರತೆಯಾಗಿರುತ್ತದೆ. ದೂರದರ್ಶನ ವೀಕ್ಷಣೆಗೆ ಸಾರ್ವಜನಿಕ ಟೆಲಿವಿಷನ್‌ಗಳ ಸೆಟ್ಟುಗಳು ಇಲ್ಲೆಲ್ಲೂ ಕಂಡು ಬರುವುದಿಲ್ಲ. ಇವುಗಳನ್ನು ಅಳವಡಿಸುವುದು ಅತೀ ಅಗತ್ಯವಾಗಿದೆ. (ಪರಿಶಿಷ್ಟ ಜಾತಿ/ವರ್ಗಗಳ ಟಿವಿ. ಬಿಟ್ಟು) ಗ್ರಂಥಾಲಯಗಳು ಈ ಪಂಚಾಯತಿನಲ್ಲಿ ಕಾಣಲಾರದು. ಈಗ ಜನರು ಸಾಂಸ್ಕೃತಿಕ ವಿಷಯದಲ್ಲಿ ಮನೋರಂಜನೆಯನ್ನು ಮಾತ್ರ ಅನುಭವಿಸುತ್ತಾರೆ. ಇದರಿಂದ ಜನತೆಯ ಅಭಿವೃದ್ಧಿಯಲ್ಲಿ ಶಿಕ್ಷಣದ ಪ್ರಾಮುಖ್ಯತೆ ಇದೆ ಎಂದು ತಿಳಿಯಬೇಕು. ಇಲ್ಲಿ ಸಾಂಸ್ಕೃತಿಕ ಮಾಧ್ಯಮದ ಮೂರು ರೂಪಗಳಾದ ಶಾಲೆಗಳು ಸಾಂಸ್ಕೃತಿಕ ಚಟುವಟಿಕೆಗಳ ಪ್ರದಾನ ಕೇಂದ್ರಗಳು, ಹವ್ಯಾಸಿ ನಾಟಕ ಸಂಘ ಸಂಸ್ಥೆಗಳು ಮಹತ್ವದ ಪಾತ್ರ ವಹಿಸುತ್ತದೆ.

ಸಾಧ್ಯತೆಗಳು :

ಈ ಪಂಚಾಯತಿನ ಎಲ್ಲಾ ವಾರ್ಡುಗಳಲ್ಲಿಯೂ ಗ್ರಂಥಾಲಯಗಳನ್ನು ಅಗತ್ಯವಾಗಿ ಸ್ಥಾಪಿಸಬೇಕು ಇಲ್ಲಿ ಪ್ರಾದೇಶಿಕವಾಗಿ ನಡೆಯುವ ಆಚರಣೆ ಹಾಗೂ ಉತ್ಸವಗಳನ್ನು ಪ್ರೋತ್ಸಾಹಿಸುವುದು ಕ್ರೀಡೆಗಳಿಗೆ ಬೇಕಾದ ಆಟದ ಉಪಕರಣಗಳನ್ನು ಒದಗಿಸುವುದು.

ವಾಚನಾಲಯಗಳಿಗೆ ವಾರ್ತಾ ಪತ್ರಿಕೆ, ಅಗತ್ಯವಿರುವ ಪುಸ್ತಕಗಳನ್ನು ವಿತರಿಸಬೇಕು. ಪಂಚಾಯತಿನಲ್ಲಿ ಕ್ರೀಡಾಂಗಣ ನಿರ್ಮಿಸಬೇಕು. ಸಾಂಸ್ಕೃತಿಕ ಕಲೆಗಳ ಬಗ್ಗೆ ತರಬೇತಿ ನೀಡುವ ತರಬೇತಿ ಕೇಂದ್ರದ ಅಗತ್ಯವಿದೆ. ಸಾರ್ವಜನಿಕ ಸಮಾರಂಭಗಳನ್ನು ಏರ್ಪಡಿಸುವುದಕ್ಕಾಗಿ ಸುಸಜ್ಜಿತ ಸಮಾರಂಭಗಳನ್ನು ಏರ್ಪಡಿಸುವುದಕ್ಕಾಗಿ ಸುಸಜ್ಜಿತ ರಂಗಮಂಟಪದ ನಿರ್ಮಾಣವಾಗಬೇಕು. ಜಾನಪದ ಕಲೆಗಳು, ಲಲಿತಕಲೆಗಳು, ಮೊದಲಾದವುಗಳ ಅಭಿರುಚಿಯುಳ್ಳವರಿಗೆ ಪ್ರತ್ಯೇಕವಾಗಿ ತರಬೇತಿ ಕೊಡುವುದು ಉತ್ತಮ. ವಯಸ್ಕರಾದ ಪ್ರಸಿದ್ಧ ಕಲಾವಿದರಿಗೆ ಸನ್ಮಾನಗಳನ್ನು ಮಾಡುವುದು. ವಿದಗ್ಧರಾದ ಕಲಾವಿದರನ್ನು ಬರಮಾಡಿ ಉತ್ತಮ ಮಾಹಿತಿಗಳನ್ನು ಪಡೆದುಕೊಳ್ಳುವುದು. ಶಿಲಾಶಾಸನೆಗಳು ಇದ್ದಲ್ಲಿ ಪತ್ತೆ ಹಚ್ಚಿ ಅವುಗಳ ಪೂರ್ವ ಚರಿತ್ರೆಯನ್ನು ಅಧ್ಯಯನ ಮಾಡುವುದು. ಪಂಚಾಯತು ಮಟ್ಟದಲ್ಲಿ ಕಲೆ, ಕ್ರೀಡೆ, ಜಾನಪದ ಕಲೆ ಮೊದಲಾದವನ್ನು ಪ್ರೋತ್ಸಾಹಿಸುವುದಕ್ಕಾಗಿ ವಾರ್ಷಿಕ ಸ್ಪರ್ಧಾ ಕೂಟಗಳನ್ನು ಜರಗಿಸುವುದು. ಕಂಬಳಗಳನ್ನು ಜರಗಿಸುವಲ್ಲಿ ಪಂಚಾಯತಿನಿಂದ ಅಗತ್ಯವಾದ ಎಲ್ಲಾ ಸಹಾಯಗಳನ್ನು ನೀಡುವುದು. ಅಜೀರ್ಣಾವಸ್ಥೆಯಲ್ಲಿರುವ ಆರಾಧನಾಲಯಗಳ ಅಭಿವೃದ್ಧಿಗೆ ಸಹಕರಿಸುವುದು. ಗ್ರಾಮೀಣ ಜನರಿಗೆ ಸಿಗುವ ಸಹಕಾರ ಸೌಲಭ್ಯಗಳ ಬಗ್ಗೆ ಸಂಘ ಸಂಸ್ಥೆಗಳ ಮೂಲಕ ಜನರಿಗೆ ಮಾಹಿತಿ ನೀಡುವುದು.

ಈ ಪಂಚಾಯತಿನಲ್ಲಿರುವ ಸಂಘ ಸಂಸ್ಥೆಗಳು ಹಲವಾರು ಇದ್ದರು ಕಾರ್ಯ ಚಟುವಟಿಕೆಗಳು ನಡೆಸುವಂತಹವುಗಳು ಕೆಲವು ಮಾತ್ರ.

ವರ್ಕಾಡಿ ಪಂಚಾಯತಿನಲ್ಲಿರುವ ಸಂಘ ಸಂಸ್ಥೆಗಳ ಹೆಸರನ್ನು ಈ

ಕೆಳಗೆ ಕೊಡಲಾಗಿದೆ.

1. ಮಿತ್ರವೃಂದ
2. ಸ್ನೇಹಿತರ ಬಳಗ
3. ವಿಜಯ ಕಲಾವೃಂದ ಗಣೇಶ ಕೃಪಾ
4. ವೀರಾಂಜನೇಯ ವ್ಯಾಯಾಮ ಶಾಲೆ ಅಡಕಳ ಕಟ್ಟೆ
5. ಯುವಶಕ್ತಿ ಫ್ರೆಂಡ್ಸ್‌ಕ್ಲಬ್ ಕುಂಟಪದವು
7. ಚಾಮುಂಡೇಶ್ವರಿ ಭಜನಾ ಮಂಡಲಿ ಪಾವೂರು
8. ರೂಪ ಕಲಾಕರ್ಷಕ ಸಮಿತಿ ಸುಳ್ಯಮೆ
9. ವೀರಾಂಜನೇಯ ವ್ಯಾಯಾಮ ಶಾಲೆ ಪಾವೂರು
10. ಆಟ್ಸ್ ಮತ್ತು ಸ್ಪೋರ್ಟ್ಸ್ ಕ್ಲಬ್ ಧರ್ಮನಗರ.
11 ಕಸ್ತೂರಿ ಬಾ ಮಹಿಳಾ ಮಂಡಳಿ ಧರ್ಮನಗರ
12 ನಾಗಬ್ರಹ್ಮ ಫ್ರೆಂಡ್ಸ್ ಕ್ಲಬ್ ಅರಿಬೈಲ್
13. ಸೂರ್ಯೇಶ್ವರ ಕಲಾ ಸಂಘ ಬಾಕ್ರಬೈಲು
14. ದುರ್ಗಾಪರಮೇಶ್ವರಿ ಭಜನಾ ಮಂಡಳಿ ವರ್ಕಾಡಿ
15. ಕಾವಿ ಸುಬ್ರಹ್ಮಣ್ಯ ಸೇವಾ ಸಮಿತಿ ವರ್ಕಾಡಿ
16. ಕೂಟತ್ತಜೆ ಉಳ್ಳಾಲ್ತಿ ಅಮ್ಮನವರ ಸೇವಾ ಸಮಿತಿ
17. ಜ್ಞಾನೋದಯ ಸಮಾಜ ಮಂದಿರ ಸಸಿಗೋಳಿ
18. ಮಹಿಳಾ ಮಂಡಲ ಸುಳ್ಯಮೆ
19. ರಾಮಕೃಷ್ಣ ಭಜನಾ ಮಂದಿರ ಸಸಿಗೋಳಿ
20. ಶ್ರೀ ಕೃಷ್ಣ ಮಂದಿರ ಅರಿಬೈಲ್
21. ಸಂತೋಷ್ ಫ್ರೆಂಡ್ಸ್ ಕ್ಲಬ್ ಪಾವೂರು (ರಿ)
22. ಎಸ್. ವೈ. ಎಸ್ ತೋಕೆ
23. ಶ್ರೀ ಕಾವೀ ಸಂಕೇತ್ ವರ್ಕಾಡಿ
24. ನ್ಯೂಷ್ಟ್ರ ಫ್ರೆಂಡ್ಸ್ ಕ್ಲಬ್ ನಾಟೆಕಲ್ ತೌಡುಗೋಳಿ
25. ಯುವಕ ಮಂಡಲ ಮುಡಿಮಾರು
26. ಓಂಕಾರ ಭಜನಾ ಮಂಡಳಿ ಆನೆಕಟ
27. ವಿಜಯ ಫ್ರೆಂಡ್ಸ್ ಕ್ಲಬ್
28. ಮಹಾವಿಷ್ಣು ಸೇವಾ ಸಮಿತಿ ; ದುರ್ಗಾಂಭಿಕಾ ಸೇವಾ ಸಂಘ
29. ತಾಮಾರು ಬದಿಯಾರು
30. ಸೋಶಲ್ ವೆಲ್‌ಫೇರ್ ಎಸೋಶಿಯೇಶನ್ ಪಾವೂರು
31. ಶ್ರೀ ಉಳ್ಳಾಲ್ತಿ ಭಜನಾ ಮಂದಿರ ಕಪಣ ಮುಗರು
32. ಮಡಿಕೆತ್ತಾಯ ಸೇವಾ ಸಮಿತಿ ವರ್ಕಾಡಿ
33. ದಪ್ಪು ಕಮಿಟಿ ಪೊಯ್ಯತ್ತ ಬೈಲು
34. ದಪ್ಪು ಕಮಿಟಿ ಪಾವೂರು
35. ಸಿ.ವೈ. ಎಂ. ವರ್ಕಾಡಿ
36. ದಪ್ಪು ಕಮಿಟಿ ಬಾಕಿಮಾರು
37. ಮಿಲಾಡಿ ಶರೀಫ್ ಕಮಿಟಿ

ಈ ಪಂಚಾಯತಿನಲ್ಲಿರುವ ಆರಾಧನಾಲಯಗಳು ಈ ಕೆಳಗಿನಂತಿವೆ.

ಆರಾಧನಾಲಯಗಳು

I ಬೋಳ್ಳ ಮಹಾಮ್ಮಾಯೀ ಕ್ಷೇತ್ರ, ಪಜ್ಜ, ಮಲರಾಯ ದೈವ; ಕೊನಿಬೈಲು ಮರಾಕಾಯ ದೈವ ಉರ್ನಿ ಮಸೀದಿ, ಪಲ್ಲದೆ ಪಡು ಮಸೀದಿ ನಾಣಿಲತ್ತಡಿ ಕೊರಗತನಿಯ ಸ್ಥಾನ ಉರ್ಣ ದೈವಸ್ಥಾನ, ಬಗಂಬಿಲ ಮಲರಾಯ, ತುಪ್ಪ ಮಲರಾಯ ದೈವಸ್ಥಾನ

II ಕೊಡ್ಲ ಮೊಗರು ಮಲರಾಯ ದೈವಸ್ಥಾನ, ಗುದೆದ ಪಡ್ಪು ವಿಷ್ಣು ಮೂರ್ತಿದೈವ, ಛತ್ರಸಂತಾನ ಗೋಪಾಲಕೃಷ್ಣ ದೇವಸ್ಥಾನ, ಆನೆಕಲ್ಲು ಮಸೀದಿ, ಆನೆಕಲ್ಲು ಮಂಟಮೆ ಮಲರಾಯ ಸ್ಥಾನ, ಕತ್ತರಿಕೋಡಿ ರಕ್ತೇಶ್ವರಿಗುಡಿ, ಪಿಲಿಗುಂಡ ಕೂಟೇಲು ಮಲರಾಯ ದೈವಸ್ಥಾನ, ಲಂಕ್ರಿಕಾಡು ಮಲರಾಯ ಸ್ಥಾನ, ನೂಜಿಗುಡ್ಡದ ಮೇಲಿರುವ ರಕ್ತೇಶ್ವರಿ ಗುಡಿ; ಕೊಡ್ಲ ಮುಗರು ಬಂಡಾರದ ಮನೆ ನಡುಮನೆ, ಕೊಡ್ಲ ಮೊಗರು ಕಂಬಳದ ಹತ್ತಿರ ಮಲರಾಯ ಆರಾಧನಾಲಯ

III ಕೂಟತ್ತಚೆ ಉಳ್ಳಾಲ್ತಿ, ದೈವಸ್ಥಾನ, ಕೂಟತ್ತಜೆ, ತಾಮರ, ದೂಮಾವತಿ ದೈವಸ್ಥಾನ ಬಂಡಾರದ ಮನೆ, ಪೊಯ್ಯತ್ತಬೈಲು ಕರಾಳ ಗಡ್ಡೆ; ಬಾರಿಕೆ ತೋಡ ಕಕ್ಕುಕನ (ಕುರುಹು)
ಮಸೀದಿ (ದರ್ಗಾ) ಪುರುಷಂಗೋಡಿ ಮಸೀದಿ, ನಿಡಿಂಬರಿ ಲೀಲಾವತಿ ದೇವಿಯ ಗುಡಿ ತಾಮರು ಕಲ್ಲುಟಿ ದೈವಸ್ಥಾನ
ತಾಮರ ದೈವಸ್ಥಾನ, ತಪ್ಪದಿ ದೇವಸ್ಥಾನ ಕಲ್ಲುರು ಉಡುಪ ಈಡಿ ದೇವಿಯ ಬಂಡಾರಮನೆ, ದುರ್ಗಾದೈವ

IV ಶ್ರೀ ಮಡಿಕತ್ತಾಯ ದೈವಸ್ಥಾನ, ದುರ್ಗಾಪರಮೇಶ್ವರಿ ದೇವಾಲಯ, ಶ್ರೀ ಸುಬ್ರಹ್ಮಣ್ಯೇಶ್ವರ ದೇವಾಲಯ. ಶ್ರೀ ಮಡಿಕತ್ತಾಯ ದೈವದ ಬಂಡಾರ ಮನೆ. ಶ್ರೀ ಮಹಮ್ಮಾಯಿ ದೇವಸ್ಥಾನ, ಕಳಮಂಜ ಮಸೀದಿ, ತೋಕೆಮಸೀದಿ, ಪಾಳೆರುಡಿ ಮಸೀದಿ, ಶ್ರೀಮ ಇತ್ತಮೊಗರಾಯ ಸ್ಥಾನ, ಶ್ರೀ ಮಿತ್ತ ಮೊಗರಾದ ಬಂಡಾರದ ಮನೆ. ಮಿತ್ತ ಮೊಗರಾಯ ಸ್ಥಾನ.

V ಆಲದಡೆ ಮಸೀದಿ, ಮುಗೇರ ದೈವಸ್ಥಾನ ಬೋಳ ಪದವು ಬಜಲಕರಿಯ ಗೋಪಾಲಕೃಷ್ಣ ದೇವಾಲಯದ ಕುರುಹು, ಬಟ್ಟಿಕಳ ಶ್ರೀ ಗೋಪಾಲ ಕೃಷ್ಣ ದೇವಾಲಯ
ತಿಮ್ಮಂಗೂರು ದೂಮಾವತಿ ದೇವಸ್ಥಾನ, ಪಾಡ -ಉಚ್ಚಿಲು ಮನೆ ಸುಂಕದ ಕಟ್ಟೆ ಮಸೀದಿ, ನಡೆಬೈಲು ಭಂಡಾರದ ಮನೆ ನಡಿಬೈಲು ಕೋಮರಾಯ ಕರುಳಗಡಿ

VI ಕೋಡಿ ದೇವಸ್ಥಾನ, ಕೊಪ್ಪಳ ದೇವಸ್ಥಾನ, ಮುಡಿಮಾರು ದೈವಸ್ಥಾನ ಕೆದುಂಬಾಡಿ ದೇವಸ್ಥಾನ, ಪಾವೂರು ಶಾಲೆ ಬಳಿ ಮಸೀದಿ ಪಾವೂರು ಕೋಡಿ ಮಸೀದಿ, ಮುಡಿಮಾರು ಮಸೀದಿ, ಕೆದುಂಬಾಡಿ ಬಯಲು ಮಸೀದಿ ಗೇರುಕಟ್ಟೆ ಇಗರ್ಜಿ

VIII ನಾಗಬ್ರಹ್ಮ ದೇವಸ್ಥಾನ, ಕುತ್ತನಾಡಿ ಧೂಮಾವತಿ ದೈವ, ಅಂಬೈಲು ಕಂಬಳದ ಕೋರಿ, ಅರಿಬೈಲು, ಮಾರಿದೇವತೆ ಗುಡಿ, ಅರಿಬೈಲು

ಪಾದೆ, ಕೊರತಿ ಗುಂಡಿ, ಕೊರತಿಪಲಿಕೆ, ಭಂಡಾರ ಮನೆ ಧೂಮಾವತಿ ದೈವದ ಗುಡಿ ಕೊರತ್ತಿ ಪಳಿಕೆ ಮಸೀದಿ, ಬಾಕಿಮಾರು ಮಸೀದಿ

IX ಪಾತೂರು ಶ್ರೀ ಸೂರ್ಯೋಶ್ವರ ದೇವಾಲಯ ಪಾತೂರು ಮಸೀದಿ, ಸುಳ್ಯಮೆ (ಪೊಯ್ಯತ್ತಬೈಲು) ಶ್ರೀ ವಿಷ್ಣುಮೂರ್ತಿ ದೇವಸ್ಥಾನ ಸುಳ್ಯಮೆ ದೇವಿಗುಡಿ, ಪೊಯ್ಯತ್ತಬೈಲ್ ದೆವಿಗುಡಿ, ಏರ್ಯ ದೈವಸ್ಥಾನ, ಪೊಯ್ಯತ್ತಾಯ ಭಂಡಾರ ಮನೆ ಬಾಳೆಹಿತ್ತಿಲ ದೇವಾಲಯ

X ಕೋಡಿಮೂಲೆಯಲ್ಲಿರುವ ಪುರಾತನ ದೇವಾಲಯದ ಅವಶೇಷ, ಪಿಲಿಚಾಮುಂಡಿ ದೈವದ ಗುಡಿ ಮತ್ತು ಕಟ್ಟೆ ನೆಕ್ಕಿಲ ಧೂಮಾವತಿ ಗುಡಿ, ಪಾವೂರು ಕಟ್ಟೆ ಅಲಾಬಿ ಗುಡಿ, ಕೊರಗಟ್ಟಿನ ಗುಡಿ ತಟ್ಟರೆ ದುರ್ಗಾಪರಮೇಶ್ವರಿ ಗುಡಿ ಕೊಪ್ಪಳ ಮಸೀದಿ.

I ತಲೆಕ್ಕಿ ಮಸೀದಿ, ಬೊಳ್ಳಾರು ಮಸೀದಿ, ಬೊಳಿಂಜ ವಿಷ್ಣುಮೂರ್ತಿ ದೇವಸ್ಥಾನ, ಬಾಳೆಪುಣಿ ಮಲರಾಯ ಭೂತ ಸ್ಥಾನ, ದೈವ ಧೂಮಾವತಿ ಭೂತಸ್ಥಾನ ಮಲಾರು ದೈವಸ್ಥಾನ, ಸೀಂಟೂರು ಗುತ್ತು ಮಲರಾಯ ಧೂಮಾವತಿ ಗುಡಿ, ಬಾಕ್ರಬೈಲು ಮಲರಾಯ ದೈವಸ್ಥಾನ. ಬಾಕಿಮಾರು ಕೋವುರಾಯ, ನಡಿಬೈಲು ಮಸೀದಿ ನಮ್ಮ ಪಂಚಾಯತಿನಲ್ಲಿ 98 ನಾಗಬನಗಳು ಮತ್ತು ಇತರ ಹಲವು ದೈವಗಳ ಬನಗಳೂ ಇವೆ.

ವನಿತ ಸ್ತ್ರೀ ಪುರುಷ ಅನುಪಾತ

1991ನೇ 27ರ ಕಾನೇಶುಮಾರಿ ಲೆಕ್ಕಾಚಾರದಂತೆ ವರ್ಕಾಡಿ ಪಂಚಾಯತಿನ ಒಟ್ಟು ಜನಸಂಖ್ಯೆ 20821 ಇದರಲ್ಲಿ ಪುರುಷರು 10412 ಸ್ತ್ರೀಯರು 10409

ವಿದ್ಯಾಭ್ಯಾಸ

ಸಾಧಾರಣ 1920ರ ಮೊದಲು ನಮ್ಮ ಪಂಚಾಯತಿನಲ್ಲಿ ಸ್ಥಾಪಿಸಲ್ಪಟ್ಟ ಕಿರಿಯ ಪ್ರಾಥಮಿಕ ಶಾಲೆಗೆ ಚಿಕ್ಕ ಮಕ್ಕಳು ಸೇರುವಂತಾಗಿ ಹೆಮ್ಮಕ್ಕಳು ಕೂಡಾ ಶಾಲೆಗೆ ಹೋಗಲಾರಂಭಿಸಿದರು. ಸಾಧಾರಣ 1950 ರ ತನಕ ನಮ್ಮ ಪಂಚಾಯತಿನ ಹೆಚ್ಚಿನ ಮಕ್ಕಳು ಪ್ರಾಥಮಿಕ ಶಿಕ್ಷಣದಲ್ಲೇ ತೃಪ್ತರಾಗಬೇಕಾದ ಪರಿಸ್ಥಿತಿಯಿತ್ತು. ವಾಣೀ ವಿಜಯ, ಬಾಕ್ರಬೈಲು, ಆನೆಕಲ್ಲು ಎಂಬ ಕಡೆಗಳಲ್ಲಿರುವ ಶಾಲೆಗಳು ಹಿರಿಯ ಪ್ರಾಥಮಿಕ ಶಾಲೆಗಳಾಗಿ ಬದಲಾದ ಬಳಿಕ ವಿದ್ಯಾಭ್ಯಾಸ ಮಟ್ಟದಲ್ಲಿ ಸ್ವಲ್ಪ ಹೆಚ್ಚಳ ಉಂಟಾಯಿತು. 1953 ರಲ್ಲಿ ಕೊಡ್ಲಮೊಗರು ಗ್ರಾಮದ ವಾಣೀನಗರವೆಂಬಲ್ಲಿ ಒಂದು ಪ್ರೌಢಶಾಲೆಯು ಆರಂಭಿಸಲ್ಪಟ್ಟುದರಿಂದ ನಮ್ಮ ಪಂಚಾಯತಿನ ವಿದ್ಯಾರ್ಥಿಗಳು ಹೈಸ್ಕೂಲ್ ವಿದ್ಯಾಭ್ಯಾಸವನ್ನು ಪಡೆಯುವಂತಾಯಿತು. ಆ ಸಮಯದಲ್ಲಿ ಹೆಚ್ಚಿನ ವಿದ್ಯಾಭ್ಯಾಸವನ್ನು ಪಡೆಯಬೇಕಿದ್ದರೆ ಹತ್ತಿರದ ನಿಲೇಶ್ವರಕ್ಕೋ ಮಂಗಳೂರಿಗೋ ಹೋಗಬೇಕಾಗಿತ್ತು. ಆದರೆ ಆ ಸಮಯದಲ್ಲಿ ನಮ್ಮ ಪಂಚಾಯತಿನ ಹೆಚ್ಚಿನ ಜನರೂ ಬಡತನದ ರೇಖೆಗಿಂತಲೂ ಕೆಳಸ್ತರದಲ್ಲಿದ್ದುದರಿಂದಲೂ ಹೋಗಿ ಬರಲು ವಾಹನ ಸೌಕರ್ಯಗಳು ಇಲ್ಲವಾದುದರಿಂದಲೂ ಮೇಲ್ಕಟ್ಟದ ವಿದ್ಯಾಭ್ಯಾಸವು ಕೇವಲ ಶ್ರೀಮಂತ ವರ್ಗದವರಿಗೇ ಸಾಧ್ಯವಾಗುತ್ತಿತ್ತು. ಆದರೆ ಪ್ರಕೃತ ಜನರ ಬೆಳಕಿನ ಮಟ್ಟವು ಸುಧಾರಿಸುತ್ತಾ ಬಂದಿರುವುದರಿಂದಲೂ, ವಿದ್ಯಾಭ್ಯಾಸ ಪಡೆಯಬೇಕೆಂಬ ಮನೋಭಾವವಿರುವುದರಿಂದಲೂ ಪುರುಷರಂತೆಯೇ, ಸ್ತ್ರೀಯರೂ ಹೈಸ್ಕೂಲ್ ಕಾಲೇಜು ಮಟ್ಟದ ವಿದ್ಯಾಭ್ಯಾಸವನ್ನು ಪಡೆಯುತ್ತಿರುವರು. ನಮ್ಮ ಪಂಚಾಯತಿನ ಹಲವು ಸ್ತ್ರೀಯರೂ, ವೈದ್ಯಕೀಯ ತಾಂತ್ರಿಕ ಶಿಕ್ಷಣವನ್ನು ಪಡೆದಿರುವರು. ಶಾಲಾ ಅಧ್ಯಾಪಿಕೆಯರಾಗಿ, ದಾದಿಗಳಾಗಿ, ಸರಕಾರಿ ಹಾಗೂ ಖಾಸಗಿ ವಲಯಗಳಲ್ಲಿಯೂ ಕೆಲವು ಮಹಿಳೆಯರು ಉದ್ಯೋಗವನ್ನು ಪಡೆದು ದುಡಿಯುತ್ತಿರುವರು. ನಮ್ಮ ಪಂಚಾಯತಿನಲ್ಲಿ ಕೇವಲ ಒಂದು ಖಾಸಗಿ ಮೈಲು ಇರುವುದರಿಂದಲೂ, ವೈದ್ಯಕೀಯ, ತಾಂತ್ರಿಕ ಕೃಷಿ ವಿಶ್ವವಿದ್ಯಾನಿಲಯಗಳು ಇಲ್ಲದಿರುವುದರಿಂದ ಸುಲಭವಾಗಿ, ಪದವಿಗಳನ್ನು ಗಳಿಸಲು ನಮ್ಮ ಮಕ್ಕಳಿಗೆ ಬಹಳ ತೊಂದರೆಯಾಗಿರುವುದು, ನಮ್ಮ ಪಂಚಾಯತಿನ 9ನೇ ವಾರ್ಡಿನ, ಸುಳ್ಯಮೆ ಮತ್ತು 4ನೇ ವಾರ್ಡಿನ ಕೆದಂಬಾಡಿಯಲ್ಲಿ ಮಾತ್ರ ಎರಡು ಕಡೆಗಳಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳಿದ್ದು, ಅಲ್ಲಿ ಗರ್ಭಿಣಿ ಸ್ತ್ರೀಯರಿಗೆ, ಮತ್ತು ಮಕ್ಕಳ ಆರೈಕೆಗೆ ಬೇಕಾದ ವ್ಯವಸ್ಥೆಗಳಿದ್ದು ಉಳಿದ 8 ವಾರ್ಡುಗಳಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಲ್ಲದೆ ಬಹಳ ಕಷ್ಟವಾಗಿರುವುದು. ನಮ್ಮ ಪಂಚಾಯತಿನ ಧರ್ಮನಗರದಲ್ಲಿ ಒಂದು ಸರಕಾರಿ ಆಸ್ಪತ್ರೆಯಿದ್ದು ಅದರಲ್ಲಿ ಜನರಿಗೆ ಬೇಕಾದ ಸೌಲಭ್ಯಗಳು ದೊರಕುತ್ತಿರುವುದಿಲ್ಲ. ರೋಗಿಗಳಿಗೆ ಬೇಕಾದ ಹಾಸಿಗೆಗಳ ಏರ್ಪಾಡು ರೋಗ ಪರೀಕ್ಷಣಾ ಕೇಂದ್ರ, ರೋಗ ಪರೀಕ್ಷೆಯ ಉಪಕರಣಗಳ ಕೊರತೆ, ಸುಸಜ್ಜಿತವಾದ ಕಟ್ಟಡ ರಚನೆ ಇಲ್ಲವಾದುದರಿಂದ ನಮ್ಮ ಮಹಿಳೆಯರು, ಬಾಣಂತಿಯರು, ಚಿಕ್ಕಮಕ್ಕಳು ಉಪ್ಪಳ, ಕಾಸರಗೋಡು, ಮಂಗಳೂರನ್ನು ಆಶ್ರಯಿಸಬೇಕಾಗಿದೆ. ವಾರ್ಡು ಮಟ್ಟಗಳಲ್ಲಿ ಮಹಿಳೆಯರನ್ನು ಸಂಘಟಿಸಿ, ದಕ್ಷ ಆರೋಗ್ಯ ಅಧಿಕಾರಿಗಳ ಮೂಲಕ, ಮಕ್ಕಳ, ಮಹಿಳೆಯರ ಆರೋಗ್ಯದ ಚಿಕ್ಕ ಸಂಸಾರದ, ಪರಿಸರ ನೈರ್ಮಲ್ಯದ ಕುರಿತು ಮಾಹಿತಿಗಳನ್ನು ಕೊಟ್ಟು ಮಹಿಳೆಯರು ಚರ್ಚೆಯಲ್ಲಿ ಪಾಲ್ಗೊಳ್ಳುವಂತೆ ವ್ಯವಸ್ಥೆ ಮಾಡುವುದು ಅತೀ ಅಗತ್ಯವಾಗಿದೆ.

(ಶಾಲೆಗಳಿಂದ ಸಿಕ್ಕಿದ ಮಾಹಿತಿ)

ಇಸವಿ	ಶಾಲೆಯ ಹೆಸರು	ಗಂಡು ಮಕ್ಕಳು	ಹೆಮ್ಮಕ್ಕಳು
1	ವಾಣೀ ವಿಜಯ ಹಿ. ಪ್ರಾ. ಶಾಲೆ.	504	422
2.	ವಾಣೀ ವಿಜಯ ಹೈಸ್ಕೂಲ್	369	277
3.	ಆನೆಕಲ್ಲು A.U.P. ಶಾಲೆ	152	139
4.	ಬಾಕ್ರಬೈಲು A.U.P ಶಾಲೆ	231	223
5.	ಬಜಲ ಕೆರಿಯ ALP ಶಾಲೆ	79	53
6.	ಮುಡೂರು ಕೋಕ ALP	83	86
7.	ಪಾವೂರು A.L.P. ಶಾಲೆ	175	119
8.	ಪಾತೂರು ಜಿ.ಎಲ್.ಪಿ.	51	57
9.	ಕಾಪು A.L.P. ಶಾಲೆ	22	30
	ಒಟ್ಟು	1666	406

ಕಾರ್ಮಿಕ ವಿಭಜನೆ

ನಮ್ಮ ಪಂಚಾಯತಿನ ಹೆಚ್ಚಿನ ಸ್ತ್ರೀಯರು ಸಮಾಜದ ವಿವಿಧ ವಲಯಗಳಲ್ಲಿ ಪುರುಷರಿಗೆ ಸರಿಸಮಾನಾಗಿ ದುಡಿಯಲು ಪ್ರಯತ್ನಿಸುತ್ತಿರುವರು. ಸರಕಾರಿ ಹಾಗೂ ಖಾಸಗಿ ವಲಯಗಳಲ್ಲಿ ಬೆರಳೆಣಿಕೆಯಷ್ಟು ಮಹಿಳೆಯರು ಮಾತ್ರ ದುಡಿಯುತ್ತಿರುವರು. ಮನೆ ಬಿಟ್ಟು ದೂರ ಹೋಗಿ ದುಡಿಯಲು ಹಿಂಜರಿಯುತ್ತಿರುವುದೇ ಇದಕ್ಕೆ ಮುಖ್ಯ ಕಾರಣವಾಗಿದೆ. ಮನೆಯಲ್ಲಿ ಅಡುಗೆ ಕೆಲಸ, ಮಕ್ಕಳ ಲಾಲನೆ ಪಾಲನೆ, ಪರಿಸರ ನೈರ್ಮಲ್ಯ, ಪಶುಪಾಲನೆಯ ಹೆಚ್ಚಿನ ಜವಾಬ್ದಾರಿಯನ್ನು ಮಹಿಳೆಯರೇ (ನಿರ್ವಹಿಸಲು ಪ್ರಯತ್ನಿಸುತ್ತಿರುವುರಿಂದಲೂ ಸ್ತ್ರೀ ಉದ್ಯೋಗಕ್ಕೆ ಸ್ವಲ್ಪ ಅಡಚಣೆಯಾಗಿದೆ. ಕೃಷಿ ವಲಯದಲ್ಲಿಯೂ, ಕೃಷಿ ಕಾರ್ಮಿಕ ವಿಭಾಗದಲ್ಲಿಯೂ ಮೃಗ ಸಂರಕ್ಷಣೆಯಲ್ಲೂ, ಸ್ತ್ರೀಯರು ಪುರುಷರಿಗೆ ಸರಿಸಮವಾಗಿ ದುಡಿಯುತ್ತಿರುವರು. ಆದರೂ ಪುರುಷ - ಸ್ತ್ರೀಯರಿಗೆ ದೊರಕುವ ಸಂಬಳದಲ್ಲಿ ಬಹಳ ವ್ಯತ್ಯಾಸವಿದೆ.

ಕ್ರ.ಸಂಖ್ಯೆ	ವಲಯಗಳು	ಸ್ತ್ರೀಯರು	ಪುರುಷರು
1.	ಕೃಷಿ ವಲಯ	40.00	85.00
2.	ಕೃಷಿ ಕಾರ್ಮಿಕ ವಲಯ	45.00	90.00
3.	ಕಟ್ಟಡ ನಿರ್ಮಾಣ ವಲಯ	50.00	110.00

ಕಾರ್ಮಿಕ ಸ್ತ್ರೀಯರ ನೆಲೆ

1957ರಿಂದ ನಮ್ಮ ಪಂಚಾಯತಿನಲ್ಲಿ ಆರಂಭಿಸಲ್ಪಟ್ಟ ಬೀಡಿ ತಯಾರಿಕಾ ಘಟಕವು ಇಂದು ಬೃಹತ್ ಉದ್ಯಮವಾಗಿ ಬೆಳೆದು ಹೆಚ್ಚಿನ ಮಹಿಳೆಯರು ಇದನ್ನೇ ಮುಖ್ಯವೃತ್ತಿಯನ್ನಾಗಿ ಆರಿಸಿಕೊಂಡು ಮನೆಯ ಆರ್ಥಿಕ ಸಮಸ್ಯೆಯನ್ನು ಪರಿಹರಿಸಿಕೊಳ್ಳುವಲ್ಲಿಯೂ ಆರೋಗ್ಯ ವಿದ್ಯಾಭ್ಯಾಸ ವಲಯಗಳಲ್ಲಿ ತಮ್ಮ ಸಂಸಾರಗಳ ಅಭಿವೃದ್ಧಿ ಸಾಧಿಸುವಲ್ಲಿಯೂ ಈ ಉದ್ಯಮವು ಬಹಳ ಪ್ರಯೋಜನಕಾರಿಯಾಗಿದೆ. ನಮ್ಮ ಪಂಚಾಯತಿನ ಮಹಿಳೆಯರಲ್ಲಿ 500 ಮಹಿಳೆಯರು ಬೀಡಿ ಉದ್ಯಮದಲ್ಲಿ ನಿರತರಾಗಿರುವರು. ಸಹಕಾರಿ ವಿಭಾಗದಲ್ಲಿ ಬೀಡಿಯನ್ನು ಉತ್ಪಾದಿಸಿ, ನಸಿಗಡಿಯಲ್ಲಿ ಒಣಗಿಸಿ ಲೇಬಲ್ ಹಾಕಿ ತಾವೇ ಮಾರಾಟ ಮಾಡುವ ವ್ಯವಸ್ಥೆ ಇರುವ ದಿನೇಶ ಬೀಡಿ ಕಂಪೆನಿಯ 2 ಘಟಕಗಳು ನಮ್ಮ ಪಂಚಾಯತಿನಲ್ಲಿವೆ. ನಮ್ಮ ಪಂಚಾಯತಿನ ಹತ್ತಿರದ ಪಂಚಾಯತುಗಳಾದ ಮೀಂಜ ಮತ್ತು ಮಂಜೇಶ್ವರ ಪಂಚಾಯತ್‌ಗಳಲ್ಲಿ ನಡೆಸಲ್ಪಡುವ ದೈಗೋಳಿ ಮತ್ತು ಪಾವೂರುಗಳಲ್ಲಿಯೂ ಇರುವ ದಿನೇಶ ಬೀಡಿಕಂಪೆನಿಗಳಲ್ಲಿ ನಮ್ಮ ಪಂಚಾಯತಿನ ಕೆಲವರು ಕೆಲಸ ಮಾಡುತ್ತಿರುವರು. ಇಲ್ಲಿ ದುಡಿಯುತ್ತಿರುವ ಸ್ತ್ರೀಯರೂ ಪುರುಷರೂ ರಜೆ ಸಂಬಳ, ಬೋನಸ್ಸು, ಹೆರಿಗೆ ಭತ್ತೆ ಕಾಲಕಾಲದ ತುಟ್ಟಿಭತ್ತೆಯ ಅನುಕೂಲತೆಯನ್ನು ಪಡೆಯುತ್ತಿರುವರು. ಆದರೂ ಅವರಿಗೆ ಒದಗಿಸುತ್ತಿರುವ ಎಲೆಗಳು ಸಾಕಷ್ಟು ಉತ್ತಮವಾಗಿಲ್ಲದೆ ಎಲೆಯು ಸರಾಸರಿ ಕಡಿಮೆ ಬರುತ್ತಿರುವುದರಿಂದ ಕಾರ್ಮಿಕರು ನಷ್ಟ ಅನುಭವಿಸುತ್ತಿರುವರು. ಇತರ ಖಾಸಗಿ ಕಂಪೆನಿಗಳಾದ ಭಾರತ ಗುರುಕೃಪೆ, ಎ.ವಿ.ಎಸ್. ಗಣೇಶ್ ಮೊದಲಾದವುಗಳು ಈ ಕಂಪೆನಿಗಳಿಂದ ಏಜೆಂಟರು ಎಲೆ ತಂಬಾಕುಗಳನ್ನು ತಂದು ಬೀಡಿ ಕಟ್ಟಿಸುವುದರಿಂದಾಗಿ ಬೀಡಿ ಕಾರ್ಮಿಕರಿಗೆ ಲಭಿಸಬೇಕಾದ ಪೂರ್ಣ ಪ್ರಯೋಜನಗಳು ದೊರೆಯುತ್ತಿಲ್ಲ. ಬೀಡಿ ಕಾರ್ಮಿಕರ ಮಕ್ಕಳಿಗೆ ಲಭಿಸಬೇಕಾದ ಹಲವು ತರದ ಸವಲತ್ತುಗಳು ಮಾತ್ರ ದೊರೆಯುತ್ತಿವೆ.

ಕ್ರ. ಸಂಖ್ಯೆ	ಕಂಪೆನಿಯ ಹೆಸರು	ಸ್ತ್ರೀಯರು	ಪುರುಷರ
1.	ದಿನೇ ಬೀಡಿ ಸುಂಕದ ಕಟ್ಟೆ	151	11
2.	ದಿನೇಶ ಬೀಡಿ ಕದಂಬಾಡಿ	90	4
3.	ನಾಗೇಶ್ ಎಂಡ್ ಕಂಪೆನಿ ಮಂಜೇಶ್ವರ	770	104
	ಇತರ ಖಾಸಗಿ ಕಂಪೆನಿಗಳು	3000	700

ಮನೆಕೆಲಸವೂ ಅನುಬಂಧ ಕೈಗಾರಿಕೆಗಳು

ನಮ್ಮ ಪಂಚಾಯತಿನ ಹೆಚ್ಚಿನ ಮಹಿಳೆಯರೂ ಮನೆಗೆಲಸಗಳನ್ನು ಸುಸೂತ್ರವಾಗಿ ನೆರವೇರಿಸುತ್ತಿರುವರು. ಅದರ ಜೊತೆಯಲ್ಲಿಯೇ ಮನೆಯ ಮುಂಭಾಗದಲ್ಲಿ ಚಿಕ್ಕ ಹೂದೋಟಗಳನ್ನು ನಿರ್ಮಿಸುವುದರಲ್ಲೂ ಮನೆಯ ಪರಿಸರದಲ್ಲಿ ಬಸಳೆ, ತೊಂಡೆ ಬೆಂಡೆ ಮೊದಲಾದ ಮನೆಯ ಅತ್ಯಾವಶ್ಯಕ ತರಕಾರಿಗಳನ್ನೂ ಬೆಳೆಸುವುದರಲ್ಲಿ ಆಸಕ್ತಿ ತೋರಿಸುತ್ತಿರುವರು. ಕೆಲವು ಮಹಿಳೆಯರು ಮನೆಯಲ್ಲಿಯೇ ಬಟ್ಟೆ ಹೊಲಿಯುವ ಮಿಶನನ್ನು ಇಟ್ಟುಕೊಂಡು, ಮನೆಯ ಆದಾಯವನ್ನು ಹೆಚ್ಚಿಸಲು ಪ್ರಯತ್ನಿಸುತ್ತಿರುವರು. ಇದರ ಜೊತೆಯಲ್ಲಿಯೇ ಸಂಗೀತ, ನೃತ್ಯ, ಹೊಲಿಗೆ, ಕಸೂತಿ ಮೊದಲಾದ ಕಲಾ ಕಾರ್ಯಕ್ರಮವನ್ನು ಅಭ್ಯಾಸ ಮಾಡುತ್ತಿರುವ ಮಹಿಳೆಯರೂ ನಮ್ಮಲ್ಲಿ ಕೆಲವರಿರುವರು. ಹಾಳೆಯಿಂದ ಮುಟ್ಟಪ್ಪಾಳೆ ಬಿದಿರು ಬೆತ್ತಗಳಿಂದ ಕುಕ್ಕೆ ಬುಟ್ಟಿ, ಮೊರೆ ಗೆರಸೆ, ಕಣಜಗಳನ್ನು ತಯಾರಿಸುವ ಮಹಿಳೆಯರೂ ಬೆರಳೆಣಿಕೆಯಷ್ಟು ಮಂದಿ ನಮ್ಮಲ್ಲಿರುವರು. ಬಹು ಹಿಂದಿನಿಂದ ನಡೆದುಕೊಂಡು ಬರುತ್ತಿದ್ದ ಚಾಪೆ ಹಣೆಯುವ ಕೆಲಸಗಳನ್ನು ಕೇವಲ ಕೆಲವು ಸ್ತ್ರೀಯರು ಮಾತ್ರ ಮಾಡುತ್ತಿರುವರು.

ಮಹಿಳಾ ಸಮಾಜ

ಸಮಾಜ ವಿಕಾಸ ಯೋಜನೆಯ ಮಹಿಳಾ ಅಧಿಕಾರಿಗಳು ನಮ್ಮ ಪಂಚಾಯತಿನಲ್ಲೂ ಸಂದರ್ಶಿಸುತ್ತಿದ್ದು ಮಹಿಳೆಯರಲ್ಲಿ ಆರೋಗ್ಯ, ಕುಟುಂಬಕ್ಷೇಮ, ಸ್ತ್ರೀ ವಿದ್ಯಾಭ್ಯಾಸ, ಸ್ವ ಉದ್ಯೋಗಗಳ ಕುರಿತು ಮಾಹಿತಿಯನ್ನು ನೀಡುತ್ತಿರುವರು. ನಮ್ಮ ಪಂಚಾಯತಿನ 9ನೇ ವಾರ್ಡಿನ ಸುಳ್ಯಮೆ ಎಂಬಲ್ಲಿ 'ಮಹಿಳಾ ಮಂಡಲ ಸುಳ್ಯಮೆ' ಎಂಬ ಮಹಿಳಾ ಸಮಾಜವೂ 5ನೇ ವಾರ್ಡಿನ ಧರ್ಮನಗರದಲ್ಲಿ 'ಕಸ್ತೂರ್ಬಾ ಮಹಿಳಾ ಮಂಡಲ' ಎಂಬ ಸಂಸ್ಥೆಗಳಿದ್ದು ಅಲ್ಲಿ ಕ್ರೀಡೆ, ಕಲೆ, ಸಾಂಸ್ಕೃತಿಕ, ಮನೋರಂಜನೆ ಮೊದಲಾದ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವರು. ಆಗಾಗ ಕೃಷಿ ವಿದ್ಗರನ್ನೂ, ಆರೋಗ್ಯದ ಪೂರ್ಣ

ಮಾಹಿತಿಯಿರುವ ವೈದ್ಯರನ್ನು ತಮ್ಮ ಕೇಂದ್ರಗಳಿಗೆ ಬರುವಂತೆ ವ್ಯವಸ್ಥೆ ಮಾಡಿ ಸಂಘದ ಸದಸ್ಯೆಯರಿಗೆ ಯೋಗ್ಯ ತರಬೇತಿಯನ್ನು ಕೊಡುವ ವ್ಯವಸ್ಥೆ ಮಾಡುತ್ತಿರುವವರು ವಿವಿಧ ನಾಟಕಗಳಲ್ಲಿ ತಮ್ಮ ಸದಸ್ಯೆರು ಪಾಲ್ಗೊಳ್ಳುವಂತೆಯೂ ವ್ಯವಸ್ಥೆ ಮಾಡಿರುವರು.

ಅವಲೋಕನ

ಇಷ್ಟೆಲ್ಲಾ ಕಾರ್ಯಕ್ರಮಗಳಲ್ಲಿ ಸ್ತ್ರೀಯರು ಭಾಗವಹಿಸುತ್ತಿದ್ದರೂ ಇನ್ನೂ ಪೂರ್ಣ ಯಶಸ್ಸನ್ನು ಪಡೆಯಲು ಬಹುದೂರ ಸಾಗಲಿದೆ.

ಸ್ತ್ರೀ ಪೀಡನೆ ಸಾರ್ವಜನಿ ಕಾರ್ಯ

ನಮ್ಮ ದೇಶದ ಎಲ್ಲಾ ಕಡೆಗಳಲ್ಲೂ ಹಬ್ಬಿರುವ ವರದಕ್ಷಿಣೆಯ ಪಿಡುಗು ನಮ್ಮ ಪಂಚಾಯತಿನಲ್ಲಿಯೂ ಉಳಿದು ಬೆಳೆದುಕೊಂಡಿದೆ. ಎಷ್ಟೋ ಬಡ ತಾಯಿ-ತಂದೆಯರು ವರದಕ್ಷಿಣೆಯನ್ನು ಕೊಡಲು ಸಾಧ್ಯವಾಗದೆ ಹೆಮ್ಮಕ್ಕಳ ಮದುವೆಯ ವಯಸ್ಸು ಮೀರುತ್ತಾ ಇದೆ. ಮದುವೆ -ವರದಕ್ಷಿಣೆ-ಹೆರಿಗೆ, ಬಾಣಂತನ ಮೊದಲಾದುವುಗಳನ್ನು ಹೆಣ್ಣಿಗಾಗಿಯೇ ನೆರವೇರಿಸಬೇಕಾಗಿರುವುದರಿಂದ ಹೆಣ್ಣು ಹೆರುವುದೇ ಬೇಡವೆಂದು ಕೆಲವು ಸ್ತ್ರೀಯರು ಭಾವಿಸುತ್ತಿರುವರು. ಭ್ರೂಣವನ್ನೇ ಪರೀಕ್ಷಿಸಿ, ಹೆಣ್ಣೆಂದು ಖಚಿತವಾದಾಗ ಭ್ರೂಣವನ್ನೇ ತೆಗೆಸಲು ಹಿಂಜರಿಯದ ಮಹಿಳೆಯರೂ ನಮ್ಮಲ್ಲಿರುವರು. ಗಂಡು ಸಂತಾನ ಮಾತ್ರ ಕುಟುಂಬವನ್ನು ರಕ್ಷಿಸುವುದು. ಹೆಣ್ಣು ಎಷ್ಟಾದರೂ ಕುಲದಿಂದ ಹೊರಕ್ಕೆ ಎಂಬ ಭಾವನೆ ಹಲವರಲ್ಲಿ ಇರುವುದರಿಂದ ಹೆಣ್ಣು ಮಕ್ಕಳನ್ನು ಉಪೇಕ್ಷಿಸುವ ಕೀಳಾಗಿ ಕಾಣುವ ಮನೋಭಾವವೂ ಸಮಾಜದಲ್ಲಿ ಬೇರೂರಿದೆ. ಹೆಣ್ಣು ಚಿಕ್ಕಂದಿನಲ್ಲಿ ತಾಯ್ತಂದೆಯರ ಆರೈಕೆಯಲ್ಲಿ ಮದುವೆಯಾದ ಬಳಿಕ ಗಂಡನ ಹೇಳಿಕೆಯಂತೆ ವಯಸ್ಸಾದಾಗ ಮಕ್ಕಳ ಪೋಷಣೆಯಲ್ಲಿಯೇ ಇರಬೇಕೆಂಬ ಭಾವನೆಯೂ ಸ್ತ್ರೀ ಪೀಡನೆಗೆ ಒಂದು ಕಾರಣವಾಗಿದೆ.

ಮಹಿಳಾ ಅಭಿವೃದ್ಧಿಗಾಗಿ ಗ್ರಾಮಸಭೆಯಲ್ಲಿ ಬಂದ ಸೂಚನೆಗಳು

1. ಸಂಪೂರ್ಣ ಪಾನ ನಿಷೇಧ ಜ್ಯಾರಿಯಾಗಬೇಕು.
2. ಮಹಿಳೆಯರಿಗೆ ಗ್ರಾಮ ಮಟ್ಟದಲ್ಲಿ ಯುವಕ ಮಂಡಲ ರಚಿಸಬೇಕು
3. ಮಹಿಳಾ ಸಹಕಾರ ಸಂಘ ನಿರ್ಮಾಣವಾಗಬೇಕು
4. ಸುಂಕದಕಟ್ಟೆ ಮಜರ್‌ಫಳ್ಳೆ, ಬೇಕರಿ ಸಮೀಪ ಶೌಚಾಲಯ ಸ್ಥಾಪಿಸಬೇಕು.
5. ವನಿತಾ ಹೊಲಿಗೆ ಕೇಂದ್ರಗಳನ್ನು ಪ್ರತಿ ವಾರ್ಡಿನಲ್ಲೂ ಆರಂಭಿಸಬೇಕು.
6. ಹೊಗೆ ರಹಿತ ಒಲೆಗಳನ್ನು ಉಪಯೋಗಿಸಲು ಸರಕಾರದಿಂದ ಧನ ಸಹಾಯ ಲಭಿಸಬೇಕು.
7. ಪ್ರತಿ ವಾರ್ಡಿನಲ್ಲಿಯೂ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸಬೇಕು.
8. ಹಪ್ಪಳ, ಸಂಡಿಗೆ ಇತ್ಯಾದಿ ತಯಾರಿ ಮತ್ತು ಮಾರಾಟಕ್ಕೆ ವ್ಯವಸ್ಥೆ ಮಾಡಬೇಕು.
9. ನಮ್ಮ ಪಂಚಾಯತಿಗೆ ಗೃಹ ನಿರ್ಮಾಣ ಸಹಕಾರಿ ಸಂಘ, ಕ್ಷೀರ ಉತ್ಪಾದನಾ ಸಹಕಾರಿ ಸಂಘ, ಜೇನು ಸಾಕಣಾ ಸಹಕಾರಿ ಸಂಘ ಅಗತ್ಯವಿದೆ.
10. ಪ್ರತಿ ವಾರ್ಡಿಗೊಂದು ಸಹಕಾರಿ ಬೇಂಕನ್ನು ಸ್ಥಾಪಿಸಬೇಕು.
11. ಪ್ರತಿ ವಾರ್ಡಿಗೆ ಒಂದರಂತೆ ಅಂಗನವಾಡಿ ಅಗತ್ಯವಿದೆ.
12. 100 ಪ್ರತೀವಾರ್ಡಿಗೆ ಮುಳಿ ಹುಲ್ಲಿನ ಮನೆಗೆ ಹಂಚು ಛಾವಣಿ ಹೊದಿಸಲೂ 50 ಜನರಿಗೆ ಹೊಸ ಮನೆಗಳನ್ನು ನಿರ್ಮಿಸಲು ಸಹಾಯ ಮಾಡಬೇಕು.
13. ಬಾಕ್ರಬೈಲಿನ ಸಂಪರಿಗೆ ಎಂಬಲ್ಲಿ ಒಂದು ವಾಚನಾಲಯಬೇಕು.
14. ಪಾಯಿಖಾನೆಗಳಿಲ್ಲದ ದುರ್ಬಲ ವಿಭಾಗದವರಿಗೆ ಅದನ್ನು ನಿರ್ಮಿಸಲು ಧನಸಹಾಯ ಒದಗಿಸಬೇಕು.
15. ಸ್ತ್ರೀ ಧನವನ್ನು ಕಡ್ಡಾಯವಾಗಿ ನಿಲ್ಲಿಸಬೇಕು.
16. ಮಹಿಳೆಯರಿಗೆ ಒಂದು ಟೆಕ್ನಿಕಲ್ ಶಾಲೆ ಅಗತ್ಯಬೇಕು.
17. ಯಕ್ಷಗಾನದ ಅಭಿವೃದ್ಧಿಗೆ ಒಂದು ತರಬೇತಿ ಕೇಂದ್ರ ಆರಂಭಿಸಬೇಕು.
18. ನೃತ್ಯ, ಸಂಗೀತವನ್ನು ಕಲಿಸಲು ಒಂದು ಕಲಾ ಸಮಿತಿಯನ್ನು ರಚಿಸಬೇಕು.
19. ನಮ್ಮ ಕಮ್ಯುನಿಟಿ ಹಾಲ್‌ನ ಮುಂಭಾಗದಲ್ಲಿ ಒಂದು ಕ್ರೀಡಾಂಗಣದ ನಿರ್ಮಾಣವಾಗಬೇಕು.
20. ಸುಳ್ಯಮೆಯಲ್ಲಿ ಒಂದು ವಾಚನಾಲಯವೂ ಒಂದು ಗ್ರಂಥಾಲಯವೂ ಅಗತ್ಯವಾಗಿದೆ.
21. ಗೂವೆದಪಡ್ಪು, ಪಲ್ಲೆದಪಡ್ಪು ಎಂಬಲ್ಲಿ ಸಾರ್ವಜನಿಕ ಶೌಚಾಲಯ ಸ್ಥಾಪಿಸಬೇಕು.

ಸಮಸ್ಯೆಗಳು

1. ಸಾಮಾಜಿಕ ರಂಗದಲ್ಲಿ ಮಹಿಳೆಯರ ಪಾತ್ರ ಕಡಿಮೆ
2. ಹೆಚ್ಚಿನ ಉದ್ಯೋಗಗಳಲ್ಲಿಯೂ ಮಹಿಳೆಯರಿಗೆ ಸಾಕಷ್ಟು ಅವಕಾಶ ಸಿಗುತ್ತಿಲ್ಲ
3. ಮಹಿಳೆಯರ ಉದ್ಯೋಗ ಘಟಕಗಳನ್ನು ಆರಂಭಿಸಲು ಉತ್ತಮ ಪ್ರಯತ್ನ ನಡೆಸಲಾಗಿಲ್ಲ
4. ಸ್ತ್ರೀ ಸಮಸ್ಯೆಗಳಿಗೆ ಸಾಕಷ್ಟು ಪರಿಹಾರ ಕಾಣಲು ಸಾಧ್ಯವಾಗಲಿಲ್ಲ
5. ದುಡಿಯುವ ಮಹಿಳೆಯರಿಗೆ ಸಾಕಷ್ಟು ವಸತಿ ಸೌಕರ್ಯಗಳನ್ನು ಒದಗಿಸಲಾಗಿಲ್ಲ.
6. ಸಹಕರಣ ಮೇಖಲೆಗಳಲ್ಲಿ ಸ್ವ ಉದ್ಯೋಗವನ್ನು ಮಾಡ ಬಯಸುವವರಿಗೆ ಉತ್ತಮ ತರಬೇತಿ ನೀಡುವ ಕೇಂದ್ರಗಳ ಅಭಾವವಿದೆ.

ಪರಿಹಾರ ಸಾಧ್ಯತೆಗಳು

1. ಸಹಕರಣ ಬೇಂಕುಗಳ ಮೂಲಕ ಸ್ತ್ರೀ ಸಹಕರಣ ಸ್ಥಾಪನೆಗಳಿಗೆ ಧನ ಸಹಾಯ ಒದಗಿಸುವುದು

2. ಉಪ್ಪಿನಕಾಯಿ, ಹಪ್ಪ, ಸಂಡಿಗೆಗಳ ತಯಾರಿ ಮತ್ತು ಮಾರಾಟ
3. ಸಿದ್ದ ಉಡುಪುಗಳ ತಯಾರಿ ಹಾಗೂ ಮಾರಾಟ
4. ಸಹಕರಮ ಸ್ಥಾಪನೆಯ ಮೂಲಕ ಕ್ಷೀರೋತ್ಪಾದನೆ -ಮೃಗ ಸಂರಕ್ಷಣೆ
5. ಸಹಕರಣ ಸ್ಥಾಪನೆಯ ಮೂಲಕ ಕೋಳಿಸಾಕಣೆ ಮೊಟ್ಟೆ ವಿತರಣೆಯ ವ್ಯವಸ್ಥೆ
6. ವಾರ್ಡುಗಳಲ್ಲಿ ಒಂದರಂತೆ ತರಕಾರಿ ಸ್ಟಾಲುಗಳನ್ನು ಸಹಕರಣ ಮೇಖಲೆಯಲ್ಲಿ ಸ್ಥಾಪಿಸುವುದು
7. ಸಹಕರಣ ಮೇಖಲೆಯಲ್ಲಿ ಊಗಿಡಗಳ ಮತ್ತು ತರಕಾರಿಗಳ ಗಿಡಗಳನ್ನು ಬೆಳೆಸುವುದು

ಸಹಕಾರಿ ವಲಯ

ಜಮೀನ್ದಾರಿ ವರ್ಗಗಳ ಮಧ್ಯವರ್ತಿಗಳ ಹಿಡಿತದಿಂದ ಕೃಷಿಕರನ್ನು ಕೃಷಿ ಕಾರ್ಮಿಕರನ್ನು ತಪ್ಪಿಸಿ ಸ್ವತಂತ್ರವಾದ ಬದುಕನ್ನು ಸರಿಸಲು ಅನುಕೂಲವಾಗುವಂತೆ, ಜನರು ಸಮಗ್ರ ಗ್ರಾಮೀಣ ವಿಕಸನ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು, ತಮ್ಮ ಸಂಸಾರದ ಆರ್ಥಿಕ ಅಭಿವೃದ್ಧಿಯನ್ನು ಸಾಧಿಸಿಕೊಳ್ಳುವುದಕ್ಕಾಗಿ 1904 ರಲ್ಲಿ ಸರಕಾರದಿಂದ ಸಹಕಾರಿ ಪದ್ಧತಿಯು ಜ್ಯಾರಿಗೊಂಡಿತು. ಆರಂಭದಲ್ಲಿ ಕೇವಲ ಕೆಲವೇ ಉದ್ದೇಶಗಳನ್ನು ಬಳಸಿಕೊಂಡು ಜನ ಸಮೂಹಕ್ಕೆ ಸಹಕರಿಸುತ್ತಿದ್ದ ಸಹಕಾರಿ ವಲಯವು ಇಂದು ಬೆಳೆದು ಜನರ ಹುಟ್ಟಿನಿಂದ ಆರಂಭಿಸಿ ಜೀವನ ಪರ್ಯಂತ ಎಲ್ಲಾ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ಸಹಕಾರಿ ವಲಯವು ಸಹಕಾರಿಯಾಗಿದೆ. ಆರಂಭದಲ್ಲಿ ಭೂಮಿಯ ಪಟ್ಟೆಯನ್ನು ಹೊಂದಿರುವ ಶ್ರೀಮಂತ ವರ್ಗಕ್ಕೇ ಹಲವು ಪ್ರತ್ಯೇಕ ಸವಲತ್ತುಗಳು ಲಭಿಸುತ್ತಿದ್ದು ಭೂಮಿಯು ಕೈವಶವಿದ್ದೂ, ಸ್ವತಃ ಸಾಗುವಳಿ ಮಾಡುತ್ತಿದ್ದ ರೈತರಿಗೆ, ಪಂಪು, ಯಂತ್ರಗಳು, ಖರೀದಿಗೆ ಬೇಕಾದ ಸಾಲದ ಅನುಕೂಲತೆ ಸಿಗುತ್ತಿರಲಿಲ್ಲ. ಆದರೆ ಈಗ ಹಾಗಲ್ಲ ಯಾವುದಾದರೊಂದು ಸಹಕಾರಿ ಸ್ಥಾಪನೆಗೆ ನಿಶ್ಚಿತವಾದ ನಿಯಮಗಳಿವೆ. ಸಂಬಂಧಿಸಿದ ಸಹಕಾರಿ ರಿಜಿಸ್ಟ್ರಾರಿಂದ ಈ ಸಂಸ್ಥೆಯು ಅಂಗೀಕರಿಸಬೇಕು. ತನ್ನ ಕಾರ್ಯಕ್ಷೇತ್ರದ ಪರಿಧಿಯು ಇಂತಿಷ್ಟೇ ಎಂದು ಗುರುತಿಸಿರಬೇಕು. ತಾನು ಕೈಕೊಳ್ಳುವ ಕಾರ್ಯಕ್ರಮವನ್ನು ಮುಂಚಿತವಾಗಿಯೇ ಪ್ರಕಟಿಸಿರಬೇಕು. ಒಂದು ಚುನಾಯಿತ ಮಂಡಳಿಯು ತಮ್ಮಲ್ಲಿ ಒಬ್ಬನನ್ನು ಅಧ್ಯಕ್ಷರನ್ನಾಗಿ ಆರಿಸಿ, ನಿರ್ದಿಷ್ಟ ಅವಧಿಯ ತನಕ ಆ ಸಂಸ್ಥೆಯು ಆಡಳಿತವನ್ನು ನಡೆಸುವುದು, ತಮಗೆ ಬೇಕಾದ ಸಿಬ್ಬಂದಿಗಳನ್ನು ನೇಮಿಸಿಕೊಳ್ಳುವುದೂ, ಕಟ್ಟಡದ ಪೀಠೋಪಕರಣಗಳ ಒದಗಿಸುವ ಜವಾಬ್ದಾರಿಕೆಯೂ ಈ ಬೋರ್ಡಿನದ್ದೇ ಆಗಿರುವುದು ಯಾವುದೇ ವ್ಯಕ್ತಿಯು ಆ ಸಹಕಾರಿ ಸಂಸ್ಥೆಯ ಪರಿಧಿಯ ಒಳಗೆ ಸ್ವಂತ ಭೂಮಿಯನ್ನು ಹೊಂದಿದ್ದು ಅನುಭವಿಸಿಕೊಂಡು ಬರುತ್ತಿರುವವನು ತಾನು ಸದಸ್ಯನಾಗುವೆನೆಂದು ಅರ್ಜಿ ಸಲ್ಲಿಸಿದಾಗ ಅದನ್ನು ಪರಿಶೀಲಿಸಿ ಸದಸ್ಯತನವನ್ನು ಮಂಜೂರುಗೊಳಿಸುವ ಜವಾಬ್ದಾರಿಕೆಯ ಆಡಳಿತ ಮಂಡಳಿತಯದ್ದಾಗಿದೆ.

ವರ್ಷಕ್ಕೆ ಒಂದು ಸಲ ಸದಸ್ಯರ ಮಹಾಸಭೆಯನ್ನು ಹಿಂದಿನ ವರ್ಷದ ಲೆಕ್ಕಪತ್ರಗಳನ್ನೂ, ಆರ್ಥಿಕ ವೆಚ್ಚವಾಗಿದ್ದರೆ ಅದಕ್ಕೆ ಅಂಗೀಕಾರವನ್ನು ಮುಂದಿನ ವರ್ಷಕ್ಕೆ ಬೇಕಾದ ಅಂದಾಜು ಆಯವ್ಯಯದ ಬಜೆಟನ್ನೂ ಮಂಜೂರು ಮಾಡಿಕೊಳ್ಳುವ ಹೊಣೆಗಾರಿಕೆಯು ಆಡಳಿತ ಮಂಡಳಿಯದ್ದೇ ಆಗಿದೆ. ಅದೇ ಮಹಾಸಭೆಯಲ್ಲಿ ಸಹಕಾರಿ ವಲಯದ ಲೆಕ್ಕ ಪರಿಶೋಧಕರಿಂದ ಮಾಡಲ್ಪಟ್ಟ ಸಲಹೆ, ಕಂಡು ಹಿಡಿದ ಲೋಪದೋಷಗಳನ್ನೂ, ಓದಿ ಹೇಳಿ ವಿಷಯವನ್ನು ಸದಸ್ಯರಿಗೆ ತಿಳಿಸುವ ಅದಕ್ಕೂ ಅಂಗೀಕಾರವನ್ನು ಪಡೆಯುವ ಜವಾಬ್ದಾರಿಕೆಯೂ ಆಡಳಿತ ಮಂಡಳಿಯದ್ದಾಗಿದೆ.

ಪ್ರಕೃತ ನಮ್ಮ ಪಂಚಾಯತಿನಲ್ಲಿ ಕೊಡ್ಲಮೊಗರು ಪಾತೂರು ಸೇವಾ ಸಹಕಾರಿ ಬೇಂಕು ಎಂಬ ಸಂಸ್ಥೆಯು ಕೊಡ್ಲಮೊಗರು, ಪಾತೂರು, ಎಂಬ 2 ಗ್ರಾಮಗಳ ಪರಿಧಿಯನ್ನು ಹೊಂದಿಕೊಂಡೂ, ವರ್ಕಾಡಿ ಸೇವಾ ಸಹಕಾರಿ ಬೇಂಕು ಎಂಬುದು ವರ್ಕಾಡಿ ಪಾವೂರು, ಕೋಳ್ಯೂರು, ಕೆಳಿಯೂರು ಎಂಬ ನಾಲ್ಕು ಗ್ರಾಮಗಳ ಪರಿಧಿಯನ್ನು ಹೊಂದಿಕೊಂಡು ಕಾರ್ಯವೆಸಗುತ್ತಿವೆ. ಈ ಪೈಕಿ ವರ್ಕಾಡಿ ಮತ್ತು ಪಾವೂರು ಎಂಬ ಗ್ರಾಮಗಳು ನಮ್ಮ ಪಂಚಾಯತಿನ ವ್ಯಾಪ್ತಿಯೊಳಗಿನವುಗಳೂ ಉಳಿದ ಎರಡು ಗ್ರಾಮಗಳು ಮೀಂಜಪಂಚಾಯತಿನ ವ್ಯಾಪ್ತಿಯ ಗ್ರಾಮಗಳಾಗಿವೆ.

ಈ 2 ಸೇವಾ ಸಹಕಾರಿ ಬೇಂಕುಗಳೂ ಕೃಷಿಕರಿಗೆ ಕೃಷಿ ಕಾರ್ಮಿಕರಿಗೆ, ಇತರ ಸರಕಾರಿಯೂ ಕಾಸಗಿ ವಲಯಗಳಲ್ಲಿ ದುಡಿಯುತ್ತಿರುವವರಿಗೆ ಕೂಡ ಕೃಷಿಕೆಲಸಕ್ಕೆ, ಕೃಷಿ ಬೇಕಾದ ಬೀಜ, ಗೊಬ್ಬರ, ಕೀಟನಾಶಕ, ರಾಸಾಯನಿಕ ವಸ್ತುಗಳ ಖರೀದಿಗೆ ಬೇಕಾದ ಕೃಷಿಗೆ ಅನುಕೂಲವಾಗುವ ಪಂಪು, ಸ್ಪ್ರೇಯರ್, ಟಿಲ್ಲರ್ ಮೊದಲಾದ ಯಂತ್ರೋಪಕರಣಗಳ ಖರೀದಿಗೆ ಬಾವಿ, ಕೆರೆತೋಡಲು ಭೂಮಿ ಸಮತಟ್ಟುಗೊಳಿಸಲು, ಅಡಿಕೆ, ತೆಂಗು, ಬಾಳೆ ತರಕಾರಿ, ವೀಳ್ಯದೆಲೆ ನೆಡಲು ಅಗತ್ಯ ಕೃಷಿ ಸಾಲಗಳನ್ನೂ, ಮಕ್ಕಳ ಆರೋಗ್ಯ ಮಕ್ಕಳ ವಿದ್ಯಾಭ್ಯಾಸ ವ್ಯಾಪಾರ -ವಹಿವಾಟು, ಕಿರು ಉದ್ದಿಮೆಗಳನ್ನು ಆರಂಭಿಸುವುದಿದ್ದರೆ ಕೃಷಿಯೇತರ ವಿಭಾಗಕ್ಕೂ ಅಲ್ಪಾವಧಿ, ಮಧ್ಯಮಾವಧಿ, ದೀರ್ಘಾವಧಿಯ ಸಾಲಗಳನ್ನು ಒದಗಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿವೆ. ಜನರಲ್ಲಿ ಉಳಿತಾಯದ ಮನೋಭಾವವನ್ನು ಉಂಟು ಮಾಡಿ ಜನರಿಂದ ಹಣವನ್ನು ಠೇವಣಿಯಾಗಿ ಸ್ವೀಕರಿಸುವ ಕಾರ್ಯಕ್ರಮಗಳೂ ಈ ಸಂಸ್ಥೆಯಲ್ಲಿವೆ. ದನ, ಆಡು ಮೊದಲಾದ ಸಾಕು ಪ್ರಾಣಿಗಳ ಖರೀದಿಗೂ ಸಾಲ ವಿತರಣೆಯನ್ನು ಈ ಸಂಸ್ಥೆಗಳು ಮಾಡುತ್ತಿವೆ. ನಮ್ಮ ಬೇಂಕಿನ ಅಗತ್ಯಗಳಿಗನುಸಾರವಾಗಿ ಕಾಲ ಕಾಲಕ್ಕೆ ಬೇಕಾದ ನಿಯಮಗಳಲ್ಲಿ ತಿದ್ದುಪಡಿಗಳನ್ನು ಮಾಡುವ ಜವಾಬ್ದಾರಿಕೆಯೂ ಆಡಳಿತ ಮಂಡಳಿಗೆ ಇದೆ. ಆದರೆ ಆ ತಿದ್ದುಪಡಿಗಳನ್ನು ಮುಂಚಿತವಾಗಿ ನೋಟೀಸಿನ ಮೂಲಕ ಸದಸ್ಯರಿಗೆ ತಿಳಿಸಿ, ಮಹಾಸಭೆಯಲ್ಲಿ ಮಂಜೂರು ಗೊಳಿಸಿ, ಸಹಕಾರಿ ರಿಜಿಸ್ಟ್ರಾರ್‌ರವರಿಂದ ಅಂಗೀಕಾರವನ್ನು ಪಡೆದುಕೊಳ್ಳುವುದು ಅಗತ್ಯವಾಗಿದೆ.

ಕೊಡ್ಲಮೊಗರು ಸೇವಾ ಸಹಕಾರಿ ಸಂಘದ ಆರಂಭದ ಅಧ್ಯಕ್ಷರಾಗಿ ಕೇಶವ ಭಟ್ಟರೂ, ಕಾರ್ಯದರ್ಶಿಗಳಾಗಿ ಡಿ. ಲಕ್ಷ್ಮೀನಾರಾಯಣ

ರಾಯರೂ, ಪಾತೂರು ಸೇವಾ ಸಹಕಾರಿ ಸಂಘದ ಮೊದಲ ಅಧ್ಯಕ್ಷರಾಗಿ ಬಿ. ಸಂಕಪ್ಪ ಅಡಪ್ಪ ಐ. ಕಾರ್ಯದರ್ಶಿಗಳಾಗಿ ಲಕ್ಷ್ಮೀನಾರಾಯಣ ರಾಯರೂ ಕಾರ್ಯ ನಿರ್ವಹಿಸಿದ್ದರು. ವರ್ಕಾಡಿ ಸೇವಾ ಸಹಕಾರಿ ಸಂಘದ ಆರಂಭದ ಅಧ್ಯಕ್ಷರಾಗಿ ಅನಂತರಾಮ ತಾಳಿತ್ತಾಯರೂ, ಕಾರ್ಯದರ್ಶಿಗಳಾಗಿ ಸದಾನಂದ ಶೆಟ್ಟರೂ ಕಾರ್ಯ ನಿರ್ವಹಿಸಿದ್ದರು.

ಶಾಲಾ ಮಕ್ಕಳ ಸಹಕರಣ ಸಂಘವಾಗಿ ಶ್ರೀ ವಾಣೀ ವಿಜಯ ಹೈಸ್ಕೂಲಿನಲ್ಲಿ ರಾಧಾಕೃಷ್ಣ ಬಲ್ಲಾಳರವರು ಕಾರ್ಯದರ್ಶಿಗಳಾಗಿರುವ ಸಂಸ್ಥೆಯು ಕಾರ್ಯವೆಸಗುತ್ತಿದೆ. ಇದರಲ್ಲಿ ಮಕ್ಕಳಿಗೆ ಬೇಕಾದ ಶಾಲಾ ಬೋಧನೋಪಕರಣಗಳ ವಿತರಣೆಯಾಗುತ್ತಿದೆ. ಇದರಲ್ಲಿ 1432 ಸದಸ್ಯರಿರುವರು. ಆನೆಕಲ್ಲು ಶಾಲೆಯಲ್ಲಿಯೂ ಅಶೋಕ ಮಾಸ್ಟರ್‌ರವರು ಕಾರ್ಯದರ್ಶಿಗಳಾಗಿರುವ ಮಕ್ಕಳ ಸಹಕಾರಿ ಸಂಘವು ಕಾರ್ಯವೆಸಗುತ್ತಿದೆ. ಇದರಲ್ಲಿ 1128 ಸದಸ್ಯರಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗಾಗಿ ಕೊಡ್ಲಮೊಗರು ಗ್ರಾಮದ ಗೂವೆದ ಪಡ್ಪು ಎಂಬಲ್ಲಿ ವರ್ಕಾಡಿ ಪಂಚಾಯತಿನ ಒಂದುಸಹಕಾರಿ ಸಂಘವು ಕಾರ್ಯವೆಸಗುತ್ತಿದೆ. ಪ್ರಕೃತ ಅಲ್ಲಿ ಹೊನ್ನಪ್ಪನಾಯ್ಕರು ಅಧ್ಯಕ್ಷರಾಗಿಯೇ ಕೃಷ್ಣ ನಾಯ್ಕರವರು ಕಾರ್ಯದರ್ಶಿಗಳಾಗಿಯೂ ಕಾರ್ಯ ನಿರ್ವಹಿಸುತ್ತಿರುವರು. ಇದರಲ್ಲಿ 130 ಸದಸ್ಯರಿರುವರು.

ಸಮಸ್ಯೆಗಳು

1. ರೈತರ ಅಗತ್ಯಗಳಿಗೆ ಬೇಕಾದ ರಾಸಾಯನಿಕ ಗೊಬ್ಬರ, ಕೀಟನಾಶಕಗಳನ್ನು ವಿತರಿಸುವ ವ್ಯವಸ್ಥೆ ಈ ಬೇಂಕುಗಳಲ್ಲಿ ಇಲ್ಲ
2. ಹೆಚ್ಚಿನ ಸದಸ್ಯರು ಸಾಲವನ್ನು ತೆಗೆದ ಸಾಲಕ್ಕೆ ಬಳಸುವುದಿಲ್ಲ
3. ಹೆಚ್ಚಿನ ಸದಸ್ಯರು ಸಾಲವನ್ನು ಕ್ಲಪ್ತ ಸಮಯಕ್ಕೆ ಮರುಪಾವತಿ ಮಾಡುವುದಿಲ್ಲ
4. ರೈತರ ಉತ್ಪಾದನೆಯನ್ನು ಮಾರಾಟ ಮಾಡುವ ಉತ್ತಮ ಕೇಂದ್ರವು ಇರುವುದಿಲ್ಲ
5. ನಿರುದ್ಯೋಗಿ ಯುವಕ,ಯುವತಿಯರಿಗೆ ಸ್ವ ಉದ್ಯೋಗಕ್ಕಾಗಿ ಉತ್ತಮ ತರಬೇತಿ ಹಾಗೂ ಸಾಲ ವಿತರಣೆಯ ವ್ಯವಸ್ಥೆ ಪರಿಣಾಮ ಕಾರಿಯಾಗಿರುವುದಿಲ್ಲ
6. ಜಾನುವಾರುಗಳ ಆರೈಕೆ ಹಾಗೂ, ರೋಗ ನಿವಾರಣೆಗಳ ಕುರಿತ ಉತ್ತಮ ಮಾಹಿತಿಯನ್ನು ನೀಡುವ ವ್ಯವಸ್ಥೆಗಳಿಲ್ಲ
7. ಬೇಂಕಿನ ನಿರ್ವಹಣಾ ವೆಚ್ಚ ಏರುತ್ತಾ ಹೋಗುತ್ತಿದೆ. ಆದಾಯದ ಮೂಲ ಇದ್ದಲ್ಲೇ ಇರುತ್ತಿದೆ.

ಕ್ರ. ಸಂ.	ಸಂಘಗಳ ಸಂಖ್ಯೆ	ಉದ್ದೇಶ	ಸದಸ್ಯರ ಸಂಖ್ಯೆ	ಸ್ಥಾಪಿತ ವರ್ಷ
1.	ಕೊಡ್ಲಮೊಗರುಪಾತೂರು ಸೇವಾ ಸಹಕಾರಿ ಬೇಂಕು	ಕೃಷಿ ಕಾರ್ಮಿಕರಿಗೆ ನೆರವು	1798	31-10-96
2.	ವರ್ಕಾಡಿ ಸೇವಾ ಸಹಕಾರಿ ಬೇಂಕು	ಕೃಷಿ -ಕಾರ್ಮಿಕರಿಗೆ ನೆರವು	2407	5-5-1917

ಕ್ರ.ಸಂಖ್ಯೆ	ಸಂಘಗಳ ಹೆಸರು	ಖಾಯಂ ಸಿಬಂದಿಗಳು	ತಾತ್ಕಾಲಿಕ ಸಿಬಂದಿಗೆಳು	ಒಟ್ಟು ಸಿಬಂದಿಗಳು
1.	ಕೊಡ್ಲಮೊಗರು ಪಾತೂರು ಸೇವಾ ಸಹಕಾರಿ ಬೇಂಕು	7	-	7
2.	ವರ್ಕಾಡಿ ಸೇವಾ ಸಹಕಾರಿ ಬೇಂಕು	4	-	4

ಕ್ರ. ಸಂಖ್ಯೆ	ಸಂಘಗಳ ಸಿಬಂದಿಗಳು	ಆರಂಭದ ವರ್ಷ	ಪ್ರಸ್ತುತ ಸದಸ್ಯರ ಸಂಖ್ಯೆ	ಮೂಲ ಠೇವಣಿ	ಕೃಷಿ ಸಾಲ	ಕೃಷಿ ಸಾಲ	ಲಾಭ	ನಷ್ಟ
1.	ಕೊಡ್ಲಮೊಗರು ಪಾತೂರುಗ್ರಾಮ	1951	1798	9480.974	5575538	3291437	270663	392139
2.	ವರ್ಕಾಡಿ	5-5-1977	2407	1202500	2770650	5014365	410769	512526

ಸಹಕಾರಿ ಬೇಂಕು ಪಾವೂರು ಗ್ರಾಮ

ಸಾಧ್ಯತೆಗಳು

1. ಪಂಚಾಯತಿನ ಒಂದು ಗ್ರಾಮಕ್ಕೊಂದರಂತೆಯಾದರೂ ಒಂದು ಸಹಕರಣ ಸ್ಥಾಪನೆಯನ್ನು ಕೂಡಲೇ ಆರಂಭಿಸುವುದು
2. ಅರ್ಹರಾದ ಎಲ್ಲಾ ರೈತ ಕುಟುಂಬಗಳ ಸದಸ್ಯರನ್ನು ಗುರುತಿಸಿ ಸಂಸ್ಥೆಯ ಸದಸ್ಯರಾಗಿ ನೋಂದಾಯಿಸುವುದು
3. ಸ್ತ್ರೀ ಸಹಕರಣ ಸಂಘಗಳನ್ನು ಆರಂಭಿಸುವುದು
4. ಕೃಷಿಗೆ ಅನುಕೂಲವಾದ ಅಲ್ಪಕಾಲದ ಸಾಲವನ್ನು ವರ್ಷಾರಂಭದಲ್ಲೇ ಒದಗಿಸುವುದು
5. ಜೇನು ಸಾಕಣಾ ಸಹಕಾರ ಸಂಘವನ್ನು ಆರಂಭಿಸುವುದು
6. ಸರಕಾರದಿಂದ ಸಿಗುವ ಸಬ್ಸಿಡಿ ರೂಪದ ಸಹಾಯಧನವನ್ನು ಕ್ಲಪ್ತ ಸಮಯದಲ್ಲಿ ಸದಸ್ಯರಿಗೆ ಒದಗಿಸುವುದು
7. ಕನ್ಸೂಮರ್ ಸ್ಟೋರುಗಳ ಸೇವೆಯನ್ನು ವಿಪುಲಗೊಳಿಸಿ ಲಾಭದಾಯಕವಾಗಿ ಬದಲಾಯಿಸಿಕೊಳ್ಳುವುದು
8. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸಹಕಾರಿ ಸಂಘದಲ್ಲಿ ಸದಸ್ಯತನವನ್ನು ಹೆಚ್ಚಿಸುವುದು
9. ಈ ಸಹಕರಣ ಸಂಸ್ಥೆಯಲ್ಲಿ ಕೃಷಿ ಹಾಗೂ ಕೃಷಿಯೇತರಕ ಸಾಲಗಳನ್ನು ವಿತರಿಸುವುದು
10. ಠೇವಣಿಗಳನ್ನು ಅಧಿಕಗೊಳಿಸುವುದು.
11. ಪಡೆದ ಠೇವಣಿಗಳನ್ನು ಬಂಗಾರದ ಆರಂಭದ ಮೇಲೆ ವಿತರಿಸುವುದು
12. ಕ್ಷೀರೋತ್ಪಾದನಾ ಸಹಕರಣ ಸಂಘವನ್ನು ಆರಂಭಿಸುವುದು
13. ತಜ್ಞ ಡಾಕ್ಟರರಿಂದ ಮೃಗಗಳ ಆರೈಕೆಗೆ ಬೇಕಾದ ಸಲಹೆ ಹಾಗೂ ಜಾಗೃತೆಗಳನ್ನು ಕೊಡಿಸುವುದು
14. ಕೃಷಿ ಮೇಳ ಮತ್ತು ಕೃಷಿ ಸೆಮಿನಾರುಗಳನ್ನು ಬೇಂಕುಗಳ ಮೂಲಕ ನಡೆಸುವುದು
15. ಬೇಂಕು ಸಿಬಂದಿಗಳ ಸೇವನಾ ಮಟ್ಟವನ್ನು ಉತ್ತಮ ಪಡಿಸುವುದು.
16. ಭವನ ನಿರ್ಮಾಣ ಸಹಕಾರ ಸಂಘವನ್ನು ಸ್ಥಾಪಿಸುವುದು.

ಕುಡಿನೀರೂ, ಸಾರ್ವಜನಿಕ ಆರೋಗ್ಯವೂ ಕುಡಿನೀರು ಮೂಲಗಳು-ಸಂಖ್ಯೆ

ನಮ್ಮಲ್ಲಿ ಸಕಾಲದಲ್ಲಿ ಸರಿಯಾಗಿ ಮಳೆ ಸುರಿಯುತ್ತಿದೆ. ಸಾಧಾರಣ ಮಳೆ ಬಂದರೂ ವರ್ಷಂತ್ಯದ ವೇಳೆಯಲ್ಲಿ ಕುಡಿನೀರಿನ ಕ್ಷಾಮ ತಲೆದೋರುತ್ತದೆ. ಮಳೆಗಾಲದಲ್ಲಿ ಇಲ್ಲಿನ ನದಿಗಳು ನೀರಿನಿಂದ ತುಂಬಿ ಹರಿಯುತ್ತವೆ. ಕೇರಳವು ಜಲಲಭ್ಯತೆಯಲ್ಲಿ ಇತರ ರಾಜ್ಯಗಳಿಗೆ ಹೋಲಿಸಿದರೆ ಮೊದಲ ಸಾಲಿನಲ್ಲಿದ್ದರೂ, ಜನ ಸಂಪತ್ತಿನಿಂದ ಕೂಡಿದ್ದರೂ ಬರ ಹಾಗೂ ಕುಡಿಯುವ ನೀರಿನ ಕ್ಷಾಮ ತಲೆದೋರುತ್ತದೆ. ಬಾವಿಗಳು, ಕೊಳಗಳು, ಒರತೆಗಳು, ಝರಿಗಳು, ಕಿರು ಜಲಾಶಯಗಳು, ಕೆರೆಗಳು, ನದಿಗಳು, ಇವೆಲ್ಲ ನಮ್ಮಲ್ಲಿನ ಜನಸಂಖ್ಯೆಯ 30%ದಷ್ಟು ಮಂದಿಗೆ ಪೂರ್ಣವಾಗಿ ಉಪಯೋಗಿಸುವ ಜಲಮೂಲಗಳಾಗಿವೆ. ಇನ್ನು ಬಾಕಿ ಉಳಿದ 70% ಜನತೆಗೆ ಇರುವ ಆಂಶಿಕವಾದ ನೀರಿನ ಕ್ಷಾಮವನ್ನು ನಾವು ನಿವಾರಿಸುವ ಜವಾಬ್ದಾರಿಯನ್ನು ಹೊರಬೇಕಾಗಿದೆ. ನಾಗರೀಕರಣ ವಲಸೆ ಹೋಗುವಿಕೆ, ಅಸಮರ್ಪಕವಾದ ಭೂ ವಿನಿಯೋಗ, ಅರಣ್ಯ ನಾಶ, ಜನಸಂಖ್ಯಾ ಸ್ಫೋಟ, ಜಲೋಪಯೋಗ ರೀತಿಯಲ್ಲುಂಟಾಗಿರುವ ಬದಲಾವಣೆ ನದಿಗಳಿಂದ ಹೊಯಿಗೆ ಸಂಗ್ರಹ, ಅನಿಯಂತ್ರಿತವಾದ ನೀರಿನ ಪಂಪಿಂಗ್ ವ್ಯವಸ್ಥೆ ಎಂಬವುಗಳಿಂದ ನಮ್ಮ ಜಲಾಶಯಗಳ ನೀರಿನ ಮಟ್ಟ ಕಡಿಮೆಯಾಗಿದೆ. ಕೆಲವು ಜನಸಾಂದ್ರತೆಯಿರುವ ಪ್ರದೇಶಗಳ ನೀರಿನ ಅವಶ್ಯಕತೆಯನ್ನು ಪೂರೈಸಲು ಅಲ್ಲಿಗೆ ಪೈಪು ಲೈನುಗಳ ಮೂಲಕ ನೀರು ಸರಬರಾಜು ಮಾಡಬೇಕಾಗುವುದು.

ಜಲ ಮೂಲಗಳ ಸಮಸ್ಯೆಯನ್ನು ಗುರುತಿಸಿ ಅವುಗಳನ್ನು ಪರಿಹರಿಸಲು ಅಗತ್ಯವಾದ ಪ್ರಾದೇಶಿಕವಾದ ಸಲಹೆ ಸೂಚನೆಗಳನ್ನು ನೀಡಿ ಹೊಸ ಜಲಮೂಲಗಳನ್ನು ಪತ್ತೆ ಹಚ್ಚಿ ವೈಜ್ಞಾನಿಕವಾದ ರೀತಿಯಲ್ಲಿ ಸಾರ್ವಜನಿಕ ಬಾವಿಗಳ ಸಂರಕ್ಷಣೆಯನ್ನು, ಫಲಾನುಭವಿಗಳ ನಿಯಂತ್ರಣಕ್ಕೆ ತರುವಂತಹ ಕಾರ್ಯಕ್ರಮಗಳನ್ನು ತಯಾರಿಸುವುದು ಅತೀ ಅಗತ್ಯವಾದ ಕಾರ್ಯವಾಗಿದೆ.

ನಮ್ಮ ಜಲಕ್ಷಾಮ (ಕುಡಿನೀರು)ವನ್ನು ಪರಿಹರಿಸಲು ನಾವು ಕೆಲವು ತುರ್ತು ಕ್ರಮಗಳನ್ನು ಕೈಗೊಳ್ಳಬೇಕಾಗಿದೆ. ಜಲಕ್ಷಾಮವನ್ನು ನಿವಾರಿಸಲು ನಮ್ಮ ಪ್ರಧಾನ ಪದ್ಧತಿಗಳಲ್ಲಿ, ವೈಯಕ್ತಿಕ ಬಾವಿಗಳ ಅಭಿವೃದ್ಧಿ ಯೋಜನೆ, ಸಾರ್ವಜನಿಕ ಜಲಮೂಲಗಳ ಸಂರಕ್ಷಣೆ, ಹಾಗೂ ಅಭಿವೃದ್ಧಿ ಕಾರ್ಯಕ್ರಮ, ಸಾರ್ವಜನಿಕ ಜಲವಿತರಣಾ ಕಾರ್ಯಕ್ರಮಗಳು, ಜ್ಯಾರಿಯಲ್ಲಿರುವ ಯೋಜನೆಗಳ ಪುನರುದ್ಧಾರ ಕ್ರಮ, ಮುಂತಾದ ಯೋಜನೆಗಳಲ್ಲಿ ಸಾರ್ವಜನಿಕರನ್ನು ಪಾಲ್ಗೊಳ್ಳಿಸುವ ಮೂಲಕ ರೂಢೀಕರಿಸುವುದು ವೈಯಕ್ತಿಕ ಬಾವಿಗಳ ಶುಚೀತರಣ, ಸಂರಕ್ಷಣೆ, ಗುಣಮಟ್ಟ ಕಾಯ್ದುಕೊಳ್ಳುವುದು ಸರಿಯಾದ ರೀತಿಯ ಉಪಯೋಗ ಮುಂತಾದ ಚಟುವಟಿಕೆಗಳನ್ನು ಸಮನ್ವಯಗೊಳಿಸಲು ನಿರ್ದಿಷ್ಟ ಕಾಲಾವಧಿಯ ಯೋಜನೆ ಅತೀ ಅಗತ್ಯವಾಗಿದೆ. ಸಾರ್ವಜನಿಕ ಬಾವಿಗಳನ್ನು ಸಂರಕ್ಷಿಸಿ ಸಮೀಪದ ಕುಟುಂಬಗಳ ಮೇಲ್ನೋಟದಲ್ಲಿ ಶುದ್ಧ ಜಲ ವಿತರಿಸುವುದು ಇನ್ನೊಂದು ಯೋಜನೆಯಾಗಿದೆ. ಸಾರ್ವಜನಿಕ ಬಾವಿಗಳ ನೀರಿನ ಲಭ್ಯತೆಗನುಸಾರವಾಗಿ ನೀರು ವಿತರಣೆಗಾಗಿ ಕುಟುಂಬಗಳನ್ನು ಆಯ್ಕೆ ಮಾಡಬೇಕಾಗಿದೆ.

ಸಾರ್ವಜನಿಕ ಬಾವಿಗಳ ಸಂರಕ್ಷಣೆಯನ್ನು ಸ್ವಯಂ ಸೇವಾ ಕಾರ್ಯಕ್ರಮಗಳ ಮೂಲಕ ಹಾಗೂ ಬಾವಿಗಳಿಗೆ ಅಗತ್ಯವಾದ ಮುಚ್ಚಳ, ಕೈಪಂಪು ಜೋಡಿಸುವುದು ಮುಂತಾದ ಕಾರ್ಯ ಚಟುವಟಿಕೆಗಳನ್ನು 9ನೇ ಪಂಚವಾರ್ಷಿಕ ಯೋಜನೆಯಲ್ಲಿ ರೂಪಿಸುವುದು ನೀರಿನ ಕೊರತೆ ಎದುರಿಸುತ್ತಿರುವ ಪ್ರದೇಶದಿಂದ ದೂರದಲ್ಲಿ ನೆಲೆ ನಿಂತಿರುವ ಪರಂಪರಾಗತ ಜಲಮೂಲಗಳನ್ನು ಸಂರಕ್ಷಿಸಿ ಅಭಿವೃದ್ಧಿಗೊಳಿಸಿ ಜಲವಿತರಣೆ ನಡೆಸುವ ಸಾರ್ವಜನಿಕ ಜಲವಿತರಣಾ ಯೋಜನೆಯನ್ನು ಕೈಗೊಳ್ಳುವುದು.

ಜಲಕ್ಷಾಮವನ್ನು ಪರಿಹರಿಸಲು ನೀರಿನ ಕ್ಷಾಮ ತೀವ್ರವಾಗಿ ತಲೆದೋರುವ ಪ್ರದೇಶಗಳಲ್ಲಿ ಭೂಗರ್ಭದಲ್ಲಿರುವ ನೀರನ್ನು ಮೇಲಕ್ಕೆತ್ತಲು ಕೊಳವೆ ಬಾವಿಗಳನ್ನು ತೋಡುವುದು. ಈ ಬೋರ್‌ವೆಲ್‌ಗಳ ಸಮೀಪದಲ್ಲಿ ಸಿಮೆಂಟ್ ಟ್ಯಾಂಕ್‌ಗಳನ್ನು ತೆರೆದು ಸಮೀಪದ ಮನೆಗಳಿಗೆ ನಳ್ಳಿ ನೀರಿನ ವ್ಯವಸ್ಥೆ ಮಾಡುವುದು. ಕಾಲನಿ ಪ್ರದೇಶಗಳಲ್ಲಿ ನೀರಿನ ಕ್ಷಾಮವನ್ನು ನಿವಾರಿಸುವುದು.

ನಮ್ಮ ಪಂಚಾಯತಿನ ಗಡಿ ಪ್ರದೇಶದಲ್ಲಿ ಹರಿಯುವ ಆನೆಕಲ್ಲು ಹೊಳೆಗೆ ಪಂಪು ಅಳವಡಿಸಿ ಎತ್ತರದ ಗುಡ್ಡ ಪ್ರದೇಶಗಳಲ್ಲಿ ನೀರಿನ ದೊಡ್ಡ ಟ್ಯಾಂಕ್‌ಗಳಲ್ಲಿ ನೀರನ್ನು ಶೇಖರಿಸುವುದು. ಆ ನೀರನ್ನು ಶುದ್ಧಗೊಳಿಸಿ ಆ ನೀರನ್ನು ಸಾಧ್ಯವಿರುವ ಎಲ್ಲಾ ಕಡೆಗಳಿಗೂ ಪೈಪು ಲೈನುಗಳ ಮೂಲಕ ಕುಡಿನೀರು ಪೂರೈಕೆ ಮಾಡುವುದು.

ನಮ್ಮ ಪಂಚಾಯತಿಗೆ ಸುಮಾರು 500ಕ್ಕೂ ಮಿಕ್ಕ ಸಂಖ್ಯೆಯಲ್ಲಿ ಕೊಳವೆಬಾವಿಗಳ ಅವಶ್ಯಕತೆಯಿದೆ. ನಮ್ಮ ಪಂಚಾಯತು ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಪರಿಶಿಷ್ಟ ವರ್ಗ, ಪರಿಶಿಷ್ಟ ಜಾತಿ ಹಾಗೂ ನರಸಣ್ಣ ಕಾಲನಿಗಳ ಪರಿಸರದಲ್ಲಿ ನೀರಿನ ಕ್ಷಾಮ ತಲೆದೋರುತ್ತಿದೆ. ಅಲ್ಲಿ ನೀರಿನ ಕ್ಷಾಮವನ್ನು ಪರಿಹರಿಸಲು ಬಾವಿ ನಿರ್ಮಾಣ ಮಾಡುವುದು. ನೀರಿನ ಟ್ಯಾಂಕ್ ನಿರ್ಮಾಣ ನಳ್ಳಿ ನೀರಿನ ವ್ಯವಸ್ಥೆ ಮಾಡುವುದು.

ಪಾಯಿಖಾನೆಗಳು

ಪಾಯಿಖಾನೆಗಳನ್ನು ತೆರೆದು ಅವುಗಳನ್ನು ಬಳಸುವುದು ಆರೋಗ್ಯದ ದೃಷ್ಟಿಯಿಂದ ಅತೀ ಒಳ್ಳೆದು. ನಾವು ತೆರೆದ ಪ್ರದೇಶದಲ್ಲಿ ಮಲವಿಸರ್ಜನೆ ಮಾಡಿದರೆ ಅದರಿಂದ ನಮಗೆ ಹಲವು ಸಾಂಕ್ರಾಮಿಕ ರೋಗಗಳು ಹರಡುವ ಸಾಧ್ಯತೆಯಿದೆ. ಜನರಿಗೆ ಇದರ ಅರಿವು ಇದ್ದರೂ ಸಾಂಪತ್ತಿಕ ಗುಣಮಟ್ಟ, ಉತ್ತಮ ವಿಲ್ಲದ ಕಾರಣ ನಮ್ಮವರು ಪಾಯಿಖಾನೆಗಳನ್ನು ತೆರೆಯಲು ಸಾಧ್ಯವಾಗುತ್ತಿಲ್ಲ. ಈ ತೊಂದರೆಯನ್ನು ನಿವಾರಿಸಲು ನರಸಣ್ಣ, ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗಗಳಿಗೆ ಸಂಬಂಧಿಸಿದ ಜನತೆಗೆ ಉಚಿತ ಕಕ್ಕೂಸು ತೆರೆದು ಕೊಡುವುದು. ಇತರ ಬಡತನ ರೇಖೆಯಿಂದ ಕೆಳಗಿರುವ ಕುಟುಂಬಗಳನ್ನು ಗುರುತಿಸಿ ಅವರಿಗೆ ಪಾಯಿಖಾನೆಗಳನ್ನು ತೆರೆಯಲು ಸಹಕರಿಸುವುದು. ಬಾಕಿ ಉಳಿದವರಿಗೆ ಸಾಲದ ವ್ಯವಸ್ಥೆ ಮಾಡುವುದು.

ಕುಡಿ ನೀರಿನ ಪೂರೈಕೆಗಾಗಿ ಮಾಡಿಸಬೇಕಾದ ಬಾವಿಗಳ ವಿವರ

ವಾರ್ಡ್	ಹೊಸತಾಗಿ ನಿರ್ಮಿಸಬೇಕಾದ ಬಾವಿಗಳ ಸಂಖ್ಯೆ
I	25
II	10
III	35
IV	30
V	10
VI	25
VII	25
VIII	15
IX	25
X	35
ಒಟ್ಟು	235

ರೋಗಾಣುಗಳಿಗೆ ವಾಸಿಸಲು, ಬೆಳೆಯಲು ತೆರೆದ ಪ್ರದೇಶದಲ್ಲಿ ಮಲ, ಮೂತ್ರಗಳ ವಿಸರ್ಜನೆ ನೆರವಾಗುವುದು. ನಮ್ಮಲ್ಲಿ ಹರಡುವ ಸಾಂಕ್ರಾಮಿಕ ರೋಗಗಳನ್ನು ಹರಡದಂತೆ ಮಾಡುವ ಉದ್ದೇಶದಿಂದ ನಮ್ಮ ಪಂಚಾಯತಿನ ವ್ಯಾಪ್ತಿಯಲ್ಲಿ ಬರುವ ಸಾವಿರಾರು ಮನೆಗಳಿಗೂ ಶೀಘ್ರದಲ್ಲೇ ಕಕ್ಕೂಸು ತೆರೆಯಲು ಕ್ರಮಕೈಗೊಳ್ಳುವುದು. ಈಗ ನಮ್ಮ ಪಂಚಾಯತಿನಲ್ಲಿ ಕೇವಲ ಬೆರಳೆಣಿಕೆಯ ಸಂಖ್ಯೆಯ ಮನೆಗಳಲ್ಲಿ ಮಾತ್ರ ಕಕ್ಕೂಸು (ಪಾಯಿಖಾನೆ)ಗಳಿವೆ.

ಮಲಿನ ಜಲ ಜಲಮಲಿನೀಕರಣ ಸಮಸ್ಯೆಗಳು

ನಾವು ಆರೋಗ್ಯವಂತರಾಗಿ ಬಾಳಬೇಕಾದರೆ ನಾವು ಉಪಯೋಗಿಸುವ ಆಹಾರ, ಕುಡಿಯುವ ನೀರು, ಉಸಿರಾಡುವ ಗಾಳಿ ಶುದ್ಧವಾಗಿರಬೇಕು. ಪ್ರತಿಯೊಬ್ಬನ ಆರೋಗ್ಯಕ್ಕೂ ಶುದ್ಧವಾದ ನೀರಿನ ಅವಶ್ಯಕತೆಯಿದೆ. ಸಾಮಾನ್ಯವಾಗಿ ಮಾರ್ಚ್ ತಿಂಗಳ ನಂತರ ಪ್ರತಿ ಬಾವಿಗಳ ನೀರು ಕೂಡ ಮಲಿನವಾಗುವ ಸಾಧ್ಯತೆ ಹೆಚ್ಚು. ಆ ಬಾವಿಗಳನ್ನು ಪತ್ತೆ ಹಚ್ಚಿ ಬಾವಿಯ ಹೂಳೆತ್ತುವ ಕೆಲಸವಾಗಬೇಕಾಗಿದೆ. ರಾಸಾಯನಿಕ ವಸ್ತುಗಳನ್ನು ಬಳಸಿ ನೀರನ್ನು ಶುಚಿಗೊಳಿಸುವುದು. ಕುಡಿಯುವ ನೀರಿನ ಬಾವಿಗೆ ಆಗಿಂದಾಗ್ಗೆ ಸುಣ್ಣ ಹಾಕಿದರೆ ಅದರಲ್ಲಿರುವ ರೋಗ ನಾಶಕ ಕ್ರಿಮಿಕೀಟಗಳು ನಾಶ ಹೊಂದುತ್ತವೆ. ನೀರನ್ನು ಕುದಿಸಿ ಆರಿಸಿ ಉಪಯೋಗಿಸುವ ಕ್ರಮವನ್ನು ಹೆಚ್ಚು ಪ್ರಚಾರಪಡಿಸುವುದು. ಮಳೆಗಾಲದಲ್ಲಿ ಮಳೆಯ ನೀರು ಹರಿದು ಬಾವಿಯನ್ನು ಪ್ರವೇಶಿಸದಂತೆ ಎಲ್ಲಾ ಬಾವಿ ಕೊಳಗಳಿಗೂ ತಡೆಗೋಡೆ ನಿರ್ಮಿಸುವಂತೆ ಕ್ರಮ ಕೈಗೊಳ್ಳುವುದು.

ಮನುಷ್ಯನು ಆರೋಗ್ಯವಂತನಾಗಲು ನಿರ್ಮಲೀಕರಣ ಅತೀ ಅಗತ್ಯ. ನಾವು ಸೇವಿಸುವ ಆಹಾರ ಪದಾರ್ಥಗಳನ್ನು ಚೆನ್ನಾಗಿ ಶುಚಿಗೊಳಿಸಬೇಕು. ಯಾವುದೇ ಹಣ್ಣನ್ನಾಗಲೀ, ತರಕಾರಿಯನ್ನಾಗಲೀ, ಧಾನ್ಯವನ್ನಾಗಲೀ ನೀರಿನಿಂದ ಚೆನ್ನಾಗಿ ತೊಳೆದು ಶುದ್ಧ ಮಾಡಿ ಉಪಯೋಗಿಸಬೇಕು. ಮನೆಯನ್ನೂ ಅದರ ಪರಿಸರವನ್ನೂ ಶುಚಿಯಾಗಿಟ್ಟುಕೊಳ್ಳುವಂತೆ ಜನರಿಗೆ ಅರಿವು ಮೂಡಿಸುವುದು ಸಾಂಕ್ರಾಮಿಕ ರೋಗಗಳನ್ನು ಹರಡುವ ಕ್ರಿಮಿಕೀಟಗಳು ಹರಡದಂತೆ ಆರೋಗ್ಯ ಇಲಾಖೆಯ ಕಾರ್ಯ ದಕ್ಷತೆಯನ್ನು ಚುರುಕುಗೊಳಿಸುವುದು. ಮನೆಯ ನೈರ್ಮಲ್ಯಕ್ಕೆ, ಹೆಚ್ಚು ಗಮನಕೊಟ್ಟಂತೆ ನಮ್ಮ ಪರಿಸರ ನೈರ್ಮಲ್ಯಕ್ಕೂ ಹೆಚ್ಚಿನ ಮಹತ್ವ ನೀಡುವುದು.

ನಮ್ಮ ಪಂಚಾಯತಿನ ವ್ಯಾಪ್ತಿಯಲ್ಲಿ ಬರುವ ಹೊಟೇಲು ಉದ್ಯಮಗಳ ಪರಿಸರ ಶುಚಿತ್ವಕ್ಕೆ ಹೆಚ್ಚಿನ ಮಹತ್ವ ಕೊಡುವುದು. ಹೊಟೇಲುಗಳಲ್ಲಿ ಉಪಯೋಗಿಸಿದ, ನೀರು ಅಶುದ್ಧವಾಗಿ ತೆರೆದ ಚರಂಡಿಗಳಲ್ಲಿ ಹರಿದು ಅದು ಅಲ್ಲಲ್ಲಿ ಕಟ್ಟಿ ಸಂಗ್ರಹವಾಗಿ ಕೊಳೆತು ವಾಸನೆ ಬರುವ ದೃಶ್ಯವನ್ನು ನಾವು ಕಣ್ಣಾರೆ ಕಾಣುತ್ತೇವೆ. ಅಲ್ಲಲ್ಲಿ ಒಮ್ಮೊಮ್ಮೆ ನಾವು ಮೂಗಿಗೆ ಕೈ ಹಿಡಿದುಕೊಂಡೇ ಹೋಗುವ ಸಂದರ್ಭ ಹೆಚ್ಚು. ಅಂತಹ ಚರಂಡಿಗಳ ದುರಸ್ತಿ ಹಾಗೂ ಆ ಚರಂಡಿಗಳನ್ನು ಮೇಲ್ಚಾಗದಿಂದ ಮುಚ್ಚುವುದು. ನೂತನವಾಗಿ ಚರಂಡಿಗಳು ಬೇಕಾದೆಡೆಗಳಲ್ಲಿ ಚರಂಡಿಗಳನ್ನು ತೆರೆಯುವುದು. ಚರಂಡಿಗಳಿಗೆ ರಾಸಾಯನಿಕ, ಕ್ರಿಮಿನಾಶಕಗಳನ್ನು ಬಳಸಿ ಅಲ್ಲಿ ಕ್ರಿಮಿಕೀಟಗಳ ಹಾವಳಿ ಹೆಚ್ಚದಂತೆ ನಿಯಂತ್ರಣ ಕ್ರಮವನ್ನು ಕೈಗೊಳ್ಳುವುದು.

ಅಂಗಡಿ ಪರಿಸರಗಳಲ್ಲಿ ಅದೇ ರೀತಿ ದರ್ಜಿಗಳ ಅಂಗಡಿಗಳ ಮುಂಭಾಗದ ಬೀದಿಗಳಲ್ಲಿ ಪೊಲಿಥಿನ್ ಚೀಲಗಳನ್ನು ಹಾಗೂ ಬಟ್ಟೆ

ಚೂರುಗಳನ್ನು ಎಸೆಯುವುದರಿಂದ ಸಾರ್ವಜನಿಕರ ಸಂಚಾರಕ್ಕೆ ಹೆಚ್ಚಿನ ಅಡ್ಡಿಯುಂಟಾಗುತ್ತದೆ. ಈ ಅಡ್ಡಿಯನ್ನು ನಿಯಂತ್ರಿಸಲು ಅಂಗಡಿ ವ್ಯಾಪಾರಿಗಳಿಗೆ ಸೂಕ್ತ ಮಾರ್ಗದರ್ಶನ ಕೊಟ್ಟು, ಇಂತಹ ತ್ಯಾಜ್ಯ ವಸ್ತುಗಳನ್ನು ಎಸೆಯದ ಹಾಗೆ ಮಾಡುವುದು. ಅಂತಹ ವಸ್ತುಗಳನ್ನು ಸುಟ್ಟು ಹಾಕುವುದು.

ತಗ್ಗು ಪ್ರದೇಶಗಳಲ್ಲಿ ಕಲುಷಿತ ನೀರು ನಿಲ್ಲದಂತೆ ಹೆಚ್ಚಿನ ಕ್ರಮ ಕೈಗೊಳ್ಳುವುದು. ಅಂತಹ ನೀರನ್ನು ಬೇರೆಡೆಗೆ ಹರಿಸಲು ಕ್ರಮಕೈಗೊಳ್ಳುವುದು. ಅಲ್ಲಿಗೆ ಕ್ರಿಮಿನಾಶಕಗಳನ್ನು ಬಳಸುವುದು ಅಲ್ಲಿನ ನೀರನ್ನು ಜನರು ತಮ್ಮ ತಮ್ಮ ಅವಶ್ಯಕೆತಗಳಿಗೆ ಉಪಯೋಗಿಸದಂತೆ ಎಚ್ಚರ ಮೂಡಿಸುವುದು ಅತೀ ಅಗತ್ಯ.

ಇಂದು ಮನುಷ್ಯನನ್ನು ಬಾಧಿಸುವ ಹೆಚ್ಚಿನ ರೋಗಗಳೂ ಜಲ ಸಂಬಂಧವಾದ ಕಾರಣಗಳಿಂದ ಉಂಟಾಗುತ್ತದೆ. ಆದುದರಿಂದ ಅದನ್ನು ನಿವಾರಿಸಲು ಶುದ್ಧವಾದ ಕುಡಿಯುವ ನೀರಿನ ಪೂರೈಕೆ ಹಾಗೂ ಪರಿಸರ ನೈರ್ಮಲ್ಯವನ್ನು ಕಾಪಾಡಲು ನಾವು ಕ್ರಮಕ್ಕೆಗೊಳ್ಳಬೇಕಾದುದು ಅತೀ ಅಗತ್ಯ. ವಾಂತಿ ಭೇದಿ, ಹೊಟ್ಟೆನೋವು, ಸನ್ನಿಪಾತ, ಜ್ವರ, ಪೋಲಿಯೋ, ಹಳದಿ ಕಾಮಲೆ ಮುಂತಾದ ಮಾರಣಾಂತಿಕ ಅಂಟುಜಾಡ್ಯಗಳು ಕುಡಿಯುವ ನೀರಿನ ಮೂಲಕ ಹಾಗೂ ಸೇವಿಸುವ ಆಹಾರದ ಮೂಲಕ ಹರಡುತ್ತವೆ. ಜಲ ಮತ್ತು ಆಹಾರವನ್ನು ಶುಚಿಯಾಗಿಸಿದರೆ ಈ ರೋಗಗಳಿಂದ ಪಾರಾಗಬಹುದು. ಈ ಮಲಿನೀಕರಣವನ್ನು ನಿವಾರಿಸಲು ವೈಜ್ಞಾನಿಕ ರೀತಿಯಲ್ಲಿ ಶೌಚಾಲಯ ಹಾಗೂ ಇತರ ಮಾಲಿನ್ಯ ನಿವಾರಣಾ ವ್ಯವಸ್ಥೆಗಳಿಂದ ಆರೋಗ್ಯದ ಬಗ್ಗೆ ಅರಿವಿರುವ ಜೀವನರೀತಿ ಸಾಧ್ಯವಿದೆ ಎಂದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಆದರೂ ಕೂಡಾ ಜನ ಸಾಮಾನ್ಯರು ಹಾಗೂ ಸಂಬಂಧಪಟ್ಟವರು ಈ ಬಗ್ಗೆ ಉದಾಸೀನತೆಯನ್ನು ಹೊಂದಿರುವುದು ಸರಿಯಲ್ಲ.

ಇತರ ಅಭಿವೃದ್ಧಿ ಕಾರ್ಯಕ್ರಮಗಳಿಗಿಂತ ಬೇರೆಯಾಗಿ ನೈರ್ಮಲ್ಯ ಯೋಜನೆಗಳಿಗಾಗಿ ಪ್ರಾದೇಶಿಕವಾಗಿ ಕಾರ್ಯಕ್ರಮಗಳನ್ನು ರೂಪಿಸಬೇಕಾಗಿದೆ. ಒಂದು ಪ್ರದೇಶವನ್ನು ಒಟ್ಟಾಗಿ ಗಣನೆಗೆ ತೆಗೆದುಕೊಂಡರೆ ಮಾತ್ರ ಪ್ರತಿಯೊಂದು ಮನೆಗೆ ಅಗತ್ಯವಾದ ನೈರ್ಮಲ್ಯ ಕಾರ್ಯಕ್ರಮವನ್ನು ನಡೆಸುವುದು ಸಾಧ್ಯ.

ಪರಿಸರ ಮಾಲಿನ್ಯದಲ್ಲಿ ವಾಯು ಮಾಲಿನ್ಯ ಕೂಡ ಒಂದು. ನಮ್ಮ ಆರೋಗ್ಯಕ್ಕೆ ನಾವು ಉಸಿರಾಡುವ ಗಾಳಿ ಕೂಡ ಶುದ್ಧವಾಗಿರಬೇಕಾದುದು ಅತೀ ಅಗತ್ಯ. ಕಾರ್ಖಾನೆಗಳಿಂದ ಹೊರ ಬರುವ ಹೊಗೆ, ವಾಹನಗಳ ಹೊಗೆ, ಧೂಳು ಇತ್ಯಾದಿಗಳನ್ನು ನಾವು ನಿಯಂತ್ರಿಸುವುದು ಅತೀ ಅಗತ್ಯ. ಇವುಗಳು ವಾಯುಮಾಲಿನ್ಯವನ್ನುಂಟು ಮಾಡುವ ಮುಖ್ಯ ಮೂಲಗಳಾಗಿವೆ. ಕಾರ್ಖಾನೆಗಳಿಂದ ಬರುವ ಹೊಗೆ, ಹೊಟೇಲು ಉದ್ಯಮ ಇತ್ಯಾದಿಗಳಿಂದ ಬರುವ ಹೊಗೆಯನ್ನು ಬಹಳ ಎತ್ತರಕ್ಕೆ ಬಿಡುವಂತೆ ಕ್ರಮಕ್ಕೆಗೊಳ್ಳುವುದು. ನಮ್ಮ ಮನೆಗಳ ಪರಿಸರವನ್ನು ಸದಾ ತಂಪಾಗಿಸಲು ಮನೆಗಳ, ಸಾರ್ವಜನಿಕ ಕಟ್ಟಡಗಳ ಪರಿಸರದಲ್ಲಿ ಎಲ್ಲಿ ಸಾಧ್ಯವುಂಟೋ, ಅಲ್ಲೆಲ್ಲ ಸದಾ ಹಸುರಾಗಿರುವ ಸಸ್ಯಗಳನ್ನು ನೆಟ್ಟು ಬೆಳೆಸುವ ಪ್ರಾಧಾನ್ಯತೆಯನ್ನು ಜನರಿಗೆ ತಿಳಿಸುವುದು. ಅದೇ ರೀತಿ ಇತರ ಪ್ರದೇಶಗಳಲ್ಲಿ ಕೂಡ ಗಿಡಮರಗಳನ್ನು ನೆಟ್ಟು ಬೆಳೆಸುವಂತೆ ಪ್ರೋತ್ಸಾಹ ನೀಡುವುದು. ಪ್ರತಿವರ್ಷ 'ವನಮಹೋತ್ಸವ'ವನ್ನು ಬಹಳ ವಿಜೃಂಭಣೆಯಿಂದ ಆಚರಿಸುವುದು.

ನಿರಂತರವಾಗಿ ಓಡಾಡುವ ವಾಹನಗಳ ಶಬ್ಧ, ಕಾರ್ಖಾನೆಗಳ ಯಂತ್ರಗಳ ಶಬ್ಧ, ಕಲ್ಲು ಕಡಿಯುವ ಯಂತ್ರಗಳ ನಾದ, ಧ್ವನಿವರ್ಧಕಗಳ ಸ್ವರ ಇವೆಲ್ಲ ನಮ್ಮ ಕಿವಿಗಡಚಿಕ್ಕುವಂತೆ ಮಾಡುತ್ತದೆ. ಇವುಗಳಿಂದ ನಮ್ಮ ಮಾನಸಿಕ ನೆಮ್ಮದಿಯು ಕೆಡುವುದಲ್ಲದೆ ಶಾರೀರಿಕ ಆರೋಗ್ಯವು ಹದಗೆಡುವುದು. ನಮ್ಮ ಜನರ ಆರೋಗ್ಯದ ದೃಷ್ಟಿಯಿಂದ ಈ ಕರ್ಕಶ ಶಬ್ದಗಳನ್ನು ತಕ್ಕಮಟ್ಟಿಗೆ ನಿಯಂತ್ರಿಸಲು ಕ್ರಮ ಕೈಗೊಳ್ಳುವುದು ಅತೀ ಅಗತ್ಯ. ರಾತ್ರಿ ವೇಳೆಯಲ್ಲಿ ಕೆಂಪು ಕಲ್ಲು ಕಡಿಯುವುದು ಹಾಗೂ ಕಪ್ಪುಕಲ್ಲು ಕಾರ್ಖಾನೆ ಕಾರ್ಯಾಚರಿಸದಂತೆ ಮಾಡುವುದು, ಧ್ವನಿವರ್ಧಕ, ಅದೇ ರೀತಿ ಇತರ ಸಂಗೀತೋಪಕರಣಗಳ ಬಳಕೆ ಇತ್ಯಾದಿಗಳ ಮೇಲೆ ನಿಯಂತ್ರಣ ಹೇರುವುದು.

ನಾವಿರುವ ಪರಿಸರದಲ್ಲಿ ನದಿ, ನಾಲೆ, ಸರೋವರ, ಕೆರೆ, ಬಾವಿಗಳ ನೀರಿನ ಬಣ್ಣ, ವಾಸನೆ, ರುಚಿ ಇವುಗಳ ಗುಣಮಟ್ಟ ಕಾದಿರಿಸುವುದು. ಏನಾದರೂ ಲೋಪದೋಷಗಳಿದ್ದಲ್ಲಿ ಕೂಡಲೇ ಪರಿಸರ ಮಾಲಿನ್ಯ ನಿಯಂತ್ರಣ. ಮಂಡಲಿಗೆ ವಿಷಯ ತಿಳಿಸಿ ಮಲಿನ ನೀರು ಶುದ್ಧಗೊಳಿಸುವ ಏರ್ಪಾಡು ಮಾಡುವುದು. ನೀರಿನ ಮಲಿನತೆಯೇ ಹಲವಾರು ರೋಗಗಳ ಹುಟ್ಟಿಗೆ ಕಾರಣವೆಂದು ನಾವು ತಿಳಿದಿರುತ್ತೇವೆ. ನೈರ್ಮಲ್ಯ ಮತ್ತು ಆರೋಗ್ಯ ಒಂದಕ್ಕೊಂದು ಪೂರಕ. ಆದ್ದರಿಂದ ನೈರ್ಮಲ್ಯ ಕೆಡದಂತೆ ನೋಡಿಕೊಳ್ಳಬೇಕಾದದ್ದು ಪ್ರತಿಯೊಬ್ಬ ಮಾನವನ ಆದ್ಯ ಕರ್ತವ್ಯವೆಂದು ಜನ ಸಾಮಾನ್ಯರಿಗೂ ತಿಳಿಯಪಡಿಸುವುದು.

ಆರೋಗ್ಯ ಸಂಸ್ಥೆಗಳು - ಮೌಲ್ಯ ಮಾಪನ

ಮಾನವ ಜೀವನದ ಸಫಲತೆ, ಧರ್ಮ, ಅರ್ಥ, ಕಾಮ, ಮತ್ತು ಮೋಕ್ಷ ಪಡೆಯುವುದೇ ಆಗಿದೆ. ಆದರೆ ಎಲ್ಲಕ್ಕೂ ಆಧಾರ ಸ್ತಂಭ ಆರೋಗ್ಯ ಭಾಗ್ಯವೇ ಆಗಿದೆ. ರೋಗ ರಹಿತ ಜೀವನವೇ ಸುಖ ಜೀವನ. ರೋಗ ರಹಿತ ವ್ಯಕ್ತಿಗೆ ಸುಖ ಜೀವನವನ್ನು ಸಾಗಿಸಲು ಸಾಧ್ಯ ಎನ್ನುವುದು

ನಾವು ಮರೆಯಬಾರದು. ಕೇವಲ ತಾನು ತನ್ನದು ಎಂಬ ಭಾವನೆ ಮನುಷ್ಯನಲ್ಲಿ ಇರಕೂಡದು. ಇತರರ ಏಳಿಗೆಗೆ ಮನುಷ್ಯ ಶ್ರಮಿಸಬೇಕಾದುದು ಅತೀ ಅಗತ್ಯ. ಆದುದರಿಂದ ಸಾಮಾಜಿಕ ಆರೋಗ್ಯದ ಬಗ್ಗೆ ನಾವು ಎಚ್ಚರ ವಹಿಸಬೇಕು.

ರೋಗಗ್ರಸ್ತ ವ್ಯಕ್ತಿಗೆ ಸ್ವತಹ ಏಳಿಗೆ ಹೊಂದುವುದಕ್ಕಾಗಲೀ, ಕುಟುಂಬದ ಏಳಿಗೆ ಮಾಡುವುದಕ್ಕಾಗಲಿ ಅಥವಾ ದೇಶವನ್ನು ಉನ್ನತಸ್ಥಿತಿಗೆ ಕೊಂಡೊಯ್ಯುವುದಕ್ಕಾಗಲೀ ಸಾಧ್ಯವಿಲ್ಲ. ಯಾವ ದೇಶದ ಪ್ರಜೆ ಅಸ್ವಸ್ಥನೂ, ಅಶಕ್ತನೂ ಆಗಿರುತ್ತಾನೋ ಅಂಥ ವ್ಯಕ್ತಿ ದೇಶದ ಆರ್ಥಿಕ ಉನ್ನತಿಯನ್ನಾಗಲೀ ಸಾಮಾಜಿಕ ಉನ್ನತಿಯಾಗಲೀ ಮಾಡಲು ಸಾಧ್ಯವಿಲ್ಲ. ದೇಶದ ನಿರ್ಮಾಣ, ದೇಶದ ಉನ್ನತಿ ಬಾಹ್ಯ ಮತ್ತು ಆಂತರಿಕ ಶತ್ರುಗಳಿಂದ ದೇಶದ ರಕ್ಷಣೆ ಮತ್ತು ದೇಶವನ್ನು ಸಮೃದ್ಧ ಗೊಳಿಸುವುದು ಅಲ್ಲಿನ ನಾಗರಿಕರನ್ನು ಅವಲಂಬಿಸಿರುತ್ತದೆ.

ನಮ್ಮ ದೇಶದ ಭವಿಷ್ಯದ ಬಗ್ಗೆ ನಾವು ಚಿಂತಿಸಬೇಕಾಗಿದೆ. ಇಂದಿನ ಮಕ್ಕಳೇ ಮುಂದಿನ ಜನಾಂಗ. ಆದುದರಿಂದ ನಮ್ಮ ಮಕ್ಕಳ ಆರೋಗ್ಯದ ಬಗ್ಗೆ ನಾವು ಚಿಂತಿಸಬೇಕಾಗಿದೆ. ಅಸ್ವಸ್ಥ ವಿದ್ಯಾರ್ಥಿ ಎಂದಿಗೂ ಶ್ರೇಷ್ಠ ವಿದ್ಯಾರ್ಥಿಯಾಗಲು ಸಾಧ್ಯವಿಲ್ಲ. ಸ್ತ್ರೀ ಆರೋಗ್ಯದ ಬಗ್ಗೆ ನಾವು ಆಧ್ಯತೆಯನ್ನು ಕೊಡಬೇಕಾಗಿದೆ. ಆದ್ದರಿಂದ ಆರೋಗ್ಯವು ಎಲ್ಲ ದೃಷ್ಟಿಯಿಂದ ಮಹತ್ವ ಪೂರ್ಣವಾಗಿದೆ.

ನಮ್ಮ ಆರೋಗ್ಯದ ದೃಷ್ಟಿಯಿಂದ ಜನರಲ್ಲಿ ನಾವು ಕೆಲವು ಉತ್ತಮ ಕ್ರಮಗಳನ್ನು ಕೈಗೊಳ್ಳುವಂತೆ ಮಾಡಬೇಕಾಗಿದೆ.

ಮನುಷ್ಯ ನಾಲಿಗೆ ಚಪಲದಿಂದ ಸಿಕ್ಕಿದ್ದನ್ನು ತಿನ್ನಬಾರದು. ಧೂಮಪಾನ ಮತ್ತು ಮದ್ಯಪಾನ ಮೊದಲಾದ ದುಶ್ಚಟಗಳಿಂದ ದೂರವಿರಬೇಕು. ಮಲಿನ ಜಲ, ಗಾಳಿ ಸೇವಿಸಬಾರದು. ಪುಷ್ಟಿಕರವಾದ ಮತ್ತು ಶುದ್ಧವಾದ ಆಹಾರವನ್ನು ಉಚಿತ ಪ್ರಮಾಣದಲ್ಲಿ ಸೇವಿಸುವುದು. ಶ್ರಮ ವಹಿಸಿ ದುಡಿಯುವುದು. ಪ್ರಾತಃಕಾಲದಲ್ಲಿ ಏಳುವುದು. ಶಾರೀರಿಕ ವ್ಯಾಯಾಮ ಮಾಡುವುದು ಇತ್ಯಾದಿ ಉತ್ತಮ ಗುಣಗಳನ್ನು ಜನರು ರೂಢಿಸುವಂತೆ ಮಾಡುವುದು.

ಸಾರ್ವಜನಿಕ ಆರೋಗ್ಯವನ್ನು ಕಾಪಾಡುವ ದೃಷ್ಟಿಯಿಂದ ನಮ್ಮ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಕಾರ್ಯದಕ್ಷತೆಯನ್ನು ವೃದ್ಧಿಸುವುದು. ನಮ್ಮ ಪಂಚಾಯತಿನ ಪ್ರತಿವಾರ್ಡುಗಳಿಗೆ ಒಂದಂತೆ PHCಗಳನ್ನು ತೆರೆಯುವುದು. (ಈಗ ಇಲ್ಲದ ವಾರ್ಡುಗಳಲ್ಲಿ ಮಾತ್ರ) ಆರೋಗ್ಯ ಕೇಂದ್ರಗಳಲ್ಲಿ ಹೆಚ್ಚಿನ ಎಲ್ಲಾ ಸೌಲಭ್ಯಗಳು ಲಭಿಸುವಂತೆ ಮಾಡುವುದು.

ಈಗ ನಮ್ಮ ಪಂಚಾಯತು ವ್ಯಾಪ್ತಿಯಲ್ಲಿರುವ Primary Health Centreನಲ್ಲಿ ಕೆಲವು ಸಮಸ್ಯೆಗಳಿವೆ. ಕೇವಲ ಓರ್ವ Civil Surgeonರ ಸೇವೆ ಸಾರ್ವಜನಿಕರಿಗೆ ಲಭ್ಯವಾಗುತ್ತಿದೆ. ಮುಂಬರುವ ವರ್ಷಗಳಲ್ಲಿ ಎಲ್ಲಾ ರೋಗಗಳಿಗೆ ಸಂಬಂಧಿಸಿದ ತಜ್ಞ ವೈದ್ಯರ ಸೇವೆ ಸಿಗುವಂತೆ ಮಾಡುವುದು ನಮ್ಮ ಉದ್ದೇಶವಾಗಿದೆ. ವಾರದ ನಿರ್ದಿಷ್ಟ ದಿನಗಳಲ್ಲಿ ತಜ್ಞರು ಆರೋಗ್ಯ ಕೇಂದ್ರಕ್ಕೆ ಭೇಟಿ ನೀಡುವಂತೆ ಮಾಡುವುದು.

ಪ್ರತಿ ವಾರ್ಡುಗಳಲ್ಲಿ ತೆರೆಯುವ ಆರೋಗ್ಯ ಕೇಂದ್ರಗಳಲ್ಲಿ Civil Engineer ರ ಸೇವೆ ಲಭಿಸುವಂತೆ ಮಾಡುವುದು. ಅಲ್ಲಿ ಹೆಚ್ಚಿನ ಸಿಬ್ಬಂದಿಗಳನ್ನು ನೇಮಿಸುವುದು. ಈಗ ನಮ್ಮ ಪಂಚಾಯತಿನಲ್ಲಿ ಒಂದು Primary Health Centre ವರ್ಕಾಡಿ ಮತ್ತು FWO Pathur ಹಾಗೂ FWO Pavoor ಇವು ಸಾರ್ವಜನಿಕ ರಂಗದಲ್ಲಿರುವ ಆರೋಗ್ಯ ಕೇಂದ್ರಗಳಾಗಿವೆ.

ಖಾಸಗೀ ರಂಗದಲ್ಲಿ ಕೆಲವು ಅನುಭವೀ ವೈದ್ಯರ ಆಸ್ಪತ್ರೆಗಳಿವೆ. ಈ ಸಂಸ್ಥೆಗಳ ಸೇವೆ ನಮ್ಮ ಆರೋಗ್ಯದ ದೃಷ್ಟಿಯಿಂದ ಏನೇನೂ ಸಾಲದು. ಆಧುನಿಕ ರೀತಿಯ Nursing Homeಗಳು ಇಲ್ಲದಿರುವುದು ದುರದೃಷ್ಟಕರ. ಸರಕಾರಿ ರಂಗದಲ್ಲಿರುವ ಮೇಲೆ ಹೇಳಿದ 3 ಕೇಂದ್ರಗಳಿಗೆ ಸಂಬಂಧಿಸಿ ಕೇವಲ 12 ಮಂದಿ ಸಿಬ್ಬಂದಿ ವರ್ಗದವರಿರುವುದು, ನಮ್ಮ ಅವಶ್ಯಕತೆಗೆ ಏನೇನೂ ಸಾಲದು. ಇವರಿಗೆ ನಮ್ಮ ಇಡೀ ಪಂಚಾಯತಿನ ಆರೋಗ್ಯ ಪಾಲನೆಯ ಹೊಣೆಯನ್ನು ಹೊರಲು ಸಾಧ್ಯವಾಗುತ್ತಿಲ್ಲ.

ಈಗ ಇರುವ PHC Varkady ಯನ್ನು ಒಂದು ಸರ್ವಸಜ್ಜಿತ ಸರಕಾರೀ ಆಸ್ಪತ್ರೆಯನ್ನಾಗಿ ಪರಿವರ್ತಿಸಿ ಜನತೆಗೆ ದಿವಸದ ಇಪ್ಪತ್ತನಾಲ್ಕು ಗಂಟೆ ಕೂಡ ಸೇವೆ ಲಭಿಸುವಂತೆ ಮಾಡುವುದು ನಮ್ಮ ಮುಖ್ಯ ಉದ್ದೇಶವಾಗಿದೆ. ಈ ಆಸ್ಪತ್ರೆಯಲ್ಲಿ ರಕ್ತ ಪರೀಕ್ಷೆ ಘಟಕ, X-ray unit ಶಸ್ತ್ರಕ್ರಿಯೆ ನಡೆಸುವ ಘಟಕ, 'ಹೆರಿಗೆ'ಗೆ ಸಂಬಂಧಿಸಿದ ಸ್ತ್ರೀ ತಜ್ಞರ ಸೇವೆ ಇತ್ಯಾದಿ ನಮ್ಮ ಜನತೆಯ ಅವಶ್ಯಕತೆಗಳನ್ನು ಪೂರೈಸುವುದಾಗಿದೆ. ಈ ಆಸ್ಪತ್ರೆಯಲ್ಲಿ ಸಾಮಾನ್ಯ ದರ್ಜೆಯ ಒಳ ರೋಗಿಗಳಿಗೆ ಸುಮಾರು 100ಕ್ಕೂ ಮೇಲ್ಪಟ್ಟು ಹಾಸಿಗೆಗಳ ವ್ಯವಸ್ಥೆ ಮಾಡುವುದು. ಸಾರ್ವಜನಿಕ ಆರೋಗ್ಯದ ದೃಷ್ಟಿಯಿಂದ ನಮ್ಮ PHC Varkadyಯು ಉತ್ತಮ ರೀತಿಯಲ್ಲಿ ಕಾರ್ಯಾಚರಿಸುತ್ತಿರುವುದು ಶ್ಲಾಘನೀಯ.

1992 ರಿಂದ 1996 ಒಕ್ಟೋಬರ ತಿಂಗಳವರೆಗೆ ಒಟ್ಟು 32750 ಹೊರ ರೋಗಿಗಳಿಗೆ ಚಿಕಿತ್ಸೆಯನ್ನು ನೀಡಲಾಗಿದೆ.

1992-93	ಹೊರ ರೋಗಿಗಳ ಸಂಖ್ಯೆ	9219
11993-94	"	6910
1994-95	"	10,258

1995-96	6363
ಒಟ್ಟು ರೋಗಿಗಳ ಸಂಖ್ಯೆ	32750

PHC VORKADY ಇದರಲ್ಲಿ ಚಿಕಿತ್ಸೆಯ-ಮೂಲಕ ಗುಣಪಡಿಸಿದ ರೋಗಗಳು ಮತ್ತು ರೋಗಿಗಳ ಸಂಖ್ಯೆ

ವರ್ಷ	ಒಳ ರೋಗಿಗಳು	ಹೊರ ರೋಗಿಗಳು	ಚರ್ಮ ರೋಗಿಗಳು	ಸಾಂಕ್ರಾಮಿಕ ರೋಗಿಗಳು	ವಾತ ರೋಗಿಗಳು	ವಿಷಮಶೀತ	ಇತರರು	ಒಟ್ಟು
1992-93	NIL	9219	1000	2000	100	-	6119	9219
1993-94	NIL	6910	1200	1000	150	-	4560	6910
1994-95	NIL	10258	2000	3000	300	-	4958	10258
1995-96	NIL	6363	1500	2000	400	-	2463	6363
		32750	5700	8000	950	-	18100	32750

ಸಾಂಕ್ರಾಮಿಕ ರೋಗಗಳಿಗೆ ಸಂಬಂಧಿಸಿದ ವಿವರ

ವರ್ಷ	ನಿರೋಧಪಡಿಸಿದ ರೋಗಕ್ಕೆ ಸಂಬಂಧಿಸಿದ	ಗಳಯುಂದಪಡಿಸಿದ ರೋಗಿಗಳು	ವ್ಯಾಪಕತೆಯ ರೋಗ ಪಡಿಸಿದ	ಇತರ
1993-94	1000	300	100	5510
1994-95	2000	500	50	7708
1995-96	900	200	60	5203

ಜನನ ಮರಣ ಸಂಖ್ಯೆ -ರೋಗ ಸ್ಥಿತಿ

ವರ್ಷ	ಜನನ	ಮರಣ	ಗರ್ಭಾವಸ್ಥೆಯಲ್ಲಿ ಮರಣ
-1-	-2-	-3-	-4-
1993-94	341	93	NIL
1994-95	305	97	NIL
1995-96	352	116	NIL

ಪಕ್ಕನೆ ಹರಡುವ ಸಾಂಕ್ರಾಮಿಕ ರೋಗಗಳು. ಅದೇ ರೀತಿ ಭೀಕರ ರೋಗಗಳಿಗೆ ಸರಿಯಾದ ಚಿಕಿತ್ಸೆ ಮಾಡುವುದರಿಂದಲಾಗಿ ಮರಣ ಸಂಖ್ಯೆಯು ಇತ್ತೀಚೆಗಿನ ವರ್ಷಗಳಲ್ಲಿ ತೀರ ಇಳಿಮುಖವಾಗುತ್ತಿದೆ. ಆದರೆ 1995-96ರಲ್ಲಿ ಸ್ವಲ್ಪ ಹೆಚ್ಚಳ ಕಂಡು ಬರುತ್ತಿದೆ. ಇಲ್ಲಿ ಆರೋಗ್ಯ ಸಂಸ್ಥೆಗಳ ಸೇವನೆಯನ್ನು ಪ್ರಶಂಶಿಸಬಹುದಾಗಿದೆ.

ಕುಟುಂಬ ಯೋಜನೆ -ಕುಟುಂಬ ಕಲ್ಯಾಣ

ನಮ್ಮ ಆರೋಗ್ಯ ಕೇಂದ್ರದ ಸಿಬ್ಬಂದಿಗಳು ಸ್ಥಳೀಯ ಸಂಘ ಸಂಥೆಗಳ ಪದಾಧಿಕಾರಿಗಳು ನಮ್ಮ ಅಧ್ಯಾಪಕ ವೃಂದದವರು ಕುಟುಂಬ ಯೋಜನೆಯ ಮಹತ್ವದ ಬಗ್ಗೆ ಜನಸಾಮಾನ್ಯರಿಗೆ ಅರಿವು ಮೂಡಿಸುತ್ತಿದ್ದಾರೆ. ಆದರೂ ನಮ್ಮಲ್ಲಿನ ಜನತೆ ಇದರ ಬಗ್ಗೆ ಜಾಗ್ರತರಾದಂತೆ ಕಂಡು ಬರುತ್ತಿಲ್ಲ. ಕುಟುಂಬ ಕಲ್ಯಾಣದ ಬಗ್ಗೆ ನಮ್ಮ ಜನತೆಗೆ ಇನ್ನೂ ಸ್ಪಷ್ಟವಾದ ಜ್ಞಾನವನ್ನು ಮೂಡಿಸುವಂತೆ ನಮ್ಮ ವಿದ್ಯಾವಂತ ಜನ ಕ್ರಮಕ್ಕೆಗೊಳ್ಳಬೇಕಾಗಿದೆ. ನಾವು ಎಷ್ಟೇ ಪ್ರಯತ್ನಿಸಿದರೂ ಜನತೆಯಲ್ಲಿ ಮನೆ ಮಾಡಿರುವ ಮೂಢನಂಬಿಕೆ, ಅಜ್ಞಾನಗಳನ್ನು ದೂರೀಕರಿಸಲು ಸಾಧ್ಯವಾಗುತ್ತಿಲ್ಲ. ಮುಂಬರುವ ವರ್ಷಗಳಲ್ಲಿ ವ್ಯಾಪಕವಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಉದ್ದೇಶವಿದೆ.

ಚಿಕ್ಕ ಸಂಸಾರ -ಸುಖಕ್ಕೆ ಆಧಾರ ಎನ್ನುವ ಕುಟುಂಬ ಯೋಜನೆಯ ಮಂತ್ರವನ್ನು ನಮ್ಮ ಜನತೆ ಪಠಿಸುವಂತೆ ಮಾಡಬೇಕಾಗಿದೆ. ದೃಶ್ಯ, ಶ್ರಾವ್ಯ ಉಪಕರಣಗಳ ಮೂಲಕ ಭಿತ್ತಿ ಪತ್ರಿಕೆಗಳ ಮೂಲಕ ಇದನ್ನು ಹೆಚ್ಚು ಪ್ರಚಾರ ಪಡಿಸಬಹುದೆಂಬ ಆಶಯ ನಮ್ಮದಾಗಿದೆ. ಕುಟುಂಬ ಯೋಜನೆಯ ಬಗ್ಗೆ ಶಸ್ತ್ರಕ್ರಿಯೆ - ಯಾ ಇನ್ನಿತರ ಕ್ರಮಗಳನ್ನು ಕೈಗೊಂಡ ನಾಗರಿಕರನ್ನು ಗುರುತಿಸಿ ಅವರನ್ನು ಸಾರ್ವಜನಿಕ ವೇದಿಕೆಗಳಲ್ಲಿ ಗೌರವಿಸುವುದು ಹೆಚ್ಚು ಸೂಕ್ತ. ಇದರಿಂದ ಇತರರು ಸ್ಫೂರ್ತಿಗೊಳ್ಳುತ್ತಾರೆ. ಕುಟುಂಬ ಯೋಜನಾ ಸೂತ್ರಗಳನ್ನು ಅಳವಡಿಸಿದವರಿಗೆ ಸವಲತ್ತುಗಳನ್ನು ಕೊಡುವುದು. ಉಚಿತ ಪಡಿತರ ವ್ಯವಸ್ಥೆ, ಮಕ್ಕಳ ವಿದ್ಯಾಭ್ಯಾಸಕ್ಕೆ ಸಂಬಂಧಿಸಿ ಹೆಚ್ಚಿನ ನೆರವು ಇತ್ಯಾದಿ.

ಏರುತ್ತಿರುವ ಜನಸಂಖ್ಯೆ ನಮ್ಮ ಅಭ್ಯುದಯಕ್ಕೆ ಮಾರಕ ಎನ್ನುವುದನ್ನು ನಮ್ಮ ಜನತೆಗೆ ತಿಳಿಯಪಡಿಸುವುದು ಅತೀ ಅಗತ್ಯವಾಗಿದೆ. ನಮ್ಮ ಪಂಚಾಯತಿನ, ಅದೇ ರೀತಿ ನಮ್ಮ ರಾಜ್ಯದ, ದೇಶದ, ಜಗತ್ತಿನ ಜನಸಂಖ್ಯೆ ದಿನದಿಂದ ದಿನಕ್ಕೆ ಏರುತ್ತಿರುವುದು ದುಃಖಕರ ಸಂಗತಿಯಾಗಿದೆ. ಈ ರೀತಿ ಜನಸಂಖ್ಯೆ ಹೆಚ್ಚಳದಿಂದ ನಮ್ಮ ಪ್ರಾಥಮಿಕ ಅವಶ್ಯಕತೆಗಳಿಗೆ ಧಕ್ಕೆ ಉಂಟಾಗುತ್ತಿದೆ. ಜನಸಂಖ್ಯೆಯಿಂದ ಉದ್ಭವಿಸುವ ಬಹುವಿಧ ಸಮಸ್ಯೆಗಳನ್ನು ನಿವಾರಿಸಲು ನಿವಾರಣೋಪಾಯಗಳನ್ನು ಕೈಗೊಳ್ಳುವುದು ಅತೀ ಅಗತ್ಯ. ನಾವು ಕೈಗೊಳ್ಳಬೇಕೆಂದಿರುವ ಕೆಲವು ನಿಯಮಾವಳಿಗಳು.

ಕುಟುಂಬ ಚಿಕ್ಕದಾಗಿದ್ದರೆ ಅದು ಸುಖೀ ಕುಟುಂಬವಾಗಿರುತ್ತದೆಂದು ಜನರಿಗೆ ಮನವರಿಕೆ ಮಾಡುವುದು. ಅದಕ್ಕಾಗಿ ವಿಸ್ತೃತ ಶಿಕ್ಷಣ ಯೋಜನೆಯನ್ನು ಕೈಗೊಳ್ಳುವುದು. ಇದರಲ್ಲಿ ಸಂತಾನೋತ್ಪಾದನೆ, ವಿವಾಹ ಮತ್ತು ಮಕ್ಕಳ ಶಿಕ್ಷಣವನ್ನು ಸೇರಿಸುವುದು. ಪ್ರೌಢಶಾಲೆಯ ಹಂತದಲ್ಲೇ ಮಕ್ಕಳಿಗೆ ಜನಗಣತಿಯ ಪರಿಚಯ ಮಾಡಿಕೊಡುವುದು.

ಯಾವುದೇ ಪ್ರಕೃತಿ ದತ್ತ ವಸ್ತುಗಳನ್ನು ವ್ಯರ್ಥವಾಗಿ ಬಳಸದಂತೆ ತಿಳುವಳಿಕೆ ನೀಡುವುದು. ಅಂಧ ವಿಶ್ವಾಸವನ್ನು ತೊಡೆದು ಹಾಕಿ ಕುಟುಂಬ ಯೋಜನೆಯ ಮಹತ್ವವನ್ನು ಜನರಿಗೆ ಮನವರಿಕೆ ಮಾಡುವುದು. ಕುಟುಂಬ ಯೋಜನೆಯನ್ನು ಅನುಸರಿಸಲು ಅಗ್ಗದ ಬೆಲೆಯ ಸುಲಭವಾಗಿ ಉಪಯೋಗಿಸಲಾಗುವ ವಿಶ್ವಾಸನೀಯ ಸಾಧನಗಳನ್ನು ಜನತೆಗೆ ಉಚಿತವಾಗಿ ನೀಡುವುದು.

ಮಿತ ಸಂತಾನ ಇರುವ ಕುಟುಂಬದ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ ಮತ್ತು ಇತರ ಸೌಲಭ್ಯಗಳನ್ನು ಒದಗಿಸುವುದರ ಮೂಲಕ ಬೇರೆಯವರನ್ನು ಸಹ ಆಕರ್ಷಿಸಿ, ಅವರೂ ಸಹ ಜನನ ನಿಯಂತ್ರಣ ಅನುಸರಿಸುವಂತೆ ಮಾಡುವುದು. ದೇಶದ ಅದೇ ರಾತಿ ನಮ್ಮ ಪಂಚಾಯತಿನ ಅರ್ಹ ದಂಪತಿಗಳು ಕುಟುಂಬ ಯೋಜನೆಯನ್ನು ಅನುಸರಿಸಲೇಬೇಕೆಂಬ ಕಾನೂನು ಕಡ್ಡಾಯಗೊಳಿಸುವುದು. ಒಟ್ಟಿನಲ್ಲಿ ನಮ್ಮ ಜನತೆಗೆ ಕುಟುಂಬ ಯೋಜನೆಯ ಮಹತ್ವದ ಬಗ್ಗೆ ಅರಿವು ಮೂಡಿಸುವುದು. ಜನತೆಯನ್ನು ಸುಖೀ ಜೀವನ ಸಾಗಿಸುವಂತೆ ಪ್ರೋತ್ಸಾಹಿಸುವುದು.

ಶಿಶು ಮರಣ ಸಂಖ್ಯೆ

ಶಿಶು ಮರಣ ಸಂಖ್ಯೆಯು ಇತ್ತೀಚೆಗಿನ ವರ್ಷಗಳಲ್ಲಿ ತೀರಾ ಕಡಿಮೆ ಇಲ್ಲವೆಂದೇ ಹೇಳಬೇಕು. ಶಿಶು ಮರಣ ಸಂಖ್ಯೆಯನ್ನು ಹತೋಟಿಯಲ್ಲಿಡಲು, ನಿಯಂತ್ರಿಸಲು ಸಾಧ್ಯವಾದದ್ದು. ಆರೋಗ್ಯ ಕೇಂದ್ರಗಳ ಸಿಬ್ಬಂದಿಗಳ ಕಾರ್ಯದಕ್ಷತೆಯಿಂದ ಎಂದು ಹೆಮ್ಮೆಯಿಂದ ಹೇಳಬಹುದಾಗಿದೆ. ಆರೋಗ್ಯ ಕೇಂದ್ರದ ಸಿಬ್ಬಂದಿಗಳು ಅಲ್ಲಲ್ಲಿ ತಮ್ಮ ಕಾರ್ಯಾಲಯಗಳನ್ನು ತೆರೆದು ಅಲ್ಲಲ್ಲಿ ಶಿಶುಗಳಿಗೆ ಚುಚ್ಚು ಮದ್ದು (ಲಸಿಕೆ)ಗಳು ನೀಡುತ್ತಿದ್ದಾರೆ. ಇವರು ಗರ್ಭಿಣಿ ಸ್ತ್ರೀಯರ ಆರೋಗ್ಯದ ಬಗ್ಗೆಯೂ ಎಚ್ಚರ ವಹಿಸುತ್ತಿರುವುದು ತುಂಬಾ ಶ್ಲಾಘನೀಯ.

ಮಕ್ಕಳ ಆರೋಗ್ಯ, ಪೋಷಣಾ ಧಾರಣೆ

ಪ್ರಾಯ	ಸಾಧಾರಣ		1ನೇ ಗ್ರೇಡ್		2ನೇ ಗ್ರೇಡ್		3ನೇ ಗ್ರೇಡ್	
	Boy	Girl	Boy	Girl	Boy	Girl	Boy	Girl
1ನೇ ವರ್ಷದ ಕೆಳಗಿನವು	150	140	25	30	30	40	32	27
1ರಿಂದ 3ರ ವರೆಗೆ	300	350	150	175	30	50	32	42
3-5ರ ವರೆಗೆ	500	400	200	350	50	50	20	50

ಶಿಶು ಆರೋಗ್ಯಕ್ಕೆ ಸಂಬಂಧಿಸಿ ಮಕ್ಕಳ ಹಾಗೂ ಗರ್ಭಿಣಿ ಸ್ತ್ರೀಯರಿಗೆ ಕೊಟ್ಟ ಪ್ರತಿರೋಧ ಚುಚ್ಚುಮದ್ದುಗಳ ವಿವರ

ಪ್ರಾಯ (ವರ್ಷಗಳು)	ಬಿ.ಸಿ.ಜಿ.	ಡಿ.ಪಿ.ಟಿ.				ಪೋಲಿಯೋ				ಡಿ.ಟಿ ಮಿಡಿಲಿಸ್			
		1D	2D	3D	BD	1D	2D	3D	BD	1D	2D	3D	BD
ಫಲಾನುಭವಿಗಳ ಸಂಖ್ಯೆ													
ಮಕ್ಕಳು	495	433		433	433		433	433	433				445
ಬೂಸ್ಟರ್		4	42	42	42	354	42	42	42	354		48	
ಬೂಸ್ಟರ್											117	108	474

ಟಿಟಾನಸ್ ಟೋಕ್ಸೋಯಿಸ್ (TT)

	1D	2D	BD
ಗರ್ಭಿಣಿಗಳಿಗೆ	384	378	80

ಪರಂಪರಾಗತ ವೈದ್ಯ

ಪರಂಪರಾಗತವಾದ ವೈದ್ಯ ಪದ್ಧತಿ ಈಗಲೂ ನಮ್ಮ ಪಂಚಾಯತಿನ ಮೂಲೆ ಮೂಲೆಗಳಲ್ಲಿ ಪ್ರಚಾರದಲ್ಲಿದೆ. ಆಧುನಿಕ ರೀತಿಯ ಔಷಧೋಪಚಾರಗಳಿಂದ ಗುಣಪಡಿಸೆಲು ಸಾಧ್ಯವಿಲ್ಲದ ಕೆಲವು ಭೀಕರ ರೋಗಗಳನ್ನು ಈ ವೈದ್ಯರು ಗುಣಪಡಿಸುತ್ತಾರೆ. ಆರೋಗ್ಯದ ದೃಷ್ಟಿಯಿಂದ ಹಳ್ಳಿ ಮದ್ದೇ ಹೆಚ್ಚು ಸೂಕ್ತವೆನ್ನಬಹುದು. ರೋಗದ ಆರಂಭದ ಹಂತದಲ್ಲಿ ಚಿಕಿತ್ಸೆಗೆ ತೊಡಗಿದರೆ ರೋಗವು ಬೇಗನೆ ಗುಣಮುಖವಾದೀತು.

ಹಳ್ಳಿ ವೈದ್ಯರ ಔಷಧಿಗಳು ಗಿಡಮೂಲಿಕೆಗಳಿಂದ ತಯಾರಿಸಿದವುಗಳು. ಕೆಲವು ಉತ್ತಮ ರೀತಿಯ ಬೇರುಗಳು, ಕಾಯಿಗಳು, ತೈಲಗಳಾಗಿವೆ. ಆಧುನಿಕ ವೈದ್ಯಕೀಯ ವಿಧಾನವು ಹೆಚ್ಚು ಪ್ರಚಾರವಾದಂತೆ ಹಳ್ಳಿ ವೈದ್ಯಕೀಯದ ಬಗ್ಗೆ ಜನಸಾಮಾನ್ಯರಿಗೂ ಕೂಡ ತಾತ್ಸಾರ ಭಾವನೆ ಬರುವಂತಾಗಿದೆ. ಪರಂಪರಾಗತವಾದ ವೈದ್ಯಕೀಯ ಪದ್ಧತಿಯನ್ನು ಅವಲಂಬಿಸಿರುವ ವೈದ್ಯರನ್ನು ಗುರುತಿಸಿ ಅವರಿಗೆ ಬೇಕು ಬೇಕಾದ ಔಷಧೀಯ ಗಿಡಮೂಲಿಕೆಗಳನ್ನು ಬೆಳೆಸಲು ನಾವು ಸಹಾಯ ಸಹಕಾರಗಳನ್ನು ನೀಡುವುದು ಅತೀ ಅಗತ್ಯ. ಅಂತಹವೈದ್ಯರನ್ನು ಗುರುತಿಸಿ ಅವರಿಗೆ ಪ್ರೋತ್ಸಾಹ ನೀಡುವುದು. ಅವರನ್ನು ಗೌರವಿಸುವುದು ನಮ್ಮ ಮುಖ್ಯ ಉದ್ದೇಶ.

ನಮ್ಮ ಪಂಚಾಯತಿನಲ್ಲಿ ಪರಂಪರಾಗತ ವೈದ್ಯ ಪದ್ಧತಿಯಂತೆ ಕಾರ್ಯವೆಸಗುವ ಆಸ್ಪತ್ರೆಯನ್ನು ತೆರೆಯುವುದು ಅತೀ ಅಗತ್ಯ. ಯೋಗ ಚಿಕಿತ್ಸಾ ಪದ್ಧತಿಯ ಒಂದು ಚಿಕಿತ್ಸಾಲಯವನ್ನು ತೆರೆಯುವುದು.

ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಗಳ ಅಭಿವೃದ್ಧಿ

ನಮ್ಮ ಪಂಚಾಯತಿನಲ್ಲಿ 163 ಪರಿಶಿಷ್ಟ ವರ್ಗಗಳ ಮತ್ತು 72 ಪರಿಶಿಷ್ಟ ಜಾತಿಗಳ ಕುಟುಂಬಗಳಿವೆ. ಈ ಕುಟುಂಬಗಳಲ್ಲಿ 475 ಗಂಡಸರು ಮತ್ತು 452 ಹೆಂಗಸರು ಒಟ್ಟು 927 ಮಂದಿ ಪರಿಶಿಷ್ಟ ವರ್ಗದವರೂ 399 ಗಂಟಸರೂ 355 ಹೆಂಗಸರೂ ಸೇರಿ ಒಟ್ಟು 754 ಮಂದಿ ಪರಿಶಿಷ್ಟ ಜಾತಿಗೆ ಸೇರಿದವರಿದ್ದಾರೆ. ಇದು ನಮ್ಮ ಪಂಚಾಯತಿನ ಜನಸಂಖ್ಯೆಗೆ ಹೋಲಿಸಿದರೆ 4.45% ಪರಿಶಿಷ್ಟ ವರ್ಗದವರು ಮತ್ತು 3.62% ಪರಿಶಿಷ್ಟ ಜಾತಿಯವರಾಗುತ್ತಾರೆ.

ನಮ್ಮಲ್ಲಿರುವ SC/ST ಕಾಲನಿಗಳು ಸಣ್ಣದಾಗಿಲ್ಲ. ವಿಶಾಲವಾದ ಸುಂದರ ತಾಣಗಳಲ್ಲಿ ಈ ಕೊಲನಿಗಳು ನಿರ್ಮಿಸಲ್ಪಟ್ಟಿವೆ. ಪರಿಶಿಷ್ಟ ವರ್ಗ (ST)ಕ್ಕೆ ಸೇರಿದವರಲ್ಲಿ 171 ಮಂದಿ ಕೃಷಿಕರಾಗಿದ್ದಾರೆ. ನಮ್ಮ ಪಂಚಾಯತಿನ ಎರಡನೇ ವಾರ್ಡ್‌ಗೆ ಸೇರಿದ ಪ್ರದೇಶದಲ್ಲಿ ಅಂಬೇಡ್ಕರ್ (ST) ಕಾಲೊನಿಯೊಂದಿದೆ. ಇಲ್ಲಿನ ಪ್ರಕೃತಿ ರಮಣೀಯವಾಗಿದ್ದರೂ, ಅದು ಇನ್ನೂ ಅಭಿವೃದ್ಧಿಯಾಗದೆ ಇರುವುದು ವಿಷಾದನೀಯ. ಇಲ್ಲಿ ಮರಾಠಿ, ಕೊರಗರು, ಗೌಡರು (ಕುಡಿಯ) ಪರಿಶಿಷ್ಟ ವರ್ಗದವರಿಗೆ ಸೇರಿದವರಾಗಿರುವರು. ನಮ್ಮ ಕೊರಗ ಜನಾಂಗದ ಕುಲಕಸುಬು ಬುಟ್ಟಿ ಹೆಣೆಯುವುದಾಗಿದೆ. ಅವರಿಗೆ ಬುಟ್ಟಿ ಹೆಣೆಯುವ ಕೇಂದ್ರವೊಂದನ್ನು ಸುಂಕದಕಟ್ಟೆ ಪರಿಸರದಲ್ಲಿ ತೆರೆಯುವುದು ಅತೀ ಅಗತ್ಯವಾಗಿದೆ.

ಪರಿಶಿಷ್ಟ ಜಾತಿಯ ಜನರು ಸಾಮಾನ್ಯವಾಗಿ ಕೃಷಿಕರಾಗಿರುತ್ತಾರೆ. ಕೆಲವರು ಕೃಷಿ ಕೆಲಸ ಕೆಲಸ ಕೂಡ ಮಾಡುತ್ತಾರೆ. ಜೇನುಸಾಕಣೆ ಹತ್ತು ಮನೆಯವರಲ್ಲಿ ಮತ್ತೂ ಒಬ್ಬರು ಲೋಟರಿ ಮಾರುತ್ತಾರೆ. ಹೀಗಾಗಿ ಇನ್ನು ST ಮತ್ತು SCಯವರಿಗೂ ಈ ಕೆಲಸಕ್ಕೆ ಬೇಕಾದ ಧನಸಹಾಯ ಒದಗಿಸಿದರೆ ಉತ್ತಮ.

ನಮ್ಮಲ್ಲಿ ಇನ್ನೊಂದು ಮುಖ್ಯ ವಿಭಾಗ ನರಸಣ್ಣ ಜನಾಂಗದವರದ್ದು. ಇವರು ಆನೆಕಲ್ಲು ಪರಿಸರದಲ್ಲಿ ವಾಸಿಸುತ್ತಾರೆ. ಇವರು ಬಹಳ ಹಿಂದುಳಿದವರು. ಇವರಿಗೆ ವಿದ್ಯಾಭ್ಯಾಸ ಕೂಡ ಬಹಳ ಕಡಿಮೆ. ಈ ಜನಾಂಗವನ್ನು ಹಿಂದುಳಿದ ಜನಾಂಗಕ್ಕೆ ಸೇರಿಸಿ ಅವರ ಆರ್ಥಿಕ ಮಟ್ಟವನ್ನು ಸುಧಾರಿಸುವುದು ಅತೀ ಅಗತ್ಯ. ನಮ್ಮ ಪಂಚಾಯತಿನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ST ಜನಾಂಗದವರಿರುವುದರಿಂದ ಅವರ ಅವಶ್ಯಕತೆಗಳನ್ನು ಪೂರೈಸುವುದು ಪಂಚಾಯತಿನ ಮುಖ್ಯ ಕರ್ತವ್ಯವಾಗಿದೆ.

ಈ ಜನಾಂಗದ ಏಳಿಗೆಯನ್ನು ಲಕ್ಷ್ಯವಾಗರಿಸಿಕೊಂಡು ನಮ್ಮ ಪಂಚಾಯತಿನ ಮತಿಯಿಂದ ವರ್ಷದಲ್ಲಿ 4 ಮನೆಗಳನ್ನೂ 2 ಬಾವಿಗಳನ್ನೂ ಕೊಟ್ಟರೂ ಇನ್ನೂ ಕೂಡ ಹಲವಾರು ಮನೆಗಳ ಅಗತ್ಯವಿದೆ. ಈ ಜನಾಂಗದ ಅಭ್ಯುದಯಕ್ಕಾಗಿ ಇನ್ನೂ 50 ಮನೆಗಳು ಬೇಕು. ಆದರೆ ಅವರಲ್ಲಿ ಹೆಚ್ಚಿನವರಿಗೆ ಸ್ವಂತ ಭೂಮಿಯಿಲ್ಲ. ಅವರಿಗೆ ಭೂಮಿಯನ್ನು ಒದಗಿಸುವ ಕಾರ್ಯವಾಗಬೇಕಾಗಿದೆ. ಅಂತಹ ಇಪ್ಪತ್ತೆಂಟು ಕುಟುಂಬಗಳಿವೆ. ಅವರಿಗೆ ಮನೆಯ ವ್ಯವಸ್ಥೆಯಾಗಬೇಕಾಗಿದೆ.

ಕೃಷಿ

ಇಲ್ಲಿ ಸಾಧಾರಣ ಐವತ್ತು ಕೃಷಿ ಕುಟುಂಬಗಳಿವೆ. ಇವರು ಸಾಧಾರಣ ಎಲ್ಲಾ ವಿಧದ ಕೃಷಿಯನ್ನು ಮಾಡುತ್ತಾರೆ. ಪಾವೂರು, ಸೊಡಂಕೂರು, ಕತ್ತರಿಕೋಡಿ ಎಂಬಲ್ಲಿ ಹೆಚ್ಚಾಗಿ ಕೃಷಿಕ ಕುಟುಂಬಗಳು ವಾಸಿಸುತ್ತಿವೆ. ಆದರೆ ಅವರಿಗೆ ಎಲ್ಲಾ ಕಾರ್ಷಿಕ ಸೌಲಭ್ಯಗಳಿಲ್ಲ. ಕೃಷಿಕರಿಗೆ ವಿದ್ಯುತ್ ಸೌಲಭ್ಯ ಕೂಡ ಇಲ್ಲ. ಚಿಮಿಣಿ ಎಣ್ಣೆ, ಡೀಸೆಲ್ ಹೊರುವುದೇ ಕಷ್ಟವಾಗಿದೆ. ಅವರ ಮುಖ್ಯ ಕೆಲಸವೂ ಕೂಡ ಆಗಿದೆ. ಅದಕ್ಕಾಗಿ ಎಲ್ಲರಿಗೂ ರಿಯಾಯಿತಿ ದರದಲ್ಲಿ ಪರ್ಮಿಟ್ ಕೊಡುವುದು ಅಗತ್ಯವಾಗಿದೆ. ST/SC ಕುಟುಂಬದ ಕೃಷಿಕರಿಗೆ ಯಾಂತ್ರಿಕ ವ್ಯವಸ್ಥೆಯನ್ನು ರಿಯಾಯಿತಿ ದರದಲ್ಲಿ ಒದಗಿಸುವುದು. ಹಾಗೂ ಅವರಲ್ಲಿರುವ ಕೃಷಿ ಭೂಮಿಯನ್ನು ಯಾವುದೇ ಕಾರಣಕ್ಕೂ ಮಾರಬಾರದೆಂದು ಕಡ್ಡಾಯವಾದ ಕಾನೂನು ಜ್ಯಾರಿಗೆ ತರುವುದು ಅತೀ ಅಗತ್ಯವಾಗಿದೆ. ಕೃಷಿಯೋಗ್ಯವಾದ ಭೂಮಿಯನ್ನೇ ಕೆಲವು ಜನರು ಅಲ್ಲಲ್ಲಿ ಮಾರುತ್ತಿದ್ದಾರೆ. ಕೃಷಿಗೆ ಸಂಬಂಧಿಸಿ ಹೆಚ್ಚಿನ ರಿಯಾಯಿತಿಯನ್ನು SC/STಯವರಿಗೆ ಕೊಡುವುದು.

ವಿದ್ಯಾಭ್ಯಾಸ : ಶೇಕಡಾ 80 ಮಕ್ಕಳು ಹೋಗುತ್ತಿದ್ದಾರೆ. ಕೆಲವು ಕಡೆಗಳಲ್ಲಿ ಕೊಲೊನಿಗಳ ಪರಿಸರಗಳಲ್ಲೇ ಶಾಲೆಗಳಿವೆ. ಕೆಲವೆಡೆ ಮಕ್ಕಳು 6-7 ಕಿಲೋಮೀಟರ್ ದೂರ ನಡೆದೇ ಶಾಲೆಗೆ ಹೋಗಬೇಕಾದ ಪರಿಸ್ಥಿತಿಯಿದೆ. ಹತ್ತಿರ ಕೆಲವು ಶಾಲೆಗಳಿದ್ದರೂ ಅವು ಕಿರಿಯ ಪ್ರಾಥಮಿಕ ವಿದ್ಯಾಲಯಗಳಾಗಿವೆ. ಆದುದರಿಂದ ಅವರ ವಿದ್ಯಾಭ್ಯಾಸ ಹೆಚ್ಚಾಗಿ ನಾಲ್ಕನೇ ತರಗತಿಯಲ್ಲೇ ನಿಂತು ಹೋಗುತ್ತದೆ. ಈ ರೀತಿ ವಿದ್ಯಾಭ್ಯಾಸಕ್ಕೆ ತಿಲಾಂಜಲಿಯನ್ನಿತ್ತವರಲ್ಲಿ ಸುಮಾರು 75% ಜನರಿರಬಹುದು. ಹಾಗಾಗಿ ಕತ್ತರಿಕೋಡಿ ಅಂಬೇಡ್ಕರ್ ಕಾಲೊನಿಯ ಪರಿಸರದಲ್ಲಿ ST ಮಕ್ಕಳಿಗಾಗಿ ಶಾಲೆಯನ್ನು ತೆರೆಯುವುದು ಅತೀ ಅಗತ್ಯ.

ST ಮಕ್ಕಳಿಗೆ ಸಿಗುವಂತೆ SC ಮಕ್ಕಳಿಗೂ Monthly Stipund, Insentive grant ಮೊದಲಾದ ಸೌಲಭ್ಯಗಳನ್ನು ಒದಗಿಸುವುದು ಉತ್ತಮ. ಈಗ dPEP ಯೋಜನೆಯ ಪ್ರಕಾರ ST ಮಕ್ಕಳಿಗೆ ಸಿಗುವ ಸೌಲಭ್ಯಗಳನ್ನು SC ಮಕ್ಕಳಿಗೂ ಒದಗಿಸಿದರೆ ಉತ್ತಮ. ಎಲ್ಲಾ

ಮಕ್ಕಳಿಗೂ ಉಡುಗೆ ತೊಡುಗೆಗಳನ್ನು ಕೊಡುವುದು ಲೇಸು. ಇಲ್ಲಿ SC/ ST ಜನಾಂಗದವರು ಸರಕಾರಿ ಕೆಲಸಗಳಲ್ಲಿರುವುದು ತೀರಾ ವಿರಳ. ಕಾರಣ ಹೆಚ್ಚಿನ ಮಕ್ಕಳ ವಿದ್ಯಾಭ್ಯಾಸ ಪ್ರಾಥಮಿಕ ಹಂತದಲ್ಲೇ ಮೊಟಕುಗೊಳ್ಳುವುದು. ಅವರಿಗೆ ವಿದ್ಯಾಭ್ಯಾಸಕ್ಕೆ ಸಂಬಂಧಿಸಿ ಹೆಚ್ಚಿನ ಪ್ರೋತ್ಸಾಹ ಕೊಡುವುದು ಅತೀ ಅಗತ್ಯ. ಅವರಿಗೆ ಸರಿಯಾಗಿ ಪ್ರೋತ್ಸಾಹ ದೊರೆತರೆ ಅವರು ಖಂಡಿತವಾಗಿಯೂ ಎಲ್ಲಾ ಕ್ಷೇತ್ರಗಳಲ್ಲೂ ಧೈರ್ಯವಾಗಿ ಮುನ್ನುಗ್ಗುತ್ತಾರೆಂಬ ವಿಶ್ವಾಸ ನಮ್ಮದು. ST/SC ಮಕ್ಕಳ ವಿದ್ಯಾಭ್ಯಾಸ ಸೌಕರ್ಯಕ್ಕಾಗಿ ವಾಸ್ತವಿಕ ಸೌಕರ್ಯವುಳ್ಳ ಶಾಲೆಯನ್ನು ತೆರೆಯುವುದು ಅತೀ ಅಗತ್ಯ.

ಆರ್ಥಿಕ ಸ್ಥಿತಿ : ಸಾಧಾರಣವಾಗಿ SC/ST ಜನಾಂಗದವರು ಕೃಷಿ ಕಾರ್ಮಿಕರು ಹಾಗೂ ಕೆಲಸಗಾರರಾಗಿರುವರು. ಕೃಷಿ ಭೂಮಿಗಳು ಕೆಲವರಿಗಿದ್ದರೂ ನೀರಾವರಿ ಸೌಲಭ್ಯಗಳಿಲ್ಲ. ನೀರಾವರಿ ಸೌಕರ್ಯಗಳನ್ನು ಒದಗಿಸಿದರೆ ಅವರು ಹೆಚ್ಚು ಕೃಷಿ ಮಾಡಿ ಅವರಿಗೆ ತಮ್ಮ ಆರ್ಥಿಕ ಸ್ಥಿತಿಯನ್ನು ಸುಧಾರಿಸಬಹುದು. ಈ ಉದ್ದೇಶದಿಂದ ಬೋಳದಪದವು, ಸೊಡಂಕೂರು, ಕ್ಕತ್ತರಿಕೋಡಿಗಳಲ್ಲಿ ಎರಡೆರಡು ನೀರಾವರಿ ಟ್ಯಾಂಕ್‌ಗಳನ್ನು ತೆರೆಯುವುದು ಅತೀ ಅಗತ್ಯ.

ಕುಡಿ ನೀರು : ನಮ್ಮ ವರ್ಕಾಡಿ ಪಂಚಾಯತು ಗುಡ್ಡ ಪ್ರದೇಶಗಳಿಂದ ಕೂಡಿದ ಸ್ಥಳವಾಗಿದೆ. ಬಾವಿ ತೋಡಿದರೂ, ವರ್ಷದಿಂದ ವರ್ಷಕ್ಕೆ ನೀರಿನ ಮಟ್ಟ ಕೆಳಗಿಳಿಯುತ್ತಾ ಹೋಗುತ್ತಿದೆ. ಆದುದರಿಂದ ಕುಡಿ ನೀರಿನ ಸಮಸ್ಯೆ ಎಲ್ಲಾ SC/ST ಕೊಲೊನಿಗಳಲ್ಲಿ ಸರ್ವೇ ಸಾಮಾನ್ಯ. ಕೆಲವೆಡೆಗಳಲ್ಲಿ ಕಪ್ಪು ಕಲ್ಲು ಇರುವುದರಿಂದ ಬಾವಿ ತೋಡಲು ಸಾಧ್ಯವಾಗುತ್ತಿಲ್ಲ. ಇದರಿಂದ ಕುಡಿ ನೀರಿನ ಸಮಸ್ಯೆ ಪರಿಹಾರ ಹುಡುಕುವ ಸಮಸ್ಯೆ ಮತ್ತೂ ಪ್ರಬಲವಾಗುತ್ತಿದೆ. ಕತ್ತರಿಕೋಡಿ, ಪಿಲಿಕಲ ಪದವು, ಮುಟ್ಟ, ಜೋಗಿಬೆಟ್ಟು, ಪಾಡ, ಬಾಕ್ರಬೈಲು, ಸೊಡಂಕೂರು, ಕೊನಿಬೈಲು, ಕೆದುಂಬಾಡಿ, ಬೊಡ್ಡೋಡಿ, ಮುರತ್ತಣೆ ಮೊದಲಾದೆಡೆಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಿಸಲು ತುರ್ತುಕ್ರಮ ಕೈಗೊಳ್ಳುವುದು.

ಉದ್ಯೋಗ : ಉದ್ಯೋಗದ ಮಟ್ಟಿಗೆ ಇಲ್ಲಿನ STಯವರು ಬೆತ್ತದ ಗುಡಿಕೈಗಾರಿಕೆ ಮಾಡುತ್ತಿದ್ದಾರೆ. ಕೆಲವರು ಕಲ್ಲು ಕಡಿಯುವುದು ಹಾಗೂ ಇತರ ಕೆಲಸಗಳನ್ನು ಅವಲಂಬಿಸಿಕೊಂಡು ತಮ್ಮ ಜೀವನವನ್ನು ಸಾಗಿಸುತ್ತಿದ್ದಾರೆ. ಸ್ವಂತವಾದ ಯಾವುದೇ ಗುಡಿಕೈಗಾರಿಕೆಯಲ್ಲಿ ತೊಡಗಿದವರು ಈ ಪ್ರದೇಶದಲ್ಲಿ ಯಾರೂ ಇಲ್ಲ. ಒಂದು ಕಡೆ ಕತ್ತರಿಕೋಡಿಯಲ್ಲಿ ಜೇನುಸಾಕಣೆ, ಲಾಟರಿ ಟಿಕೇಟು ಮಾರುವ ಓರ್ವನನ್ನು ಮಾತ್ರ ಕಾಣಬಹುದು. ಕೆಲವರಲ್ಲಿರುವ ಸ್ಥಳದಲ್ಲಿ ಕೆಂಪು ಕಲ್ಲಿನ ವಸ್ತುಶಿಲೆಗಳಿವೆ. ಈಗ ST/SC ಜನಾಂಗದವರಿಗೆ ಸೇರಿದ ಒಂದು Co-Operative Society (ಗುವೆದಪಡ್ಪು) ಇದೆ. ಈ ಸಂಘದಲ್ಲಿ ಯಾವುದೇ ಸಾಲ ಕೊಡುವ ಪದ್ಧತಿಯಿಲ್ಲ. ಅದೇ Societyಯನ್ನು ಸಾಲ ಕೊಡುವ ಸಂಸ್ಥೆಯಾಗಿ ಬೆಳೆಸಿದರೆ, ಕೆಂಪು ಕಲ್ಲಿನ, ಕಪ್ಪು ಕಲ್ಲಿನ, ಮುಟ್ಟಾಳೆ ಕಟ್ಟುವ, ಜೇನುಸಾಕಣೆ, ಲೋಟರಿ ಅಂಗಡಿ, ಇತ್ಯಾದಿ ಕೆಲಸಗಳನ್ನು ಮಾಡಲು ಉದ್ದೇಶಿಸುವವರಿಗೆ ಸಾಲ ಪಡೆಯಬಹುದು. ಇದರಿಂದ ಅಂತಹ ಜನರಿಗೆ ಅವರದ್ದೇ ಆದ ಸ್ವಂತ ಉದ್ಯೋಗ ನಡೆಸಲು ಸಾಧ್ಯವಾಗುವುದು. ಇಲ್ಲಿ ಮಿಲ್ಕಾದವರ ಸೊಸೈಟಿ ಈಗ ಅಸ್ತಿತ್ವದಲ್ಲಿಲ್ಲ. ಖಾಸಗೀ ರಂಗದ ಅಮೃತ ಮಿಲ್ಕ್ ಸೊಸೈಟಿಯವರು ಇಲ್ಲಿ ಹಾಲು ಸಂಗ್ರಹಿಸುತ್ತಿದ್ದಾರೆ. ಇಲ್ಲಿ ಮಿಲ್ಕಾ ಸೊಸೈಟಿಯ ಶಾಖೆ ಕಾರ್ಯಾಚರಿಸಬೇಕು.

ಈಗ group ಆಗಿ ಕೊಡುವ IRDP ಸಾಲ ಯೋಜನೆಯ ಪ್ರಕಾರ ಕೊಡುವ ಸಾಲವನ್ನು ವೈಯಕ್ತಿಕವಾಗಿ ಕೊಡುವ ವ್ಯವಸ್ಥೆಯಾಗಬೇಕು. ಈ ಸಾಲ ಸೌಲಭ್ಯವನ್ನು ಹೆಂಗಸರಿಗೆ ಹೆಚ್ಚಾಗಿ ಕೊಟ್ಟು ನಮ್ಮ ಗುಡಿ ಕೈಗಾರಿಕೆಯನ್ನು ಪ್ರೋತ್ಸಾಹಿಸಬಹುದು. ಹೈನುಗಾರಿಕೆ, ಕೋಳಿಸಾಕಣೆ, ಆರ್ಕಿಡ್ ಹೂ ಬೆಳೆಸುವುದು, ಮೊಲ, ಹಂದಿ, ಆಡುಸಾಕಣೆ, ಇತ್ಯಾದಿಗಳ ಬಗ್ಗೆ ಸೂಕ್ತ ತರಬೇತಿ ಕೊಟ್ಟು ಅವರನ್ನು ಸ್ವಂತ ಉದ್ಯೋಗಿಗಳನ್ನಾಗಿ ಮಾಡಬಹುದು. ಕೊರಗ ಜನಾಂಗ (ST) ಕಾಲೊನಿಗಳ ಪರಿಸರದಲ್ಲಿ ಶೆಡ್ ಒಂದನ್ನು ತೆರೆದು ಅಲ್ಲಿ ಅವರಿಗೆ ಬುಟ್ಟಿ, ಕುಕ್ಕೆ, ಗೆರಸೆ ಇತ್ಯಾದಿಗಳನ್ನು ತಯಾರಿಸಲು ಸೌಕರ್ಯಗಳನ್ನು ಒದಗಿಸಿ ಕೊಡುವುದು. ಅಲ್ಲೇ ತಮ್ಮ ಸಿದ್ಧ ವಸ್ತುಗಳನ್ನು ಮಾರಲು ಅವರಿಗೆ ವ್ಯವಸ್ಥೆ ಮಾಡಿಕೊಡುವುದು.

ನರಸಣ್ಣ ಸಮುದಾಯದವರು ಹುಲ್ಲಿನ ಚಾಪೆ ತಯಾರಿಯಲ್ಲಿ ಬಹಳ ನಿಪುಣರು. ಇವರನ್ನು ST ವಿಭಾಗಕ್ಕೆ ಸೇರಿಸಿ, STಗಳಿಗೆ ಸಿಗುವ ಎಲ್ಲಾ ಸೌಲಭ್ಯಗಳನ್ನೂ ಇವರಿಗೂ ಒದಗಿಸಬೇಕಾದುದು ಅತೀ ಅಗತ್ಯ. ಅವರಿಂದ ಉಳಿದವರು ಕೂಡ ಚಾಪೆ ಹೆಣೆಯಲು ಕಲಿಯುವಂತೆ ಪ್ರೋತ್ಸಾಹಿಸುವುದು. ಇಲ್ಲಿನ SC ವಿಭಾಗದವರು ಹಾಳೆಯಿಂದ ಮುಚ್ಚಾಳೆ ಕಟ್ಟುವುದನ್ನು ಬಲ್ಲವರಾಗಿದ್ದಾರೆ. ಅವರಿಗೆ ಸರಿಯಾದ ವ್ಯವಸ್ಥೆ ಒದಗಿಸಿಕೊಟ್ಟರೆ ಇದನ್ನು ಒಂದು ಉತ್ತಮ ಗುಡಿಕೈಗಾರಿಕೆಯನ್ನಾಗಿ ಅಭಿವೃದ್ಧಿಗೊಳಿಸಿ ಈ ವಿಭಾಗದವರನ್ನು ಉದ್ಯೋಗಿಗಳನ್ನಾಗಿ ಮಾಡಬಹುದು. ಹೆಂಗಸರು ಚಾಪೆ, 'ಬಳ' ಇತ್ಯಾದಿಗಳನ್ನು ತಯಾರಿಸಲು ಸಹಾಯ ಮಾಡುವುದು.

ಸಂಸ್ಕೃತಿ : ಇಲ್ಲಿನ SC ವಿಭಾಗದವರು ಭೂತ ನರ್ತನ ಬಲ್ಲವರಾಗಿದ್ದಾರೆ. ಆದರೆ ಅವರಿಗೆ ಸರಿಯಾದ ಉಪಕರಣಗಳ ಅಭಾವವಿದೆ. ಆದುದರಿಂದ ಅವರಲ್ಲಲಿ ಈ ಕೌಶಲ್ಯವಿದ್ದರೂ ಅದನ್ನು ಪ್ರಕಟಿಸಲು ಸಾಧ್ಯವಿಲ್ಲದಾಗುತ್ತದೆ. ಹಾಗಾಗಿ ಇದಕ್ಕೆ ಬೇಕಾದ ಉಪಕರಣಗಳನ್ನು ಒದಗಿಸಿ ಕುಸ ಕಸುಬು ಜೀವಂತವಾಗಿ ಉಳಿಯುವಂತೆ ಮಾಡುವುದು. ಅವರದೆ ಆದ ಕಂಗೀಲು, ಮಾದಿರ, ಆಟಿಕಳಂಜ, ಜೋಗಿ ಇತ್ಯಾದಿಗಳನ್ನು ಮಾಡಲು ಅವರಿಗೆ ಪ್ರೇರಣೆ ಕೊಟ್ಟು ಅವರದೇ ಆದ ಸಂಸ್ಕೃತಿಯನ್ನು ಜೀವಂತವಾಗಿ ಬೆಳೆಸುವುದು ಅತೀ ಅಗತ್ಯವಾಗಿದೆ.

ಮನೆ : SC ಮತ್ತು ST ಜನಾಂಗದ 80% ಮನೆಗಳು ಹಂಚಿನದ್ದಾಗಿದೆ. ಇನ್ನು ಉಳಿದ 20% ಜನರಿಗೆ ಅವರದ್ದೇ ಆದ ಸ್ವಂತ ಜಮೀನಿನ ಅಭಾವವಿದೆ. ಆದುದರಿಂದ ಈ ಪಂಚಾಯತಿನಲ್ಲಿರುವ ಖಾಲಿ ಜಾಗವನ್ನು ಇನ್ನು ಮುಂದೆ ರೆವೆನ್ಯೂ ಅಧಿಕಾರಿಗಳು ನೇರವಾಗಿ 'ದರ್ಖಾಸು' ಕೊಡದೆ ಅದನ್ನು ಪಂಚಾಯತಿನ ಸಹಭಾಗಿತ್ವದಲ್ಲಿ ಕೊಟ್ಟರೆ ಭೂರಹಿತ SC ಹಾಗೂ ST ವರ್ಗದವರಿಗೆ ಸ್ವಂತ ಭೂಮಿಯನ್ನು ಒದಗಿಸಿಕೊಟ್ಟು ಅವರಿಗೆ ಮನೆ ನಿರ್ಮಿಸಿ ಕೊಡಲು ಸಾಧ್ಯ.

ಇನ್ನು ನಮ್ಮ ಪಂಚಾಯತಿನಲ್ಲಿ ಈ ವರ್ಗದವರಿಗೆ ಸಂಬಂಧಿಸಿ ಸಾಧಾರಣ ಎಪ್ಪತ್ತೈದು ಮನೆಗಳು ತಮ್ಮ ಪಂಚಾಯತಿಗೆ ಅಗತ್ಯವಿದೆ. ಸ್ಥಳವನ್ನು ಕೊಟ್ಟು ಸುಮಾರು ನೂರು ಮನೆಗಳನ್ನು ನಿರ್ಮಿಸುವುದು ಅಗತ್ಯ. ಅವರಿಗೆ ನಿರ್ಮಿಸಿ ಕೊಡುವ ಮನೆಗಳ ಗುಣಮಟ್ಟ ಏನೇನೂ ಸಾಲದು. ಈಗ ಮಜೂರಿ ಹಾಗೂ ಇತರ ದಿನಬಳಕೆಯ ಸಾಮಾಗ್ರಿಗಳ ಬೆಲೆಯು ಏರುತ್ತಿರುವುದರಿಂದ ಈ ಗೃಹ ನಿರ್ಮಾಣದ ಹಣವನ್ನು 25,000/-ಗಳಿಗೆ ಏರಿಸುವುದು ಅತೀ ಅನಿವಾರ್ಯವಾಗಿದೆ.

ಆರೋಗ್ಯ : ಆರೋಗ್ಯದ ದೃಷ್ಟಿಯಿಂದ ಈಗಲೂ ಏನೊಂದೂ ಸುಧಾರಣೆ ಕಂಡು ಬರುತ್ತಿಲ್ಲ. ಜನತೆ ವೈಜ್ಞಾನಿಕ ವಿಧಾನವನ್ನು ಅಳವಡಿಸುತ್ತಿಲ್ಲ ಎಂದರೂ ತಪ್ಪಾಗಲಾರದು. ಅಂದರೆ ಜನತೆ ಮಂತ್ರತಂತ್ರಗಳಿಗೆ ಈಗಲೂ ಮೊರೆ ಹೋಗುತ್ತಿದ್ದಾರೆ. ಆದುದರಿಂದ ನಮ್ಮ ಈ ವರ್ಗದವರಿಗೆ ಇನ್ನು ಆರೋಗ್ಯದ ಬಗ್ಗೆ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಸೂಕ್ತ ಮಾಹಿತಿಗಳನ್ನು ಒದಗಿಸುವುದು ಅತ್ಯವಶ್ಯವಾಗಿದೆ.

ನಮ್ಮ ನರಸಣ್ಣ ಸಮುದಾಯದ ಬಗ್ಗೆ ಹೇಳುವುದಿದ್ದರೆ ಅವರಿಗೆ ಸರಿಯಾದ ಮನೆಯೇ ಇಲ್ಲದೆ ಕಷ್ಟ ಪಡುತ್ತಾರೆ. ಒಂದು ಸಣ್ಣ ಗುಡಿಸಲು ಇವರ ವಾಸಸ್ಥಳ. ಇವರ ಗುಡಿಸಲುಗಳಿಗೆ ಸರಿಯಾಗಿ ಗಾಳಿ, ಬೆಳಕು ಸಿಗದೆ , ವಿವಿಧ ಚಟಗಳಿಗೆ ಮಾರು ಹೋದ ಈ ಜನಾಂಗ ವಿವಿಧ ರೋಗಗಳಿಂದ ನರಳುತ್ತಿದ್ದಾರೆ. ನಮ್ಮ Vorkady ಪಂಚಾಯತಿನಲ್ಲಿ ಕೇವಲ ಒಂದು P.H.C ಹಾಗೂ ಎರಡು ಇದರ ಶಾಖೆಗಳಿವೆ. ಈ ಆರೋಗ್ಯ ಸಂಸ್ಥೆಗಳ ಸಿಬ್ಬಂದಿಗಳಿಗೆ ನಮ್ಮ ಗ್ರಾಮೀಣ ಜನರ ಭಾಷೆ ಅರ್ಥವಾಗುವುದೇ ಇಲ್ಲದಿರುವುದು ನಮ್ಮ ದುರದೃಷ್ಟ. ಹಾಗಾಗಿ ಆರೋಗ್ಯದ ದೃಷ್ಟಿಯಿಂದ ಈ PHCಯ ಶಾಖೆಗಳನ್ನು ಹೆಚ್ಚಿಸುವುದು ಅಲ್ಲದೆ ಎಲ್ಲಾ ಭಾಷೆಗಳನ್ನು ಬಲ್ಲ ಅರ್ಹ ಸಿಬ್ಬಂದಿಗಳನ್ನು ನೇಮಿಸುವುದು ಕೂಡ ಸೂಕ್ತವಾಗಿದೆ. ಸ್ಥಳೀಯ SSLC ಓದಿರುವ SC/ST ಅಭ್ಯರ್ಥಿಗಳನ್ನು ತರಬೇತುಗೊಳಿಸಿ ಅವರನ್ನೂ ಈ ಆರೋಗ್ಯ ಸಂಸ್ಥೆಗಳಲ್ಲಿ ನೇಮಿಸುವುದು ಹೆಚ್ಚು ಅನುಕೂಲಕರವಾಗಿದೆ.

ಒಂದು ಆಯುರ್ವೇದ ಆಸ್ಪತ್ರೆಯನ್ನು ತೆರೆಯುವುದು ಅತೀ ಅಗತ್ಯವಾಗಿದೆ. ಕಾರಣ ಸ್ಥಳೀಯರಿಗೆ ಆಯುರ್ವೇದದಲ್ಲಿ ಹೆಚ್ಚು ನಂಬಿಕೆ. ಆದುದರಿಂದ ಒಳರೋಗಿಗಳೂ ಚಿಕಿತ್ಸೆ ಪಡೆಯಲು ಅನುಕೂಲವಿರುವ ಆಯುರ್ವೇದ ಆಸ್ಪತ್ರೆ ನಮಗೆ ಬೇಕಾಗಿದೆ. ಈಗ ಆಯುರ್ವೇದದಲ್ಲಿ ವಿಶ್ವಾಸವುಳ್ಳ ರೋಗಿಗಳು ಹತ್ತು ಕಿ.ಮೀ. ದೂರದಲ್ಲಿರುವ ಮಂಜೇಶ್ವರಕ್ಕೋ ಅದಕ್ಕಿಂತ ದೂರದ ಉಪ್ಪಳ, ಕಾಸರಗೋಡಿಗೋ, ಹೋಗುತ್ತಿರುವುದು ನಮಗೆ ಕಂಡು ಬರುತ್ತಿದೆ. ಭವಿಷ್ಯದಲ್ಲಿ ನಮ್ಮ ಜನತೆಗೆ ನಮ್ಮಲ್ಲೇ ಸೂಕ್ತ ಚಿಕಿತ್ಸೆ ದೊರೆಯುವಂತೆ ಮಾಡಬೇಕಾಗಿದೆ. ನೂತನವಾಗಿ ತೆರೆಯಲುದ್ದೇಶಿಸಿರುವ ಆಸ್ಪತ್ರೆಯಲ್ಲಿ ಸ್ತ್ರೀ-ರೋಗ ತಜ್ಞರನ್ನು ಕೂಡ ನೇಮಿಸಬೇಕಾಗಿದೆ.

ಇಲ್ಲಿರುವ 235 ಮನೆಗಳಲ್ಲಿ ಕೇವಲ 32 ಮನೆಗಳಲ್ಲಿ ಮಾತ್ರ ಪಾಯಿಖಾನೆಗಳಿವೆ. ಉಳಿದವರಿಗೆಲ್ಲ ಪಾಯಿಖಾನೆಗಳನ್ನು ಒದಗಿಸುವುದು ಅತೀ ಅಗತ್ಯ. ಈಗಲೂ ಈ ಜನತೆ ಇತರರು ಬಳಸಿದ (ಇತರ ಅವಶ್ಯಕತೆಗಳಿಗೆ) ತೋಡಿನ ನೀರನ್ನು ಕುಡಿಯುತ್ತಾರೆ. ಇಂತವರಿಗೆ ಸೂಕ್ತ ಮಾಹಿತಿ ನೀಡಿ ಆ ನೀರಿನ ಅಪಾಯದ ಬಗ್ಗೆ ಅರಿವು ಮೂಡಿಸಬೇಕಾಗಿದೆ. ಇವರಿಗೆ ಶುದ್ಧ ನೀರಿನ ಪೂರೈಕೆ ಅತೀ ಅಗತ್ಯವಾಗಿದೆ. ಇದು ಆರೋಗ್ಯದ ದೃಷ್ಟಿಯಿಂದ ಅನಿವಾರ್ಯವಾಗಿದೆ.

ಸಮಾಜ ಕ್ಷೇಮ : SC/ST ಯವರಿಗೆ ಅವರ ಭಾವಚಿತ್ರ ಲಗ್ತೀಕರಿಸಿ ಒಂದು ಸರ್ಟಿಫಿಕೇಟು ಕೊಡುವ ಕ್ರಮವನ್ನು ಜ್ಯಾರಿಗೊಳಿಸುವುದು. ಇದರ ಮೂಲಕ ಅವನ ಎಲ್ಲಾ ಕಾರ್ಯಗಳು ಸುಲಭವಾಗಬೇಕು. ಅದು ಪಂಚಾಯತು ಸದಸ್ಯರಿಂದ ಕೊಡುವಂತಿರಬೇಕು.. ಪಂಚಾಯತು ಅಧ್ಯಕ್ಷರು ಕೌಂಟರ್ ಸೈನ್ ಮಾಡಿದರೆ ಆತನ ಜೀವನ ಪರ್ಯಂತ ಸಾಕಾಗುವಂತಿರಬೇಕು. ಅದಕ್ಕಾಗಿ ಉಳಿದ ಆಫೀಸುಗಳಿಗೆ

ಅಲೆದಾಡುವುದನ್ನು ನಿಲ್ಲಿಸಬಹುದಾಗಿದೆ. ಒಮ್ಮೊಮ್ಮೆ ಈ ಅಲೆದಾಟದಿಂದಲಾಗಿ ಅವನು ಹಲವು ಸೌಲಭ್ಯಗಳಿಂದ ವಂಚಿತನಾಗುತ್ತಾನೆ. ಅವನ ಪ್ರಾಯ, ವರಮಾನ, ಉದ್ಯೋಗ, ಅರ್ಹತೆ, ಇತ್ಯಾದಿಗಳು ಆ ಕಾರ್ಡಿನಲ್ಲಿ ಇರಬೇಕು. ಇದರಿಂದ ಅವರಿಗೆ ಸಿಗುವ ಸೌಲಭ್ಯ ಆ ಕಾರ್ಡಿನಿಂದ ಸಿಗುವಂತಾಗುವುದು. ಇದರಿಂದ ಅವರಿಗೆ ಪೆನ್ಶನ್ ಮತ್ತು ಇತರ ಭತ್ತೆಗಳನ್ನು ಸುಲಭವಾಗಿ ಸಮಯಕ್ಕೆ ಸರಿಯಾಗಿ ವಿತರಿಸಲು ಸಾಧ್ಯವಾಗುವುದು.

ಮನೋರಂಜನೆ : ಮನೆರಂಜನೆ ಎಲ್ಲಾ ವಿಭಾಗದ ಜನರಿಗೂ ಅತೀ ಅಗತ್ಯ. ಈಗಿನ 20ನೇ ಶತಮಾನದ ಕೊನೆಯ ಹಂತದಲ್ಲಿ ಟೆಲಿವಿಷನ್ ತುಂಬಾ ಪ್ರಚಲಿತದಲ್ಲಿರುವ ಒಂದು ಮಾಧ್ಯಮವಾಗಿದೆ. ಇಂತಹ ಬೆಲೆಬಾಳುವ ಉಪಕರಣಗಳನ್ನು SC/ST ಜನಾಂಗದವರಿಗೆ ಹಣಕೊಟ್ಟು ಪಡಕೊಳ್ಳಲು ಸಾಧ್ಯವಿಲ್ಲ. ಎಲ್ಲಾ ಹರಿಜನ ಗಿರಿಜನ ಕಾಲೊನಿಗಳಲ್ಲಿ ಒಂದು TVಯನ್ನು ಆಯಾ ವಿಭಾಗಗಳಿಂದ ಅಗತ್ಯವಾಗಿ ಕೊಡುವುದು. ಇದಕ್ಕೆ ಫಂಡ್‌ನ್ನು ಆಯಾಯ ವಿಭಾಗದಿಂದ ಒದಗಿಸುವುದು. ಅಲ್ಲಿಗೆ ವಿದ್ಯುತ್ ಸೌಲಭ್ಯವಿಲ್ಲದಿದ್ದರೆ ಸೌರಚೈತನ್ಯವನ್ನು ಒದಗಿಸುವುದು, ಇದರಿಂದ ಸರಕಾರದ ಯೋಜನೆಗಳು, ಪ್ರಪಂಚದ ಸುದ್ದಿಗಳು, ಆಗುಹೋಗುಗಳು ಎಲ್ಲಾ ಜನರಿಗೂ ಚಿತ್ರದೊಂದಿಗೆ ತಿಳಿಯುವ ಸಾಧ್ಯತೆಗಳಿವೆ.

ವಾಚನಾಲಯ : ನಮ್ಮ ಪಂಚಾಯತಿನಲ್ಲೇ ವಾಚನಾಲಯದ ಕೊರತೆಯಿದೆ. ಸಾಕ್ಷರತೆಯ ಮೂಲಕ ಎಲ್ಲರೂ ಸಾಕ್ಷರರಾದರೂ ವಾಚನಾಲಯವಿಲ್ಲದೆ SC/ST ವರ್ಗದವರು ಪುನಃ ಅನಕ್ಷರಸ್ಥರಾಗುತ್ತಿದ್ದಾರೆ. ಇದಕ್ಕಾಗಿ ಎಲ್ಲಾ ST/SC ಕೊಲನಿಗಳಲ್ಲಿ ಒಂದು ಕೋಣೆಯ ವಾಚನಾಲಯವಾದರೂ ಅಗತ್ಯವಾಗಿ ಆಗಬೇಕಾಗಿದೆ. ದಿನ ಪತ್ರಿಕೆಗಳ ಪೂರೈಕೆ ಅತೀ ಅಗತ್ಯ.

ಚೈನತ್ಯ : ನಮ್ಮ ಪಂಚಾಯತಿನಲ್ಲಿರುವ SC/ಮತ್ತು STಮನೆಗಳಲ್ಲಿ ಕೇವಲ 25% ಮಾತ್ರ ವಿದ್ಯುತ್ತೀಕರಣವಾಗಿದೆ. ಇನ್ನು 75% ಮನೆಗಳಿಗೆ ವಿದ್ಯುತ್ ಸಂಪರ್ಕದ ಅವಶ್ಯಕತೆಯಿದೆ. ವಿದ್ಯುತ್ ಅಭಾವವಿರುವ ನಮ್ಮ ಪ್ರಾಂತ್ಯದಲ್ಲಿ ಬದಲಿ ಚೈತನ್ಯವಾದ ಸೌರ ಚೈತನ್ಯವನ್ನು ಎಲ್ಲಾ ಕಾಲೊನಿಗಳಿಗೆ ಪೂರೈಕೆ ಮಾಡಿದರೆ ಉತ್ತಮ. ಕೆಲವು ಮನೆಗಳಿಗೆ ವಿದ್ಯುತ್ತಿನ ವಯರಿಂಗ್ ಕಾಮಗಾರಿ ಮುಗಿದು ವರ್ಷಗಳು ಸಂದರೂ ಇದುವರೆಗೆ ಕನೆಕ್ಷನ್ ಲಭಿಸಲಿಲ್ಲ. ಹಾಗಾಗಿ ವಯರಿಂಗ್ ಆದ ಮನೆಗಳಿಗೂ Free Connection ಸಿಗುವ ಎಲ್ಲಾ ಮನೆಗಳಿಗೂ ಅವರ ವಿಭಾಗಕ್ಕೆ ಬರುವ ಹಣವನ್ನು ಶೀಘ್ರದಲ್ಲೇ ಮಂಜೂರುಗೊಳಿಸಿ ವಿದ್ಯುತ್ ಸೌಲಭ್ಯವನ್ನೊದಗಿಸಿ ಅವರ ಕೃಷಿಯ ಅಭಿವೃದ್ಧಿಗೆ ಹಾಗೂ ಶಾಲಾ ಮಕ್ಕಳ ವಿದ್ಯಾಭ್ಯಾಸಕ್ಕೆ ಸಹಾಯ ಮಾಡುವುದು ಬಹಳ ಅಗತ್ಯ.

ಸಾರಿಗೆ : ಸಾರಿಗೆಯ ಬಗ್ಗೆ ಹೇಳುವುದಿದ್ದರೆ ST/SCಯವರಿಗೆ ಯಾವುದೇ ಸೌಲಭ್ಯವಿಲ್ಲ. ಇದ್ದರೂ ಆ ಮಾರ್ಗಗಳಲ್ಲಿ ಸಂಚರಿಸುವುದೆಂದರೆ ನರಕಯಾತನೆಯನ್ನನುಭವಿಸಿದಂತೆಯೇ ಸರಿ. ಕಾರಣ ಇದು ಗುಡ್ಡಗಾಡು ಪ್ರದೇಶ. ಅಂಬೇಡ್ಕರ್ ಗ್ರಾಮಕ್ಕೆ ಮಾರ್ಗವೊಂದು ಮುಂಜೂರಾಗಿದೆ. ಈ ಕೊಲೊನಿಯ ಮಧ್ಯಭಾಗದಲ್ಲಿ ಹಾದು ಹೋಗುವ ಮಾರ್ಗಕ್ಕೆ ಒಂದು ಸಂಕವನ್ನು (ನೂಜಿ ಕೊಠಡಿ ಗುಂಡಿ) ನಿರ್ಮಿಸಿ ಅದಕ್ಕೆ ಡಾಮರೀಕರಣದ ಕಾಮಗಾರಿ ನಡೆಯಬೇಕಾಗಿದೆ. ಈ ಕೆಲಸ ಆಗದ ಕಾರಣ ಇಲ್ಲಿ ಯಾವುದೇ ವಾಹನಗಳ ಸಾರಿಗೆ ಸಂಚಾರಕ್ಕೆ ತಡೆಯಾಗುತ್ತಿದೆ. ಇದಕ್ಕೆ ಸಂಬಂಧಪಟ್ಟವರು ಒಂದು ಸಲ ಇಲ್ಲಿಗೆ ಬಂದು ದೃಷ್ಟಿ ಹರಿಸಿದರೆ ಈ ಊರಿನ ಜನತೆಯ ಕರುಣ ಕತೆಯ ಅರಿವಾದೀತು. ಇಲ್ಲಿಗೆ ಬಸ್ಸಿನ ಸೌಕರ್ಯವಿಲ್ಲ. ಈಗ ಪೇಟೆಗಳ ಕಡೆಗೆ ಬಸ್ಸ್ ಸರ್ಮಿಟ್ ಸುಲಭವಾಗಿ ಲಭಿಸುವುದರಿಂದ ಬಸ್ಸುಗಳೆಲ್ಲ ಪೇಟೆಯ ಕಡೆಗೆ ಸಂಚರಿಸುವುದರಿಂದ ಕುಗ್ರಾಮ ಪ್ರದೇಶದ ಜನತೆ ಸಾರಿಗೆ ಸೌಕರ್ಯದಿಂದ ವಂಚಿತರಾಗಿದ್ದಾರೆ. ನಮ್ಮ ಅಂಬೇಡ್ಕರ್ ಗ್ರಾಮದ ಸಾರಿಗೆ ಸಮಸ್ಯೆಗಳನ್ನು ನಿವಾರಿಸಿ ಈ ಪ್ರದೇಶಕ್ಕೆ ಬಸ್ಸು ಬರುವಂತೆ ಮಾಡಬೇಕಾಗಿದೆ. ಈಗ ಈ ಪ್ರದೇಶದ ಜನತೆ ಸುಮಾರು 10KMಗಳಷ್ಟು ದೂರವನ್ನು ಕಾಲ್ನಡಿಗೆಯಲ್ಲೇ ಕ್ರಮಿಸಿ ಬಸ್ಸಲ್ಲಿ ಹೋಗಬೇಕಾಗಿದೆ. ಇಲ್ಲಿನ ಮಕ್ಕಳು ವಿದ್ಯಾಭ್ಯಾಸಕ್ಕಾಗಿ ದೂರದ ಶಾಲೆಗಳಿಗೆ 7 ರಿಂದ 8 ಕಿ.ಮೀ. ನಡೆದೇ ಹೋಗಬೇಕಾಗಿದೆ. ಈ ಸಮಸ್ಯೆಯನ್ನು ತುರ್ತಾಗಿ ಪರಿಹರಿಸಬೇಕಾಗಿದೆ. ಹಾಗಾಗಿ ನಮ್ಮ ಪಂಚಾಯತಿನ ಬಾಕ್ರಬೈಲು, ಕತ್ತರಿಕೋಡಿ, ತೌಡುಗೋಳಿ (ಬೋಳದಪದವು) ಸುಳ್ಯಮೆ ಎಂಬಿತ್ಯಾದಿ ಕಡೆಗಳಿಂದ KSRTC ಬಸ್ಸುಗಳು ಕಾಸರಗೋಡು, ಹಾಗೂ ಮಂಗಳೂರು ಕಡೆಗಳಿಗೆ ಸಂಚಾರ ನಡೆಸಬೇಕು.

ನಮ್ಮ ಪಂಚಾಯತಿನ VI, IV, IIIನೇ ವಾರ್ಡಿನ ಒಂದು ಬದಿಯಿಂದ ವರ್ಕಾಡಿ ಹೊಳೆ ಹರಿಯುವುದರಿಂದ ನಮ್ಮಲ್ಲಿಯ ಎಲ್ಲಾ ಆಫೀಸುಗಳಿಗೆ ಮಂಜೇಶ್ವರ, ಹೊಸಂಗಡಿ ದಾರಿಯಾಗಿ ಅಥವಾ ಬಾಕ್ರಬೈಲು ಗುವೆದ ಪಡ್ಪು ಆಗಿ ಮನೆ ಸೇರಲು ದಿನದ ಕೆಲಸವೇ ಸರಿ. ಹಾಗಾಗಿ ಬೊಳದ ಪದವು ಕೊಲೊನಿಯಿಂದಾಗಿ ಒಂದು ಮಾರ್ಗವಾದರೆ ಬಹಳ ಹತ್ತಿರ ಹಾಗೂ ಉಳಿದ ಮಾರ್ಗಗಳ ಡಾಮರೀಕರಣ ಅತೀ ಅಗತ್ಯ.

ಧರ್ಮನಗರ-ನಂದಾರಪದವು ಮಾರ್ಗವೂ ಡಾಮರೀಕರಣ ಆಗತ್ಯ.

ಉಪ ಸಂಹಾರ

9ನೇ ಪಂಚವಾರ್ಷಿಕ ಪದ್ಧತಿಯನ್ನು ಜಿನಕೀಯ ಯೋಜನೆಯಾಗಿ ಕೇರಳ ಸರಕಾರವು ನಡೆಸಲು ನಿಶ್ಚೈಸಿದ ಮೇರೆಗೆ ಗ್ರಾಮಸಭೆಗಳು ಪ್ರದೇಶಕ ಕಾರ್ಷಿಕ, ವ್ಯವಸಾಯ, ಆರೋಗ್ಯ, ವಿದ್ಯಾಭ್ಯಾಸ, ಗಿರಗಿ ಮೊದಲಾದ ವಿಷಯದಲಇಲ ಸಮಗ್ರ ವಿಕಸನೆಗಳ ಬಗ್ಗೆ ಚರ್ಚೆ ಮಾಡಿದಾಗ ನಾನಾ ವಿಧದ ಸಮಸ್ಯೆಗಲು ಮತ್ತು ಅದನ್ನು ಹೋಗಲಾಡಿಸುವ ಸಾಧ್ಯತೆಗಳು ಮೂಡಿ ಬಂದವು. ಕೇರಳದ ಉತ್ತರ ಭಾಗದಲ್ಲಿದ್ದು, ಕರ್ನಾಟಕದ ಗಡಿ ಪ್ರದೇಶವಾದ ವರ್ಕಾಡಿ ಪಂಚಾಯತು, ತುಳು ಮತ್ತು ಕನ್ನಡ ಭಾಷಾ ಅಲ್ಪಸಂಖ್ಯಾತರಿಂದ ಕೂಡಿದೆ. ಜನರು ಹೆಚ್ಚಾಗಿ ಅವಿಧ್ಯಾವಂತರಾಗಿದ್ದು, ವಿಕಸನವು ಕೇರಳದ ಅತೀ ಉತ್ತರಕ್ಕಿರುವ ಪಂಚಾಯತಿಗೆ ಇನ್ನೂ ತಲಪಿರುವುದಿಲ್ಲ. ಆದುದರಿಂದ ಈ ಜನಕೀಯ ಯೋಜನೆಯನ್ನು ಜನರು ತುಂಬಾ ಆವೇಷದಿಂದ ಕಾಯುತ್ತಿದ್ದಾರೆ. ಈ ಪಂಚಾಯತಿನ ಭೂಪ್ರಕೃತಿ ಖಾಸೆ, ಕೃಷಿ ಮತ್ತು ಜನರ, ನಡೆನುಡಿ, ಆಚಾರ ವಿಚಾರಗಳು ಕೇರಳದ ಇತರ ಪ್ರದೇಶಗಳಿಂದ ವ್ಯತ್ಯಸ್ತವಾಗಿರುವುದರಿಂದ, ಇದರ ವಿಕಸನಕ್ಕೆ ಈ ಜನಕೀಯ ಯೋಜನೆಯಲ್ಲಿ ಹೆಚ್ಚು ಪ್ರಾಬಲ್ಯವು ಆಗ್ರಹಿಸಲ್ಪಡುತ್ತದೆ.

ಗ್ರಾಮಸಭೆಗಳ ಚರ್ಚೆಯಲ್ಲಿ ಮೂಡಿ ಬಂದ ಸಮಸ್ಯೆಗಲು, ಕೃಷಿ, ನೀರಾವರಿ, ಸಾರಿಗೆ, ಭೂನಿರ್ಮಾಣ, ಇಂಧನ, ಪಶುಸಂಗೋಪನೆ ಇತ್ಯಾದಿ ವಿಷಯಗಳಲ್ಲಿ ಹೆಚ್ಚಾಗಿದೆ. ಇವನ್ನೆಲ್ಲಾ ನಾವು ರಾಜಕೀಯ, ಜಾತಿ ಮತ ಬೇಧವಿಲ್ಲದೆ, ಎಲ್ಲರೂ ಒಂದಾಗಿ ಈ ಯೋಜನೆಯಲ್ಲಿ ಸಹಕರಿಸಿ ಕಾರ್ಯಗತ ಮಾಡಬೇಕಾಗಿದೆ.

ಸ್ವಂತವಾಗಿ ಕಕ್ಕಾಸು ಇಲ್ಲದ, ಕುಡಿಯುವ ನೀರಿನ ಸೌಲಭ್ಯವಿಲ್ಲದ, ನಿದ್ರೆ ಮಾಡಲು ಮನೆಯಿಲ್ಲದ, ಬಡಕುಟುಂಬಗಳಿಗೆ ಸಹಾಯ ಮಾಡಬೇಕು. ನೀರಾವರಿಯಿಲ್ಲದೆ ನಾಶವಾಗುತ್ತಿರುವ ಕೃಷಿಕರನ್ನು ರಕ್ಷಿಸಬೇಕು. ನಾಶವಾಗುತ್ತಿರುವ ಪರಂಪರಾಗತ ಕೈಗಾರಿಕೆಯನ್ನು ಪುನರುದ್ಧರಿಸಬೇಕು. ಅಲ್ಲದೆ ಹೊಸ ಕೈಗಾರಿಕೆಯನ್ನು ಆರಂಭಿಸಬೇಕು. ಉದ್ಯೋಗವಿಲ್ಲದವರಿಗೆ ಉದ್ಯೋಗವನ್ನು ಸೃಷ್ಟಿಸಬೇಕು. ಹೀಗೆ ವಿವಿಧ ಪ್ರಶ್ನೆಗಳು ನಮ್ಮ ಮುಂದಿವೆ. ನಮ್ಮ ಪ್ರದೇಶವು ಸಾರಿಗೆಯಲ್ಲಿದೆ ವಿರಸನವು ಕುಂಠಿತವಾಗಿದೆ.

ಬರೇ ಪಂಚಾಯತು ಫಂಡಿನಿಂದ ಈ ಎಲ್ಲಿ ವಿಕಸನ ಕಾರ್ಯಕ್ರಮಗಳನ್ನು ನಡೆಸಲು ಸಾಧ್ಯವಿಲ್ಲ. ಆದುದರಿಂದ 9ನೆಯ ಪಂಚವಾರ್ಷಿಕ ಪದ್ಧತಿಯನ್ನು ಜನರ ಸಹಕಾರದಿಂದ ಕಾರ್ಯಗತಗೊಳಿಸುವ, ಪದ್ಧತಿಯಾಗಿ ಪ್ರಕಟಿಸಿರುವುದು ಆಶ್ಚಾಸದ ಹೊನ್ನಿನ ಕಿರಣವಾಗಿದೆ. ಈ ಪಂಚಾಯತಿನ ವರಮಾನ ಮತ್ತು ಖರ್ಚುಗಳನ್ನು ಒಪ್ಪಿಸಿಕೊಂಡು ಹೋಗುವುದು ತುಂಬಾ ಪ್ರಯಾಸವಾಗಿದೆ. 1995-96ನೇ ವರ್ಷದಲ್ಲಿ ವರ್ಕಾಡಿ ಪಂಚಾಯತಿನ ವರಮಾನ 1,90096.20ರೂ. ಆದರೆ ಇದೇ ವರ್ಷದ ಮೊತ್ತ ಖರ್ಚು 1545731.35. ಇದರಿಂದ ಪ್ರಕಟವಾಗುವುದೆಂದರೆ ಸರಕಾರ ಸಹಾಯದಿಂದ ಮಾತ್ರವೇ ಈವರೇಗಿನ ಕಾರ್ಯಗಳು ಇಲ್ಲಿ ನಡೆದಿರುವುದು. ಆದುದರಿಂದ ಗ್ರಾಮಸಭೆಗಳಲ್ಲಿ ಮೂಡಿ ಬಂದ ವಿಕಸನಗಳನ್ನು ನೆರವೇರಿಸಲು ಹೊಸ ವಿಕಸನ ರೀತಿಯನ್ನು ಕಂಡು ಹಿಡಿಯಬೇಕಾಗಿದೆ. ಇದೇ ಜನರ ಸಹಕರಣೆ.

ಕೇರಳ ಸರಕಾರದ 9ನೇಯ ಪಂಚವಾರ್ಷಿಕ ಪದ್ಧತಿಯಲ್ಲಿ 14,800 ಕೋಟಿ ರೂಪಾಯಿಯನ್ನು ಯೋಜನೆಗಳಿಗೆ ಮೀಸಲಾಗಿರಿಸಿದೆ. ಇದರ 40% ಗ್ರಾಮ ಪಂಚಾಯತುಗಳಿಗೆ ಒದಗಿಸುವುದಾದರೆ 5820 ಕೋಟಿ ರೂಪಾಯಿ ಕೆಳತಟ್ಟಿಗೆ ಸಿಕ್ಕುವುದು. ಇದರಿಂದ ನಮ್ಮ ಪಂಚಾಯತಿಗೆ ಪ್ರತಿವರ್ಷ 72.9 ಲಕ್ಷ ರೂ. ಲಭಿಸಲು ಸಾಧ್ಯತೆಯಿದೆ. ಇದು ಮಾತ್ರವೇ ನಮ್ಮ ಪ್ರತೀಕ್ಷೆ. ಗ್ರಾಮೀಣ ಬಡಜನತೆಯ ಅವಶ್ಯಕತೆಗಳನ್ನು ಅವರ ಸ್ವಪ್ನವನ್ನು ಸಾಕ್ಷಾತ್ಕರಿಸಲು ಇದು ಒಂದು ಅವಸರವಾಗಿದೆ.

ಇಷ್ಟರವರೇಗಿನ ಯೋಜನೆಗಳಲ್ಲಿ ಭಾಗವಹಿಸದ ಗ್ರಾಮೀಣರಿಗೆ ಇದು ಒಂದು ಉತ್ಸಾಹವಾಗಿದೆ. ಇದರಿಂದ ಈ ಪಂಚಾಯತಿನ ಸಮಗ್ರ ವಿಕಸನಕ್ಕೆ ಬೇಕಾದ ಒಂದು ವರದಿಯನ್ನು ನಿಮ್ಮ ಮುಂದೆ ಚರ್ಚೆಗಾಗಿ ಸಮರ್ಪಿಸಿರುತ್ತೇನೆ. ಇದರ ಮೇಲೆ ಕ್ರಿಯಾತ್ಮಕವಾದ ನಿರ್ದೇಶಗಳನ್ನು ನೀಡಿ ಸಹಕರಿಸಬೇಕಾಗಿ ವಿನಂತಿ.

ವಿ. ದೇವಪ್ಪ ಶೆಟ್ಟಿ

ಸಂಪನ್ಮೂಲ ಸಂಗ್ರಹ

ನಮ್ಮ ಪಂಚಾಯತು 4540.14 ಹೆಕ್ಟೇರು ವಿಸ್ತೀರ್ಣವಿದ್ದು ವಿಶಾಲವಾದುದು, ಹಾಗೂ 76% ಜನರು ಬಡತನದ ರೇಖೆಗಿಂತ ಕಡಿಮೆ ವರಮಾನವಿರುವವರೂ, ಅತೀ ಸಣ್ಣ ಕೈಷಿಕರೂ, ಕೃಷಿ ಕಾರ್ಮಿಕರೂ, ಮಜೂರರನ್ನು ಒಳಗೊಂಡುದುದಾಗಿದೆ. 1995-96ರಲ್ಲಿ ಪಂಚಾಯತಿನ ಒಟ್ಟು ಆದಾಯ ರೂ. 190096.20 ಮತ್ತು ಖರ್ಚು ರೂ. 1545731.35 ಇದು ಆದಾಯದ ಶೇಕಡಾ ಆಗಿದೆ. ಹೀಗಿರುವಾಗ ಈ ಪಂಚಾಯತಿನ ಅಭಿವೃದ್ಧಿ ಕಾರ್ಯಗಳು ಸರಕಾರದಿಂದ ಸಿಗುವ ಹಣದಿಂದ ಮಾತ್ರ ಸಾಧ್ಯ. ಭೂಪ್ರಕೃತಿಯಲ್ಲಿ ವಿವರಿಸಿದಂತೆ

ಗುಡ್ಡಗಾಡುಗಳಿಂದ ಕೂಡಿದ ಭೂಪ್ರದೇಶವಾಗಿದೆ. ಹೆಚ್ಚೆಚ್ಚು ತೆರಿಗೆಗಳನ್ನು ಹಾಕಿದರೆ ಪಾವತಿಸುವಂತಹ ಆರ್ಥಿಕ ಸಾಮರ್ಥ್ಯ ಈ ಪಂಚಾಯತಿನಲ್ಲಿ ವಾಸಿಸುವ ಜನರಿಗೆ ಇಲ್ಲವೆಂದೇ ಹೇಳಬಹುದು. ಆದರೂ ಅಭಿವೃದ್ಧಿ ಕಾರ್ಯಕ್ಕಾಗಿ ಸಂಪನ್ಮೂಲ ಅತೀ ಅಗತ್ಯವಾದುದರಿಂದ ಸಂಪನ್ಮೂಲದ ಕ್ರೋಢೀಕರಣ ಅತೀ ಅಗತ್ಯ.

ಮನೆತೆರಿಗೆ:

ಈಗ ಪಂಚಾಯತಿಗೆ ರೂ. 135035.30 ಮನೆ ತೆರಿಗೆ ದೊರೆಯುತ್ತದೆ. ಅವುಗಳಲ್ಲಿ ಮುಳಿಮನೆಗಳಿಗೆ ತೆರಿಗೆ ಇಲ್ಲ. ಇನ್ನು ಮುಳಿಮನೆಯೂ ಸೇರಿ, ಸಣ್ಣದಾದ ಮನೆಗಳಿಗೆ ಕಡಿಮೆಯೆಂದರೆ ರೂ. 25, ವ್ಯಾಪಾರಿ ಕಟ್ಟಡಗಳಿಗೆ ಕಡಿಮೆಯೆಂದರೆ ರೂ. 75, ಕಾಂಕ್ರೀಟು ಕಟ್ಟಡಗಳಿಗೆ ಕಡಿಮೆಯೆಂದರೆ ರೂ. 250, ಕಟ್ಟಡ ತೆರಿಗೆಗಳನ್ನು ವಿಧಿಸುವುದು. ಕೇರಳ ಸರಕಾರವು ಕಡಿಮೆಯೆಂದರೆ ಮನೆ ಕಟ್ಟಲು ರೂ. 22000 ಅಗತ್ಯವೆಂದು ಮನಗಂಡಿದೆ. ಹಾಗಾಗಿ ಸಾಧಾರಣ ಮನೆಕಟ್ಟಲು ರೂ. 25000 ಅಗತ್ಯವೆಂದು ಮನಗಂಡು ಅದಕ್ಕೆ ಅಗತ್ಯವಾದ ಮನೆತೆರಿಗೆಯನ್ನು ವಿಧಿಸುವುದು ಸೂಕ್ತ. ಮನೆ ನಿರ್ಮಾಣಕ್ಕೆ ಪರವಾನಿಗೆ ಕೊಡುವ ಸಂಪ್ರದಾಯ ಖಡ್ಡಾಯವಾಗಿ ಜ್ಯಾರಿಗೊಳಿಸುವುದು.

ಲೈಸೆನ್ಸ್ ಫೀಸ್

ಈಗ ಚಾರಿಯಲ್ಲಿರುವ ಲೈಸನ್ಸ್ ಫೀಸು,. ಸ್ವಲ್ಪ ಹೆಚ್ಚಿಸುವುದು ಒಳ್ಳೆಯದು. ಅಲ್ಲದೆ ಲೈಸನ್ಸ್ ಫೀಸನ್ನು ಅವರವರ ವ್ಯಾಪಾರಕ್ಕೆ ಸರಿಯಾಗಿ ತಾರತಮ್ಯ ಪಡಿಸುವುದು. ಉದಾ : ಗೂಡಂಗಡಿಯವ ಅಂಗಡಿ ವ್ಯಾಪಾರಿಗೂ ಈಗ ಒಂದೇ ರೀತಿಯ ವ್ಯವಸ್ಥೆ ಇದೆ. ಇದು ಸರಿಯಲ್ಲದ ಕಾರಣ ಬದಲಾವಣೆ ತರುವ ಅಗತ್ಯವಿದೆ. ಎಲ್ಲಾ ಕೆಲಸಗಳಿಗೂ (ಗುಡಿ ಕೈಗಾರಿಕೆಗಳಿಗೂ) ಲೈಸನ್ಸ್‌ನ್ನು ತೆಗೆದುಕೊಳ್ಳುವಂತೆ ಮಾಡುವುದು.

ವೃತ್ತಿತೆರಿಗೆ

ಎಲ್ಲಾ ವರ್ಗದವರಿಂದಲೂ ವೃತ್ತಿ ತೆರಿಗೆಯನ್ನು ತೆಗೆದುಕೊಳ್ಳುವುದು, ಸರಕಾರೀ ಉದ್ಯೋಗಸ್ಥರೂ, ಕಲ್ಲು ಕಡಿಯುವವರೂ, ಬೀಡಿ ಕಾರ್ಮಿಕರೂ, ಕೃಷಿಕರೂ, ಹೆಚ್ಚು ವ್ಯಾಪಾರಿ ಬೆಳೆ, ಬೆಳೆಸುವ ರೈತರೂ ಹಾಗೂ ವ್ಯಾಪಾರಿಗಳಿಗೆ ಅವರ ಆದಾಯದ ಮೂಲಧನಕ್ಕನುಸಾರವಾಗಿ ಮತ್ತು ಆದಾಯಕ್ಕನುಸಾರವಾಗಿ ವೃತ್ತಿ ತೆರಿಗೆಗಳನ್ನು ವಿಧಿಸುವುದು. ವಿದೇಶೀ ಉದ್ಯೋಗಕ್ಕೆ ಹೋಗುವವರು ಕಡ್ಡಾಯವಾಗಿ ಪಂಚಾಯತುಗಳಲ್ಲಿ ಹೆಸರು ನೊಂದಾವಣೆ ಮಾಡುವುದು. ವೀಸಾ ಸಿಕ್ಕ ಪರದೇಶಕ್ಕೆ ಹೋಗುವಾಗ ಆತನ ಕೆಲಸ. ಅಲ್ಲಿ ಆತನಿಗೆ ಸಿಗುವ ಸಂಬಳ, ಇತ್ಯಾದಿಗಳ ವಿವರ ಪಂಚಾಯತಿನಲ್ಲಿದ್ದರೆ, ಅವರಿಗೆ ಸರಿಯಾದ ವೃತ್ತಿ ತೆರಿಗೆಯನ್ನು ವಿಧಿಸಬಹುದು. ಈಗ ಪರದೇಶಗಳಿಗೆ ಹೋದರೆ ಪಂಚಾಯತುಗಳಿಗೆ ಅವರ ಮನೆಯ ವಿಷಯ ಅವರ ಆದಾಯದ ವಿಷಯ ತಿಳಿಯದೆ ಹೆಚ್ಚಿನವರೂ ಎಲ್ಲಾ ವಿಧದ ತೆರಿಗೆಗಳಿಂದಲೂ, ತಪ್ಪಿಸಿಕೊಳ್ಳುತ್ತಾರೆ. ರೈತರು ತಮ್ಮ ತೀರ್ವೆ ರಸೀದಿಗಳನ್ನು ಪಂಚಾಯತಿಗೆ ತಂದು ಅವರವರ ಸ್ಥಳದ ವಿವರ ಅದರಲ್ಲಿರುವ ಕೃಷಿಯ ಮಾಹಿತಿಯನ್ನು ಕಡ್ಡಾಯವಾಗಿ ಕೊಟ್ಟರೆ, ಅವರ ಕೈವಶವಿರುವ ಭೂಮಿ ಅದರಲ್ಲಿರುವ ಕೃಷಿ ತಿಳಿದು ತೆರಿಗೆಯನ್ನು ವಿಧಿಸಬಹುದು. ಕೃಷಿ ಮಾಡದೆ ಬಿಟ್ಟಿರುವ ಬಂಜರು ಭೂಮಿಗೆ ದಂಡ ತೆರಿಗೆಯನ್ನು ವಿಧಿಸುವ ಹಕ್ಕು ಪಂಚಾಯತಿಗೆ ಇರುವುದು ಒಳ್ಳೆಯದು. ಅಕ್ಕಿ ಮಾಡುವ ಹಲ್ಲರುಗಳಿಗೆ ತೆರಿಗೆಗಳನ್ನು ವಿಧಿಸುವುದು.

ನಮ್ಮ ಪಂಚಾಯತಿನಲ್ಲಿ ಅಲ್ಲಲ್ಲಿ ಕಪ್ಪುಕಲ್ಲು ಮತ್ತು ಕೆಂಪುಕಲ್ಲುಗಳಿವೆ. ಇವುಗಳನ್ನು ಯಂತ್ರದ ಸಹಾಯದಿಂದ ಮಾಡುವುದಿದ್ದರೂ ತೆರಿಗೆಗಳಿಲ್ಲ. ಇವುಗಳಿಗೆ ಹೆಚ್ಚಿನ ಪ್ರೋತ್ಸಾಹವನ್ನು ಕೊಟ್ಟು ಅವರಿಂದ ವೃತ್ತಿತೆರಿಗೆ ಮತ್ತು ಲೈಸನ್ಸ್ ಫೀಸ್‌ಗಳನ್ನು ತೆಗೆದುಕೊಳ್ಳಬಹುದು. ಇದು ಸಾಧಾರಣ 5% ಆದಾಯವನ್ನು ಹೆಚ್ಚಿಸಬಹುದು.

ಮನೋರಂಜನಾ ತೆರಿಗೆ

ಹಳ್ಳಿಗಳಲ್ಲಿಯೂ T.V. ರೇಡಿಯೋಗಳಿವೆ. ಹಿಂದೆ ರೇಡಿಯೋಗೆ ಕೇಂದ್ರ ಸರಕಾರದಿಂದಲೇ ಲೈಸನ್ಸ್ ಇತ್ತು. ಹಾಗಾಗಿ T.V.ಗೆ 150ರೂ. ರೇಡಿಯೋಗೆ ರೂ. 50, ಟೂ.ಇನ್.ವನ್. ಗಳಿಗೆ ರೂ. 75 ಲೈಫ್ ಟ್ಯಾಕ್ಸ್ ಹಾಕುವುದು ಯಾ, ಪ್ರತೀ ವರ್ಷ ಹಾಕುವುದಾದರೆ ಇದರ ಬಡ್ಡಿಗೆ ಅನುಸಾರ ವಿಧಿಸುವುದು.

ಮನೋರಂಜನಾ ತೆರಿಗೆಯಲ್ಲಿ 25% ರಿಯಾಯಿತಿ ಸಂಘ ಸಂಸ್ಥೆಗಳಿಗೆ ಹಾಗೂ, ಉಳಿದುದಕ್ಕೆ ಮೊದಲಿನಂತೆ ಜಾರಿಯಲ್ಲಿರುವುದು. ಮೈಕು ಕಟ್ಟಿ ಜರಗುವ ಕಾರ್ಯಕ್ರಮಗಳಿಗೆ, ಪೊಲೀಸು ವಿಭಾಗದಿಂದ ಪರವಾನಗಿ ಸಿಗುವುದಿದ್ದರೂ ಅದಕ್ಕೆ ಪಂಚಾಯತಿನ ವತಿಯಿಂದ ಬೇರೆ ಬೇರೆ ಕೆಲಸ ಕಾರ್ಯಗಳಿಗೆ ಪ್ರತ್ಯಪ್ರತ್ಯೇಕ ವಿಭಾಗವನ್ನು ಹೊಂದಿಕೊಂಡು ತೆರಿಗೆ ಕೊಟ್ಟ ಮೇಲೆಯೇ ಪೊಲೀಸ್ ಡಿಪಾರ್ಟ್‌ಮೆಂಟಿಗೆ ಅರ್ಜಿ ಸಲ್ಲಿಸುವಂತಾಗಬೇಕು.

ಹುಟ್ಟು-ಮರಣ. ಸ್ವಾಧೀನ ಸರ್ಟಿಫಿಕೇಟ್‌ಗಳಿಗೆ ಈಗಿರುವ ಹಣವನ್ನು ರೂ. 150 ಆಗಿ ಮಾಡುವುದು. ಮಾರ್ಗದ ಬದಿಗಳಲ್ಲಿ ಹಣ್ಣನ್ನು ಕೊಡುವ ಮರಗಳನ್ನು ನೆಟ್ಟು ಸಾಕಿ ಬೆಳೆಸಿ ಸಮಯಕ್ಕೆ ಸರಿಯಾಗಿ

ಏಲಂ ಮಾಡುವುದರಿಂದ ಪಂಚಾಯತಿನ ಪರಮಾನವನ್ನು ಹೆಚ್ಚಿಸಬಹುದು.

ತೀರ್ವೆ ಹಣವನ್ನು ಸಂಪೂರ್ಣವಾಗಿ ಪಂಚಾಯತಿಗೆ ಕೊಡುವುದು, ಪಂಚಾಯತ್ ಪರಂಬೋಕುಗಳಲ್ಲಿ ಕೃಷಿ ಮಾಡುವ ಸ್ಥಳಗಳನ್ನು ರೆವೆನ್ಯೂ ಡಿಪಾರ್ಟ್‌ಮೆಂಟಿನವರು ಸರಿಯಾಗಿ ಗುರುತಿಸಿಕೊಟ್ಟರೆ, ಕಾಲಕಾಲಕ್ಕೆ ಸರಿಯಾಗಿ ಏಲಂ ಮಾಡುವುದು. ಇಲ್ಲಿ ಅಡಿಕೆ ಮರದ ಉತ್ಪನ್ನಗಳಾದ ಅಡಿಕೆ ಸಿಪ್ಪೆ, ಹಾಳೆ, ಕೆಂಪು ಕಲ್ಲು ಕಡಿಯುವ, ಕ್ರಶರ್‌ಗಳನ್ನು ಸ್ಥಾಪಿಸುವುದರಿಂದ, ಅವುಗಳಿಗೆ ಹಾಕುವ ತೆರಿಗೆಯಿಂದ ಸಂಪನ್ಮೂಲಗಳನ್ನು ಹೆಚ್ಚಿಸಲು ಸಾಧ್ಯ.

ನಮ್ಮ ಪಂಚಾಯತಿನಲ್ಲಿ ಕಾರ್ಖಾನೆಗಳೇ ಇಲ್ಲ. ಇಲ್ಲಿ ಒಂದೆರಡು ಕಾರ್ಖಾನೆಗಳನ್ನು ಸ್ಥಾಪಿಸುವುದಾದರೆ -ಗೇರುಹಣ್ಣಿನ ಉತ್ಪನ್ನಗಳನ್ನು ಹೆಚ್ಚಿಸಬಹುದು, ನಿರ್ಮಿತಿ ಕೇಂದ್ರವನ್ನು ಸ್ಥಾಪಿಸುವುದು. ANRTಗೆ ಬೇಕಾದ ಸಾಧನಗಳನ್ನು ಸರಬರಾಜು ಮಾಡುವ ಕಾರ್ಖಾನೆಯ ಸ್ಥಾಪನೆ.

ನೀರಾವರಿಗಾಗಿ ಉಪಯೋಗಿಸುವ ಯಂತ್ರಗಳಿಗೂ ಒಂದು ಸಣ್ಣ ತೆರಿಗೆ ಮತ್ತು ಕೈಗಾರಿಕೆಗೆ ಉಪಯೋಗಿಸುವ ಯಂತ್ರಗಳಿಗೆ ಹೆಚ್ಚು ತೆರಿಗೆಗಳನ್ನು ವಿಧಿಸುವುದು.

ವಿಶಾಲವಾದ ಪಂಚಾಯತಾದುದರಿಂದ ಒಂದು ವಾರದಲ್ಲಿ ಎರಡು ಕಡೆ ಸಂತೆಗಳನ್ನು ಜರಗಿಸುವುದು. ಮೀನು ಮಾರಲು ಮಾರ್ಕೆಟನ್ನು ಮಾಡುವುದು, ಮಾಂಸದಂಗಡಿಗಳನ್ನು ತೆರೆಯುವುದು, ಕೋಳಿ ಸಾಕಣಾ ಕೇಂದ್ರಗಳನ್ನು ತೆರೆಯುವುದು. ಆಗ ಇವುಗಳಿಗೆ ಲೈಸನ್ಸ್ ಮತ್ತು ತೆರಿಗೆಗಳನ್ನು ವಿಧಿಸಿದರೆ, ಪಂಚಾಯತಿನ ಸಂಪನ್ಮೂಲವನ್ನು ಹೆಚ್ಚಿಸಬಹುದು.

ಪಂಚಾಯತಿನಲ್ಲಿರುವ ಕೆಲವು ಪೇಟೆಯಂತಹ ಸ್ಥಳಗಳಾದ ಬಾಕ್ರಬೈಲು, ಗುವೆದಪಡ್ಪು, ದೈಗೋಳಿ, ಸುಂಕದಕಟ್ಟೆ, ಪಾವೂರು, ಕೆದುಂಬಾಡಿ, ತೌಡುಗೋಳಿ, ನಂದಾರಪದವು ಮತ್ತು ಇನ್ನಿತರ ಕಡೆಗಳಲ್ಲಿ ವ್ಯಾಪಾರೀ ಸಂಕೀರ್ಣಗಳನ್ನು ನಿರ್ಮಿಸುವುದು. ಆಗ ಹಳ್ಳಿಯ ಸ್ವಲ್ಪ ಭಾಗ ಪೇಟೆಯಾಗಿ ಬದಲಾಗುತ್ತದೆ. ಇದಕ್ಕೆ ಬೇಕಾದ ಸ್ಥಳ ಮತ್ತು ಧನಸಹಾಯವನ್ನು ನೇರವಾಗಿ ಯಾ ಸಾಲವಾಗಿ ಸರಕಾರ ಕೊಡುವುದು.

ಊರಿನಲ್ಲಿ ಅಲ್ಲಲ್ಲಿ ಪರವಾಸಿಗಿಲ್ಲದ ಕುರಿಫಂಡುಗಳು ಜರಗುತ್ತವೆ. ಅವುಗಳಿಗೆ ಲೈಸನ್ಸ್ ಕೊಟ್ಟು ಅವುಗಳ ಜುಮ್ಮಾ ಮೊತ್ತಕ್ಕನುಗುಣವಾಗಿ ಪಂಚಾಯತು ತೆರಿಗೆ ವಿಧಿಸುವುದು.

ಪಂಚಾಯತಿನಲ್ಲಿರುವ ಎಲ್ಲಾ ವಾಹನಗಳನ್ನು ಪಂಚಾಯತಿನಲ್ಲಿ ದಾಖಲು ಮಾಡುವುದು, ಹಾಗೂ ಅವುಗಳಿಗೆ ನಿರ್ದಿಷ್ಟ ತೆರಿಗೆಯನ್ನು ವಿಧಿಸುವುದು, ಈಗ ಪಂಚಾಯತಿನಲ್ಲಿ ವಾಹನಗಳ ದಾಖಲಾತಿಯೇ ಇಲ್ಲದ ಕಾರಣ, ನಮ್ಮ ಪಂಚಾಯತಿನಲ್ಲಿ ಎಷ್ಟು ವಾಹನಗಳಿವೆ ಎಂದು ತಿಳಿಯಲು ಸಾಧ್ಯವಾಗುವುದಿಲ್ಲ.

ಭತ್ತದ ಕೃಷಿ ಸ್ಥಳಗಳನ್ನು ಬೇರೆ ಆವಶ್ಯಕತೆಗೆ ಬೇಕಾಗಿ ಉಪಯೋಗಿಸುವಾಗ ಅದಕ್ಕೆ ಪ್ರತ್ಯೇಕವಾದ ತೆರಿಗೆಯನ್ನು ವಿಧಿಸುವ ಕ್ರಮ ಪಂಚಾಯತಿನ ಮೂಲಕ ಜಾರಿಗೆ ಬಂದರೆ ಉತ್ತಮ. ಹಣದ ಬೆಳೆಗಳನ್ನು ಬೆಳೆಸುವ ರೈತರಿಗೆ ಸ್ವಲ್ಪ ಹೆಚ್ಚು ವೃತ್ತಿ ತೆರಿಗೆಗಳನ್ನು ಹಾಕುವುದರಿಂದ ಸಂಪನ್ಮೂಲವನ್ನು ಹೆಚ್ಚಿಸುವುದು.

ಹೀಗೆ ಸಾಧಾರಣ ಎಲ್ಲಾ ಅಭಿವೃದ್ಧಿ ಕಾರ್ಯಗಳು ಆಗಬೇಕಾದರೂ, ಸಂಪನ್ಮೂಲ ಒಂದೇ ಸಾಲದು. 25% ವಾದರೂ ಕಡ್ಡಾಯವಾಗಿ ಮಾನವ ಸಂಪನ್ಮೂಲದ ಕೊಡುಗೆ ಇದ್ದರೆ ಮಾತ್ರ ಅಭಿವೃದ್ಧಿ ಕಾರ್ಯಕ್ರಮಗಳು ಸರಿಯಾದ ರೀತಿಯಲ್ಲಿ ಜರಗಲು ಸಾಧ್ಯ. ನಮ್ಮಲ್ಲಿರುವ ಮಾನವ ಸಂಪನ್ಮೂಲದ ಉಪಯೋಗ ಅತೀ ಮಹತ್ವ ಪೂರ್ಣವಾದುದು. ಪಂಚಾಯತಿನಲ್ಲಿರುವ ಸಂಘ ಸಂಸ್ಥೆಗಳು, ಅಭಿವೃದ್ಧಿ ಕೆಲಸಗಳಲ್ಲಿ ಪಾಲುಗೊಳ್ಳುವಂತೆ ಮಾಡುವುದರಿಂದ ಎಲ್ಲಾ ವರ್ಗದ ಜನರೂ ಅಭಿವೃದ್ಧಿ ಕಾರ್ಯದಲ್ಲಿ ಪಾಲ್ಗೊಂಡಂತಾಗುತ್ತದೆ. ಅತೀ ಹೆಚ್ಚು ಜನಸಂಖ್ಯೆ ಇರುವ ಭಾರತದಲ್ಲಿ ಜನರ ಪಾಲ್ಗೊಳ್ಳುವಿಕೆ ಅಲ್ಲದೆ ಅಭಿವೃದ್ಧಿ ಕಾರ್ಯಕ್ರಮ ಸರಿಯಾಗಿ ಜರಗಲಿಲ್ಲ. ಆದುದರಿಂದ ಪಂಚಾಯತಿನ ಎಲ್ಲಾ ಜನರೂ ಅಭಿವೃದ್ಧಿ ಕಾರ್ಯಕ್ರಮದಲ್ಲಿ ಭಾಗವಹಿಸುವಂತೆ ಮಾಡುವುದು ಎಲ್ಲಾ ಸಂಪನ್ಮೂಲಕ್ಕಿಂತಲೂ ಶ್ರೇಷ್ಠವಾದುದು.







